ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಬಿಸಿಲಿನ ನಾಡು ಹೈದರಾಬಾದ್‌ನಲ್ಲಿ ನಿರ್ಮಾಣವಾಗಿರುವ 'ನಿತ್ಯ ಹರಿದ್ವರ್ಣ' ಕಾಡಿನೊಳಗೊಂದು ಸುತ್ತು

ನೂಪುರ್ ವಿರುದ್ಧ ಲುಕ್‌ಔಟ್ ನೋಟಿಸ್ ಜಾರಿ 7
ನೇಮಕಾತಿ ನಿಯಮ ಬದಲು: ಸಚಿವ ನಾಗೇಶ್ ಸುಳಿವು
ಮಣಿಪುರ ಭೂಕುಸಿತ: ಮೃತರ ಸಂಖ್ಯೆ 25ಕ್ಕೆ ಏರಿಕೆ 7
'ಪಿ.ಯು ಕಾಲೇಜು: ಎನ್‌ಇಪಿ ಪಠ್ಯ ಡಿಸೆಂಬರ್ ಒಳಗೆ ಸಿದ್ಧ' 5

ಮತಗಟ್ಟೆ, ಯೋಜನೆ ಫಲಾನುಭವಿಗಳೇ ಗುರಿ

2024ರ ಚುನಾವಣೆಗೆ ಬಿಜೆಪಿ ಕಾರ್ಯತಂತ್ರ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಲೋಕಸಭೆಗೆ 2024ರಲ್ಲಿ ನಡೆಯಲಿರುವ ಚುನಾವಣೆಯಲ್ಲಿ ಮತಗಟ್ಟೆಗಳು ಮತ್ತು ಸರ್ಕಾರದ ಯೋಜನೆಗಳ ಫಲಾನುಭವಿಗಳನ್ನು ಕೇಂದ್ರ ಬಿಂದುವಾಗಿಸುವ ಕಾರ್ಯತಂತ್ರವನ್ನು ಬಿಜೆಪಿ ಅನುಸರಿಸಲಿದೆ. ಈ ಎರಡು ವಿಚಾರಗಳ ಬಗ್ಗೆ ಗಮನ ಕೇಂದ್ರೀಕರಿಸಬೇಕು ಎಂದು ಬಿಜೆಪಿ ನಿರ್ಧರಿಸಿದೆ. ಬಿಜೆಪಿಯ ರಾಷ್ಟ್ರೀಯ ಕಾರ್ಯಕಾರಿಣಿ ಹೈದರಾಬಾದ್‌ನಲ್ಲಿ ಶನಿವಾರ ಆರಂಭವಾಗಿದೆ. ಇದು ಎರಡು ದಿನ ನಡೆಯಲಿದೆ.

'ಮತಗಟ್ಟೆ ಮಟ್ಟದ ಸಂಘಟನೆಯನ್ನು ಬಲಪಡಿಸಬೇಕು ಮತ್ತು ಮತಗಟ್ಟೆ ಸಮಿತಿಯ ಅಧ್ಯಕ್ಷರು ಮತ್ತು ಕಾರ್ಯಕರ್ತರ ಜತೆಗೆ ಮುಖಂಡರು ಸದಾ ಸಂಪರ್ಕದಲ್ಲಿ ಇರಬೇಕು' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ವಸುಂಧರಾ ರಾಜೆ ಹೇಳಿದ್ದಾರೆ. ಕೇಂದ್ರ ಸರ್ಕಾರದ ಯೋಜನೆಗಳ 34 ಕೋಟಿಗೂ ಹೆಚ್ಚು ಫಲಾನುಭವಿಗಳನ್ನು ಸಂಪರ್ಕಿಸುವ ಬಗ್ಗೆಯೂ ಚರ್ಚೆ ನಡೆದಿದೆ ಎಂದು ರಾಜೆ ತಿಳಿಸಿದ್ದಾರೆ.

ಕಾರ್ಯಕಾರಿಣಿ ಆರಂಭಕ್ಕೂ ಮುನ್ನ ನಡೆದ ಪದಾಧಿಕಾರಿಗಳ ಸಭೆಯಲ್ಲಿ ಈ ವಿಚಾರಗಳನ್ನು ಚರ್ಚಿಸಲಾಗಿದೆ. ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಪದಾಧಿಕಾರಿಗಳನ್ನು ಉದ್ದೇಶಿಸಿ ಮಾತನಾಡಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರೂ ಕಾರ್ಯಕಾರಿಣಿಯಲ್ಲಿ ಭಾಗಿಯಾಗಿದ್ದಾರೆ. ಕಾರ್ಯಕಾರಿಣಿಯನ್ನು ಉದ್ದೇಶಿಸಿ ಮೋದಿ ಅವರು ಭಾನುವಾರ ಮಾತನಾಡಲಿದ್ದಾರೆ.

ಪಕ್ಷದ 'ಪ್ರವಾಸ್' ಕಾರ್ಯತಂತ್ರಕ್ಕೆ ವಿಶೇಷ ಗಮನ ನೀಡಲು ನಿರ್ಧರಿಸಲಾಗಿದೆ. ಅದರ ಪ್ರಕಾರ, ಮುಖಂಡರು ಗ್ರಾಮಗಳಿಗೆ ಹೋಗಿ, ಕನಿಷ್ಠ ಒಂದು ರಾತ್ರಿ ಆ ಗ್ರಾಮದ ಜನರ ಜತೆ ಸಂವಾದ ನಡೆಸಲು ಸೂಚಿಸಲಾಗಿದೆ.

ಮತಗಟ್ಟೆ ಮಟ್ಟದ ಸಂಘಟನೆಯನ್ನು ಬಲಪಡಿಸಲು ಯೋಜನೆ ರೂಪಿಸಲಾಗಿದೆ.

7ನೇ ಪುಟ ನೋಡಿ

ಪ್ರಧಾನಿ ಮೋದಿಗೆ ಕೆಸಿಆರ್ ಸ್ವಾಗತ ಇಲ್ಲ

ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಭಾಗವಹಿಸಲು ಹೈದರಾಬಾದ್ ವಿಮಾನ ನಿಲ್ದಾಣದಲ್ಲಿ ಬಂದಿಳಿದ ಪ್ರಧಾನಿ ನರೇಂದ್ರ ಮೋದಿ ಅವರನ್ನು ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ (ಕೆಸಿಆರ್) ಅವರು ಸ್ವಾಗತಿಸಿಲ್ಲ.

ಪ್ರಧಾನಿಯನ್ನು ಸ್ವಾಗತಿಸುವ ಕರ್ತವ್ಯವನ್ನು ಪಶುಸಂಗೋಪನಾ ಸಚಿವ ಶ್ರೀನಿವಾಸ ಯಾದವ್ ಅವರಿಗೆ ವಹಿಸಲಾಗಿತ್ತು. ಆದರೆ, ಪ್ರಧಾನಿ ಬರುವುದಕ್ಕೆ ಕೆಲವೇ ತಾಸು ಮೊದಲು ಅದೇ ವಿಮಾನ ನಿಲ್ದಾಣಕ್ಕೆ ಬಂದ, ರಾಷ್ಟ್ರಪತಿ ಚುನಾವಣೆಯಲ್ಲಿ ವಿರೋಧ ಪಕ್ಷಗಳ ಸಹಮತದ ಅಭ್ಯರ್ಥಿಯಾಗಿರುವ ಯಶವಂತ ಸಿನ್ಹಾ ಅವರಿಗೆ ಕೆಸಿಆರ್ ಅವರು ಭವ್ಯ ಸ್ವಾಗತ ಕೋರಿದ್ದಾರೆ.

ರಾಷ್ಟ್ರಪತಿ ಹುದ್ದೆಗೆ ಕಳೆದ ಬಾರಿ ಚುನಾವಣೆ ನಡೆದಾಗ ಕೆಸಿಆರ್ ಅವರು ಎನ್‌ಡಿಎ ಅಭ್ಯರ್ಥಿ ರಾಮನಾಥ ಕೋವಿಂದ್ ಪರ ಗಟ್ಟಿಯಾಗಿ ನಿಂತಿದ್ದರು. ಆದರೆ, ಐದು ವರ್ಷಗಳಲ್ಲಿ ರಾವ್ ಅವರು ಬಿಜೆಪಿಯ ಬದ್ಧ ಪ್ರತಿಸ್ಪರ್ಧಿ ಆಗಿದ್ದಾರೆ ಎಂಬುದನ್ನು ಶನಿವಾರದ ಬೆಳವಣಿಗೆಯು ತೋರಿಸಿಕೊಟ್ಟಿದೆ.

ಸಿನ್ಹಾ ಪರವಾಗಿ ಬೃಹತ್ ಸಾರ್ವಜನಿಕ ಸಮಾರಂಭವನ್ನೂ ಕೆಸಿಆರ್ ಏರ್ಪಡಿಸಿದ್ದಾರೆ.

ಪ್ರಧಾನಿಯನ್ನು ಸ್ವಾಗತಿಸಲು ಕೆಸಿಆರ್ ಅವರು ಹೋಗದೇ ಇರುವುದು ಐದು ತಿಂಗಳಲ್ಲಿ ಇದು ಮೂರನೇ ಬಾರಿ. ಮೋದಿ ಅವರು ಮೇಯಲ್ಲಿ ಹೈದರಾಬಾದ್‌ಗೆ ಭೇಟಿ ಕೊಟ್ಟಾಗ, ಕೆಸಿಆರ್ ಅವರು ಬೆಂಗಳೂರಿಗೆ ಹೋಗಿದ್ದರು. ಫೆಬ್ರುವರಿಯಲ್ಲಿ ಭೇಟಿ ಕೊಟ್ಟಾಗಲೂ ಸಣ್ಣದಾಗಿ ಜ್ವರ ಬರುತ್ತಿದೆ ಎಂಬ ಕಾರಣ ಕೊಟ್ಟು ಕೆಸಿಆರ್ ಅವರು ಮೋದಿ ಭೇಟಿಯನ್ನು ತಪ್ಪಿಸಿಕೊಂಡಿದ್ದರು.

ಕೊಡಗು ಜಿಲ್ಲೆಯಾದ್ಯಂತ ಎಡೆಬಿಡದೆ ಸುರಿಯುತ್ತಿರುವ ಮಳೆಯಿಂದ ಹಾರಂಗಿ ಜಲಾಶಯ ಬಹುತೇಕ ಭರ್ತಿಯಾಗಿದ್ದು, ಶನಿವಾರ ಎಲ್ಲ ಕ್ರೆಸ್ಟ್‌ಗೇಟ್‌ಗಳನ್ನು ತೆರೆದು ನೀರನ್ನು ಹೊರಬಿಡಲಾಯಿತು

ಸುದ್ದಿ 12

ಒಳ ಪುಟಗಳು

ಮುಷ್ಕರ: ಪಟ್ಟು ಸಡಿಲಿಸದ ಪೌರಕಾರ್ಮಿಕರು 6
ತೀಸ್ತಾ 14 ದಿನ ನ್ಯಾಯಾಂಗ ವಶಕ್ಕೆ 7
ದ.ಕ–ಕೊಡಗು ಗಡಿಯಲ್ಲಿ ಮತ್ತೆ ಲಘು ಭೂಕಂಪನ 12
ವಿಂಬಲ್ಡನ್ ಟೆನಿಸ್ ಟೂರ್ನಿ: ಪ್ರೀಕ್ವಾರ್ಟರ್ ಫೈನಲ್‌ಗೆ ಟಾನ್ 14

ಚಿನಕುರಳಿ

ಪ್ರಕಾಶ್ ಶೆಟ್ಟಿ

ವಿದ್ಯುತ್ ಸಂಪರ್ಕಕ್ಕೆ ಒ.ಸಿ ಬೇಕಿಲ್ಲ

ಬೆಂಗಳೂರು: ವಿದ್ಯುತ್ ಸಂಪರ್ಕ ಪಡೆಯಲು ಇನ್ನು ಮುಂದೆ ಗುರುತಿನ ಚೀಟಿ ಮತ್ತು ಸ್ವತ್ತಿನ ಹಕ್ಕುಪತ್ರ ಇದ್ದರೆ ಸಾಕು. 'ಸ್ವಾಧೀನಾನುಭವ ಪ್ರಮಾಣಪತ್ರ' (ಒ.ಸಿ) ಕಡ್ಡಾಯ ಎಂಬ ನಿಯಮವನ್ನು ರಾಜ್ಯ ಸರ್ಕಾರ ತೆಗೆದು ಹಾಕಿದೆ. ಈ ಸಂಬಂಧ ನಗರಾಭಿವೃದ್ಧಿ ಇಲಾಖೆ ಹೊರಡಿಸಿದ ತಿದ್ದುಪಡಿ ಆದೇಶವನ್ನು ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ.

'ಈ ಆದೇಶದಿಂದ ಬಿಬಿಎಂಪಿ ವ್ಯಾಪ್ತಿಯಲ್ಲಿ ಸುಮಾರು ಐದು ಲಕ್ಷ ಕುಟುಂಬಗಳಿಗೆ ಅನುಕೂಲ ಆಗಲಿದೆ. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಜಾರಿಗೆ ಬಂದಿದ್ದ ಈ 'ಕತ್ತಲೆ ಭಾಗ್ಯ'ದ ನಿಯಮವನ್ನು ನಮ್ಮ ಸರ್ಕಾರ ಬದಲಾಯಿಸಿದೆ. ಇದರಿಂದ ಎಲ್ಲರ ಮನೆಯಲ್ಲೂ ಬೆಳಕು ಮೂಡಲಿದೆ' ಎಂದು ಇಂಧನ ಸಚಿವ ವಿ.ಸುನಿಲ್ ಕುಮಾರ್ ಟ್ವೀಟ್ ಮಾಡಿದ್ದಾರೆ.

ನಿರ್ಮಾಣ ಸಂದರ್ಭದಲ್ಲಿ ನಿಯಮ ಉಲ್ಲಂಘಿಸಿದ ಮನೆ, ವಸತಿ ಸಮುಚ್ಚಯಗಳಿಗೆ ಬಿಬಿಎಂಪಿ ಸ್ವಾಧೀನಾನುಭವ ಪ್ರಮಾಣಪತ್ರ ನೀಡಲು ನಿರಾಕರಿಸಿದ್ದರೆ ಅಂತಹ ಮನೆ ಹಾಗೂ ಫ್ಲಾಟ್‌ಗಳಿಗೆ ವಿದ್ಯುತ್ ಸಂಪರ್ಕ ನೀಡದಂತೆ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಆದೇಶ ಹೊರಡಿಸಲಾಗಿತ್ತು. ಇದರಿಂದ ಹಲವು ಕುಟುಂಬಗಳು ವಿದ್ಯುತ್ ಸಂಪರ್ಕ ಪಡೆಯಲು ವಿಫಲವಾಗಿದ್ದವು.

ಬೂಮ್ರಾ ವಿಶ್ವದಾಖಲೆ

ಬರ್ಮಿಂಗ್‌ಹ್ಯಾಂ (ಪಿಟಿಐ): ಭಾರತ ತಂಡದ ಹಂಗಾಮಿ ನಾಯಕ ಜಸ್‌ಪ್ರೀತ್ ಬೂಮ್ರಾ, ಟೆಸ್ಟ್ ಕ್ರಿಕೆಟ್ ಪಂದ್ಯದ ಒಂದೇ ಓವರ್‌ನಲ್ಲಿ 29 ರನ್ ಗಳಿಸಿ ವಿಶ್ವದಾಖಲೆ ನಿರ್ಮಿಸಿದರು. ವೇಗದ ಬೌಲರ್ ಆಗಿರುವ ಬೂಮ್ರಾ, ಅಬ್ಬರದ ಬ್ಯಾಟಿಂಗ್ ಮೂಲಕ ದಾಖಲೆ ಮಾಡಿದ್ದು ವಿಶೇಷ.

ಇಲ್ಲಿ ನಡೆಯುತ್ತಿರುವ ಐದನೇ ಟೆಸ್ಟ್‌ನ ಎರಡನೇ ದಿನವಾದ ಶನಿವಾರ ಇಂಗ್ಲೆಂಡ್‌ನ ಸ್ಟುವರ್ಟ್ ಬ್ರಾಡ್ ಬೌಲ್ ಮಾಡಿದ, ಭಾರತದ ಮೊದಲ ಇನಿಂಗ್ಸ್‌ನ 84ನೇ ಓವರ್‌ನಲ್ಲಿ ಈ ಸಾಧನೆ ಮೂಡಿಬಂತು.

ವೆಸ್ಟ್ ಇಂಡೀಸ್‌ನ ಮಾಜಿ ಆಟಗಾರ ಬ್ರಯನ್ ಲಾರಾ ಮತ್ತು ಆಸ್ಟ್ರೇಲಿಯಾದ ಜಾರ್ಜ್ ಬೇಯ್ಲಿ ಒಂದೇ ಓವರ್‌ನಲ್ಲಿ 28 ರನ್ ಗಳಿಸಿದ್ದು ಇದುವರೆಗಿನ ದಾಖಲೆಯಾಗಿತ್ತು. ಲಾರಾ 2003–04 ರಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ದಾಖಲೆ ಮಾಡಿದ್ದರು.ಇಂಗ್ಲೆಂಡ್‌ನ ವೇಗಿ ಬ್ರಾಡ್, ಒಂದೇ ಓವರ್‌ನಲ್ಲಿ 35 ರನ್ ಬಿಟ್ಟುಕೊಟ್ಟರು. ಬೂಮ್ರಾ ಬ್ಯಾಟ್‌ನಿಂದ ಬಂದ 29 ರನ್‌ಗಳಲ್ಲದೆ, ಐದು ವೈಡ್ ಮತ್ತು ಒಂದು ನೋಬಾಲ್ ಹಾಕಿದರು.

13

ಕಲುಷಿತ ನೀರು: ತಿಂಗಳಲ್ಲಿ 9 ಮಂದಿ ಸಾವು

ಜೀವಕ್ಕೆ ಎರವಾಗುತ್ತಿದೆ ಜೀವಜಲ

• ರಾಹುಲ ಬೆಳಗಲಿ

ಕಲಬುರಗಿ: ಕುಡಿಯಲು ಯೋಗ್ಯವಾದ ಶುದ್ಧ ನೀರು ಪೂರೈಸುವುದು ಸರ್ಕಾರದ ಹೊಣೆ. ಆದರೆ ರಾಜ್ಯದೆಲ್ಲೆಡೆ ಶುದ್ಧ ನೀರು ಪೂರೈಸುವ ಕಾರ್ಯ ಇನ್ನೂ ಪೂರ್ಣಪ್ರಮಾಣದಲ್ಲಿ ಅನುಷ್ಠಾನವಾಗಿಲ್ಲ. ಉಳ್ಳವರು ಕ್ಯಾನ್ ನೀರು ಇಲ್ಲವೇ ನೀರು ಶುದ್ಧೀಕರಣ ವ್ಯವಸ್ಥೆ ಮಾಡಿಕೊಂಡರೆ, ಉಳಿದವರು ಸ್ಥಳೀಯ ಸಂಸ್ಥೆಗಳೇ ಪೂರೈಸುವ ನೀರನ್ನೇ ಶುದ್ಧವೆಂದು ಬಳಸುವಂತಾಗಿದೆ. ಹೀಗೆ ಬಳಸುವ ನೀರಿನಲ್ಲಿ ಕಲುಷಿತ ಅಂಶದ ಪ್ರಮಾಣ ಕೊಂಚ ಹೆಚ್ಚಿದ್ದರೂ ಜನರು ವಾಂತಿ–ಭೇದಿಯಿಂದ ಬಳಲುತ್ತಾರೆ. ಹಲವು ಸಂದರ್ಭಗಳಲ್ಲಿ ಪ್ರಾಣಕ್ಕೂ ಎರವಾಗುತ್ತಿದೆ.

ರಾಯಚೂರಿನಲ್ಲಿ ನಗರಸಭೆಯಿಂದ ಪೂರೈಕೆಯಾದ ಕಲುಷಿತ ನೀರನ್ನು ಕುಡಿದು ಜೂನ್ ತಿಂಗಳಲ್ಲಿ ಏಳು ಮಂದಿ ಸಾವನ್ನಪ್ಪಿದ್ದರು. ಇದರಿಂದ ಎಚ್ಚೆತ್ತ ಜಿಲ್ಲಾಡಳಿತವು ಹಲವು ವರ್ಷಗಳಿಂದ ಹೂಳು ತುಂಬಿದ್ದ ಟ್ಯಾಂಕ್‌ಗಳ ಸ್ವಚ್ಛತೆ, ಸೋರಿಕೆಯಾಗುತ್ತಿರುವ ಪೈಪ್‌ಗಳ ದುರಸ್ತಿಯನ್ನು ಸಮರೋಪಾದಿಯಲ್ಲಿ ಕೈಗೊಂಡಿದೆ. (ಒಂದು ಶುದ್ಧೀಕರಣ ಘಟಕದಲ್ಲಂತೂ 8 ರಿಂದ 10 ಅಡಿ ಹೂಳು ತುಂಬಿತ್ತು.) ನಿರ್ಲಕ್ಷ್ಯ ತೋರಿದ ಸಿಬ್ಬಂದಿಯನ್ನು ಅಮಾನತು ಮಾಡಿದೆ. ಇಷ್ಟೆಲ್ಲ ಆದರೂ ಬೇಗ ಶುದ್ಧ ನೀರು ಸಿಗುವ ನಂಬಿಕೆ ಜನರಲ್ಲಿ ಇನ್ನೂ ಮೂಡಿಲ್ಲ.

ಕಲಬುರಗಿ, ಶಿವಮೊಗ್ಗ, ಮಂಡ್ಯ ಜಿಲ್ಲೆ ಸೇರಿದಂತೆ ಹಲವು ಕಡೆ ಕುಡಿಯಲು ಯೋಗ್ಯವಲ್ಲದ ರಾಡಿಮಿಶ್ರಿತ ನೀರು ಪೂರೈಕೆ ಆಗುತ್ತಿದೆ. ಇಲ್ಲೂ ಕೂಡ ಆರೋಗ್ಯ ಸಮಸ್ಯೆಗಳು ಎದುರಾಗಿವೆ. ಕೆಲದಿನಗಳ ಹಿಂದೆ ಶಿವಮೊಗ್ಗದಲ್ಲಿ ಜಲಮಂಡಳಿಯಿಂದ ಪೂರೈಕೆಯಾದ ಕಲುಷಿತನೀರು ಕುಡಿದು ಕಾರ್ಮಿಕರೊಬ್ಬರು ಮೃತಪಟ್ಟಿದ್ದರು. ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ನಗರಕೆರೆಯಲ್ಲಿ ಟ್ಯಾಂಕ್‌ನಿಂದ ಪೂರೈಕೆ ಯಾದ ಮಲಿನ ನೀರು ಕುಡಿದು ಗ್ರಾಮಸ್ಥರೊಬ್ಬರು ಸಾವಿಗೀಡಾಗಿದ್ದರು.

'ಕಲಬುರಗಿಯ ಕೆಲ ಬಡಾವಣೆಗಳಿಗೆ ಪೂರೈಕೆಯಾಗುವ ಪಾಚಿಮಿಶ್ರಿತ ಮತ್ತು ರಾಡಿ ನೀರು ಕುಡಿಯಲು ಅಷ್ಟೇ ಅಲ್ಲ, ಸ್ನಾನಕ್ಕೂ ಯೋಗ್ಯವಲ್ಲ' ಎಂದು ಸಂಘ ಸಂಸ್ಥೆಗಳು ಹಲವು ಬಾರಿ ಮಹಾನಗರ ಪಾಲಿಕೆಗೆ ಮುತ್ತಿಗೆ ಹಾಕಿ, ಪ್ರತಿಭಟಿಸಿವೆ. ಶಾಸಕರೂ ಧ್ವನಿಯೆತ್ತಿದ್ದಾರೆ. ನೀರು ಪೂರೈಕೆ ವ್ಯವಸ್ಥೆ ನಿರ್ವಹಿಸುವ ಎಲ್ ಅಂಡ್ ಟಿ ಕಂಪನಿಯ ಸಿಬ್ಬಂದಿ, 'ಶುದ್ಧೀಕರಣ ಘಟಕಕ್ಕೆ ಹೊಸ ಸಾಧನಗಳನ್ನು ಅಳವಡಿಸದೇ ಮತ್ತು ಯಂತ್ರಗಳನ್ನು ಸರಿಯಾಗಿ ದುರಸ್ತಿ ಮಾಡಿಸದೇ ನಾವೇನೂ ಮಾಡಲಾಗದು' ಎಂದು ಅಸಹಾಯಕತೆ ವ್ಯಕ್ತಪಡಿಸುತ್ತಾರೆ.

4ನೇ ಪುಟ ನೋಡಿ

ಒಳನೋಟ
ಶುದ್ಧ ನೀರು ಪೂರೈಕೆ ಎಂದು?
ಪ್ರತಿಕ್ರಿಯಿಸಿ: 9606038256
feedback@prajavani.co.in

ಇನ್ನಷ್ಟು ಸುದ್ದಿಗಳು 4

ರಾಯಚೂರಿನ ಇಂದಿರಾನಗರದ ಟ್ಯಾಂಕ್ ಶುಚಿಗೊಳಿಸುವ ವೇಳೆ ಹೊರ ತೆಗೆಯಲಾದ ಹೂಳು

ಜೆಜೆಎಂ ಅನುಷ್ಠಾನ: ಗುರಿ ತಲುಪಲು ಏದುಸಿರು

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: 'ಮನೆ ಮನೆಗೂ ಗಂಗೆ' ಘೋಷಣೆಯಡಿ ಪ್ರತಿ ಮನೆಗೂ ನಲ್ಲಿ ಮೂಲಕ ಶುದ್ಧ ಕುಡಿಯುವ ನೀರು ಪೂರೈಸುವ ಜಲ ಜೀವನ ಮಿಷನ್ (ಜೆಜೆಎಂ) ಕಾಮಗಾರಿಗಳ ಅನುಷ್ಠಾನಕ್ಕೆ ಹತ್ತಾರು ಅಡೆತಡೆ ಎದುರಾಗುತ್ತಲೇ ಇವೆ. 2023–24ನೇ ಆರ್ಥಿಕ ವರ್ಷದ ಅಂತ್ಯದೊಳಗೆ ಗ್ರಾಮೀಣ ಪ್ರದೇಶದ ಎಲ್ಲ ಮನೆಗಳಿಗೂ ನಲ್ಲಿ ನೀರಿನ ಸಂಪರ್ಕ ಕಲ್ಪಿಸುವ ಗುರಿ ಸಾಧಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹೆಜ್ಜೆ ಹಾಕಲು ಏದುಸಿರು ಬಿಡುತ್ತಿದೆ.

2019ರಲ್ಲಿ ಕೇಂದ್ರ ಸರ್ಕಾರ ಈ ಯೋಜನೆಗೆ ಚಾಲನೆ ನೀಡಿತು. ಆದರೆ, ಕರ್ನಾಟಕದಲ್ಲಿ ಭೌತಿಕವಾಗಿ ಯೋಜನೆ ಅನುಷ್ಠಾನ ಆರಂಭವಾಗಿದ್ದು 2020ರಲ್ಲಿ. ಒಟ್ಟು ₹ 41,800 ಕೋಟಿ ವೆಚ್ಚದಲ್ಲಿ ರಾಜ್ಯದಲ್ಲಿ ಈ ಯೋಜನೆ ಅನುಷ್ಠಾನವಾಗುತ್ತಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಲಾ ಶೇಕಡ 50ರಷ್ಟು ವೆಚ್ಚ ಭರಿಸುತ್ತಿವೆ.

₹ 11,010 ಕೋಟಿ ವೆಚ್ಚದಲ್ಲಿ ಗ್ರಾಮೀಣ ಪ್ರದೇಶದ ಪ್ರತಿ ಮನೆಗೂ ನಲ್ಲಿ ಮೂಲಕ ಕುಡಿಯುವ ನೀರಿನ ಸಂಪರ್ಕ ಕಲ್ಪಿಸಬೇಕಾಗಿದೆ.

4ನೇ ಪುಟ ನೋಡಿ

ನೂಪುರ್‌ಗೆ ಬೆಂಬಲ: ಪ್ರತೀಕಾರದ ಶಂಕೆ

ಅಮರಾವತಿ ಹತ್ಯೆ ಪ್ರಕರಣ ಎನ್‌ಐಎ ತನಿಖೆ ಆರಂಭ

ಅಮರಾವತಿ (ಪಿಟಿಐ): ಬಿಜೆಪಿಯಿಂದ ಅಮಾನತಾದ ನೂಪುರ್ ಶರ್ಮಾ ಅವರಿಗೆ ಬೆಂಬಲ ಸೂಚಿಸಿದ ಕಾರಣಕ್ಕೆ ಮಹಾರಾಷ್ಟ್ರದ ಅಮರಾವತಿಯಲ್ಲಿಯೂ ಒಂದು ಹತ್ಯೆ ನಡೆದಿದೆ ಎಂಬ ಶಂಕೆ ವ್ಯಕ್ತವಾಗಿದೆ. ಈ ಪ್ರಕರಣದ ತನಿಖೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆಗೆ (ಎನ್‌ಐಎ) ವಹಿಸಲಾಗಿದೆ. ಎನ್‌ಐಎ ತಂಡವೊಂದು ಅಮರಾವತಿಗೆ ಶನಿವಾರ ಭೇಟಿ ಕೊಟ್ಟಿದ್ದು, ಜೂನ್ 21ರಂದು ನಡೆದ ಔಷಧ ವ್ಯಾಪಾರಿ ಉಮೇಶ್ ಪ್ರಹ್ಲಾದರಾವ್ ಕೊಲ್ಹೆ ಅವರ ಹತ್ಯೆ ಪ್ರಕರಣದ ತನಿಖೆ ಆರಂಭಿಸಿದೆ.

ಪ್ರವಾದಿ ಮಹಮ್ಮದ್ ಅವರನ್ನು ಅವಹೇಳನ ಮಾಡಿ ಹೇಳಿಕೆ ಕೊಟ್ಟಿದ್ದ ಕಾರಣಕ್ಕೆ ನೂಪುರ್ ಅವರನ್ನು ಬಿಜೆಪಿ ಜೂನ್ 5ರಂದು ಅಮಾನತು ಮಾಡಿದೆ.

ಮಹಾರಾಷ್ಟ್ರ ಪೊಲೀಸ್ ಇಲಾಖೆಯ ಭಯೋತ್ಪಾದನೆ ತಡೆ ಘಟಕದ ತಂಡವೊಂದು ಕೂಡ ಅಮರಾವತಿಗೆ ಭೇಟಿ ಕೊಡಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಹತ್ಯೆಯ ಹಿಂದಿನ ಪಿತೂರಿ, ಸಂಘಟನೆಗಳ ಪಾತ್ರ ಮತ್ತು ಅಂತರರಾಷ್ಟ್ರೀಯ ನಂಟು ಎಲ್ಲವನ್ನೂ ಎನ್‌ಐಎ ತನಿಖೆಗೆ ಒಳಪಡಿಸಲಿದೆ.

ರಾಜಸ್ಥಾನದ ಉದಯಪುರದಲ್ಲಿ ಟೇಲರ್ ಕನ್ಹಯ್ಯ ಲಾಲ್ ಅವರ ಕತ್ತು ಕತ್ತರಿಸಿ ಹತ್ಯೆ ನಡೆಸಿ, ಈ ಕೃತ್ಯದ ದೃಶ್ಯಗಳನ್ನು ಸಾಮಾಜಿಕ ಜಾಲತಾಣದಲ್ಲಿ ಪ್ರಕಟಿಸುವುದಕ್ಕೆ ವಾರಕ್ಕೆ ಹಿಂದೆಯೇ ಕೊಲ್ಹೆ ಅವರ ಹತ್ಯೆ ನಡೆದಿದೆ. ಉದಯಪುರ ಹತ್ಯೆ ಪ್ರಕರಣದ ತನಿಖೆಯನ್ನೂ ಎನ್‌ಐಎ ನಡೆಸುತ್ತಿದೆ.

ಇರ್ಫಾನ್ ಎಂಬಾತ ಮುಖ್ಯ ಆರೋಪಿ ಎನ್ನಲಾಗಿದೆ. ಈತನಿಗಾಗಿ ಶೋಧ ನಡೆಯುತ್ತಿದೆ. ಮುದಸ್ಸಿರ್ ಅಹ್ಮದ್ (22), ಶಾರುಖ್ ಪಠಾಣ್ (25), ಅಬ್ದುಲ್ ತೌಫೀಕ್ (24), ಶೋಯಬ್ ಖಾನ್ (22) ಮತ್ತು ಆತಿಬ್ ರಶೀದ್ (22) ಎಂಬವರನ್ನು ಕೊಲ್ಹೆ ಹತ್ಯೆ ಪ್ರಕರಣದಲ್ಲಿ ಈಗಾಗಲೇ ಬಂಧಿಸಲಾಗಿದೆ. ಈ ಎಲ್ಲರೂ ಅಮರಾವತಿ ನಿವಾಸಿಗಳಾಗಿದ್ದು, ಕೂಲಿ ಕೆಲಸಗಾರರು.

ಹತ್ಯೆಯ ಬಳಿಕ ₹10 ಸಾವಿರ ನೀಡುವುದಾಗಿ ಬಂಧಿತರಿಗೆ ಇರ್ಫಾನ್ ಭರವಸೆ ಕೊಟ್ಟಿದ್ದ. ನೂಪುರ್ ಅವರನ್ನು ಬೆಂಬಲಿಸಿದ ಪೋಸ್ಟ್ ಅನ್ನು ಕೊಲ್ಹೆ ಅವರು ವಾಟ್ಸ್‌ಆ್ಯಪ್ ಗುಂಪೊಂದರಲ್ಲಿ ಹಂಚಿಕೊಂಡಿದ್ದರು ಎಂದು ಆರೋಪಿಸಲಾಗಿದೆ. ಅದರ ಬಳಿಕ, ಕೊಲ್ಹೆಯ ಹತ್ಯೆಯ ಸಂಚು ರೂಪಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಹತ್ಯೆಯ ದೃಶ್ಯಗಳು ಸೆರೆಯಾಗಿರುವ ಸಿ.ಸಿ.ಟಿ.ವಿ ಕ್ಯಾಮೆರಾದ ದೃಶ್ಯಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಹತ್ಯೆಗೆ ಬಳಸಿದ್ದ ಚಾಕುವನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಉದಯಪುರ ಪ್ರಕರಣ: ಹತ್ಯೆ ಆರೋಪಿಗಳ ಮೇಲೆ ಹಲ್ಲೆ

ಜೈಪುರ (ಪಿಟಿಐ): ಉದಯಪುರದ ಟೇಲರ್ ಕನ್ಹಯ್ಯ ಲಾಲ್ ಹತ್ಯೆ ಕೃತ್ಯದ ನಾಲ್ವರು ಆರೋಪಿಗಳ ಮೇಲೆ ವಕೀಲರು ಮತ್ತು ಸಾರ್ವಜನಿಕರಿದ್ದ ಗುಂಪು ಕೋರ್ಟ್ ಆವರಣದಲ್ಲಿಯೇ ಶನಿವಾರ ಮುಗಿಬಿದ್ದಿತು. ಕಟುವಾಗಿ ನಿಂದಿಸಿ ಕಾಲಿನಿಂದ ಒದ್ದಿದ್ದಲ್ಲದೆ, ಕೈಗಳಿಂದ ಗುದ್ದಿ ಆಕ್ರೋಶ ಹೊರಹಾಕಿತು.

ಟೇಲರ್ ಹತ್ಯೆಯ ನಂತರ ಆ ದೃಶ್ಯಗಳನ್ನು ಜಾಲತಾಣದಲ್ಲಿ ಹಂಚಿಕೊಂಡಿದ್ದ ಇಬ್ಬರು ಪ್ರಮುಖ ಆರೋಪಿಗಳು ಸೇರಿದಂತೆ ಬಂಧಿತ ನಾಲ್ವರನ್ನು ಪೊಲೀಸರು ಶನಿವಾರ ಸ್ಥಳೀಯ ಕೋರ್ಟ್‌ಗೆ ಹಾಜರುಪಡಿಸಿದ್ದರು. ಅವರನ್ನು ಮರಳಿ ಕಾರಾಗೃಹಕ್ಕೆ ಕರೆದೊಯ್ಯಲು ವಾಹನಕ್ಕೆ ಹತ್ತಿಸುವಾಗ ಗುಂಪು ದಾಳಿ ನಡೆಸಿದೆ.

ಹಲ್ಲೆ, ನೂಕುನುಗ್ಗಲಿನಲ್ಲಿ ಒಬ್ಬ ಆರೋಪಿಯ ಬಟ್ಟೆ ಹರಿಯಿತು. ಕೋಪೋದ್ರಿಕ್ತ ವಕೀಲರ ಸಮೂಹವು ಪಾಕಿಸ್ತಾನದ ವಿರುದ್ಧ ಘೋಷಣೆಗಳನ್ನು ಕೂಗಿದ್ದು, ಆರೋಪಿಗಳಿಗೆ ಕಠಿಣ ಶಿಕ್ಷೆಯನ್ನು ವಿಧಿಸಬೇಕು ಎಂದು ಆಗ್ರಹಪಡಿಸಿತು.

ಮುಖ್ಯ ಆರೋಪಿಗಳಾದ ರಿಯಾಜ್ ಅನ್ಸಾರಿ, ಗೌಸ್ ಮಹಮ್ಮದ್, ಇತರೆ ಆರೋಪಿಗಳಾದ ಮೊಹಿಸಿನ್, ಆಸಿಫ್ ಅವರನ್ನು ಬಿಗಿ ಭದ್ರತೆಯಲ್ಲಿ ಇಲ್ಲಿನ ವಿಶೇಷ ಕೋರ್ಟ್‌ಗೆ ಕರೆತರಲಾಗಿತ್ತು. ಕೋರ್ಟ್ ಈ ನಾಲ್ವರನ್ನು ಜುಲೈ 12ವರೆಗೆ ಪೊಲೀಸರ ವಶಕ್ಕೆ ಒಪ್ಪಿಸಿತು.

7ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 7

ಅಕ್ರಮವಾಗಿ ಬದಲಿ ಜಾಗ ಮಂಜೂರು: ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾಧೀನಪಡಿಸಿಕೊಂಡ ಜಾಗಕ್ಕೆ ಅಕ್ರಮವಾಗಿ ಬದಲಿ ಜಾಗ ಪಡೆದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ(ಬಿಡಿಎ) ₹100 ಕೋಟಿಯಷ್ಟು ನಷ್ಟವುಂಟು ಮಾಡಿರುವ ಆರೋಪದಲ್ಲಿ ನಾಗರಾಜ್ ಎಂಬ ವ್ಯಕ್ತಿ ಮತ್ತು ಬಿಡಿಎ ಅಧಿಕಾರಿಗಳ ವಿರುದ್ಧ ಬಿಎಂಟಿಎಫ್ ಎಫ್‌ಐಆರ್ ದಾಖಲಿಸಿದೆ.

ಈಸ್ಟ್ ಆಫ್ ಎನ್‌ಜಿಇಎಫ್ ಬಡಾವಣೆ ನಿರ್ಮಾಣಕ್ಕೆ ಬಾಣಸವಾಡಿ ಗ್ರಾಮದ ಸರ್ವೆ ಸಂಖ್ಯೆ 73ರಲ್ಲಿ ಈರಣ್ಣ ಎಂಬುವರ 4 ಎಕರೆ 13 ಗುಂಟೆ ಜಮೀನನ್ನು 1986ರಲ್ಲಿ ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಪರಿಹಾರವನ್ನು ಸಿವಿಲ್ ನ್ಯಾಯಾಲಯದಲ್ಲಿ ಬಿಡಿಎ ಠೇವಣಿ ಇಟ್ಟಿತ್ತು.

ಈರಣ್ಣ ಅವರ ಬಳಿ ನಾಗರಾಜ್ ಎಂಬ ವ್ಯಕ್ತಿ ಜಿಪಿಎ (ಜನರಲ್ ಪವರ್ ಆಫ್ ಅಟಾರ್ನಿ–ಕಾರ್ಯನಿರ್ವಾಹಕನ ವ್ಯವಹಾರಗಳನ್ನು ಪ್ರತಿನಿಧಿಸುವ ಅಧಿಕಾರ ಹೊಂದಿರುವವರು) ಬರೆಯಿಸಿಕೊಂಡು ಜಮೀನು ತನ್ನದೇ ಎಂದು ಪ್ರತಿಪಾದಿಸಿ ಕಂದಾಯ ನಿವೇಶನಗಳನ್ನು ಅಭಿವೃದ್ಧಿಪಡಿಸಿ ಮಾರಾಟ ಮಾಡಿದ್ದರು.

> **ಕಾನೂನುಬಾಹಿರ ಪ್ರಕರಣಗಳ ಬಗ್ಗೆ ತನಿಖೆ ನಡೆಸುವ ಅಧಿಕಾರ ಬಿಡಿಎಗೆ ಇದೆ. ಪ್ರಕರಣಗಳನ್ನು ಪತ್ತೆ ಮಾಡಿ ತಪ್ಪಿತಸ್ಥರಿಗೆ ಶಿಕ್ಷೆ ಆಗುವಂತೆ ಮಾಡಲಾಗುವುದು**
>
> **ಎಸ್.ಆರ್.ವಿಶ್ವನಾಥ್**
> ಬಿಡಿಎ ಅಧ್ಯಕ್ಷ

‘ಈ ನಿವೇಶನಗಳನ್ನು ಬಿಡಿಎ ಸ್ವಾಧೀನಪಡಿಸಿಕೊಂಡಿದ್ದು, ಬದಲಿ ನಿವೇಶನ ನೀಡಬೇಕು’ ಎಂದು ಕೋರಿ ನ್ಯಾಯಾಲಯದ ಮೆಟ್ಟಿಲೇರಿದ್ದರು. ವಿಚಾರಣೆ ನಡೆಸಿದ್ದ ಹೈಕೋರ್ಟ್, ಬಿಡಿಎ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಸೂಚಿಸಿತ್ತು.

ಬದಲಿ ನಿವೇಶನಗಳನ್ನು ಮಂಜೂರು ಮಾಡುವಂತೆ ಬಿಡಿಎಗೆ ಮತ್ತೆ ಅರ್ಜಿ ಸಲ್ಲಿಸಿದ್ದರು. ಎರಡು ಬಾರಿ ಅರ್ಜಿ ತಿರಸ್ಕರಿಸಿದ್ದ ಬಿಡಿಎ, 2012ರಲ್ಲಿ ನಿವೇಶನ ನೀಡಲು ಒಪ್ಪಿತ್ತು. ಅರ್ಕಾವತಿ ಬಡಾವಣೆಯ ವಿವಿಧ ಸರ್ವೆ ನಂಬರ್‌ಗಳಲ್ಲಿ 4 ಎಕರೆ 13 ಗುಂಟೆ ಜಮೀನು ಮಂಜೂರು ಮಾಡಿತ್ತು. ಕೆಲವು ನಿವೇಶನಗಳು ಬಫರ್ ವಲಯದಲ್ಲಿವೆ ಎಂದು ಮತ್ತೊಮ್ಮೆ ಅರ್ಜಿ ಸಲ್ಲಿಸಿದ್ದ ನಾಗರಾಜ್, ಬೇರೆ ಕಡೆ ಜಾಗ ನೀಡಬೇಕೆಂದು ಕೋರಿದ್ದರು.

ಥಣಿಸಂದ್ರ ಸೇರಿ ಪ್ರಮುಖ ಸ್ಥಳಗಳಲ್ಲಿ ನಾಗರಾಜ್ ಹೆಸರಿಗೆ 2014ರಲ್ಲಿ ಬಿಡಿಎ ಜಾಗ ನೀಡಿತ್ತು. ದೊಡ್ಡ ಪ್ರಮಾದ ಆಗಿರುವುದನ್ನು ಗಮನಿಸಿದ ಬಿಡಿಎ ಅಧ್ಯಕ್ಷ ಎಸ್.ಆರ್.ವಿಶ್ವನಾಥ್, ಸೂಕ್ತ ತನಿಖೆ ನಡೆಸಿ ವರದಿ ನೀಡುವಂತೆ ಬಿಡಿಎ ಕಾರ್ಯಪಡೆಗೆ ಸೂಚನೆ ನೀಡಿದ್ದರು.

ತನಿಖೆ ನಡೆಸಿದ ಡಿವೈಎಸ್‌ಪಿ ರವಿಕುಮಾರ್ ಮತ್ತು ಇನ್‌ಸ್ಪೆಕ್ಟರ್ ಶ್ರೀನಿವಾಸ್, ಅಕ್ರಮ ನಡೆದಿರುವ ಬಗ್ಗೆ ವರದಿ ನೀಡಿದ್ದರು. ಅಲ್ಲದೇ ಬಿಎಂಟಿಎಫ್‌ಗೆ ದೂರು ನೀಡಿದ್ದರು.

ಮುಷ್ಕರದಿಂದ ಕಸ ಸಂಗ್ರಹಕ್ಕೆ ಅಡ್ಡಿಯಾಗಿಲ್ಲ: ಬಿಬಿಎಂಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೌರಕಾರ್ಮಿಕರ ಮುಷ್ಕರದಿಂದ ಮನೆ ಮನೆ ಕಸ ಸಂಗ್ರಹಕ್ಕೆ ತೊಂದರೆ ಆಗಿಲ್ಲ. ರಸ್ತೆಯಲ್ಲಿ ಕಸ ಗುಡಿಸುವ ಕೆಲಸಕ್ಕೆ ಸ್ವಲ್ಪ ಅಡ್ಡಿಯಾಗಿದೆ ಎಂದು ಬಿಬಿಎಂಪಿ ವಿಶೇಷ ಆಯುಕ್ತ(ಆಡಳಿತ) ಎಸ್. ರಂಗಪ್ಪ ತಿಳಿಸಿದರು.

ಬಿಬಿಎಂಪಿಯಲ್ಲಿ 17,425 ಪೌರ ಕಾರ್ಮಿಕರಿದ್ದು, ಇವರಲ್ಲಿ 13,810 ಕಾರ್ಮಿಕರು ಗೈರುಹಾಜರಾಗಿದ್ದರು. 3,615 ಮಂದಿ ಕೆಲಸ ಮಾಡಿದ್ದಾರೆ. 1,171 ಮೇಲ್ವಿಚಾರಕರಲ್ಲಿ 454 ಜನ ಕೆಲಸ ಮಾಡಿದ್ದಾರೆ. 5,205 ಆಟೊ ಟಿಪ್ಪರ್ ಚಾಲಕರಲ್ಲಿ 250 ಮಂದಿ ಗೈರಾಗಿದ್ದರು. 5,340 ಆಟೊ ಟಿಪ್ಪರ್ ಸಹಾಯಕರಲ್ಲಿ 627 ಮಂದಿ ಗೈರಾಗಿದ್ದು, ಉಳಿದವರು ಕೆಲಸ ಮಾಡಿದ್ದಾರೆ. ಆದ್ದರಿಂದ ಕಸ ನಿರ್ವಹಣೆಗೆ ತೊಂದರೆಯಾಗಿಲ್ಲ ಎಂದು ಹೇಳಿದರು.

‘ಪೌರಕಾರ್ಮಿಕರ ಜತೆ ಪಾಲಿಕೆ ಅಧಿಕಾರಿಗಳು ನಿರಂತರ ಸಂಪರ್ಕದಲ್ಲಿದ್ದಾರೆ. ಪೌರ ಕಾರ್ಮಿಕರ ಬೇಡಿಕೆಗಳ ಬಗ್ಗೆ ಸರ್ಕಾರದ ಮಟ್ಟದಲ್ಲಿ ನಿರ್ಧಾರ ಆಗಬೇಕಿರುವುದರಿಂದ ಪಾಲಿಕೆ ಪ್ರತ್ಯೇಕವಾಗಿ ಮಾತುಕತೆ ನಡೆಸಿಲ್ಲ’ ಎಂದರು.

‘ಪಾಲಿಕೆಯಲ್ಲಿ 8,063 ಹುದ್ದೆ ಖಾಲಿ’

ಪಾಲಿಕೆಯಲ್ಲಿ ಮಂಜೂರಾದ 12,827 ಹುದ್ದೆಗಳಲ್ಲಿ 8,063 ಹುದ್ದೆಗಳು ಖಾಲಿ ಇವೆ ಎಂದು ಎಸ್.ರಂಗಪ್ಪ ತಿಳಿಸಿದರು.

ಕಾಮಗಾರಿ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಂಜಿನಿಯರ್‌ಗಳಲ್ಲಿ 241 ಮಂದಿ ಪಾಲಿಕೆಯವರಾಗಿದ್ದು, 340 ಎಂಜಿನಿಯರ್‌ಗಳು ಎರವಲು ಸೇವೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದಲ್ಲದೇ ಎಲ್ಲಾ ವರ್ಗದಲ್ಲಿ 22,105 ಮಂದಿ ಹೊರ ಗುತ್ತಿಗೆ ಸಿಬ್ಬಂದಿ ಪಾಲಿಕೆಯಲ್ಲಿದ್ದಾರೆ ಎಂದು ವಿವರಿಸಿದರು.

ತೆರಿಗೆ ಸಂಗ್ರಹ ದಾಖಲೆ: ಕಳೆದ ಎರಡು ವರ್ಷಗಳಿಗೆ ಹೋಲಿಸಿದರೆ ಹೆಚ್ಚಿನ ಪ್ರಮಾಣದ ಆಸ್ತಿ ತೆರಿಗೆ ಸಂಗ್ರಹವಾಗಿದೆ. 2020–21ರಲ್ಲಿ ಈ ವೇಳೆಗೆ ₹1718 ಕೋಟಿ ಸಂಗ್ರಹವಾಗಿತ್ತು, 2021–22ರಲ್ಲಿ ₹1785 ಕೋಟಿ ಸಂಗ್ರಹವಾಗಿತ್ತು. ಈ ವರ್ಷ ₹2188 ಕೋಟಿ ಸಂಗ್ರಹವಾಗಿದೆ ಎಂದು ರಂಗಪ್ಪ ವಿವರಿಸಿದರು.



AMUL COMFY | MACHO SPORTO

DISTRIBUTORS WANTED

As a part of our growth plan, we are Inviting Distributors in Bangalore and Other locations of Karnataka with experience in

Inner Garments / Garments distribution with strong financial standing and excellent operational background.

Interested parties may contact at
7828436009,8884200466
Email: enquiry@jgh.co.in
JG HOSIERY PVT LTD

ರೀಲ್ಸ್ ಮಾಡಿದ್ದವನಿಗೆ ದಂಡ

ಬೆಂಗಳೂರು: ಹೆಲ್ಮೆಟ್ ಧರಿಸದೇ ಒಂದೇ ಬೈಕ್‌ನಲ್ಲಿ ಏಳು ಮಂದಿ ಸಂಚರಿಸಿ ರೀಲ್ಸ್ ಮಾಡಿದ ಆರೋಪದಲ್ಲಿ ದಿವಾಕರ್ ಎಂಬುವವರಿಗೆ ನಗರದ ಸಂಚಾರಿ ಪೊಲೀಸರು ₹ 17,500 ದಂಡ ವಿಧಿಸಿದ್ದಾರೆ.

ಇನ್‌ಸ್ಟಾಗ್ರಾಮ್ ಖಾತೆ ಹೊಂದಿರುವ ದಿವಾಕರ್, ತನ್ನ ಸ್ನೇಹಿತರೊಂದಿಗೆ ಬೈಕ್‌ನಲ್ಲಿ ರೀಲ್ಸ್ ಮಾಡಿ ‘ದಚ್ಚುದಿವು’ ಹೆಸರಿನ ಇನ್‌ಸ್ಟಾಗ್ರಾಮ್‌ಗೆ ಹಾಕಿದ್ದರು. ವಿಡಿಯೊದಲ್ಲಿ ಹೆಲ್ಮೆಟ್ ಧರಿಸದೇ ಇರುವುದನ್ನು ಪರಿಗಣಿಸಿ ಪೊಲೀಸರು ದಂಡ ವಿಧಿಸಿದ್ದಾರೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ
ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ಸೇವಾ ನಿವೃತ್ತಿ ಹೊಂದಿದ ಬಿಬಿಎಂಪಿಯ 67 ಅಧಿಕಾರಿ ಹಾಗೂ ಸಿಬ್ಬಂದಿಯನ್ನು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಕೇಂದ್ರ ಕಚೇರಿ ಆವರಣದ ಡಾ. ರಾಜ್‌ಕುಮಾರ್ ಗಾಜಿನ ಮನೆಯಲ್ಲಿ ಸನ್ಮಾನಿಸಿ ಬೀಳ್ಕೊಟ್ಟರು. ಉಪ ಆಯುಕ್ತ ಯೋಗೇಶ್ ಇದ್ದರು

PUBLIC NOTICE

This is to inform the General Public that our client intends to purchase/acquire the property described in the Schedule hereto below free from all encumbrances. Any person or persons, having any claim, interest or right on the property described in the Schedule written hereunder or any part thereof by way of any litigation(s) pending before any court or tribunal or governmental or statutory authority or by way of inheritance, sale, exchange, mortgage, lien, pledge, gift, trust, bequest, possession, lease, charge, easement, grant, tenancy or encumbrance howsoever or otherwise is hereby required to intimate the same to the undersigned in writing within Fourteen(14) days from the date of publication of this notice of his/her/its claim, if any, with all supporting documents, failing which the transaction shall be completed without reference to such claim, and the claims, if any, of such person (s) shall be treated as waived and not binding on our client.

SCHEDULE PROPERTY

All that piece and parcel of the immovable property being various lands totally measuring 24Acres, situated at Kamenahalli Village, Kundana Hobli, Devanahalli Taluk, Bengaluru Rural District. List of Survey Numbers, Extents & Boundaries are as follows:

Sl No	Sy No	Extent		Boundaries			
		Acre	Gunta	East	West	North	South
1	121/1	2	0	Hegganahalli boundary	Land in Sy No 122	Land in Sy No 31	Land in Sy No 121/2
2	121/2	2	0	Hegganahalli boundary	Land in Sy No 122	Land in Sy No 121/1	Land in Sy No 31
3	122	4	0	Land in Sy No 121	Land in Sy No 123	Land in Sy No 31	Land in Sy No 31
4	123/1	2	0	Land in Sy No 122	Land in Sy No 124	Land in Sy No 31	Land in Sy No 123/2
5	123/2	1	0	Land in Sy No 122	Land in Sy No 124	Land in Sy No 123/1	Land in Sy No 123/3
6	123/3	1	0	Land in Sy No 122	Land in Sy No 124	Land in Sy No 123/2	Land in Sy No 31
7	124	4	0	Land in Sy No 123	Land in Sy No 125	Land in Sy No 31	Land in Sy No 31
8	125	4	0	Land in Sy No 124	Land in Sy No 126	Land in Sy No 31	Land in Sy No 31
9	126	4	0	Land in Sy No 125	Land in Sy No 31	Land in Sy No 31	Land in Sy No 31

Sd/-
S T Prashantha Kumar
Partner, Fox Mandal & Associates
6/12, Gurappa Avenue, Primrose Road, BENGALURU 560 025
Phone : + 91 80 2559 5911 e-mail : prashantha.kumar@foxmandal.in

Date : 03-07-2022
Place : BENGALURU

ಸಾಸಲು: ರೈತ ಆತ್ಮಹತ್ಯೆಗೆ ಯತ್ನ

ಸಾಸಲು (ದೊಡ್ಡಬಳ್ಳಾಪುರ ತಾಲ್ಲೂಕು): ಜಮೀನಿನಲ್ಲಿ ವಿದ್ಯುತ್ ತಂತಿಗಳು ಹಾದು ಹೋಗಬಾರದು ಎಂದು ಒತ್ತಾಯಿಸಿ ರೈತರೊಬ್ಬರು ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ತಾಲ್ಲೂಕಿನ ಶ್ರೀರಾಮನಹಳ್ಳಿಯಲ್ಲಿ ನಡೆದಿದೆ.

ಸಾಸಲು ಹೋಬಳಿಯ ಶ್ರೀರಾಮನಹಳ್ಳಿ ಬಳಿ ಕೆಪಿಟಿಸಿಎಲ್‌ನಿಂದ 66:11 ವಿದ್ಯುತ್ ವಿತರಣ ಘಟಕ ಸ್ಥಾಪಿಸಲಾಗುತ್ತಿದೆ. ರೈತ ರಂಗಪ್ಪ ಎಂಬುವರು ಜಮೀನಿನಲ್ಲಿ ವಿದ್ಯುತ್ ತಂತಿಗಳು ಹಾದುಹೋಗಬಾರದೆಂದು ನ್ಯಾಯಾಲಯದ ಮೆಟ್ಟಿಲೇರಿದ್ದರು. ಇದರಿಂದ ಒಂದು ವರ್ಷ ಕಾಲ ಘಟಕದ ಕಾಮಗಾರಿ ಸ್ಥಗಿತಗೊಂಡಿತ್ತು. ನ್ಯಾಯಾಲಯ ರಂಗಪ್ಪ ಅವರ ಅರ್ಜಿಯನ್ನು ವಜಾಗೊಳಿಸಿದೆ. ಹಾಗಾಗಿ, ಕೆಪಿಸಿಎಲ್ ಅಧಿಕಾರಿಗಳು ಕಾಮಗಾರಿ ನಡೆಸಲು ಮುಂದಾದರು. ಈ ವೇಳೆ ಅವರು ವಿದ್ಯುತ್ ಕಂಬವನ್ನೇರಿ ಕಾಮಗಾರಿಗೆ ಪ್ರತಿರೋಧವೊಡ್ಡಿದ್ದು, ಪೊಲೀಸರು ಮನವೊಲಿಸಿ ಕೆಳಗಿಳಿಸಿದ್ದರು. ಆದರೆ, ಮನೆಗೆ ತೆರಳಿದ ಅವರು ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದರು ಎನ್ನಲಾಗಿದೆ.



'ಕನ್ನಡಿಗರಿಗೆ ಅವಮಾನ ಮಾಡಿದ ಕೆ.ಎನ್. ರಾಜಣ್ಣ'

ಬೆಂಗಳೂರು: 'ಕಾಂಗ್ರೆಸ್ ಮುಖಂಡ ಕೆ.ಎನ್. ರಾಜಣ್ಣ ಅವರು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರ ಆಯಸ್ಸಿನ ಕುರಿತು ಕೀಳುಮಟ್ಟದಲ್ಲಿ ಮಾತನಾಡಿರುವುದು ಕನ್ನಡಿಗರಿಗೆ ಮಾಡಿದ ಅವಮಾನ' ಎಂದು ಜೆಡಿಎಸ್ ಶಾಸಕ ಜಿ.ಟಿ. ದೇವೇಗೌಡ ಹೇಳಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, 'ರೈತ ಕುಟುಂಬದಲ್ಲಿ ಹುಟ್ಟಿದ ದೇವೇಗೌಡರು ದೇಶದ ಪ್ರಧಾನಿಯಾಗಿ ಕೆಂಪುಕೋಟೆಯಲ್ಲಿ ನಿಂತು ರಾಷ್ಟ್ರಧ್ವಜಾರೋಹಣ ಮಾಡಿರುವುದು ಎಲ್ಲ ಕನ್ನಡಿಗರಿಗೂ ಹೆಮ್ಮೆಯ ವಿಚಾರ. ಹಿಂದಿನ ಪ್ರಧಾನಿಗಳೂ, ಈಗಿನ ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಎಲ್ಲರೂ ದೇವೇಗೌಡರನ್ನು ಗೌರವಿಸುತ್ತಾರೆ. ಆದರೆ, ರಾಜಣ್ಣ ಕೆಟ್ಟದಾಗಿ ಮಾತನಾಡಿರುವುದು ನೋವಿನ ಸಂಗತಿ' ಎಂದರು. 'ಅವರು (ರಾಜಣ್ಣ) ಸಾವಿನ ಕುರಿತು ಮಾತನಾಡಿದ್ದಾರೆ. ಕೋವಿಡ್‌ನಿಂದ ಚಿಕ್ಕ ವಯಸ್ಸಿನವರೂ ಮೃತಪಟ್ಟಿದ್ದಾರೆ. ಅನೇಕರು ಸಂಕಷ್ಟ ಅನುಭವಿಸಿದ್ದಾರೆ. ದೇವೇಗೌಡರು ದೈವಭಕ್ತ. ಈ ವಯಸ್ಸಿನಲ್ಲೂ ಅವರು ಎಲ್ಲವನ್ನೂ ಗಟ್ಟಿಯಾಗಿ ಎದುರಿಸಿದ್ದಾರೆ' ಎಂದಿದ್ದಾರೆ.

ಎಚ್ಚರಿಕೆ: 'ಎಚ್.ಡಿ.ದೇವೇಗೌಡರ ವಿರುದ್ಧ ಕೀಳುಮಟ್ಟದ ಹೇಳಿಕೆ ನೀಡಿರುವ ತುಮಕೂರು ಡಿಸಿಸಿ ಬ್ಯಾಂಕ್ ಅಧ್ಯಕ್ಷ ಕೆ.ಎನ್.ರಾಜಣ್ಣ ಒಕ್ಕಲಿಗರ ಕ್ಷಮೆ ಯಾಚಿಸಬೇಕು' ಎಂದು ಒಕ್ಕಲಿಗರ ಸಂಘ ಆಗ್ರಹಪಡಿಸಿದೆ.

ದೇವೇಗೌಡರು ನಾಡಿನ ಮುತ್ಸದ್ದಿ ರಾಜಕಾರಣಿ. ಅವರ ಬಗ್ಗೆ ಹಲವು ಬಾರಿ ನಾಲಿಗೆ ಹರಿಬಿಟ್ಟು ಮಾತನಾಡಿದ್ದಾರೆ. ಒಕ್ಕಲಿಗ ಸಮುದಾಯದ ತಾಳ್ಮೆ ಪರೀಕ್ಷಿಸುತ್ತಿದ್ದಾರೆ. ಇದೇ ಪ್ರವೃತ್ತಿ ಮುಂದುವರಿದರೆ ತುಮಕೂರು ಸೇರಿದಂತೆ ರಾಜ್ಯದ ಎಲ್ಲೆಡೆ ಪ್ರತಿಭಟನೆ ನಡೆಸಲಾಗುವುದು ಎಂದು ಸಂಘದ ಅಧ್ಯಕ್ಷ ಸಿ.ಎನ್. ಬಾಲಕೃಷ್ಣ, ಪ್ರಧಾನ ಕಾರ್ಯದರ್ಶಿ ಟಿ.ಕೋನಪ್ಪ ರೆಡ್ಡಿ ಎಚ್ಚರಿಸಿದ್ದಾರೆ.

भारतीय ताराभौतिकी संस्थान
INDIAN INSTITUTE OF ASTROPHYSICS
(विज्ञान व प्रौद्योगिकी विभाग, भारत सरकार के अधीन स्वायत्त संस्थान)
(An Autonomous Body Under Department of Science & Technology, Government of India)
2 nd Block, कोरमंगला Koramangala, बेंगलूर Bangalore - 560034.

NOTICE INVITING TENDER
Tender Notice No.56/IIA/CIVIL/CREST/HOSAKOTE/022-23 dated 4 th July 2022.
Sealed Tenders are invited for the following work:
1. **Renovation of Guest Rooms and General Toilets with a provision of toilet for Divyangjan at Main Lab Building**, CREST Campus of IIA, Hosakote, Bengaluru Rural Dist.
Detailed Tender Document can be downloaded from Institute's Website **www.iiap.res.in/tenders.htm**. Last date for receipt of bid is on or before 5th August 2022 at 15:00 hours.
ADMINISTRATIVE OFFICER

ಮೈಸೂರು ಅರಮನೆ ಮಂಡಳಿ
ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಮೈಸೂರು
ದೂರವಾಣಿ:0821–2421051 ಫ್ಯಾಕ್ಸ್:2434425
ಇಮೇಲ್: ddmysorepalace@gmail.com
ಸಂ:ಕಾನಿಅ/ಅಮಂ/ಉನಿ/ಸಕಾಇಂ/ಸಇಂ/ಟೆಂಡರ್ ಸಂಖ್ಯೆ:01/2022–23 ದಿನಾಂಕ:01.07.2022

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಉಪ ನಿರ್ದೇಶಕರು, ಅರಮನೆ ಮಂಡಳಿ, ಮೈಸೂರು ಇವರಿಂದ ಮೈಸೂರು ಅರಮನೆಯ ಆವರಣದಲ್ಲಿ ಒಟ್ಟು ಅಂದಾಜು ಮೊತ್ತ ರೂ. 12.00 ಲಕ್ಷಗಳಿಗೆ ಸಂಬಂಧಿಸಿದ 03 ಸಂಖ್ಯೆ ಅಭಿವೃದ್ಧಿ / ಖರೀದಿ ಕಾಮಗಾರಿಗೆ ಸಂಬಂಧಿಸಿದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ನೊಂದಾಯಿತ ಅರ್ಹ ವಿದ್ಯುತ್ ಗುತ್ತಿಗೆದಾರರಿಂದ / ನೋಂದಾಯಿತ ಏಜೆನ್ಸಿ/ತಯಾರಕರುಗಳಿಂದ ದ್ವಿಪ್ರತಿಯಲ್ಲಿ ಮೊಹರಾದ ಲಕೋಟೆಯಲ್ಲಿ ಶೇಕಡವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. (1) ಖಾಲಿ ಟೆಂಡರ್ ಫಾರಂ ಕೋರಿ ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 15–07–2022 ಸಂಜೆ 4:00 ಗಂಟೆಯವರೆಗೆ.** (2) ಖಾಲಿ ಟೆಂಡರ್ ಫಾರಂಗಳನ್ನು ಗುತ್ತಿಗೆದಾರರಿಗೆ ನೀಡುವ **ದಿನಾಂಕ: 16–07–2022 ಸಂಜೆ 4:00 ಗಂಟೆಯವರೆಗೆ.** (3) ಭರ್ತಿ ಮಾಡಿದ ಟೆಂಡರ್ ಸ್ವೀಕರಿಸುವ **ದಿನಾಂಕ: 18–07–2022 ಸಂಜೆ 4.00 ಗಂಟೆಯವರೆಗೆ.** (4) ಟೆಂಡರ್‌ಗಳನ್ನು ತೆರೆಯುವ **ದಿನಾಂಕ: 18–07–2022ರ ಸಂಜೆ 4.30 ಗಂಟೆಗೆ.** (5) ಟೆಂಡರ್‌ಗಿಟ್ಟಿರುವ ಗರಿಷ್ಠ ಮೊತ್ತ **ರೂ. 5.00 ಲಕ್ಷಗಳು** ಹಾಗೂ ಕನಿಷ್ಠ ಮೊತ್ತ **ರೂ.2.00 ಲಕ್ಷಗಳು.** ಯಾವುದಾದರೂ ಅಥವಾ ಎಲ್ಲಾ ಟೆಂಡರ್‌ಗಳನ್ನು ಯಾವ ಕಾರಣಗಳನ್ನೂ ನೀಡದೆ ಸ್ವೀಕರಿಸುವ/ ತಿರಸ್ಕರಿಸುವ ಹಕ್ಕು ಉಪ ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು ರವರಿಗೆ ಸೇರಿರುತ್ತದೆ. ಇಷ್ಟಲ್ಲದೆ ಇನ್ನುಳಿದ ಯಾವುದಾದರೂ ಮಾಹಿತಿಗಳನ್ನು ಗುತ್ತಿಗೆದಾರರು ಬಯಸಿದಲ್ಲಿ ಅವುಗಳನ್ನು ಈ ಕಛೇರಿಯ ಕೆಲಸದ ಎಲ್ಲಾ ದಿನಗಳಂದು ಮತ್ತು ಕಛೇರಿಯ ವೇಳೆಯಲ್ಲಿ ಪಡೆಯಬಹುದು. ಒಂದು ವೇಳೆ ಮೇಲೆ ನೀಡಲಾಗಿರುವ ದಿನಗಳು ಸಾರ್ವಜನಿಕ ರಜಾ ದಿನಗಳಾಗಿದ್ದಲ್ಲಿ ಅನಂತರದ ದಿನಗಳನ್ನು ಪರಿಗಣಿಸಲಾಗುವುದು.

ಸಹಿ/– ಉಪ ನಿರ್ದೇಶಕರು,
ಮೈಸೂರು ಅರಮನೆ ಮಂಡಳಿ, ಮೈಸೂರು
DIPR/MYS/KAVITA/197/22-23

ಭಾರತೀಯ ಸ್ಟೇಟ್ ಬ್ಯಾಂಕ್
ಗಿರಿನಗರ 3ನೇ ಘಟ್ಟ (16222)
ನಂ. 178, ಜಿ.ಎಂ. ಪ್ಲಾಜಾ, ಅವಲಹಳ್ಳಿ ಮುಖ್ಯ ರಸ್ತೆ, ಗಿರಿನಗರ, ಬಿಎಸ್‌ಕೆ 3ನೇ ಹಂತ, ಬೆಂಗಳೂರು – 560 085, ಫೋನ್: 080-25943777, ಫ್ಯಾಕ್ಸ್: 080- 25943778,
Email: sbi.16222@sbi.co.in

ಸ್ವಾಧೀನ ಸೂಚನೆ

[ನಿಯಮ 8(1)ರ ಅಡಿ (ಸ್ಥಿರಾಸ್ತಿಗಾಗಿ)]

ಕೆಳಸಹಿದಾರರು, **ಭಾರತೀಯ ಸ್ಟೇಟ್ ಬ್ಯಾಂಕ್**, ಇದರ ಅಧಿಕಾರಹೊಂದಿದ ಅಧಿಕೃತ ಅಧಿಕಾರಿಯಾಗಿದ್ದು ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002 (2002ರ ನಂ.54)ಮತ್ತು 2002ರ ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳ ನಿಯಮ 3 ಅನ್ನು ಓದಿಕೊಂಡಂತೆ ಪ್ರಕರಣ 13(12)ರ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತಗಾದೆ ಸೂಚನೆಯನ್ನು ಸಾಲಗಾರರು **ಮೆ. ಪೌಂಡ್‌ವೈಸ್ ಫೋರೆಕ್ಸ್ ಪ್ರೈ. ಲಿ., ನಂ. 615/ಎ, 1ನೇ ಮಹಡಿ, 10ನೇ ಮುಖ್ಯ ರಸ್ತೆ, 31ನೇ ಅಡ್ಡ ರಸ್ತೆ, 4ನೇ ಬ್ಲಾಕ್ ಜಯನಗರ, ಬೆಂಗಳೂರು – 560 011 ಮತ್ತು ಜಾಮೀನುದಾರರು/ ಅಡಮಾನುದಾರರಾದ: (1) ಶ್ರೀ ಜೀತ್‌ಮಲ್ ಮುತ್ತ**, S/o **ಶ್ರೀ ಭೀಮರಾಜ್, ನಿರ್ದೇಶಕರು** , ನಂ. 618/ಎ, 10ನೇ ಮುಖ್ಯ ರಸ್ತೆ, 31ನೇ ಅಡ್ಡ ರಸ್ತೆ, 4ನೇ ಬ್ಲಾಕ್, ಜಯನಗರ, ಬೆಂಗಳೂರು – 560 011 **(2) ಶ್ರೀ ಪ್ರದೀಪ್ ದೋಶಿ** S/o **ಶ್ರೀ ನಾತುಮಲ್ ದೋಶಿ, ನಿರ್ದೇಶಕರು,** ನಂ. 15, ರೋಹಿಣಿ ರೆಸಿಡೆನ್ಸಿ, ಮಿಡ್ಲ್‌ಸ್ಕೂಲ್ ರಸ್ತೆ, ವಿ. ವಿ. ಪುರಂ, ಬೆಂಗಳೂರು – 560 004, **(3) ಶ್ರೀಮತಿ ಸಂಗೀತಾ ಜೈನ್**, W/o **ಶ್ರೀ ಮುಕೇಶ್ ಕುಮಾರ್**, ನಂ. 618/ಎ, 10ನೇ ಮುಖ್ಯ ರಸ್ತೆ, 31ನೇ ಅಡ್ಡ ರಸ್ತೆ, 4ನೇ ಬ್ಲಾಕ್, ಜಯನಗರ, ಬೆಂಗಳೂರು – 560 011 **(4) ಶ್ರೀಮತಿ ಬಬ್ಲಿ ದೇವಿ** W/o **ಭೀಮರಾಜ್**, ನಂ. 618/ಎ, 10ನೇ ಮುಖ್ಯ ರಸ್ತೆ, 31ನೇ ಅಡ್ಡ ರಸ್ತೆ, 4ನೇ ಬ್ಲಾಕ್, ಜಯನಗರ, ಬೆಂಗಳೂರು – 560 011 **(5) ಶ್ರೀ ಮುಕೇಶ್ ಕುಮಾರ್** S/o **ಶ್ರೀ ಭೀಮರಾಜ್**, ನಂ. 618/ಎ, 10ನೇ ಮುಖ್ಯ ರಸ್ತೆ, 31ನೇ ಅಡ್ಡ ರಸ್ತೆ, 4ನೇ ಬ್ಲಾಕ್, ಜಯನಗರ, ಬೆಂಗಳೂರು – 560 011 ಇವರಿಗೆ ದಿನಾಂಕ **08.04.2022**ರಂದು ನೀಡಿದ್ದರು. ಅದರಂತೆ ಸದರಿ ಸೂಚನೆಯ ದಿನಾಂಕದಿಂದ 60 ದಿನಗಳ ಒಳಗೆ ಸೂಚನೆಯಲ್ಲಿ ತಿಳಿಸಿರುವ ಮೊಬಲಗು **ರೂ.3,38,73,068/-** (ರೂಪಾಯಿ ಮೂರು ಕೋಟಿ ಮೂವತ್ತೆಂಟು ಲಕ್ಷದ ಎಪ್ಪತ್ತ ಮೂರು ಸಾವಿರದ ಅರವತ್ತೆಂಟು ಮಾತ್ರ) ದಿನಾಂಕ 04.04.2022 ರಂತೆ ಜೊತೆಗೆ ದಿನಾಂಕ 05.04.2022ರಿಂದ ಬಡ್ಡಿ ಮತ್ತು ಸಾಂದರ್ಭಿಕ ಖರ್ಚುಗಳನ್ನು ಪಾವತಿಮಾಡಲು ಅವರನ್ನು ಕೋರಿದ್ದರು.

ಸಾಲಗಾರರು/ ಜಾಮೀನುದಾರರು/ ಅಡಮಾನುದಾರರು ಡಿಮ್ಯಾಂಡ್ ನೋಟೀಸಿನಲ್ಲಿ ಸೂಚಿಸಿರುವ ಪೂರ್ತಿ ಮೊತ್ತವನ್ನು ಮರುಪಾವತಿ ಮಾಡಲಿಲ್ಲವಾದುದರಿಂದ, ಸಾಲಗಾರರಿಗೆ/ ಜಾಮೀನುದಾರರಿಗೆ/ ಅಡಮಾನುದಾರರಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು 2002ರ ನಿಯಮ 8 ಅನ್ನು ಓದಿಕೊಂಡಂತೆ ಸದರಿ ಆಕ್ಟ್ ಸೆಕ್ಷನ್ 13(4)ರ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕೆಳಗೆ ವಿವರಿಸಿದ ಸ್ವತ್ತುಗಳನ್ನು ಕೆಳಸಹಿದಾರರು **ದಿನಾಂಕ 01.07.2022ರಂದು** ಸ್ವಾಧೀನಪಡಿಸಿಕೊಂಡಿರುತ್ತಾರೆ.

ನಿರ್ದಿಷ್ಟವಾಗಿ ಸಾಲಗಾರರಿಗೆ/ಜಾಮೀನುದಾರರಿಗೆ/ಅಡಮಾನುದಾರರಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಸುವುದೇನೆಂದರೆ, ಯಾರೂ ಕೆಳಗೆ ನಮೂದಿಸಿರುವ ಸ್ವತ್ತುಗಳ ಬಗ್ಗೆ ವ್ಯವಹರಿಸಬಾರದು ಮತ್ತು ಸದರಿ ಸ್ವತ್ತುಗಳ ಬಗ್ಗೆ ಯಾವುದೇ ವ್ಯವಹಾರ ನಡೆಸಿದ್ದೇ ಆದರೆ, ಅದು **ಭಾರತೀಯ ಸ್ಟೇಟ್ ಬ್ಯಾಂಕ್,** ಇವರಿಗೆ ಬರಬೇಕಾದ ಬಾಕಿ ಮೊತ್ತ **ರೂ.3,21,71,352/-** (ರೂಪಾಯಿ ಮೂರು ಕೋಟಿ ಇಪ್ಪತ್ತೊಂದು ಲಕ್ಷದ ಎಪ್ಪತ್ತೊಂದು ಸಾವಿರದ ಮುನ್ನೂರ ಐವತ್ತೆರಡು ಮಾತ್ರ) ದಿನಾಂಕ 18.06.2022 ರಂದು ಇದ್ದಂತೆ ಜೊತೆಗೆ **ದಿನಾಂಕ 19.06.2022**ರಿಂದ ಒಪ್ಪಿದ ದರದಲ್ಲಿ ಬಡ್ಡಿ ಮತ್ತು ಸಾಂದರ್ಭಿಕ ಖರ್ಚು, ಇತರ ವೆಚ್ಚ ಇತ್ಯಾದಿಗಳನ್ನು ಚುಕ್ತಾ ಮಾಡುವುದಕ್ಕೆ ಒಳಪಟ್ಟಿರುತ್ತದೆ. ಸಾಲಗಾರರ /ಅಡಮಾನುದಾರರ/ ಜಾಮೀನುದಾರರ ಗಮನಕ್ಕೆ ತರುವುದೇನೆಂದರೆ ಭದ್ರತಾ ಸ್ವತ್ತುಗಳನ್ನು ಹಿಂಪಡೆಯುವ ಕಾಲಾವಕಾಶ ಕಾಯಿದೆಯ ಸೆಕ್ಷನ್ 13ರ ಸಬ್ ಸೆಕ್ಷನ್ (8) ರ ಅನ್ವಯ ಇರುತ್ತದೆ.

ಅಡಮಾನ ಮಾಡಿರುವ ಸ್ಥಿರಾಸ್ತಿಯ ವಿವರ :

1. ಬೆಂಗಳೂರು, ಜಯನಗರ, 4ನೇ ಬ್ಲಾಕ್, 10ನೇ ಸಿ ಮುಖ್ಯ ರಸ್ತೆ, ಇಲ್ಲಿರುವ ವಾಸಯೋಗ್ಯ ಮನೆ ಆಸ್ತಿಯ ಕಾರ್ಪೋರೇಶನ್ ನಂ. 618/9, ನಿವೇಶನ ನಂ. 618, ಅಳತೆ ಪೂರ್ವದಿಂದ ಪಶ್ಚಿಮಕ್ಕೆ 60 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 39 ಅಡಿ ಒಟ್ಟು 2340 ಚದರ ಅಡಿ ಅಳತೆಯಲ್ಲಿ ಕಟ್ಟಡವನ್ನು ಹೊಂದಿರುವ ಆಸ್ತಿಯು **ಶ್ರೀಮತಿ ಬಬ್ಲಿ ದೇವಿ** W/o **ಭೀಮರಾಜ್** ಇವರ ಹೆಸರಿಗೆ ದಿನಾಂಕ 08.01.1992ರ ಶುದ್ಧಕ್ರಯ ಪತ್ರ ದಾಖಲೆ ನಂ. 2937/1991–92, ಎಸ್‌ಆರ್‌ಓ ಬೆಂಗಳೂರು ಇಲ್ಲಿ ನೋಂದಣಿಯಾಗಿದ್ದು ಈ ಆಸ್ತಿಯ ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ನಂ. 635 ಮತ್ತು 636ರಲ್ಲಿ ನಿರ್ಮಿತವಾದ ಕಟ್ಟಡ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ನಿವೇಶನ ನಂ. 619ರಲ್ಲಿ ನಿರ್ಮಾಣವಾದ ಆಸ್ತಿ, ದಕ್ಷಿಣಕ್ಕೆ: ನಿವೇಶನ ನಂ. 617ರಲ್ಲಿ ನಿರ್ಮಾಣವಾದ ಆಸ್ತಿ.

2. ಬೆಂಗಳೂರು – 560 004, ವಿ.ವಿ. ಪುರಂ, ಮಾರ್ಕೆಟ್ ರಸ್ತೆ, ಇಲ್ಲಿರುವ ಆಸ್ತಿಯ ಮುನಿಸಿಪಲ್ ನಂ. 5, ಪಿಐಡಿ ನಂ. 50–8–5, ಹೊಸ ಪಿಐಡಿ ನಂ. 143–W0139–28, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವಾರ್ಡ್ ನಂ. 50, ವಿವಿ ಪುರಂ – ಮಾರ್ಕೆಟ್ ರಸ್ತೆ, ವಿ ವಿ ಪುರಂ ವಾರ್ಡ್ , ಬೆಂಗಳೂರು – 560004, ಇಲ್ಲಿರುವ ಅಕ್ಕಪಕ್ಕದ ಆಸ್ತಿಗಳಾದ ನಂ. 5, 6, 7 ಮತ್ತು 8 ಗಳನ್ನು ವಿಲೀನಗೊಳಿಸಲಾಗಿದ್ದು, ಅಳತೆ ಪೂರ್ವದ ಕಡೆ 43 ಅಡಿ, ಪಶ್ಚಿಮದ ಕಡೆ 51 ಅಡಿ, ಉತ್ತರದ ಕಡೆ 49 ಅಡಿ ಮತ್ತು ದಕ್ಷಿಣದ ಕಡೆ 21 ಅಡಿ 6 ಇಂಚು , ಸದರಿ ಆಸ್ತಿಯು ಅನಿಯಮಿತ ಆಕಾರವನ್ನು ಹೊಂದಿದ್ದು ಆದ್ದರಿಂದ ಒಟ್ಟು ನಿವೇಶನದ ವಿಸ್ತೀರ್ಣ 1560 ಚದರ ಅಡಿ ಈ ಆಸ್ತಿಯು **ಶ್ರೀಮತಿ ಸಂಗೀತಾ ಅಲಿಯಾಸ್ ಸಂಗೀತಾ ಮುಕೇಶ್ ಜೈನ್** W/o **ಶ್ರೀ ಮುಕೇಶ್ ಕುಮಾರ್,** ಇವರ ಹೆಸರಿಗೆ ದಿನಾಂಕ 15.12.2014ರ ಕ್ರಯ ಪತ್ರ ದಾಖಲೆ ನಂ. CMP-1-07726/2014-15 , ಮತ್ತು ಸಿಡಿ ನಂ. CMPD125 ದಿನಾಂಕ 15.12.2014ರಂದು ಎಸ್‌ಆರ್‌ಓ ಬಸವನಗುಡಿ, (ಚಾಮರಾಜಪೇಟೆ) ಬೆಂಗಳೂರು ಇಲ್ಲಿ ನೋಂದಣಿಯಾಗಿದ್ದು ಈ ಆಸ್ತಿಯ ಚಕ್ಕುಬಂದಿ: ಪೂರ್ವಕ್ಕೆ: ಪ್ಯಾಸೇಜ್ ಮತ್ತು ತದನಂತರ ಆಸ್ತಿಗಳ ಮುನಿಸಿಪಲ್ ನಂ. 9, 10 ಮತ್ತು 11, ಪಶ್ಚಿಮಕ್ಕೆ: ಮಾರ್ಕೆಟ್ ರಸ್ತೆ, ಉತ್ತರಕ್ಕೆ : ಖಾಸಗಿ ಆಸ್ತಿ, ದಕ್ಷಿಣಕ್ಕೆ: ಸಾಮಾನ್ಯ ಪ್ಯಾಸೇಜ್ (ಜೊತೆಗೆ 4 ಅಡಿ ಅಗಲ ಮತ್ತು 19 ಅಡಿ ಮತ್ತು 1 ಇಂಚು ಉದ್ದದ ಖಾಸಗಿ ಪ್ಯಾಸೇಜ್ ಮೇಲ್ಕಂಡ ಆಸ್ತಿಯ ಉತ್ತರ–ಪೂರ್ವದ ಭಾಗದಲ್ಲಿದೆ).

ಸ್ಥಳ : ಬೆಂಗಳೂರು
ದಿನಾಂಕ : 01.07.2022
ಸಹಿ/–
ಅಧಿಕೃತ ಅಧಿಕಾರಿ

'ಎಡ್ಯುವರ್ಸ್: ಜ್ಞಾನದೇಗುಲ' ಶೈಕ್ಷಣಿಕ ಮೇಳದಲ್ಲಿ ಹೆಸರು ನೋಂದಣಿಗೆ ವಿದ್ಯಾರ್ಥಿನಿಯರು ಸರದಿಯಲ್ಲಿ ನಿಂತಿರುವುದು

ಮಳಿಗೆಯೊಂದರಲ್ಲಿ ವಿದ್ಯಾರ್ಥಿಗಳು ವಿವಿಧ ಕೋರ್ಸ್‌ಗಳ ಬಗ್ಗೆ ವಿಚಾರಿಸುತ್ತಿರುವುದು

'ಎಡ್ಯುವರ್ಸ್' ಜ್ಞಾನ ದೇಗುಲ–2022 ಶೈಕ್ಷಣಿಕ ಮೇಳದಲ್ಲಿ ಡಾ. ಅಲಿ ಖ್ವಾಜಾ

'ಸಾಮರ್ಥ್ಯ, ಕೌಶಲ ಅರಿತುಕೊಳ್ಳಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಮರ್ಥ್ಯ, ಕೌಶಲ ಅರಿತುಕೊಂಡು ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳಿ' ಎಂದು ಬಿಜಾರ ಅಕಾಡೆಮಿ ಸಂಸ್ಥಾಪಕ ಮತ್ತು ಅಧ್ಯಕ್ಷ ಡಾ. ಅಲಿ ಖ್ವಾಜಾ ಸಲಹೆ ನೀಡಿದರು.

ಡಾ. ಅಲಿ ಖ್ವಾಜಾ

'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ವತಿಯಿಂದ ಶನಿವಾರ ನಗರದ ಜಯಮಹಲ್ ಪ್ಯಾಲೇಸ್ ಹೋಟೆಲ್ ಆವರಣದಲ್ಲಿ ಆಯೋಜಿಸಿದ್ದ ಕರ್ನಾಟಕದ ಅತಿ ದೊಡ್ಡ ಶೈಕ್ಷಣಿಕ ಮೇಳ 'ಎಡ್ಯುವರ್ಸ್: ಜ್ಞಾನ ದೇಗುಲ–2022 ಕಾರ್ಯಕ್ರಮದಲ್ಲಿ ಸುಭದ್ರ ಮತ್ತು ಸುಂದರ ಬದುಕು ರೂಪಿಸಿಕೊಳ್ಳುವ ಕುರಿತು ವಿದ್ಯಾರ್ಥಿಗಳಿಗೆ ಸಲಹೆಗಳನ್ನು ನೀಡಿದರು.

'ಯಶಸ್ಸು ಸಾಧಿಸಿದ ವ್ಯಕ್ತಿಗಳ ಉದಾಹರಣೆಗಳನ್ನು ನೀಡಿದ ಅವರು, 'ಒಬ್ಬ ವ್ಯಕ್ತಿ 25 ವಯಸ್ಸಿನ ತನಕ ಅಧ್ಯಯನ ಕೈಗೊಳ್ಳುವುದು ಸಾಮಾನ್ಯ. ಅಂದರೆ ಮುಂದಿನ ಕನಿಷ್ಠ 50 ವರ್ಷಗಳ ಸುಂದರ ಭವಿಷ್ಯದ ಬದುಕಿಗಾಗಿ ಈಗ ಕೈಗೊಳ್ಳುವ ನಿರ್ಧಾರ ಮಹತ್ವದ್ದು. ಉತ್ತಮ ಶಿಕ್ಷಣ ಸಂಸ್ಥೆಗಳು ಸಮಗ್ರ ವ್ಯಕ್ತಿತ್ವ ರೂಪಿಸುತ್ತವೆ. ಹೀಗಾಗಿ, ವಿದ್ಯಾರ್ಥಿಗಳು ಕೋರ್ಸ್‌ಗಳ ಜತೆ ಶಿಕ್ಷಣ ಸಂಸ್ಥೆಗಳ ಬಗ್ಗೆಯೂ ಗಮನಹರಿಸಬೇಕು' ಎಂದು ಸಲಹೆ ನೀಡಿದರು.

ಪ್ರಜಾವಾಣಿ DH DECCAN HERALD
ಎಡ್ಯುವರ್ಸ್™
ಜ್ಞಾನ ದೇಗುಲ® - 2022 (12ನೇ ಆವೃತ್ತಿ)
ಎ ಪ್ರೀಮಿಯರ್ ಎಜುಕೇಶನ್ ಎಕ್ಸ್‌ಪೊ

'ಮೊದಲು ನಿಮ್ಮ ಮನದ ಮಾತು ಆಲಿಸಿ. ನಿಮ್ಮ ಭವಿಷ್ಯವನ್ನು ನೀವೇ ರೂಪಿಸಿಕೊಳ್ಳಬೇಕಾಗುತ್ತದೆ ಹೊರತು ಇನ್ನೊಬ್ಬರಿಂದಲ್ಲ. ಕೋರ್ಸ್‌ಗಳ ಬಗ್ಗೆ ಪೋಷಕರ ಜತೆ ಚರ್ಚಿಸಿ. ಜಗಳವಾಡಬೇಡಿ. ಆಯಾ ವೃತ್ತಿಗೆ ಸಂಬಂಧಿಸಿದ ಅರ್ಹತೆಗಳು ಮತ್ತು ಕೌಶಲ ನಿಮ್ಮಲ್ಲಿ ಇವೆಯೇ ಎನ್ನುವುದನ್ನು ಚರ್ಚಿಸಿ. ಯಾವ ವೃತ್ತಿಯೂ ಒಳ್ಳೆಯದು ಮತ್ತು ಕೆಟ್ಟದ್ದು ಎನ್ನುವುದು ಇರುವುದಿಲ್ಲ. ಇಂದು ಅತಿ ಬೇಡಿಕೆ ಇರುವ ಕೋರ್ಸ್ ಒಂದೆರಡು ವರ್ಷಗಳ ನಂತರ ಅಪ್ರಸ್ತುತವಾಗುವ ಸಾಧ್ಯತೆ ಇದೆ' ಎಂದರು.

'ಕೆಲವರು ಕ್ಯಾಂಪಸ್ ಪ್ಲೇಸ್‌ಮೆಂಟ್‌ಗಳನ್ನು ನೋಡಿ ಕಾಲೇಜುಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಆದರೆ, ಸಮೀಕ್ಷೆಯೊಂದರ ಪ್ರಕಾರ ಇಂಥವರು ಕೇವಲ ಎರಡು ವರ್ಷಗಳ ಒಳಗೆ ಕಂಪನಿಗಳನ್ನು ಬದಲಾಯಿಸುತ್ತಾರೆ' ಎಂದು ವಿವರಿಸಿದರು.

ಶೈಕ್ಷಣಿಕ ಮೇಳದ ವಿಚಾರಗೋಷ್ಠಿಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು ಹಾಗೂ ಪೋಷಕರು– ಪ್ರಜಾವಾಣಿ ಚಿತ್ರಗಳು

'ರಾಜ್ಯದಾದ್ಯಂತ ನೋಡಲ್ ಕೇಂದ್ರಗಳು'



ಶ್ರೀನಿವಾಸ ಮೂರ್ತಿ

'ಸಿಇಟಿ ಫಲಿತಾಂಶ ಕೆಲವೇ ದಿನಗಳಲ್ಲಿ ಪ್ರಕಟವಾಗಲಿದೆ. ಈ ಹಿಂದೆ ಇದ್ದ ರೀತಿಯಲ್ಲಿ ರಾಜ್ಯದಾದ್ಯಂತ ನೋಡಲ್ ಕೇಂದ್ರಗಳನ್ನು ಆರಂಭಿಸಲಾಗಿದ್ದು, ವಿದ್ಯಾರ್ಥಿ ಸ್ನೇಹಿಯಾಗಿವೆ' ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಸಾರ್ವಜನಿಕ ಸಂಪರ್ಕ ಅಧಿಕಾರಿ ಶ್ರೀನಿವಾಸಮೂರ್ತಿ ತಿಳಿಸಿದರು.

'ಸಿಇಟಿ ಪ್ರಕ್ರಿಯೆ ಮತ್ತು ಕೌನ್ಸೆಲಿಂಗ್ ಕುರಿತು ವಿವರಿಸಿದ ಅವರು, 'ದಾಖಲಾತಿಗಳು ಸಮರ್ಪಕವಾಗಿರಬೇಕು. ಕರ್ನಾಟಕದಲ್ಲಿ ಕನಿಷ್ಠ ಏಳು ವರ್ಷ ಅಧ್ಯಯನ ಮಾಡಿರುವ ಪ್ರಮಾಣಪತ್ರ ಪಡೆಯಬೇಕು' ಎಂದು ತಿಳಿಸಿದರು.

'ಆಯ್ಕೆಗಳನ್ನು ಮಾಡುವಾಗ ಮೊಬೈಲ್ ಬಳಸುವ ಬದಲು ಲ್ಯಾಪ್‌ಟಾಪ್ ಅಥವಾ ಕಂಪ್ಯೂಟರ್ ಬಳಸಿ. ಇದರಿಂದ, ಆನ್‌ಲೈನ್ ಪ್ರವೇಶಾತಿ ಪ್ರಕ್ರಿಯೆಯ ಸುಲಭವಾಗುತ್ತದೆ' ಎಂದು ಸಲಹೆ ನೀಡಿದರು.

'ಕೋರ್ಸ್, ಕಾಲೇಜುಗಳ ಆಯ್ಕೆಯಲ್ಲಿ ಎಚ್ಚರವಹಿಸಿ'

ಪ್ರೊ. ಶಾಂತಾರಾಮ ನಾಯಕ್

'ಎಂಜಿನಿಯರಿಂಗ್ ಕೋರ್ಸ್‌ನಲ್ಲಿ ಸುಮಾರು 27 ವಿಭಾಗಗಳಿವೆ. ಆಸಕ್ತಿ ಇರುವ ವಿಭಾಗಗಳನ್ನು ಆಯ್ಕೆ ಮಾಡಿಕೊಳ್ಳುವುದು ಉತ್ತಮ' ಎಂದು ಕಾಮೆಡ್‌–ಕೆ ಅಧಿಕಾರಿ ಪ್ರೊ. ಶಾಂತರಾಮ ನಾಯಕ್ ಅವರು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಕಾಮೆಡ್‌–ಕೆ ಕೌನ್ಸೆಲಿಂಗ್ ಕುರಿತು ವಿವರ ನೀಡಿದ ಅವರು, 'ಈಗ ಪ್ರವೇಶಾತಿ ಪ್ರಕ್ರಿಯೆ ಆನ್‌ಲೈನ್ ಮೂಲಕ ನಡೆಯುತ್ತಿದೆ. ಉನ್ನತ ರ‍್ಯಾಂಕಿಂಗ್ ಪಡೆದಿರುವ ಕಾಲೇಜುಗಳಿಗೆ ಆದ್ಯತೆ ನೀಡುವುದು ಸಾಮಾನ್ಯ. ಆದರೆ, ಯಾವುದೇ ಕಾಲೇಜಿನಲ್ಲಿ ಪ್ರವೇಶ ದೊರೆತರೂ ಲಭ್ಯ ಇರುವ ಸೌಲಭ್ಯಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಉತ್ತಮ ಎಂಜಿನಿಯರ್‌ಗಳಾಗಬಹುದು. ಸೌಲಭ್ಯಗಳ ಕೊರತೆ ಬಗ್ಗೆ ದೂರುವುದು ಸಲ್ಲದು' ಎಂದರು.

'ಕೋರ್ಸ್‌ಗಳು ಮತ್ತು ಕಾಲೇಜುಗಳ ಆಯ್ಕೆ ಕುರಿತು ಪೋಷಕರ ಜತೆ ಚರ್ಚಿಸಿ' ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

'ಸೀಟ್ ಬ್ಲಾಕಿಂಗ್‌ಗೆ ಅವಕಾಶ ಕೊಡಬೇಡಿ'



ಎ.ಎಸ್. ರವಿ

'ಯಾವುದೇ ಕಾರಣಕ್ಕೂ ಸೀಟ್ ಬ್ಲಾಕಿಂಗ್‌ಗೆ ಅವಕಾಶ ನೀಡಬಾರದು. ಎಲ್ಲಿ ಸೀಟು ಸಿಗುತ್ತದೆಯೋ ಅಲ್ಲಿ ಪ್ರವೇಶಾತಿ ಪಡೆಯಬೇಕು' ಎಂದು ಮಲ್ಲೇಶ್ವರದ ಸರ್ಕಾರಿ ಕಾಲೇಜಿನ ಪ್ರಾಂಶುಪಾಲ ಎ.ಎಸ್. ರವಿಕುಮಾರ್ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

'ವಂಚಕರು, ಮಧ್ಯವರ್ತಿಗಳ ಬಗ್ಗೆ ಎಚ್ಚರವಹಿಸಿ. ವೃತ್ತಿಪರ ಕೋರ್ಸ್‌ಗಳಿಗೆ ಸಂಬಂಧಿಸಿದ ಸೀಟುಗಳನ್ನು ಯಾರಿಂದಲೂ ಪಡೆಯಲು ಸಾಧ್ಯವಿಲ್ಲ. ಎಲ್ಲ ಸೀಟುಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕವೇ ಪಡೆಯಬೇಕಾಗುತ್ತದೆ. ಇದು ಅತ್ಯಂತ ಪಾರದರ್ಶಕ ವ್ಯವಸ್ಥೆಯಾಗಿದೆ' ಎಂದು ತಿಳಿಸಿದರು.

ಶೈಕ್ಷಣಿಕ ಮೇಳ– ಮಾಹಿತಿಯ ಆಗರ

ಬೆಂಗಳೂರು: 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಆಯೋಜಿಸಿರುವ 12ನೇ ಆವೃತ್ತಿಯ 'ಎಡ್ಯುವರ್ಸ್: ಜ್ಞಾನದೇಗುಲ' ಶೈಕ್ಷಣಿಕ ಮೇಳ ವಿದ್ಯಾರ್ಥಿಗಳ ಹಾಗೂ ಪೋಷಕರ ಮೆಚ್ಚುಗೆಗೆ ಪಾತ್ರವಾಯಿತು. ಆಯ್ದ ಕೆಲವು ವಿದ್ಯಾರ್ಥಿಗಳ ಹಾಗೂ ಪೋಷಕರ ಪ್ರತಿಕ್ರಿಯೆಗಳು ಇಲ್ಲಿವೆ.

ಉತ್ತಮ ಕೋರ್ಸ್‌ಗಳನ್ನು ಅರಸಿ ಇಲ್ಲಿಗೆ ಬಂದಿದ್ದೇನೆ. ಯಾವ ಕೋರ್ಸ್‌ಗೆ ಎಷ್ಟು ಬೇಡಿಕೆ ಇದೆ, ಏನೆಲ್ಲ ಉದ್ಯೋಗಾವಕಾಶಗಳಿವೆ ಎಂಬುದನ್ನು ತಿಳಿಯಲು ಸಾಧ್ಯವಾಯಿತು. ನನಗೆ ಇಷ್ಟವಾದ ಕೋರ್ಸ್‌ಗಳನ್ನು ಪಟ್ಟಿ ಮಾಡಿಕೊಂಡಿದ್ದೇನೆ. ವಿಶೇಷ ಕೋರ್ಸ್‌ಗಳ ಬಗ್ಗೆ ಸಾಕಷ್ಟು ತಿಳಿದುಕೊಂಡೆ.

ಪ್ರಥಮ್, ಮಾಗಡಿ ರಸ್ತೆ

ಭಿನ್ನ ಕೋರ್ಸ್‌ಗಳಿಗೆ ಯಾವ ರೀತಿಯ ಶುಲ್ಕಗಳಿವೆ ಎಂಬುದು ತಿಳಿಯಿತು. ಹೊಸ ಕೋರ್ಸ್‌ಗಳ ಬಗ್ಗೆಯೂ ಮಾಹಿತಿ ದೊರೆಯಿತು. ಸಾಕಷ್ಟು ಕಾಲೇಜುಗಳು ಇಲ್ಲಿರುವುದರಿಂದ ಉಪಯುಕ್ತ ಮಾಹಿತಿ ಲಭ್ಯವಾಯಿತು. ಕಾಮೆಡ್‌–ಕೆ, ಸಿಇಟಿ ಬಗೆಗಿನ ಹಲವು ಸಂದೇಹಗಳು ಸಂಪನ್ಮೂಲ ವ್ಯಕ್ತಿಗಳ ಸಲಹೆ–ಸೂಚನೆಗಳಿಂದ ಬಗೆಹರಿದಿವೆ.

ಸುಮಿತ್, ಹೆಬ್ಬಾಳ

ಶೈಕ್ಷಣಿಕ ಮೇಳದಿಂದ ಉಪಯುಕ್ತ ಮಾಹಿತಿ ದೊರೆಯಿತು. ಕೌನ್ಸೆಲಿಂಗ್‌ಗೆ ತಯಾರಿ, ಅಗತ್ಯ ದಾಖಲೆಗಳು, ಅಂತಿಮವಾಗಿ ಸೀಟು ಪಡೆಯಲು ಅನುಸರಿಸಬೇಕಾದ ವಿಧಾನಗಳ ಬಗ್ಗೆ ಕೆಲವು ಗೊಂದಲಗಳಿದ್ದವು. ಅವುಗಳಿಗೆಲ್ಲ ಪರಿಹಾರ ದೊರೆಯಿತು. ಕಾಲೇಜುಗಳ ಕಡೆಯಿಂದಲೂ ಅಗತ್ಯ ಮಾಹಿತಿ ದೊರೆಯಿತು.

ಇಂದುಶ್ರೀ, ಆರ್‌.ಟಿ. ನಗರ

ಸಿಇಟಿ ಪ್ರಕ್ರಿಯೆ ಬಗ್ಗೆ ಉಪಯುಕ್ತವಾದ ಮಾಹಿತಿಗಳು ದೊರೆತವು. ಅದೇ ರೀತಿ, ಹೊಸ ಕೋರ್ಸ್‌ಗಳ ವಿವರ ಸಿಕ್ಕವು. ಒಂದೇ ಸೂರಿನಡಿ ಹಲವು ಕಾಲೇಜುಗಳ ಮಳಿಗೆ ಇರುವುದರಿಂದ ಗೊಂದಲಗಳು ದೂರವಾದವು. ಉತ್ತಮವಾಗಿ ಆಯೋಜಿಸಲಾಗಿದೆ. ಸಂಪನ್ಮೂಲ ವ್ಯಕ್ತಿಗಳು ನೀಡಿದ ಮಾಹಿತಿಯಿಂದ ಗೊಂದಲಗಳು ಪರಿಹಾರವಾಗಿವೆ.

ಅನಿತಾ, ಕಮಲಾನಗರ

ಒಂದೇ ಸೂರಿನಡಿ ಹಲವು ಕಾಲೇಜುಗಳ ಮಳಿಗೆ ಇರುವುದರಿಂದ ಗೊಂದಲಗಳು ದೂರವಾದವು. ಕಾಲೇಜುಗಳ ಬಗ್ಗೆ ಅಂತರ್ಜಾಲದಲ್ಲಿ ಮಾಹಿತಿ ಸಿಕ್ಕರೂ ನಮ್ಮ ಸಂದೇಹಗಳನ್ನು ದೂರ ಮಾಡಿಕೊಳ್ಳಲು ಸಾಧ್ಯವಾಗದು. ವೈದ್ಯಕೀಯ ಕೋರ್ಸ್ ಪ್ರವೇಶ ಶುಲ್ಕ ಸೇರಿದಂತೆ ಹಲವು ವಿಷಯಗಳ ಬಗ್ಗೆ ವಿಚಾರಿಸಿ, ಮಾಹಿತಿ ಪಡೆದುಕೊಂಡೆವು.

ಶೋಭಾದೇವಿ, ರಾಮಮೂರ್ತಿನಗರ

ಸಿಇಟಿ ಹಾಗೂ ಕಾಮೆಡ್‌–ಕೆ ಕುರಿತಾದ ವಿಚಾರಗೋಷ್ಠಿಗಳು ಸಾಕಷ್ಟು ವಿಷಯಗಳನ್ನು ಮನವರಿಕೆ ಮಾಡಿಕೊಟ್ಟವು. ಇಂತಹುದೊಂದು ಕಾರ್ಯಕ್ರಮಕ್ಕಾಗಿ ಕಾಯುತ್ತಿದ್ದೆವು. ಈ ಸಮಯದಲ್ಲಿ ಸರಿಯಾದ ಮಾರ್ಗದರ್ಶನದ ಕೊರತೆಯನ್ನು ಈ ಮೇಳ ನೀಗಿಸಿತು.

ಸೊಲಾಕ್ರಿಸ್ಪಿನಾ, ವಿವೇಕನಗರ

ಯಾವೆಲ್ಲ ಅಡ್ವಾನ್ಸ್ಡ್ ಕೋರ್ಸ್‌ಗಳು ಬಂದಿವೆ ಎನ್ನುವುದನ್ನು ತಿಳಿದುಕೊಳ್ಳಲು ಸಹಾಯಕವಾಯಿತು. ಅಚ್ಚುಕಟ್ಟಾಗಿ ಕಾರ್ಯಕ್ರಮ ಆಯೋಜಿಸಲಾಗಿದೆ. ಈ ರೀತಿ ಕಾರ್ಯಕ್ರಮಗಳು ಮಕ್ಕಳ ಗೊಂದಲ ಬಗೆಹರಿಸಲು ನೆರವಾಗುತ್ತವೆ. ಇಲ್ಲಿಗೆ ಬಂದಮೇಲೆ ಸಾಕಷ್ಟು ವಿಷಯಗಳು ಮನದಟ್ಟಾದವು.

ಅಮನ್, ಮತ್ತಿಕೆರೆ

ಮಗಳು ದ್ವಿತೀಯ ಪಿ.ಯು. ಅಧ್ಯಯನ ಮಾಡುತ್ತಿದ್ದಾಳೆ. ಪಿ.ಯು. ಬಳಿಕ ಏನೆಲ್ಲ ಆಯ್ಕೆಗಳಿರಲಿವೆ ಎನ್ನುವ ಕುರಿತು ತಿಳಿದುಕೊಂಡೆ. ಇದೇ ಮೊದಲ ಬಾರಿಗೆ ಶೈಕ್ಷಣಿಕ ಮೇಳಕ್ಕೆ ಬಂದಿದ್ದೇನೆ. ತುಂಬಾ ಖುಷಿಯಾಯಿತು. ವಿವಿಧ ಎಂಜಿನಿಯರಿಂಗ್, ವೈದ್ಯಕೀಯ ಕಾಲೇಜಿನ ಚಿತ್ರಣ ದೊರೆತಿದೆ.

ಅರವಿಂದ್, ವಿದ್ಯಾರಣ್ಯಪುರ

50ಕ್ಕೂ ಅಧಿಕ ಶಿಕ್ಷಣ ಸಂಸ್ಥೆಗಳು ಭಾಗಿ ● ತಜ್ಞರಿಂದ ಉಪನ್ಯಾಸ

ಒಂದೇ ಸೂರಿನಡಿ ಸಮಗ್ರ ಮಾಹಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್, ವೈದ್ಯಕೀಯ, ವಾಸ್ತುಶಿಲ್ಪ, ರೋಬೋಟಿಕ್ಸ್, ಪ್ರವಾಸೋದ್ಯಮ, ಎಂಬಿಎ, ಎಂಸಿಎ, ಫ್ಯಾಷನ್ ಡಿಸೈನ್, ಕಾನೂನು... ಹೀಗೆ ವಿವಿಧ ಕೋರ್ಸ್‌ಗಳ ಬಗ್ಗೆ ವಿದ್ಯಾರ್ಥಿಗಳು ಹಾಗೂ ಪಾಲಕರಿಗೆ 'ಎಡ್ಯುವರ್ಸ್: ಜ್ಞಾನದೇಗುಲ' ಶೈಕ್ಷಣಿಕ ಮೇಳವು ಮಾಹಿತಿ ಒದಗಿಸಿತು.

ಜಯಮಹಲ್ ಪ್ಯಾಲೇಸ್ ಹೋಟೆಲ್ ಗ್ರೌಂಡ್ಸ್‌ನಲ್ಲಿ ನಡೆಯುತ್ತಿರುವ 12ನೇ ಆವೃತ್ತಿಯ ಈ ಮೇಳದಲ್ಲಿ 50ಕ್ಕೂ ಅಧಿಕ ಶಿಕ್ಷಣ ಸಂಸ್ಥೆಗಳ ಮಳಿಗೆಗಳಿವೆ. ರಾಜ್ಯದ ವಿವಿಧ ಭಾಗಗಳ ಜತೆಗೆ ಮುಂಬೈ, ಪುಣೆ, ನವದೆಹಲಿ ಹಾಗೂ ಹೈದರಾಬಾದ್‌ನ ಶಿಕ್ಷಣ ಸಂಸ್ಥೆಗಳೂ ಪಾಲ್ಗೊಂಡಿರುವುದು ಈ ಬಾರಿಯ ವಿಶೇಷ.

ಬೆಳಿಗ್ಗೆ ನೋಂದಣಿ ಪ್ರಕ್ರಿಯೆಯೊಂದಿಗೆ 'ಜ್ಞಾನ ದೇಗುಲ' ಮೇಳ ಆರಂಭವಾಯಿತು. ವಿದ್ಯಾರ್ಥಿಗಳು ಹಾಗೂ ಪೋಷಕರ ದಂಡು ವಿಷಯ ತಜ್ಞರ ಉಪನ್ಯಾಸ ಮುಗಿಯುವವರೆಗೂ ಬರುತ್ತಲೇ ಇತ್ತು. ವಿವಿಧ ಕೋರ್ಸ್, ಕಾಲೇಜು, ಶುಲ್ಕಗಳ ಬಗೆಗೆ ಸಂಪನ್ಮೂಲ ವ್ಯಕ್ತಿಗಳು ನೀಡುತ್ತಿದ್ದ ಮಾಹಿತಿಗಳನ್ನು ವಿದ್ಯಾರ್ಥಿಗಳು ಹಾಗೂ ಪಾಲಕರು ಕುತೂಹಲದಿಂದ ಕೇಳಿ, ಗೊಂದಲಗಳನ್ನು ಪರಿಹರಿಸಿಕೊಂಡರು.

ವಿಷಯ ತಜ್ಞರ ಉಪನ್ಯಾಸ ಆಲಿಸಿದ ವಿದ್ಯಾರ್ಥಿಗಳು ಹಾಗೂ ಪೋಷಕರು, ಬಳಿಕ ವಿವಿಧ ಕಾಲೇಜುಗಳು ಹಾಗೂ ವಿಶ್ವವಿದ್ಯಾಲಯಗಳು ತೆರೆದಿದ್ದ ಮಳಿಗೆಗಳತ್ತ ಹೆಜ್ಜೆ ಹಾಕಿದರು. ಅವರ ನಿರೀಕ್ಷೆಗಳನ್ನು ತಣಿಸಲೆಂದೇ ಕಾಯ್ದಿದ್ದ ಮಳಿಗೆಯ ಪ್ರತಿನಿಧಿಗಳು, ತಮ್ಮ ಕಾಲೇಜುಗಳಲ್ಲಿ ನೀಡುವ ಸೌಲಭ್ಯಗಳು, ಶೈಕ್ಷಣಿಕ ಗುಣಮಟ್ಟ, ಬೋಧಕರ ಬದ್ಧತೆ, ಕ್ಯಾಂಪಸ್‌ನ ವೈಶಿಷ್ಟ್ಯ, ಕ್ಯಾಂಪಸ್ ಸಂದರ್ಶನ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ತಿಳಿಸಿದರು.

ಕಾಲೇಜುಗಳ ಬಗ್ಗೆ ವಿಚಾರಿಸಿ, ಶುಲ್ಕ ವಿವರ ತಿಳಿದುಕೊಳ್ಳುವ ಕುತೂಹಲವನ್ನು ವಿದ್ಯಾರ್ಥಿಗಳು ಮತ್ತು ಅವರ ಪೋಷಕರು ತೋರಿದರು. ಕೋರ್ಸ್ ಮುಗಿದ ನಂತರ ಕ್ಯಾಂಪಸ್ ಸಂದರ್ಶನದಲ್ಲಿ ಉದ್ಯೋಗ ದೊರೆತರೆ ವೇತನ ಎಷ್ಟು ಸಿಗಬಹುದೆಂಬ ಲೆಕ್ಕಾಚಾರವೂ ಅವರ ಮಾತುಗಳಲ್ಲಿತ್ತು.

ಮೇಳದಲ್ಲಿ ಭಾಗವಹಿಸಿದ ಶಿಕ್ಷಣ ಸಂಸ್ಥೆಗಳಲ್ಲಿ ಹೆಚ್ಚಿನವು ಎಂಜಿನಿಯರಿಂಗ್ ಕಾಲೇಜುಗಳೇ ಆಗಿದ್ದವು. ಕಡಿಮೆ ಬಡ್ಡಿದರದಲ್ಲಿ ಸಿಗುವ ಸಾಲ ಸೌಲಭ್ಯಗಳ ಬಗ್ಗೆ ಬ್ಯಾಂಕ್‌ಗಳ ಪ್ರತಿನಿಧಿಗಳು ಮಾಹಿತಿ ನೀಡಿದರು. ಪ್ರದರ್ಶನ ಅಂಗಣದೊಳಗೆ ಹಲವಾರು ವಿದ್ಯಾಸಂಸ್ಥೆಗಳು, ವಿಶ್ವವಿದ್ಯಾಲಯಗಳು ಟಿವಿ ಪರದೆ, ಕೈಪಿಡಿ, ಮಾಹಿತಿ ಪತ್ರ ನೀಡುವ ಮೂಲಕ ವಿದ್ಯಾರ್ಥಿಗಳನ್ನು ಸೆಳೆದರು.

'ಯಾವ ಕೋರ್ಸ್ ಹಾಗೂ ಯಾವ ಕಾಲೇಜನ್ನು ಆಯ್ಕೆ ಮಾಡಿಕೊಳ್ಳುವುದು ಒಳಿತು ಎಂಬ ನಿರ್ಧಾರಕ್ಕೆ ಬರಲು ಈ ಶಿಕ್ಷಣ ಮೇಳ ನೆರವಾಯಿತು' ಎಂದು ಹಲವು ವಿದ್ಯಾರ್ಥಿಗಳು ಹಾಗೂ ಪಾಲಕರು ಮೆಚ್ಚುಗೆ ವ್ಯಕ್ತಪಡಿಸಿದರು.

ಮೇಳಕ್ಕೆ ಇಂದು ತೆರೆ

ಜಯಮಹಲ್ ಪ್ಯಾಲೇಸ್ ಹೋಟೆಲ್ ಗ್ರೌಂಡ್ಸ್‌ನಲ್ಲಿ 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಆಯೋಜಿಸಿರುವ 12ನೇ ಆವೃತ್ತಿಯ 'ಎಡ್ಯುವರ್ಸ್: ಜ್ಞಾನದೇಗುಲ' ಶೈಕ್ಷಣಿಕ ಮೇಳಕ್ಕೆ ಭಾನುವಾರ ತೆರೆ ಬೀಳಲಿದೆ. ಬೆಳಿಗ್ಗೆ 9 ಗಂಟೆಯಿಂದ ನೋಂದಣಿ ಪ್ರಕ್ರಿಯೆ ಪ್ರಾರಂಭವಾಗಲಿದೆ. 11ಕ್ಕೆ ಕಾಮೆಡ್‌–ಕೆ ಬಗ್ಗೆ ವಿಶೇಷಾಧಿಕಾರಿ ಡಾ.ಶಾಂತಾರಾಮ್ ನಾಯಕ್ ಅವರು ಉಪನ್ಯಾಸ ನೀಡಲಿದ್ದಾರೆ. 11.30ಕ್ಕೆ ಸಿಇಟಿ ಬಗ್ಗೆ ಮಲ್ಲೇಶ್ವರದ ಸರ್ಕಾರಿ ಪದವಿಪೂರ್ವ ಕಾಲೇಜು ಪ್ರಾಂಶುಪಾಲ ಎ.ಎಸ್. ರವಿ ಅವರು ಮಾತನಾಡಲಿದ್ದಾರೆ. ವಿವಿಧ ಶೈಕ್ಷಣಿಕ ಸಂಸ್ಥೆಗಳಲ್ಲಿ ಲಭ್ಯವಿರುವ, ಪಿಯುಸಿಯಿಂದ ಸ್ನಾತಕೋತ್ತರ ಶಿಕ್ಷಣದವರೆಗಿನ ಕೋರ್ಸ್‌ಗಳು ಹಾಗೂ ಸೀಟುಗಳ ಮಾಹಿತಿ ಈ ಮೇಳದಲ್ಲಿ ಲಭಿಸಲಿದೆ.

'ತುಳು ಭಾಷೆ ಅಭಿವೃದ್ಧಿಗೆ ಗೇನಸಿರಿ ಲಿಪಿ ತಂತ್ರಾಂಶ ಸಹಕಾರಿ'

ಬೆಂಗಳೂರು: ಕನ್ನಡ ಮತ್ತು ಮಲಯಾಳ ಭಾಷೆಗಳ ಲಿಪಿಯನ್ನು ತುಳು ಭಾಷೆಯ ಲಿಪಿಗೆ ಬದಲಾಯಿಸುವ ಗೇನಸಿರಿ ಎಂಬ ಲಿಪಿ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದೆ. ಸಚಿವ ಸುನೀಲ್ ಕುಮಾರ್ ಈ ತಂತ್ರಾಂಶ ಬಿಡುಗಡೆ ಮಾಡಿದ್ದಾರೆ ಎಂದು ಜೈ ತುಳುನಾಡು ಸಂಘಟನೆ ತಿಳಿಸಿದೆ.

ಸದ್ಯ ಕನ್ನಡ ಮತ್ತು ಮಲಯಾಳ ಲಿಪಿ ಟೈಪ್ ಮಾಡಿದಾಗ ನೇರವಾಗಿ ತುಳು ಲಿಪಿಗೆ ಬದಲಾಗುತ್ತದೆ. ತುಳು ಲಿಪಿಗೆ ಯೂನಿಕೋಡ್ ಮಾನ್ಯತೆ ಸಿಗುವವರೆಗೂ ಪುಸ್ತಕ ಮುದ್ರಣ, ಸಂಕಲನ, ಆಮಂತ್ರಣ ಪತ್ರಿಕೆಗಳ ಮುದ್ರಣ, ಬ್ಯಾನರ್ ತಯಾರಿಕೆಗೆ ಮತ್ತು ಡಿಜಿಟಲ್ ಮಾಧ್ಯಮಗಳಲ್ಲಿ ತುಳು ಲಿಪಿ ಬಳಸಲು ಸಹಕಾರಿಯಾಗಲಿದೆ ಎಂದು ತುಳು ಸಾಹಿತ್ಯ ಅಕಾಡೆಮಿ ಸದಸ್ಯೆ ಕಾಂತಿ ಶೆಟ್ಟಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಗೇನಸಿರಿ ಲಿಪಿಯನ್ನು ಅಭಿವೃದ್ಧಿಪಡಿಸಿರುವ 17 ವರ್ಷದ ಜ್ಞಾನೇಶ ದೇರಳಕಟ್ಟೆ ಮಾತನಾಡಿ, 'ಮಾತೃಭಾಷೆಗೆ ಏನಾದರೂ ಕೊಡುಗೆ ನೀಡಬೇಕೆಂಬ ಉದ್ದೇಶದಿಂದ ಈ ತಂತ್ರಾಂಶವನ್ನು ಅಭಿವೃದ್ಧಿಪಡಿಸಿದ್ದೇನೆ. ಮುಂದಿನ ದಿನಗಳಲ್ಲಿ ದೇಶದ ಇತರೆ ಭಾಷೆಗಳಿಗೂ ಅನ್ವಯಿಸಲು ಸಾಧ್ಯವಾಗುವಂತೆ ಈ ತಂತ್ರಾಂಶವನ್ನು ಅಭಿವೃದ್ಧಿ ಪಡಿಸಲಾಗುವುದು' ಎಂದು ಮಾಹಿತಿ ನೀಡಿದರು.

ದರೋಡೆಗೆ ಸಂಚು: ಐವರ ಸೆರೆ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: ತಾಲ್ಲೂಕಿನ ಕೆಂಗಲ್ ಬಳಿ ದರೋಡೆ ಮಾಡಲು ಹೊಂಚು ಹಾಕುತ್ತಿದ್ದ ಐವರು ಆರೋಪಿಗಳನ್ನು ಗ್ರಾಮಾಂತರ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಮದ್ದೂರಿನ ಮಾದನಾಯಕನಹಳ್ಳಿ ಗ್ರಾಮದ ಮಣಿಕಂಠ, ಬೆಂಗಳೂರು ಗಿರಿನಗರದ ರೇಣುಕುಮಾರ್, ಬಸವನಗುಡಿಯ ವಿಜಿ ಅಲಿಯಾಸ್ ಗೊಣ್ಣೆ ವಿಜಿ, ಚನ್ನಪಟ್ಟಣದ ಕುಕ್ಕೂರು ಗ್ರಾಮದ ಶಿವ ಅಲಿಯಾಸ್ ಶಿವಪ್ರಸಾದ್, ಮತ್ತು ಮದ್ದೂರು ತಾಲ್ಲೂಕಿನ ವಡ್ಡರದೊಡ್ಡಿ ಗ್ರಾಮದ ವಿಷ್ಣು ಬಂಧಿತ ಆರೋಪಿಗಳು.

ಸಾಹಿತ್ಯ ಪರೀಕ್ಷೆಗಳಿಗೆ ಅರ್ಜಿ ಆಹ್ವಾನ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು 2022-23ನೇ ಸಾಲಿನ ಕನ್ನಡ ಪ್ರವೇಶ, ಕಾವ, ಜಾಣ ಹಾಗೂ ರತ್ನ ಪರೀಕ್ಷೆಗಳಿಗೆ ಅರ್ಜಿಗಳನ್ನು ಆಹ್ವಾನಿಸಿದೆ.

2022ರ ಡಿಸೆಂಬರ್ ಕೊನೆಯ ವಾರದಲ್ಲಿ ನಡೆಯುವ ಈ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸಲು ಆ.31ಕೊನೆಯ ದಿನಾಂಕ. ಬಳಿಕ ಸೆ.15ರ ವರೆಗೆ ₹ 50 ದಂಡ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಬಹುದು. ಪರಿಷತ್ತಿನ ಮಾರಾಟ ಮಳಿಗೆಯಲ್ಲಿ ₹ 25 ಪಾವತಿಸಿ, ಪರೀಕ್ಷಾ ನಿಯಮಾವಳಿ ಹಾಗೂ ಅರ್ಜಿ ನಮೂನೆಯನ್ನು ಪಡೆಯಬಹುದು. ಪರಿಷತ್ತಿನ ಹೆಸರಿಗೆ ₹ 30 ಮನಿಯಾರ್ಡರ್ ಮಾಡಿದರೆ ಅರ್ಜಿ ನಮೂನೆಯನ್ನು ಅಂಚೆ ಮೂಲಕ ಕಳುಹಿಸಲಾಗುವುದು ಎಂದು ಗೌರವ ಕಾರ್ಯದರ್ಶಿ ನೇ.ಭ. ರಾಮಲಿಂಗಶೆಟ್ಟಿ ತಿಳಿಸಿದ್ದಾರೆ.

ಪರೀಕ್ಷಾ ಅರ್ಜಿಗಳನ್ನು ಅಂತರ್ಜಾಲ ತಾಣ www.kasapa.in ಮೂಲಕವೂ ಪಡೆದುಕೊಳ್ಳಬಹುದು. ಇವರು ಪರೀಕ್ಷಾ ಶುಲ್ಕದೊಂದಿಗೆ ಅರ್ಜಿ ಶುಲ್ಕವನ್ನು ಪ್ರತ್ಯೇಕವಾಗಿ ಪಾವತಿಸಬೇಕು ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ. **ಸಂಪರ್ಕಕ್ಕೆ:** 080 26623584 ಅಥವಾ 26612991

ಪಿಯು ಸಾಧಕರು

ಪಿ.ಮೋಹಿತ್ (569 ಅಂಕ), ವಿಜ್ಞಾನ ವಿಭಾಗ, ಎಕ್ಸಲೆಂಟ್ ಪಿಯು ಕಾಲೇಜು, ಮೂಡುಬಿದಿರೆ

ಡಿವೈಎಸ್ಪಿ ವರ್ಗಾವಣೆ

ಚನ್ನಪಟ್ಟಣ: ಇಲ್ಲಿನ ಡಿವೈಎಸ್ಪಿ ಕೆ.ಎನ್. ರಮೇಶ್, ನಗರಸಭಾ ಪೌರಾಯುಕ್ತ ಶಿವನಂಕಾರಿಗೌಡ ವರ್ಗಾವಣೆಯಾಗಿದ್ದಾರೆ. ಕೆ.ಎನ್. ರಮೇಶ್ ಅವರನ್ನು ಕೋಲಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ವರ್ಗಾವಣೆ ಮಾಡಲಾಗಿದೆ.

ಶಾಸಕ ಎನ್.ವೈ.ಗೋಪಾಲಕೃಷ್ಣ ಅವರಿಗೆ ಜನ್ಮದಿನದ ಶುಭಾಶಯಗಳು

ಬರದ ನಾಡಿಗೆ ನೀರು ತಂದ ಭಗೀರಥ

ಎನ್.ವೈ.ಗೋಪಾಲಕೃಷ್ಣ

ಕ್ಷೇತ್ರದಲ್ಲಿ ಶಾಶ್ವತ ನೀರು ತುಂಬಿಸುವ ಯೋಜನೆ ಜಾರಿ ಮಾಡುವ ಮೂಲಕ 80 ಕೆರೆಗಳಿಗೆ ನೀರು ಹರಿಸುವ ಯೋಜನೆ ಪೂರ್ಣಗೊಳ್ಳುವ ಹಂತಕ್ಕೆ ಬಂದಿದ್ದು, ರೈತರ ಮೊಗದಲ್ಲಿ ಮಂದಹಾಸ ಮೂಡುವಂತಾಗಿರುವುದು ಶಾಸಕ ಎನ್.ವೈ. ಗೋಪಾಲಕೃಷ್ಣ ಅವರ ಕಾರ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ.

2018ರ ವಿಧಾನಸಭಾ ಚುನಾವಣಾ ಸಂದರ್ಭದಲ್ಲಿ ಭದ್ರ ಮೇಲ್ದಂಡೆ ಯೋಜನೆ ಜಾರಿ ಮಾಡುವ ಕುರಿತು ಚರ್ಚೆ ನಡೆಯುತ್ತಿದ್ದಾಗ, ಅದು ಅಸಾಧ್ಯವಾದ ಮಾತು, ಏನಿದ್ದರೂ ಕೆರೆಗಳಿಗೆ ನೀರು ತುಂಬಿಸುವ ಯೋಜನೆಯ ಚರ್ಚೆಯನ್ನು ಮುನ್ನೆಲೆಗೆ ತಂದು, ಯೋಜನೆ ಜಾರಿ ಮಾಡಿಯೇ ತಿರುತ್ತೇನೆ ಎಂದು ನೀಡಿದ್ದ ಅಭಯದಂತೆ ಇಂದು ಎಲ್ಲ ಕೆರೆಯ ಅಂಗಳಕ್ಕೆ ನೀರು ಬರುವ ಹಂತಕ್ಕೆ ಯೋಜನೆ ಬಂದಿದ್ದು, ಶಾಸಕರನ್ನು ಅಧುನಿಕ ಭಗೀರಥ ಎನ್ನುವಂತೆ ಮಾಡಿದೆ.

ಕೂಡ್ಲಿಗಿಗೆ ಕೂಗಳತೆಯಲ್ಲಿರುವ ತುಂಗಾಭದ್ರ ಅಣೆಕಟ್ಟು ನಿರ್ಮಾಣವಾದರೂ, ನಮ್ಮ ಭಾಗದ ರೈತರಿಗೆ ಉಪಯೋಗವಾಗಲಿಲ್ಲ. ಸತತವಾಗಿ 'ಜಲ ಸಂಪನ್ಮೂಲದಿಂದ' ವಂಚಿತರಾಗಿ, ನೀರಾವರಿ ಸೌಲಭ್ಯವಿಲ್ಲದೆ ಕ್ಷೇತ್ರದ ಭೂಮಿ ಬಂಜರು ಭೂಮಿಯಂತಾಗಿದ್ದವು. ಎಸ್. ನಿಜ ಲಿಂಗಪ್ಪ ಮುಖ್ಯಮಂತ್ರಿಯಾದಗಿನಿಂದಲೂ ತಾಲ್ಲೂಕಿಗೆ ನೀರಾವರಿ ಕಲ್ಪಿಸುವಂತೆ ಹೋರಾಟ ನಡೆಸಿದ್ದರು ಫಲಪ್ರದ ಆಗಿರಲಿಲ್ಲ. ಆದರೆ, ಶಾಸಕ ಎನ್. ವೈ. ಗೋಪಾಲಕೃಷ್ಣರವರ ಮನವಿಗೆ ಸ್ಪಂದಿಸಿದ ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಯೋಜನೆಗೆ ಒಪ್ಪಿಗೆ ನೀಡಿ, ಸಚಿವ ಸಂಪುಟದಲ್ಲಿ ಅನುಮೋದನೆ ನೀಡಿ ತಾಲ್ಲೂಕಿನಲ್ಲಿ ಹಸಿರು ಮೂಡುವಂತೆ ಮಾಡಿದ್ದಾರೆ. ಇದರಿಂದಾಗಿ ಕೂಡ್ಲಿಗಿ ಕ್ಷೇತ್ರದಲ್ಲಿ ಸಮಗ್ರ ನೀರಾವರಿ ಯೋಜನೆಯು "ಐತಿಹಾಸಿಕ ದಾಖಲೆ"ಯಾಗಿದೆ. ಇದು ಶಾಸಕ ಎನ್.ವೈ. ಗೋಪಾಲ ಕೃಷ್ಣರವರಿಂದ ಮಾತ್ರ ಸಾಧ್ಯವಾಗಿದೆ ಎನ್ನುತ್ತಾರೆ ನಮ್ಮ ಕೂಡ್ಲಿಗಿ ನಾಗರೀಕರು.

ಕೂಡ್ಲಿಗಿ ತಾಲ್ಲೂಕು ಇನ್ನೂ ಮುಂದೆ, ಸಮೃದ್ಧ 'ಬೆಳೆಗಳ ನಾಡಾಗಿ', ಬಂಗಾರದ ಬೀಡಾಗಿ ಕಂಗೊಳಿಸಲು ಕಾರಣೀ ಭೂತರಾದ, ಈ ಕ್ಷೇತ್ರದ ಭೂತಾಯಿ ಮಕ್ಕಳ ಮುಖದಲ್ಲಿ ನಗೆ ಬೀರಿಸಿದ ಎನ್.ವೈ. ಗೋಪಾಲ ಕೃಷ್ಣ ಅವರು ಮತ್ತೊಮ್ಮೆ ಈ ಕ್ಷೇತ್ರದಲ್ಲಿ ಶಾಸಕರಾಗಿ ಮುಂದುವರಿಯಲಿ ಎಂದು ಕ್ಷೇತ್ರದ ಜನತೆ "ಹುಟ್ಟು ಹಬ್ಬ"ದ ಶುಭ ಹಾರೈಸಿದ್ದಾರೆ.

ರಾಜ್ಯದಲ್ಲಿಯೇ ಎರಡನೇ ಅತಿ ದೊಡ್ಡ ತಾಲ್ಲೂಕು ಎಂಬ ಹೆಮ್ಮೆ ಇದ್ದರೂ, ಅಭಿವೃದ್ಧಿಯಲ್ಲಿ ಹಿಂದುಳಿದಿತ್ತು. ಕೃಷಿಯನ್ನೇ ನಂಬಿ ಬದುಕುವ ಇಲ್ಲಿ ಯಾವುದೇ ನೀರಾವರಿ ಮೂಲಗಳು ಹಾಗೂ ಕೈಗಾರಿಕೆಗಳು ಇಲ್ಲ. ಸದಾ ಬರಗಾಲವನ್ನೆ ಅನುಭವಿಸುತ್ತಿದ್ದ ಇಲ್ಲಿನ ಜನರು ರಾಜ್ಯದ ವಿವಿಧೆಡೆ ಗುಳೆ ಹೋಗುವುದು ಸಾಮಾನ್ಯವಾಗಿತ್ತು. ಇನ್ನು ಕೃಷಿಕರು ಬಿತ್ತಿದ ಬೆಳೆ ಬಾರದೆ ಆತ್ಮಹತ್ಯೆ ಮಾಡಿಕೊಳ್ಳುವ ಸ್ಥಿತಿ ಇತ್ತು. ಅಭಿವೃದ್ಧಿ ಮರೀಚಿಕೆಯಾಗಿತ್ತು.

2018ರಲ್ಲಿ ಕೂಡ್ಲಿಗಿ ವಿಧಾನ ಸಭಾ ಕ್ಷೇತ್ರದಲ್ಲಿ ಶಾಸಕರಾಗಿ ಆಯ್ಕೆಯಾದ ಎನ್.ವೈ. ಗೋಪಾಲಕೃಷ್ಣ ಸಿಕ್ಕ ಅವಕಾಶವನ್ನು ಬಳಸಿಕೊಂಡು, ಸಾವಿರಾರು ಕೋಟಿ ಅನುದಾನ ತಂದು ಕ್ಷೇತ್ರದಲ್ಲಿ ಶಿಕ್ಷಣ, ರಸ್ತೆ, ನೀರಾವರಿ, ಕುಡಿಯುವ ನೀರು ಸೇರಿದಂತೆ ಅನೇಕ ಮೂಲ ಸೌಕರ್ಯಗಳಿಗೆ ಸಂಕಲ್ಪ ಮಾಡಿದರು. ಅನುಷ್ಠಾನಕ್ಕೆ ತರುವಲ್ಲಿ ಯಶಸ್ವಿಯಾಗಿದ್ದಾರೆ. 80 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಒಟ್ಟು ₹710 ಕೋಟಿ ಅನುದಾನ ಬಿಡುಗಡೆ ಮಾಡಿಸಿ, ಕ್ಷೇತ್ರದ ಅಭಿವೃದ್ಧಿಗೆ ಮುನ್ನುಡಿ ಬರೆದಿದ್ದಾರೆ. ಸಣ್ಣ ನೀರಾವರಿ ಇಲಾಖೆ ಅಡಿಯಲ್ಲಿ ಕ್ಷೇತ್ರದಲ್ಲಿ 45 ಕೋಟಿ ವೆಚ್ಚದಲ್ಲಿ 51 ಚೆಕ್‌ಡ್ಯಾಂ ನಿರ್ಮಿಸಿ ಅಂತರ್ಜಲ ಹೆಚ್ಚಿಸಲು ಹಾಗೂ ಜನ ಜಾನುವಾರುಗಳಿಗೆ ಕುಡಿಯುವ ನೀರಿನ ಅನುಕೂಲ ಕಲ್ಪಿಸಿದ್ದಾರೆ.

ಅವಿಭಕ್ತ ಕುಟುಂಬದ ಮುದ್ದಿನ ಮಗ

ಶಾಸಕರ ತಂದೆ ಆದರ್ಶ ಶಿಕ್ಷಕ ನಾಯಕರ ಯಲ್ಲಪ್ಪ

ತಾಯಿ ಯಲ್ಲಮ್ಮನವರು

ಗೋಪಾಲ ಕೃಷ್ಣ ಅವರು ಮೂಲತಃ ಮೊಳಕಾಲ್ಮೂರು ತಾಲ್ಲೂಕಿನ ಎಲೆ ರಾಂಪುರದವರು. ತಂದೆ ಯಲ್ಲಪ್ಪನವರು ತತ್ವ, ಸಿದ್ಧಾಂತಗಳನ್ನು ಅಳವಡಿಸಿಕೊಂಡ ಆದರ್ಶ ಶಿಕ್ಷಕರು.

ತಾಯಿ ಯಲ್ಲಮ್ಮನವರು ಪತಿಗೆ ನೆಚ್ಚಿನ ಸತಿಯಾಗಿದ್ದರು. 4 ಜನ ಗಂಡು ಮಕ್ಕಳು, 2 ಜನ ಹೆಣ್ಣು ಮಕ್ಕಳಿರುವ ಬಲು ದೊಡ್ಡ ಕುಟುಂಬವಾದ್ದರಿಂದ ಸಂಸಾರವನ್ನು ಸಾಗಿಸುವುದು ಬಲು ಕಷ್ಟವಾಗಿತ್ತು.

ಬಡತನದಲ್ಲಿ ಬೆಳದು ಬಂದ ಗೋಪಾಲ ಕೃಷ್ಣರವರು ತಾಯಿಗೆ 3ನೇ ಮಗ. ಅಪಾರ ಜನಮನ್ನಣೆಯ ಈ ಎನ್.ವೈ. ಕುಟುಂಬಕ್ಕೆ ಒಮ್ಮೆ ಯಲ್ಲಮ್ಮನವರಿಗೆ ನಾಗಸಮುದ್ರದಿಂದ ಜಿಲ್ಲಾ ಪಂಚಾಯಿತಿಗೆ ಸ್ಪರ್ಧಿಸುವ ಅವಕಾಶ ಒದಗಿ ಬಂದಿತು. ಅವರನ್ನು ಪ್ರಚಂಡ ಬಹುಮತದಿಂದ ಆಯ್ಕೆ ಮಾಡಿ ಚಿತ್ರದುರ್ಗ ಜಿಲ್ಲಾ ಪಂಚಾಯಿತಿ ಸದಸ್ಯೆಯನ್ನಾಗಿಸಿದರು. ಇದರಿಂದ ಎನ್.ವೈ. ಕುಟುಂಬ 'ರಾಜಕೀಯ ಪ್ರವೇಶ' ಪಡೆಯಲು ದಾರಿಯಾಯಿತು.

ಶಾಸಕರ ಸಹೋದರರಾದ ಎನ್‌.ವೈ. ಪೆನ್ನಂಬಳಸ್ವಾಮಿ, ಎನ್‌.ವೈ. ಹನುಮಂತಪ್ಪ, ಎನ್‌.ವೈ. ಗುರುಪ್ರಕಾಶ್

24 ಗಂಟೆಯಲ್ಲಿ ಪರಿಹಾರ ವಿತರಣೆ

ಕ್ಷೇತ್ರದಲ್ಲಿನ ಕುದುರೆಡವು, ನೆಲಬೊಮ್ಮನಹಳ್ಳಿ, ಕ್ಯಾಸನಕೆರೆ ಹಾಗು ಎಂ.ಬಿ.ಅಯ್ಯನಹಳ್ಳಿ ಗ್ರಾಮಗಳಲ್ಲಿ ಆಕಸ್ಮಿಕವಾಗಿ ಪ್ರಕೃತ್ತಿ ವಿಕೋಪಗಳಿಗೆ ತುತ್ತಾಗಿ ಮೃತಪಟ್ಟಿದ್ದ ಬಡ ಕುಟುಂಬದವರಿಗೆ ಕೇವಲ 24 ತಾಸುಗಳಲ್ಲಿಯೇ ಸರ್ಕಾರದಿಂದ ಬರಬೇಕಾದ ಪರಿಹಾರದ ಮೊತ್ತ ತಲಾ ₹5.25 ಲಕ್ಷವನ್ನು ಮೃತರ ಕುಟುಂಬಕ್ಕೆ ನೀಡಿ, 2022ರ ಮೇ 6ರಂದು ಸಿಡಿಲು ಬಡಿದು ಮೃತಪಟ್ಟಿದ್ದ 15 ಮೇಕೆಗೆ ₹45 ಸಾವಿರ ಹಾಗೂ ಒಂದು ಎತ್ತಿಗೆ ₹25 ಸಾವಿರ ಪರಿಹಾರ ವಿತರಣೆ ಮಾಡಿದ್ದರು.

ಮಮತಾಮಯಿ ಶಾಸಕ ಎನ್.ವೈ.ಜಿ.

ಬಾಲ್ಯದಿಂದಲೂ ಬಡತನದ ಬವಣೆಯನ್ನು ಅರಿತಿದ್ದ ಶಾಸಕ ಎನ್.ವೈ.ಜಿ. ಯವರಿಗೆ ತನ್ನ ಕ್ಷೇತ್ರದ ಜನತೆಗೆ ಮೂಲ ಸೌಕರ್ಯಗಳನ್ನು ಸಮರ್ಪಕವಾಗಿ ಒದಗಿಸಬೇಕೆಂಬ ಉತ್ಕಟ ಬಯಕೆ ಇತ್ತು. ರೈತರ ಬವಣೆಗಳನ್ನು ಬಲ್ಲವರಾಗಿದ್ದರು. ಕೂಲಿ ಕಾರ್ಮಿಕರ ಸ್ಥಿತಿಗತಿಗಳನ್ನು ಕಣ್ಣಾರೆ ಕಂಡಿದ್ದರು. ಇವರ ಮಕ್ಕಳು ಬಾಲ ಕಾರ್ಮಿಕರಾಗಿ ದುಡಿಯುವುದನ್ನು ನೋಡಿ ದುಃಖಿತರಾಗಿದ್ದರು. ಮಳೆಯಾಶ್ರಿತ ಭೂಮಿಗಳನ್ನು ನಂಬಿದ ರೈತವರ್ಗವು, ಬರ ಬಿದ್ದಾಗ ರಾಜ್ಯದ ವಿವಿಧ ಕಡೆ ಗುಳೆ ಹೋಗುವುದನ್ನು ನೋಡಿ ಕಂಬನಿ ಮಿಡಿದಿದ್ದರು. ಮನಸ್ಸು ಒಂದು ಆವಕಾಶಕ್ಕಾಗಿ ಪರಿತಪಿಸುತ್ತಿತ್ತು. ಈ ಆವಕಾಶವನ್ನು ಮತದಾರರು ಸತತವಾಗಿ ಶಾಸಕರನ್ನಾಗಿಸುವ ಮೂಲಕ 'ಜನ ಸೇವೆ' ಮಾಡವ ಆಸೆ ಈಡೇರಿಸಿದ್ದಾರೆ.

ಎನ್.ವೈ.ಜಿ 2018ರಲ್ಲಿ ಕೂಡ್ಲಿಗಿ ವಿಧಾನಸಭಾ ಕ್ಷೇತ್ರಕ್ಕೆ ಆಗಮನ: ಎನ್.ವೈ.ಜಿಯವರು ಬದಲಾದ ರಾಜಕೀಯ ವಿದ್ಯಾಮಾನಗಳಿಂದಕೇವಲ ಒಂದು ವಾರದ ಅಂತರದಲ್ಲಿ ಕೂಡ್ಲಿಗಿ ವಿಧಾನ ಸಭಾ ಕ್ಷೇತ್ರಕ್ಕೆ ಅಭ್ಯರ್ಥಿಯಾಗಿ ಬಂದರು.

ಕ್ಷೇತ್ರದ 216 ಹಳ್ಳಿಗಳಿಗೂ ಭೇಟಿ ನೀಡಿ ಮತ ಕೇಳದ ಅನಿವಾರ್ಯ ಅವರಿಗೆ ಎದುರಾಗಿತ್ತು. ಅಂತಹ ಪರಿಸ್ಥಿತಿಯಲ್ಲಿ ಕೂಡ್ಲಿಗಿ ಕ್ಷೇತ್ರದ ಮತದಾರರು ಇವರ ಗೆಲುವಿಗೆ ಕಾರಣರಾದರು. ಹಗಲಿರಳು ಕೂಡ್ಲಿಗಿ ತಾಲ್ಲೂಕಿನಅಭಿವೃದ್ಧಿಗೆ ದುಡಿಯುತ್ತೇನೆಂದು ಅನೇಕ ಕಾರ್ಯಕ್ರಮಗಳಲ್ಲಿ ಮತದಾರರನ್ನು ನೆನೆಯದೆ ಅವರು ಮಾತುಗಳನ್ನೇ ಮುಗಿಸುತ್ತಿರಲಿಲ್ಲ.

ಪ್ರಸ್ತುತಿ: ಪಿ.ವಿ.ಬ್ರ್ಯಾಂಡ್ ಸ್ಪಾಟ್

ಕೂಡ್ಲಿಗಿ ಕ್ಷೇತ್ರದ ಬರಿದಾದ ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಚಾಲನೆ ನೀಡಿದ ಆಧುನಿಕ ಭಗೀರಥ ಎನ್‌.ವೈ.ಗೋಪಾಲಕೃಷ್ಣ ಅವರೊಂದಿಗೆ ಪರಮೇಶ್ವರ ನಾಯ್ಕ

ವೈರಾಣುವಿನಿಂದ ಹೈರಾಣಾದ ಜನರಿಗೆ ಧೈರ್ಯ ತುಂಬಿದ ಶಾಸಕ

ಕಳೆದ 2 ವರ್ಷಗಳಿಂದ ಕೊರೊನಾದಿಂದ ಜನರನ್ನು ಸುರಕ್ಷಿತವಾಗಿಡಲು ಆರೋಗ್ಯ ಇಲಾಖೆ ಸೇರಿದಂತೆ ಇನ್ನಿತರ ಇಲಾಖೆಗಳೊಡನೆ ಸದಾ ಸಂಪರ್ಕವಿದ್ದು , ತಾಲ್ಲೂಕು ಮಟ್ಟದ ಅಧಿಕಾರಿಗಳೊಂದಿಗೆ ಸರಣಿ ಸಭೆಗಳನ್ನು ನಡೆಸಿ ಅವಶ್ಯ ಔಷಧ ಸಾಮಗ್ರಿಗಳನ್ನು ಒದಗಿಸುವುದರ ಜೊತೆಗೆ ಇತ್ತಿಚಿಗೆ ಶಾಸಕರ ಅನುದಾನದಲ್ಲಿ 42 ಆಕ್ಸಿಜನ್ ಸಿಲೆಂಡರ್‌ಗಳನ್ನು ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಗೆ ನೀಡಿದರು.

ಕೊರೊನಾ ಚಿಕಿತ್ಸೆಗಾಗಿ ಬಂದವರಿಗೆ ಆಸ್ಪತ್ರೆಯಲ್ಲಿ ಬೆಡ್‌ಗಳ ಕೊರತೆಯಾಗದಂತೆ ಸಮರ್ಪಕವಾಗಿ ಯೋಜನೆ ರೂಪಿಸಿದರು. ಕಂದಗಲ್ಲು ಹಾಗು ಚಿಕ್ಕಜೋಗಿಹಳ್ಳಿಗಳ ಕೊರೊನಾ ಆರೈಕೆ ಕೇಂದ್ರಗಳನ್ನು ಸ್ಥಾಪಿಸಿದರು. ಕೊರೊನಾ ವಾರಿಯರ್‌ಗಳಿಗೆ ನೈತಿಕ ಸ್ಥೈರ್ಯ ತುಂಬಿ ಸನ್ಮಾನಿಸಿದರು. ಈಚೆಗೆ ಸೋಂಕಿನಿಂದ ಕ್ಷೇತ್ರದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ಅಂತಿಮ ವಿಧಿ ವಿಧಾನಗಳನ್ನು ಪೂರೈಸಲಾಗದೆ ಇದ್ದಿದ್ದರಿಂದ ಸಾಮೂಹಿಕವಾಗಿ ಶ್ರದ್ದಾಂಜಲಿ ಕಾರ್ಯಕ್ರಮ ನಡೆಸುವುದರ ಜೊತೆಗೆ ಕೊರೊನಾದಿಂದ ಮೃತಪಟ್ಟ ಕುಟುಂಬಗಳಿಗೆ ತಲಾ ₹ 20,000 ಗಳಂತೆ 60 ಕುಟುಂಬಗಳಿಗೆ ವೈಯಕ್ತಿಕವಾಗಿ ಆರ್ಥಿಕ ನೆರವು ನೀಡಿದರು.

ಕೂಡ್ಲಿಗಿ ವಿಧಾನ ಸಭಾ ಕ್ಷೇತ್ರದ 74 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ 670 ಕೋಟಿ ಅನುದಾನ ಬಿಡುಗಡೆ ಮಾಡಿದ ಮುಖ್ಯ ಮಂತ್ರಿ ಬಿ.ಎಸ್‌. ಯಡಿಯೂರಪ್ಪ ಅವರನ್ನು ಸಚಿವ ಶ್ರೀರಾಮುಲು ಅವರೊಂದಿಗೆ ಶಾಸಕ ಎನ್‌.ವೈ. ಗೋಪಾಲಕೃಷ್ಣ ಸನ್ಮಾನಿಸಿದರು.

ಕೂಡ್ಲಿಗಿ ಪಟ್ಟಣದಲ್ಲಿ ನಿರ್ಮಾಣವಾಗಿರುವ ಪಾಲಿಟೆಕ್ನಿಕ್ ಕಾಲೇಜಿನ ನೂತನ ಕಟ್ಟಡ

ಕೂಡ್ಲಿಗಿ ಪಟ್ಟಣದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಇನ್ಫೋಸಿಸ್ ಸಂಸ್ಥೆಯಿಂದ ಪಾಲಿಟೆಕ್ನಿಕ್ ಕಾಲೇಜಿಗೆ ನೀಡಿದ್ದ ಕಂಪ್ಯೂಟರ್‌ಗಳನ್ನು ಶಾಸಕ ಎನ್‌.ವೈ.ಗೋಪಾಲಕೃಷ್ಣ ಚಾಲನೆ ನೀಡಿದರು. ಬಿಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಕೆ. ತಿಪ್ಪೇಸ್ವಾಮಿ, ಮುಖಂಡರಾದ ಕೆ.ಎಚ್‌. ವೀರನಗೌಡ, ಟಿ.ಜಿ. ಮಲ್ಲಿಕಾರ್ಜುನ ಗೌಡ, ಕೆ.ಎಂ. ತಿಪ್ಪೇಸ್ವಾಮಿ, ಪ್ರಾಚಾರ್ಯ ಎಸ್‌.ಮಲ್ಲಪ್ಪ, ಪಿ.ಮಂಜುನಾಥ್ ನಾಯಕ, ಎಸ್‌.ದುರುಗೇಶ್, ಗುಳಿಗಿ ವೀರೇಶ್ ಇದ್ದರು

ಶಿಕ್ಷಣ ಕ್ಷೇತ್ರಕ್ಕೆ ಆದ್ಯತೆ

ಶಾಸಕ ಎನ್.ವೈ.ಜಿಯವರ ತಂದೆ ಒಬ್ಬ ನಿಷ್ಠಾವಂತ ಆದರ್ಶ ಶಿಕ್ಷಕರಾಗಿದ್ದರಿಂದ ಅವರ ಮಹತ್ವಾಕಾಂಕ್ಷೆಯ ಹಿನ್ನೆಲೆಯಲ್ಲಿ ಅತ್ಯಂತ ಹಿಂದುಳಿದ ಪರಿಶಿಷ್ಟ ವರ್ಗದವರೇ ಹೆಚ್ಚಾಗಿ ವಾಸಿಸುವ ಸಮುದಾಯಗಳನ್ನು ಸಮಾಜದ ಮುಖ್ಯ ವಾಹಿನಿಗೆ ತರಬೇಕಾದರೆ ಶಿಕ್ಷಣದಿಂದಲೇ ಮಾತ್ರ ಸಾಧ್ಯವೆಂದರಿತ ಶಾಸಕರು ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡಿದರು. ಒಟ್ಟು ₹ 25.29 ಕೋಟಿ ರೂಪಾಯಿ ಅನುದಾನದಲ್ಲಿ ಕ್ಷೇತ್ರದಲ್ಲಿ 250 ಶಾಲಾ ಕೊಠಡಿ, 30 ಬಿಸಿಯೂಟದ ಕೊಠಡಿ, 23 ಶೌಚಾಲಯ, 9 ಶಾಲೆಗಳಿಗೆ ಪ್ರಯೋಗಾಲಯ, 2 ಶಾಲೆಗೆ ಆಟದ ಸಾಮಗ್ರಿ ವಿತರಣೆ, 10 ಶಾಲೆಗಳಲ್ಲಿ ಶುದ್ಧ ನೀರಿ ಘಟಕ ಸ್ಥಾಪನೆ ಮಾಡುವ ಮೂಲಕ ಶಿಕ್ಷಣ ಕ್ಷೇತ್ರಕ್ಕಿರುವ ತಮ್ಮ ಕಾಳಜಿಯನ್ನು ತೋರಿದ್ದಾರೆ. ಇವುಗಳ ಜೊತೆಗೆ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲವಾಗಲೆಂದು ವಸತಿ ನಿಲಯಗಳನ್ನು ಸ್ಥಾಪಿಸಿ ಹಿಂದುಳಿದ ಹಾಗು ರೈತಾಪಿ ಮಕ್ಕಳಿಗೆ ಶಿಕ್ಷಣವನ್ನು ಕೊಡಿಸಲು ಮುಂದಾಗಿದ್ದಾರೆ. ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಕೊಡಿಸುವ ಗುರಿಯೊಂದಿಗೆ ಕ್ಷೇತ್ರದ ಚಿರತಗುಂಡ, ಸೂಲದಹಳ್ಳಿ, ಹಿರೇಕುಂಬಳಗುಂಟೆ, ನಿಂಬಳಗೆರೆಯಲ್ಲಿ ಪಿಯು ಕಾಲೇಜು ಸ್ಥಾಪನೆಗೆ ಶ್ರಮಿಸಿದ್ದಾರೆ.

ಅಂಬೇಡ್ಕರ್ ವಸತಿ ಶಾಲೆ ನಿರ್ಮಿಸಲು ಹೊಸಹಳ್ಳಿ(ಇಮಾಡಾಪುರ) ಬಳಿ 9 ಎಕರೆ ಜಾಗ ಮಂಜೂರು, ಹಿರೇಹೆಗ್ಡಾಳ್ ಬಳಿ 20 ಕೋಟಿ ವೆಚ್ಚದಲ್ಲಿ ಭರದಿಂದ ನಡೆದಿರುವ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆ ನಿರ್ಮಾಣ ಕಾರ್ಯ, ಹೂಡೇಂ ಗ್ರಾಮದ ಹತ್ತಿರ ಏಕಲವ್ಯ ವಸತಿ ಶಾಲೆ ನಿರ್ಮಾಣ ಮಾಡಲು 15 ಎಕರೆ ಜಾಗ ಮಂಜೂರಾಗಿರುತ್ತದೆ. ಹುರುಳಿಹಾಳ್ ಗ್ರಾಮದ ಹತ್ತಿರ ಪರಿಶಿಷ್ಠ ವರ್ಗಗಳ ಮುರಾರ್ಜಿ ದೇಸಾಯಿ ಶಾಲೆಗೆ ರೂ.30.00 ಕೋಟಿ ಆಡಳಿತಾತ್ಮಕ ಅನುಮೋದನೆಗೆ ಸರ್ಕಾರಕ್ಕೆ ಸಲ್ಲಿಸಲಾಗಿದೆ.

ಕೂಡ್ಲಿಗಿ ಪಟ್ಟಣದಲ್ಲಿನ ಶ್ರೀಮತಿ ಅಂಗಡಿ ವೀರಮ್ಮ ತಿರುಕಪ್ಪ ಸರ್ಕಾರಿ ಪ್ರಥಮ ದರ್ಜೆ ಕಾಲೇಜ್‌ನಲ್ಲಿ ಒಟ್ಟು 2.75 ಕೋಟಿ ರೂಪಾಯಿ ವೆಚ್ಚಲ್ಲಿ ಹೆಚ್ಚುವರಿ ಕೊಠಡಿ ನಿರ್ಮಾಣ ಹಾಗೂ ಇತರೆ ಅಭಿವೃದ್ಧಿ ಕಾರ್ಯ ಪೂರ್ಣಗೊಂಡಿದೆ. ರೂ.3.18 ಕೋಟಿ ರೂಪಾಯಿ ವೆಚ್ಚದಲ್ಲಿ ಕೂಡ್ಲಿಗಿಯಲ್ಲಿನ ಮಹದೇವ ಮೈಲಾರ ಕ್ರೀಡಾಂಗಣ ನಿರ್ಮಾಣ ಕಾರ್ಯ ಮುಕ್ತಾಯ ಹಂತದಲ್ಲಿದ್ದು ಮತ್ತು 39.00 ಲಕ್ಷ ರೂಪಾಯಿ ವೆಚ್ಚದಲ್ಲಿ ಕಾಂಪೌಂಡ್ ನಿರ್ಮಾಣ ಪೂರ್ಣಗೊಂಡಿದೆ.

ರಾಜಕೀಯಕ್ಕೆ ತಾಯಿಯ ಪ್ರೇರಣೆ

ಯಲ್ಲಮ್ಮ, ತಮ್ಮ ಮುದ್ದು ಮಗನಾದ, ಸುಶಿಕ್ಷಿತ ಸಂಸ್ಕಾರವನ್ನು ಹೊಂದಿದ, ಜನಮನ ಗೆಲ್ಲಬಲ್ಲವನಾದ, ಸರಳತೆಯನ್ನು ರೂಢಿಸಿಕೊಂಡ ಎಂ.ಬಿ.ಎ ಪದವೀಧರನಾಗಿ ನೌಕರಿಯಲ್ಲಿದ್ದ ಎನ್.ವೈ. ಗೋಪಾಲಕೃಷ್ಣರನ್ನು ರಾಜಕೀಯ ಕ್ಷೇತ್ರಕ್ಕೆ ಕರೆತಂದರು. ಮೊಳಕಾಲ್ಮುರು ವಿಧಾನ ಸಭಾ ಕ್ಷೇತ್ರದಿಂದ ಮೊದಲ ಬಾರಿಗೆ ಎನ್.ವೈ.ಜಿ ಅವರು ಸ್ಪರ್ಧಿಸಿ ಗೆಲುವಿನ ಪತಾಕೆ ಹಾರಿ ಸಿದರು. ನಂತರ ರಾಜಕೀಯದಲ್ಲಿ ಹಿಂತಿರುಗಿ ನೋಡಲಿಲ್ಲ. ಸತತ 4 ಬಾರಿ ಮೊಳಕಾಲ್ಮೂರು ಕ್ಷೇತ್ರದಿಂದ ಆಯ್ಕೆಯಾಗಿ, 1 ಬಾರಿ ಬಳ್ಳಾರಿ ಗ್ರಾಮೀಣ ಕ್ಷೇತ್ರದಿಂದ ಆಯ್ಕೆಯಾಗಿದ್ದರು.ಬದಲಾದ ರಾಜಕೀಯ ಸನ್ನಿವೇಶದಲ್ಲಿ ಅನೀರಿಕ್ಷಿತವಾಗಿ ಕೂಡ್ಲಿಗಿ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿದ ಅವರನ್ನು ಇಲ್ಲಿನ ಮತದಾರರು ಕೈಬಿಡಲಿಲ್ಲ.

ಅಭಿವೃದ್ಧಿಯ ಹರಿಕಾರ

ಎನ್.ವೈ. ಗೋಪಾಲಕೃಷ್ಣರವರು 6 ಬಾರಿ ಶಾಸಕರಾಗಿ ಆಯ್ಕೆಯಾದರೂ ಸಚಿವ ಸ್ಥಾನಕ್ಕೆ ಎಂದೂ ಲಾಬಿ ನಡೆಸಲಿಲ್ಲ. ಕ್ಷೇತ್ರಕ್ಕೆ ಸಾಕಷ್ಟು ಅನುದಾನವನ್ನು ತಂದು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕು ಎಂಬುದು ಅವರ ಗುರಿಯಾಗಿತ್ತು. ಅವರನ್ನೇ ಅರಸಿ ಬಂದ ಬಂದ ಕೆಲವು ಹುದ್ದೆಗಳನ್ನು ಅಲಂಕರಿಸಿ ಸಮರ್ಥ ಸೇವೆ ಸಲ್ಲಿಸಿದ್ದಾರೆ. 2005ರಲ್ಲಿ ಉಪ ಸಭಾಪತಿಯಾಗಿ ಸೇವೆ, '2011ರಲ್ಲಿ ಜವಳಿ ಮತ್ತು ಕೈ ಮಗ್ಗ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ಸೇವೆ, '2016ರಲ್ಲಿ ನಂಜುಂಡಪ್ಪ ಅನುಷ್ಠಾನ ವರದಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ.

ಕಟ್ಟಡ ನಿರ್ಮಾಣಕ್ಕೆ ಅನುದಾನ

ತಾಂತ್ರಿಕ ಶಿಕ್ಷಣಕ್ಕಾಗಿ ದೂರದ ಪಟ್ಟಣಗಳಿಗೆ ಕ್ಷೇತ್ರದ ವಿದ್ಯಾರ್ಥಿಗಳು ಹೋಗುವುದನ್ನು ತಿಳಿದ ಶಾಸಕರು, ₹10 ಕೋಟಿ ವೆಚ್ಚದಲ್ಲಿ ಸುಸಜ್ಜಿತ ಪಾಲಿಟೆಕ್ನಿಕ್ ಕಾಲೇಜು ಕಟ್ಟಡ ಪಟ್ಟಣದ ಹೊರ ವಲಯದಲ್ಲಿ ನಿರ್ಮಾಣ ಮಾಡುವ ಮೂಲಕ ಜಿಲ್ಲೆಯ ಜನರ ಗಮನ ಸೆಳೆಯುವಂತೆ ಮಾಡಿದ್ದಾರೆ.

ನಾಲ್ಕು ವರ್ಷಗಳಲ್ಲಿ ಕೈಗೊಂಡ ಅಭಿವೃದ್ಧಿ ಕಾರ್ಯಗಳು

- ಪಿ.ಡಬ್ಲ್ಯೂವ್.ಡಿ ರಸ್ತೆಗಳು ಒಟ್ಟು 319 ಕಾಮಗಾರಿಗಳಿಗೆ ₹ 300.00 ಕೋಟಿ.
- ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ 365 ಕಾಮಗಾರಿಗಳಿಗೆ ₹ 800 ಕೋಟಿ
- ಪಂಚಾಯತ್ ರಾಜ್ ಇಂಜಿನಿಯರಿಂಗ್ 561 ಕಾಮಗಾರಿಗಳಿಗೆ ₹ 116 ಕೋಟಿ
- ಆರೋಗ್ಯ ಇಲಾಖೆ: ಆಸ್ಪತ್ರೆಯಲ್ಲಿ ಹೆಚ್ಚುವರಿ ವಸತಿ ಗೃಹ, ರಸ್ತೆ ನಿರ್ಮಾಣ, ಆವರಣ ಗೋಡೆ, ಮೂಲಭೂತ ಸೌಕರ್ಯಗಳಿಗೆ ₹ 6.00 ಕೋಟಿ ವೆಚ್ಚ ಮಾಡಲಾಗಿದೆ.
- ₹ 10 ಕೋಟಿ ವೆಚ್ಚದಲ್ಲಿ ಕೂಡ್ಲಿಗಿ ಮಿನಿ ವಿಧಾನಸೌಧ ನಿರ್ಮಾಣ ಕಾರ್ಯಾ ಮುಕ್ತಾಯವಾಗಿದೆ.
- ಪಂ.ರಾಜ್.ಇಂ.ಉಪವಿಭಾಗ ಮತ್ತು ಗ್ರಾ.ಕು.ನೀ.ಮತ್ತು ನೈ. ಉಪವಿಭಾಗ, ಕಟ್ಟಡಕ್ಕೆ ₹ 1.00 ಕೋಟಿ: ಕಟ್ಟಡ ನಿರ್ಮಾಣವಾಗಿ ಉದ್ಘಾಟನೆಗೊಂಡಿದೆ.
- ಡಿ.ಎಂ.ಎಫ್. ಯೋಜನೆ (6ನೇ ಹಂತದಲ್ಲಿ) ಅಡಿ ಒಟ್ಟು ₹ 12.00 ಕೋಟಿ
- ಪಟ್ಟಣದ ಐತಿಹಾಸಿಕ ಗಾಂಧೀ ಚಿತಾಭಸ್ಮವಿರುವ ಹುತಾತ್ಮರ ಸ್ಮಾರಕದ ಅಭಿವೃದ್ದಿಗೆ ₹ 1.25 ಕೋಟಿ ಬಿಡುಗಡೆಯಾಗಿ, ಕೆಲಸ ಪೂರ್ಣಗೊಂಡಿದೆ.
- ಹುರುಳಿಹಾಳ್ ಗ್ರಾಮದ ಹತ್ತಿರ ಪರಿಶಿಷ್ಟ ವರ್ಗಗಳ ಮುರಾರ್ಜಿ ದೇಸಾಯಿ ಶಾಲಗೆ ₹ 25.00 ಕೋಟಿ
- ಕೂಡ್ಲಿಗಿ ಪಟ್ಟಣದಲ್ಲಿ ನೂತನ ಪಟ್ಟಣ ಪಂಚಾಯಿತಿ ಕಾರ್ಯಲಕ್ಕೆ ₹ 1 ಕೋಟಿ ₹ 80 ಲಕ್ಷ: ಕೆಲಸ ಪ್ರಗತಿಯಲ್ಲಿದೆ.
- ಪಟ್ಟಣ ಪಂಚಾಯಿತಿ, ಕೂಡ್ಲಿಗಿ 202021ನೇ ಸಾಲಿನ ಹಣಕಾಸು ವರ್ಷಕ್ಕೆ 143 ಕಾಮಗಾರಿಗೆ ₹ 3 ಕೋಟಿ 16 ಲಕ್ಷ ಅನುದಾನ ಮಂಜೂರು ಮಾಡಲಾಗಿದೆ.
- 202122ನೇ ಸಾಲಿನ ಕೆ.ಕೆ.ಆರ್.ಡಿ.ಬಿ ಯೋಜನೆಯಡಿ 20.25 ಕೋಟಿ ಹಣ ಬಿಡುಗಡೆಯಾಗಿದ್ದು ಕಾಮಗಾರಿಗಳು, ಪ್ರಗತಿಯಲ್ಲಿವೆ.
- ಕೆ.ಕೆ.ಆರ್.ಡಿ.ಬಿ. ಮಂಡಳಿಗೆ 20.32 ಕೋಟಿಗಳ ಅನುದಾನಕ್ಕೆ ಕಾಮಗಾರಿಗಳ ಪ್ರಸ್ತಾವನೆ ಅನುಮೋದನೆಗೊಂಡಿದೆ.
- 37 ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ 2 ಕೋಟಿಗಳ ಅನುದಾನ ಮಂಜೂರು ಆಗಿದೆ.
- ನಿರ್ಮಿತ ಕೇಂದ್ರದಿಂದ 12 ಕೋಟಿ ವೆಚ್ಚದಲ್ಲಿ 10 ಕಾಮಗಾರಿ ಮುಗಿಸಲಾಗಿದೆ.
- ಕೂಡ್ಲಿಗಿ ಪಟ್ಟಣದಲ್ಲಿ 1 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಕೃಷಿ ಇಲಾಖೆಯ ಕಚೇರಿ ಕಟ್ಟಡ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ.
- ಕೆಐಆರ್‌ಡಿಎಲ್ ವತಿಯಿಂದ 16 ಕೋಟಿ ವೆಚ್ಚದಲ್ಲಿ 44 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.
- ಪಿಎಂಜಿಎಸ್ ವೈ ಯೋಜನೆಯಲ್ಲಿ 16 ಕೋಟಿ ವೆಚ್ಚದಲ್ಲಿ 7 ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗಿದೆ.
- ಒಟ್ಟಾರೆ ಕ್ಷೆ ೇತ್ರದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಶ್ರೀ ಎನ್.ವೈ. ಗೊಪಾಲಕೃಷ್ಣ ₹ 2097.48 ಕೋಟಿ ಅನುದಾನವನ್ನು ತಂದು ಕೂಡ್ಲಿಗಿ ವಿಧಾನ ಸಭಾ ಕ್ಷೆ ೇತ್ರವನ್ನು ಅಭಿವೃದ್ಧಿ ಪಥದಲ್ಲಿ ಸಾಗುವಂತೆ ಮಾಡಿದ್ದಾರೆ.

ಸೂರಿಲ್ಲದ ಜನರಿಗೆ ವಸತಿ

ಡಿ. ದೇವರಾಜು ಅರಸು ವಸತಿಯೋಜನೆಯಡಿ 14 ವಿಶೇಷ ವರ್ಗದಡಿ ಕ್ಷೇತ್ರದ ಅಲೆಮಾರಿ, ಅರೆ ಅಲೆಮಾರಿ ವರ್ಗದ ಗೊಲ್ಲ ಸಮುದಾಯದ 2300 ಫಲಾನುಭವಿಗಳಿಗೆ ವಸತಿ ಸೌಕರ್ಯ ಕಲ್ಪಿಸಲು ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ ರವರಿಂದ ಅನುಮೋದನೆ ಗೊಂಡಿದ್ದು, ಕೆಲವೇ ದಿನದಲ್ಲಿ 1500 ಮನೆಗಳ ಫಲಾನುಭವಿಗಳಿಗೆ ಹಕ್ಕು ಪತ್ರ ನೀಡಲಾಗುವುದು. ಇದರೊಂದಿಗೆ ಬಸವ ವಸತಿ ಯೋಜನೆಯಲ್ಲಿ ಕ್ಷೇತ್ರದಲ್ಲಿ 1000 ಮನೆಗಳು ಮಂಜೂರಾಗಿವೆ. ಇದರೊಂದಿಗೆ ಕೋಳಗೇರಿ ಅಭಿವೃದ್ಧಿ ಮಂಡಳಿಯಿಂದ ಕೂಡ್ಲಿಗಿ ಪಟ್ಟಣ ಪಂಚಾಯ್ತಿ ವ್ಯಾಪ್ತಿಯಲ್ಲಿನ 869 ಫಲಾನುಭವಿಗಳಿಗೆ ಮನೆಗಳು ಮಂಜೂರು ಆಗಿದ್ದು, ಯೋಜನೆ ಕಾರ್ಯ ಪ್ರಗತಿಯಲ್ಲಿದೆ.

ಪತ್ನಿ ಗಾಯತ್ರಿ ಹಾಗೂ ಮೊಮ್ಮಕ್ಕಳೊಂದಿಗೆ ಶಾಸಕ ಎನ್‌.ವೈ.ಗೋಪಾಲಕೃಷ್ಣ


₹10 ಕೋಟಿ ವೆಚ್ಚದಲ್ಲಿ ಕೂಡ್ಲಿಗಿ ಪಟ್ಟಣದಲ್ಲಿ ನಿರ್ಮಾಣವಾಗಿರುವ ಶಾಸಕ ಎನ್‌.ವೈ.ಗೋಪಾಲಕೃಷ್ಣ ಅವರ ಕನಸಿನ ಸೌಧ ನೂತನ ಮಿನಿ ವಿಧಾನ ಸೌಧ ಕಟ್ಟಡ

ಕೂಡ್ಲಿಗಿ ತಾಲ್ಲೂಕಿನ ಕುದುರೆಡವು ಗ್ರಾಮದಲ್ಲಿ ಸಿಡಿಲಿನಿಂದ ಮೃತಪಟ್ಟ ವ್ಯಕ್ತಿಯ ಕುಟುಂಬಕ್ಕೆ ಒಂದೇ ದಿನದಲ್ಲಿ ಪರಿಹಾರ ವಿತರಿಸಿದ ಶಾಸಕ ಎನ್‌.ವೈ.ಜಿ

‘ತಾಲ್ಲೂಕು ಕೇಂದ್ರಗಳಲ್ಲೂ ಎಂಎಸ್ಐಎಲ್ ಚಿಟ್ಸ್ ಶಾಖೆ’

ಸುರಕ್ಷಿತ ಹೂಡಿಕೆಗೆ ಅವಕಾಶ ಕಲ್ಪಿಸುವ ಉದ್ದೇಶ: ಹಾಲಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ಸ್ವಾಮ್ಯದ ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ (ಎಂಎಸ್ಐಎಲ್) ಚಿಟ್‌ಫಂಡ್ ವಹಿವಾಟನ್ನು ವಿಸ್ತರಿಸಲು ನಿರ್ಧರಿಸಿದ್ದು, ರಾಜ್ಯದ ಎಲ್ಲ ತಾಲ್ಲೂಕು ಕೇಂದ್ರಗಳಲ್ಲೂ ಶಾಖೆ ಆರಂಭಿಸಲಾಗುವುದು ಎಂದು ಎಂಎಸ್ಐಎಲ್ ಅಧ್ಯಕ್ಷ ಎಚ್. ಹಾಲಪ್ಪ ಹರತಾಳು ತಿಳಿಸಿದರು.

ಸಂಸ್ಥೆಯು 56 ವರ್ಷಗಳನ್ನು ಪೂರೈಸಿರುವ ಪ್ರಯುಕ್ತ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಈಗ ರಾಜ್ಯದಲ್ಲಿ ಎಂಎಸ್ಐಎಲ್ ಚಿಟ್‌ಫಂಡ್‌ನ 26 ಶಾಖೆಗಳಿವೆ. 2 ಲಕ್ಷ ಗ್ರಾಹಕರು ಈವರೆಗೆ ಅನುಕೂಲ ಪಡೆದಿದ್ದಾರೆ. 2021–22ರಲ್ಲಿ ಚಿಟ್‌ಫಂಡ್ ವಿಭಾಗದಲ್ಲಿ ₹ 308 ಕೋಟಿ ವಹಿವಾಟು ನಡೆಸಲಾಗಿದೆ. ಎಂಎಸ್ಐಎಲ್ ಸರ್ಕಾರಿ ಸ್ವಾಮ್ಯದ ಸಂಸ್ಥೆಯಾಗಿರುವುದರಿಂದ ಗ್ರಾಹಕರು ಚಿಟ್ ಫಂಡ್ ವ್ಯವಹಾರದಲ್ಲಿ ಮೋಸ ಹೋಗುವ ಅಪಾಯ ಇಲ್ಲ. ಜನರಿಗೆ ಸುರಕ್ಷಿತವಾದ ಚಿಟ್‌ಫಂಡ್ ಹೂಡಿಕೆಗೆ ಅವಕಾಶ ಕಲ್ಪಿಸುವ ಉದ್ದೇಶದಿಂದ ರಾಜ್ಯದಾದ್ಯಂತ ಎಲ್ಲ ತಾಲ್ಲೂಕುಗಳಲ್ಲೂ ಶಾಖೆ ತೆರೆಯಲಾಗುವುದು’ ಎಂದರು.

ಮದ್ಯ ಮಾರಾಟ ಮಳಿಗೆ ಮೇಲ್ದರ್ಜೆಗೆ: ಎಂಎಸ್ಐಎಲ್ ರಾಜ್ಯದಾದ್ಯಂತ 979 ಮದ್ಯ ಮಾರಾಟ ಮಳಿಗೆಗಳನ್ನು ಹೊಂದಿದೆ. ಗರಿಷ್ಠ ಮಾರಾಟ (ಎಂಆರ್‌ಪಿ) ದರದಲ್ಲಿ ಗ್ರಾಹಕರಿಗೆ ಮದ್ಯ ಒದಗಿಸುತ್ತಿದ್ದು, 2021–22ರಲ್ಲಿ ₹2,399 ಕೋಟಿ ವಹಿವಾಟು ನಡೆಸಲಾಗಿದೆ. 2022–23ನೇ ಆರ್ಥಿಕ ವರ್ಷದಲ್ಲಿ ಸಂಸ್ಥೆಯ 200 ಮದ್ಯ ಮಾರಾಟ ಮಳಿಗೆಗಳನ್ನು ಹೊಸ ವಿನ್ಯಾಸದೊಂದಿಗೆ ಮೇಲ್ದರ್ಜೆಗೇರಿಸಲು ತೀರ್ಮಾನಿಸಲಾಗಿದೆ ಎಂದರು.

ನೋಟ್ ಪುಸ್ತಕ ಮತ್ತು ಸ್ಟೇಷನರಿ ಮಾರಾಟ, ಸೋಲಾರ್ ವಾಟರ್ ಹೀಟರ್ ಮಾರಾಟ, ಜನರಿಕ್ ಔಷಧಿ ಮಾರಾಟ, ಪ್ರವಾಸ ಮತ್ತು ಪ್ರಯಾಣ ಸೌಲಭ್ಯ ಸೇರಿದಂತೆ ಎಲ್ಲ ಚಟುವಟಿಕೆಗಳನ್ನೂ ವಿಸ್ತರಿಸಲಾಗುವುದು. ಪ್ರಸಕ್ತ ಆರ್ಥಿಕ ವರ್ಷದಲ್ಲಿ ₹3,350 ಕೋಟಿ ವಹಿವಾಟು ನಡೆಸಿ, ₹110 ಕೋಟಿ ಲಾಭ ಗಳಿಸುವ ಗುರಿ ಹೊಂದಲಾಗಿದೆ ಎಂದು ತಿಳಿಸಿದರು.

ಎಂಎಸ್ಐಎಲ್ ವಹಿವಾಟು ಹೆಚ್ಚಳದ ಪ್ರಮಾಣ

ಆರ್ಥಿಕ ವರ್ಷ	ವಹಿವಾಟು	ಲಾಭಾಂಶ (₹ ಕೋಟಿಗಳಲ್ಲಿ)
2019–20	2,270.65	42.46
2020–21	2,763.86	68.14
2021–22	2,901.24	91.01

ರಾಜಣ್ಣ ವಿರುದ್ಧ ಅನಿತಾ ವಾಗ್ದಾಳಿ

ರಾಮನಗರ: ‘ಆತ ದೇವೇಗೌಡರ ಕಾಲಿನ ದೂಳಿಗೆ ಸಮವಲ್ಲದ ವ್ಯಕ್ತಿ. ಆಚಾರವಿಲ್ಲದ ನಾಲಿಗೆ ಪರಮನೀಚ ಮನುಷ್ಯ ರಾಜಣ್ಣ’ ಎಂದು ಶಾಸಕಿ ಅನಿತಾ ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಮುಷ್ಕರ ನಿರತ ಹೊರಗುತ್ತಿಗೆ ಪೌರ ಕಾರ್ಮಿಕರನ್ನು ಭೇಟಿ ಮಾಡಿದ ಬಳಿಕ, ‘ರಾಜಣ್ಣರ ನೀಚ ಬುದ್ಧಿಯನ್ನ ನೋಡಿಯೇ ಮಧುಗಿರಿ ಜನ ಸೋಲಿಸಿದ್ದಾರೆ. ತಮ್ಮ ಹೇಳಿಕೆ ಕುರಿತು ಕ್ಷಮೆ ಕೋರದೆ ದೇವೇಗೌಡರನ್ನು ಭೇಟಿ ಮಾಡುತ್ತೀನಿ ಎನ್ನುತ್ತಿದ್ದಾರೆ. ಇಂತಹ ನೀಚ ವ್ಯಕ್ತಿಯನ್ನು ಭೇಟಿಯಾಗುವುದೇ ಬೇಡವೆಂದು ನಮ್ಮ ಮಾವನವರಿಗೆ ಹೇಳುತ್ತೇನೆ’ ಎಂದರು.

ಪೌರಕಾರ್ಮಿಕರು ಶ್ರಮ ಜೀವಿಗಳಾಗಿದ್ದು ನಿಮ್ಮ ಪರ ನಾನು ಇದ್ದೇನೆ ಎಂದು ಧೈರ್ಯ ಹೇಳಿದ ಶಾಸಕರು, ಈ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ವಿಧಾನಸಭೆ ಕಲಾಪದಲ್ಲಿ ಪ್ರಸ್ತಾಪ ಮಾಡುವುದಾಗಿ ಭರವಸೆ ನೀಡಿದರು.

ಅರಮನೆ ಮೈದಾನದ ‘ಚಾಮರ ವಜ್ರ’ದಲ್ಲಿ ನಡೆದ ರ‍್ಯಾಲಿ

‘ಇ.ವಿ ಎಕ್ಸ್‌ಪೋ’ಗೆ ಜನಜಂಗುಳಿ

ಪ್ರಜಾವಾಣಿ ವಾರ್ತೆ

ನಗರದಲ್ಲಿ ಶನಿವಾರ ನಡೆದ ಎಲೆಕ್ಟ್ರಿಕ್ ವಾಹನಗಳ ರ‍್ಯಾಲಿಯಲ್ಲಿ ಸಚಿವ ವಿ. ಸುನೀಲ್ ಕುಮಾರ್, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಪಿ. ರಾಜೇಂದ್ರ ಚೋಳನ್ ಪಾಲ್ಗೊಂಡಿದ್ದರು

ಬೆಂಗಳೂರು: ನಗರದ ಅರಮನೆ ಮೈದಾನದ ‘ಚಾಮರ ವಜ್ರ’ದಲ್ಲಿ ನಡೆಯುತ್ತಿರುವ ‘ಇ.ವಿ’ ಎಕ್ಸ್‌ಪೋಗೆ ಎರಡನೇ ದಿನವಾದ ಶನಿವಾರವೂ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.

ಸುಮಾರು 5 ಸಾವಿರ ಜನರು ವೀಕ್ಷಿಸಿದರು. ಪ್ರತಿಷ್ಠಿತ ಎಲೆಕ್ಟ್ರಿಕ್ ವಾಹನಗಳ ಕಂಪನಿಗಳು ಎಕ್ಸ್‌ಪೋದಲ್ಲಿ ಪಾಲ್ಗೊಂಡಿವೆ. ಮಾರುಕಟ್ಟೆಗೆ ಬಿಡುಗಡೆಯಾಗಿರುವ ಹೊಸ ವಿದ್ಯುತ್ ಚಾಲಿತ ದ್ವಿಚಕ್ರ ವಾಹನಗಳ ‘ಟೆಸ್ಟ್ ರೈಡ್’ ಮಾಡಲು ಎಕ್ಸ್‌ಪೋದಲ್ಲಿ ನೂಕುನುಗ್ಗಲು ಏರ್ಪಟ್ಟಿತ್ತು. ಬ್ಯಾಟರಿ ಚಾಲಿತ ಮಡಚುವ ಬೈಸಿಕಲ್ ಹೆಚ್ಚು ಜನರನ್ನು ಆಕರ್ಷಿಸಿತು. ಈ ಬೈಸಿಕಲ್ ಮುಂಗಡ ಬುಕ್ಕಿಂಗ್‌ಗೆ ಭರಾಟೆ ಜೋರಾಗಿತ್ತು. ಟ್ರ್ಯಾಕ್ಟರ್‌ಗಳು, ತ್ರಿಚಕ್ರದ ಸರಕು ವಾಹನಗಳು, ದ್ವಿಚಕ್ರ ವಾಹನಗಳು, ಸೈಕಲ್, ವಿವಿಧ ಕಂಪನಿಗಳ ಕಾರುಗಳು ಜನರ ಗಮನ ಸೆಳೆದವು.

ಎಲೆಕ್ಟ್ರಿಕ್ ವಾಹನಕ್ಕೆ ಸಂಬಂಧಿಸಿದ ಐದು ತಾಂತ್ರಿಕ ಗೋಷ್ಠಿಗಳು ನಡೆದವು ಯುವ ಪೀಳಿಗೆಯ ಬ್ಯಾಟರಿ ಮತ್ತು ವೈರ್‌ಲೆಸ್ ಬ್ಯಾಟರಿಗೆ ಸಂಬಂಧಿಸಿದಂತೆ ಇತ್ತೀಚಿನ ತಂತ್ರಜ್ಞಾನಗಳ ಅಭಿವೃದ್ಧಿ, ಬ್ಯಾಟರಿ ಬದಲಾವಣೆ ಮತ್ತು ಇವಿ ಚಾರ್ಜಿಂಗ್‌ನ ವ್ಯಾಪಾರ ವಿಧಾನಗಳು, ಮರುಬಳಕೆಯ ಇಂಧನದ ಉಪಯುಕ್ತತೆ ಕುರಿತು ತಾಂತ್ರಿಕಗೋಷ್ಠಿ ನಡೆಯಿತು.

ಬೆಂಗಳೂರು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಜತೆ ಬೆಸ್ಕಾಂ ನಿರ್ದೇಶಕ (ತಾಂತ್ರಿಕ) ಡಿ. ನಾಗಾರ್ಜುನ ಸಮಾಲೋಚನೆ ನಡೆಸಿದರು.

‘ಇ.ವಿ’ ರ‍್ಯಾಲಿ

ಒಂದು ವಾರದ ‘ಇವಿ’ ಅಭಿಯಾನದ ಭಾಗವಾಗಿ ಶನಿವಾರ ಎಲೆಕ್ಟ್ರಿಕ್ ವಾಹನಗಳ ರ‍್ಯಾಲಿ ನಡೆಯಿತು.

ಇಂಧನ ಸಚಿವ ವಿ. ಸುನೀಲ್ ಕುಮಾರ್ ರ‍್ಯಾಲಿಯಲ್ಲಿ ಪಾಲ್ಗೊಂಡಿದ್ದರು. ವಿಧಾನಸೌಧದಿಂದ ಅರಮನೆ ಮೈದಾನದ ಚಾಮರ ವಜ್ರ ಸಭಾಂಗಣದವರೆಗೆ ಎಲೆಕ್ಟ್ರಿಕ್ ದ್ವಿಚಕ್ರವನ್ನು ತಾವೇ ಚಲಾಯಿಸಿದರು. 300ಕ್ಕೂ ಹೆಚ್ಚು ಎಲೆಕ್ಟ್ರಿಕ್ ವಾಹನಗಳು ರ‍್ಯಾಲಿಯಲ್ಲಿ ಭಾಗವಹಿಸಿದ್ದವು.

ಹಸಿರು ಇಂಧನ ಬಳಕೆ ಕುರಿತು ಜನರಲ್ಲಿ ಅರಿವು ಮೂಡಿಸಲು ಬೆಸ್ಕಾಂ ಈ ರ‍್ಯಾಲಿ ಆಯೋಜಿಸಿತ್ತು.

‘ಪ್ರಜಾಪ್ರಭುತ್ವಕ್ಕೆ ಸವಾಲಾಗಿರುವ ಮೂರು ಎಂ’

ಬೆಂಗಳೂರು: ಮಷಿನ್ ಪವರ್, ಮನಿ ಪವರ್ ಮತ್ತು ಮೀಡಿಯಾ ಪವರ್ ಭಾರತದ ಚುನಾವಣಾ ಪ್ರಜಾಪ್ರಭುತ್ವದ ಸಮಗ್ರತೆಗೆ ಬೆದರಿಕೆ ಒಡ್ಡುತ್ತಿವೆ ಎಂದು ‘ಪೀಪಲ್ಸ್ ಫಸ್ಟ್’ ಸಂಘಟನೆ ಅಧ್ಯಕ್ಷ, ನಿವೃತ್ತ ಐಎಎಸ್ ಅಧಿಕಾರಿ ಎಂ.ಜಿ. ದೇವಸಹಾಯ್ ಆತಂಕ ವ್ಯಕ್ತಪಡಿಸಿದರು.

‘ಇವಿಎಂಗಳಲ್ಲಿ ನಕಲಿ ಮತದಾನ, ಹ್ಯಾಕ್ ಮಾಡುವ ಸಾಧ್ಯತೆಗಳಿವೆ. ಈ ಕುರಿತು ಚುನಾವಣಾ ಆಯೋಗಕ್ಕೆ ಹಲವಾರು ಮನವಿಪತ್ರಗಳನ್ನು ಸಲ್ಲಿಸಿದರೂ ಪ್ರಯೋಜನವಾಗಿಲ್ಲ’ ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ಇವಿಎಂ ಬಳಸಿ ಮತದಾನ ಮತ್ತು ಮತ ಎಣಿಕೆ ಕುರಿತಾದ 17 ಸಮಸ್ಯೆಗಳಿಗೆ ಪರಿಹಾರ ಒದಗಿಸುವಂತೆ ಕೋರಿ, 112 ತಾಂತ್ರಿಕ ವೃತ್ತಿಪರರು, ಶಿಕ್ಷಣ ತಜ್ಞರು, ನಿವೃತ್ತ ಐಎಎಸ್ ಅಧಿಕಾರಿಗಳು ಸಹಿ ಮಾಡಿದ್ದ ಪತ್ರವನ್ನು ಮೇ 2ರಂದು ಚುನಾವಣಾ ಆಯೋಗಕ್ಕೆ ಸಲ್ಲಿಸಲಾಗಿತ್ತು. ಇದುವರೆಗೂ ಯಾವುದೇ ಉತ್ತರ ಬಂದಿಲ್ಲ’ ಎಂದರು.

ಸಿಟಿಜನ್ ಕಮಿಷನ್ ಆನ್ ಎಲೆಕ್ಷನ್(ಸಿಸಿಇ) ಸದಸ್ಯ ಹಾಗೂ ದೆಹಲಿ ಐಐಟಿ ಕಂಪ್ಯೂಟರ್ ವಿಜ್ಞಾನದ ಅಧ್ಯಾಪಕ ಡಾ.ಸುಭಾಸಿಸ್ ಬ್ಯಾನರ್ಜಿ, ಪ್ರತಿಯೊಬ್ಬ ಮತದಾರರ ಮತವು ಉದ್ದೇಶಿಸಿದಂತೆ ಚಲಾವಣೆಯಾಗಿದೆಯೇ ಎಂಬುದನ್ನು ಇವಿಎಂಗಳಲ್ಲಿ ಪರಿಶೀಲಿಸಲು ಸಾಧ್ಯವಿಲ್ಲ’ ಎಂದರು.

ಆನ್‌ಲೈನ್ ಮೂಲಕ ಜನರ ಮಾಹಿತಿ ಹಕ್ಕು, ರಾಷ್ಟ್ರೀಯ ಅಭಿಯಾನದ ಸಹ ಸಂಚಾಲಕಿ ಅಂಜಲಿ ಭಾರದ್ವಾಜ್ ಮಾತನಾಡಿದರು.

‘ಗ್ರೀನ್ ವೆಹಿಕಲ್ ಎಕ್ಸ್‌ಪೋ’ಗೆ ಚಾಲನೆ

ಬೆಂಗಳೂರು ಇಂಟರ್‌ನ್ಯಾಷನಲ್ ಎಕ್ಸಿಬಿಷನ್‌ನಲ್ಲಿ ಹೈಬ್ರೀಡ್ ವಾಹನಗಳ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಬೆಂಗಳೂರು ಇಂಟರ್‌ನ್ಯಾಷನಲ್ ಎಕ್ಸಿಬಿಷನ್ ಸೆಂಟರ್‌ನಲ್ಲಿ ಲಾಗ್ 9 2022 ಸಹಯೋಗದೊಂದಿಗೆ 3 ನೇ ‘ಇಂಟರ್‌ನ್ಯಾಷನಲ್ ಗ್ರೀನ್ ವೆಹಿಕಲ್ ಎಕ್ಸ್‌ಪೋ’ಗೆ ಕೇಂದ್ರ ಸಚಿವ ಭಗವಂತ ಖೂಬಾ, ಸಚಿವರಾದ ಮುರುಗೇಶ್ ಆರ್. ನಿರಾಣಿ ಹಾಗೂ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ಚಾಲನೆ ನೀಡಿದರು.

ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ದ್ವಿಚಕ್ರ ವಾಹನ ಚಾಲನೆ ಮಾಡಿದರು.

ಎಲೆಕ್ಟ್ರಿಕಲ್ ಮತ್ತು ಹೈಬ್ರೀಡ್ ವಾಹನ, ಘಟಕಗಳು, ಬ್ಯಾಟರಿ ಉತ್ಪಾದಿಸುವ ಕಂಪನಿಗಳ ಸಹಯೋಗದೊಂದಿಗೆ ಕರ್ನಾಟಕ ಸರ್ಕಾರ, ಎಫ್‌ಕೆಸಿಸಿಐಎಲ್ ವ್ಯವಸ್ಥೆಗಳು ಮತ್ತು ಸಂಬಂಧಿತ ಉದ್ಯಮ ಬೆಂಗಳೂರು, ಹುಬ್ಬಳ್ಳಿ ಆಟೋಮೊಬೈಲ್ ಡೀಲರ್ಸ್ ಅಸೋಸಿಯೇಷನ್, ಕರ್ನಾಟಕ ದ್ವಿಚಕ್ರ ವಾಹನ ವರ್ಕ್‌ಶಾಪ್ ಮಾಲೀಕರು ಮತ್ತು ತಂತ್ರಜ್ಞರ ಸಂಘ ಮತ್ತು ಇತರ ಸ್ಥಳೀಯ ಸಂಸ್ಥೆಗಳು ಪಾಲ್ಗೊಂಡಿವೆ.

‘ಕ್ಷಣಿಸುತ್ತಿರುವ ಪಳೆಯುಳಿಕೆ ಇಂಧನಗಳು, ಹೆಚ್ಚುತ್ತಿರುವ ಇಂಧನ ವೆಚ್ಚಗಳು ಮತ್ತು ಪರಿಸರದ ಮೇಲಿನ ಜಾಗೃತಿ, ಎಲೆಕ್ಟ್ರಿಕಲ್ ಮತ್ತು ಪರ್ಯಾಯ ಇಂಧನ ಆಧಾರಿತ ಚಲನಶೀಲತೆಯ ಬಳಕೆಯನ್ನು ಉತ್ತೇಜಿಸಲು ವಿಶ್ವದಾದ್ಯಂತ ಸರ್ಕಾರದ ನೀತಿಗಳು ಮತ್ತು ಯೋಜನೆಗಳನ್ನು ಅಳವಡಿಸಿಕೊಳ್ಳುವುದು ಎಲೆಕ್ಟ್ರಿಕಲ್ ವಾಹನ ಕ್ರಾಂತಿಯ ಹಿಂದಿನ ಪ್ರೇರಕ ಶಕ್ತಿಗಳಾಗಿವೆ’ ಎಂದು ಆಯೋಜಕ ಮುದಾಸಿರ್ ತಿಳಿಸಿದರು.

‘ಬೆಸ್ಕಾಂ ಚಾರ್ಜಿಂಗ್ ಮೂಲಸೌಕರ್ಯವನ್ನು ಸೃಷ್ಟಿಸುವ ನೋಡಲ್ ಏಜೆನ್ಸಿಯಾಗಿದ್ದು, 150ಕ್ಕೂ ಹೆಚ್ಚು ಚಾರ್ಜಿಂಗ್ ಸ್ಟೇಷನ್‌ಗಳನ್ನು ಸ್ಥಾಪಿಸಲಾಗಿದೆ. ಶೀಘ್ರದಲ್ಲೇ 1000 ನಿಲ್ದಾಣಗಳನ್ನು ಸೇರಿಸಲು ಬೆಸ್ಕಾಂ ಕ್ರಿಯಾ ಘಟಕವನ್ನು ಸಿದ್ಧಪಡಿಸಿದೆ. ಖಾಸಗಿ ಚಾರ್ಜಿಂಗ್ ಮೂಲಸೌಕರ್ಯ ಕಂಪನಿಗಳು ಕರ್ನಾಟಕದಲ್ಲಿ ಸಾವಿರಕ್ಕೂ ಹೆಚ್ಚು ಚಾರ್ಜಿಂಗ್ ಸ್ಟೇಷನ್‌ಗಳನ್ನು ಸ್ಥಾಪಿಸಲಿವೆ’ ಎಂದು ವಿವರಿಸಿದರು.

ಅರ್ಜಿ ಆಹ್ವಾನ

ಬೆಂಗಳೂರು: ರಾಜ್ಯ ಮಟ್ಟದ ಕನ್ನಡ ಚರ್ಚಾ ಸ್ಪರ್ಧೆ(ವರ್ಬ್ಯಾಟಲ್)ಗೆ ಅರ್ಜಿ ಆಹ್ವಾನಿಸಲಾಗಿದೆ. ಜುಲೈ 23ರಂದು ಹುಬ್ಬಳ್ಳಿ, ಅಗಸ್ಟ್ 10ರಿಂದ 18ರ ವರೆಗೆ ಬೆಂಗಳೂರಿನಲ್ಲಿ ವಿವಿಧ ಹಂತದ ಸ್ಪರ್ಧೆಗಳು ನಡೆಯಲಿವೆ. ಆಸಕ್ತರು ಅರ್ಜಿ ಸಲ್ಲಿಸಬಹುದು.

7–10ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ 12ರಿಂದ 16 ವರ್ಷದ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಬಹುದು. ಸ್ಪರ್ಧೆಯಲ್ಲಿ ವಿಜೇತ ತಂಡಕ್ಕೆ ₹ 20 ಸಾವಿರ ಮತ್ತು ಅಂತಿಮ ಹಂತ ತಲುಪುವ ಎರಡು ತಂಡಗಳಿಗೆ ₹ 5 ಸಾವಿರ ಬಹುಮಾನ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ 9886464641 ಅಥವಾ events@verbattle.com ಸಂಪರ್ಕಿಸಿ ಎಂದು ವರ್ಬ್ಯಾಟಲ್ ಸಂಸ್ಥೆ ತಿಳಿಸಿದೆ.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕೋಲಾರ

ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್
ಪ್ರಕಟಣೆ ಸಂಖ್ಯೆ : 08/2022-23 ದಿನಾಂಕ: 30.06.2022

2021–22ನೇ ಸಾಲಿನಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿಗೆ ಅನುಮೋದನೆಯಾದ ಕುಡಿಯುವ ನೀರು ಸರಬರಾಜು ಯೋಜನೆ ಕಾಮಗಾರಿಗಳಿಗೆ (ಮನೆಮನೆಗೆ ನಳ ಸಂಪರ್ಕ ಕಲ್ಪಿಸುವ) ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಪ್ರಕಟಣೆಯನ್ನು, ಕರ್ನಾಟಕ ರಾಜ್ಯಪಾಲರ ಪರವಾಗಿ ನೋಂದಾಯಿತ ಅರ್ಹ ಹಾಗೂ ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಐಟಂವಾರು ಟೆಂಡರ್‌ಗಳನ್ನು ಕೆ.ಡಬ್ಲ್ಯೂ ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸುವ ಕಡೆಯ ದಿನಾಂಕ: **14.07.2022 ರಂದು 5.30 ಗಂಟೆಯವರೆಗೆ** ಇರುತ್ತದೆ. ಹೆಚ್ಚಿನ ವಿವರಗಳಿಗೆ ಇ–ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್ **http://www.eproc.karnataka.gov.in** ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/- ಕಾರ್ಯಪಾಲಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕೋಲಾರ.
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ 176/ಎಂ.ಸಿ.ಎ/2022–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಹಾರುವ ಪ್ರತಿಮೆ ಸ್ಥಾಪನೆಗೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಬ್ಬನ್ ಉದ್ಯಾನದ ಆವರಣದಲ್ಲಿ ರೇಜರ್ ಪೇ ಕಂಪನಿ ವತಿಯಿಂದ ‘ಹಾರುವ ಕುದುರೆ’ ಪ್ರತಿಮೆ ಸ್ಥಾಪಿಸುವ ಬಗ್ಗೆ ಶನಿವಾರ ಸಭೆ ನಡೆಯಿತು. ತೋಟಗಾರಿಕೆ ಇಲಾಖೆ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಧಿಕಾರಿಗಳು ಹಾಗೂ ವಾಯುವಿಹಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ರೇಜರ್ ಪೇ ಕಂಪನಿ ಅಪೂರ್ವ ಅವರು ಪ್ರತಿಮೆ ಕುರಿತು ವಿವರ ನೀಡಿದರು.

‘ಕಬ್ಬನ್ ಪಾರ್ಕ್‌ನ ಜೀವವೈವಿಧ್ಯವನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಹಾಗೂ ಉದ್ಯಾನದ ಆವರಣದಲ್ಲಿ ಸಿವಿಲ್ ಕಾಮಗಾರಿಗಳನ್ನು ತಡೆಯುವ ಹಿತದೃಷ್ಟಿಯಿಂದ ಹಾರುವ ಕುದುರೆ ಸ್ಥಾಪಿಸುವುದು ಉಚಿತವಲ್ಲ. ಈ ಪ್ರತಿಮೆ ಸ್ಥಾಪಿಸುವುದನ್ನು ಕೈಬಿಡಬೇಕು. ಒಂದು ವೇಳೆ ಈ ಪ್ರತಿಮೆ ಸ್ಥಾಪನೆಗೆ ಮುಂದಾದರೆ ಕಾನೂನು ಹೋರಾಟ ನಡೆಸಲಾಗುವುದು’ ಎಂದು ಬಹುತೇಕ ವಾಯುವಿಹಾರಿಗಳು ಹೇಳಿದರು.

ಸಭೆಯಲ್ಲಿ ತೋಟಗಾರಿಕೆ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ, ನಿರ್ದೇಶಕರಾದ ನಾಗೇಂದ್ರ ಪ್ರಸಾದ್, ಜಂಟಿ ನಿರ್ದೇಶಕ ಡಾ.ಎಂ. ಜಗದೀಶ್, ಉಪನಿರ್ದೇಶಕರಾದ ಎಚ್.ಟಿ. ಬಾಲಕೃಷ್ಣ, ಚಂದ್ರಶೇಖರ್, ಕಬ್ಬನ್ ಉದ್ಯಾನದ ವಾಯುವಿಹಾರಿಗಳ ಸಂಘದ ಅಧ್ಯಕ್ಷ ಉಮೇಶ್ ಇದ್ದರು.

ಪ್ರತಿಮೆ ಸ್ಥಾಪಿಸುವ ಯೋಜನೆಯ ಪ್ರಸ್ತಾವವನ್ನು ಸ್ವಿಸ್ ಕಾನ್ಸಲೇಟ್ ಕಚೇರಿ ಸಿದ್ಧಪಡಿಸಿದೆ.

‘ಇ-ಕಚೇರಿ ಪರಿವರ್ತನೆಗೆ ಆ.15ರ ಗಡುವು’

ಬೆಂಗಳೂರು: ವಾಣಿಜ್ಯ ಕೈಗಾರಿಕಾ ಇಲಾಖೆ ವ್ಯಾಪ್ತಿಗೆ ಒಳಪಡುವ ಜಿಲ್ಲಾ ಮತ್ತು ತಾಲ್ಲೂಕುಮಟ್ಟದ ಕಚೇರಿಗಳನ್ನು ಆಗಸ್ಟ್ 15ರ ಒಳಗೆ ಇ-ಕಚೇರಿ ವ್ಯವಸ್ಥೆಗೆ ಪರಿವರ್ತಿಸಬೇಕು ಎಂದು ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ಸೂಚಿಸಿದರು.

ವಿಕಾಸಸೌಧದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

ನಿಗದಿತ ಗಡುವಿನ ಒಳಗೆ ಪರಿವರ್ತನೆ ಮಾಡದೇ ಇದ್ದರೆ ಮುಖ್ಯ ಕಚೇರಿಗೆ ಬರುವ ಭೌತಿಕ ಕಡತಗಳನ್ನು ಸ್ವೀಕರಿಸದೇ ಹಿಂದಿರುಗಿಸಬೇಕು. ಸಬೂಬುಗಳನ್ನು ಹೇಳದೆ, ತಕ್ಷಣ ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳಬೇಕು ಎಂದು ತಾಕೀತು ಮಾಡಿದರು.

ಸಣ್ಣಪುಟ್ಟ ದೋಷಗಳನ್ನು ಮುಂದಿಟ್ಟುಕೊಂಡು ಕಡತ ವಿಲೇವಾರಿ ವಿಳಂಬ ಮಾಡಬಾರದು. ವಿಳಂಬ ಮಾಡಿದರೆ ಉದ್ದಿಮೆದಾರರು ಕರ್ನಾಟಕಕ್ಕೆ ಬರುವುದಿಲ್ಲ. ಬೇರೆ ರಾಜ್ಯದೆಡೆ ಗಮನಹರಿಸುತ್ತಾರೆ. ಇದಕ್ಕೆ ಅವಕಾಶ ನೀಡಬಾರದು. ಜಿಲ್ಲಾ ಮಟ್ಟದಲ್ಲಿ ಕೆಐಎಡಿಬಿಯಿಂದ ಕೈಗಾರಿಕಾ ಉದ್ದೇಶಗಳಿಗೆ ಹಲವು ವರ್ಷಗಳ ಹಿಂದೆ ಜಮೀನು ಪಡೆದವರು ಸದ್ಬಳಕೆ ಮಾಡಿಕೊಂಡಿಲ್ಲ. ಈ ಬಗ್ಗೆ ಸಾಕಷ್ಟು ಲಿಖಿತ ದೂರುಗಳು ಬಂದಿವೆ. ಬಳಕೆ ಮಾಡದ ಜಮೀನುಗಳ ವಿವರ ಕಲೆಹಾಕಬೇಕು ಎಂದು ಸೂಚಿಸಿದರು.

ರೈತರ ಭೂಕಂದಾಯ ದಾಖಲೆಗಳು ಕಾನೂನಾತ್ಮಕವಾಗಿದ್ದರೆ, ಕೆಐಎಡಿಬಿಯಿಂದ ಸ್ವಾಧೀನ ಮಾಡಿಕೊಂಡ ಜಮೀನುಗಳಿಗೆ ಮೂರು ತಿಂಗಳಲ್ಲಿ ಪರಿಹಾರ ನೀಡಬೇಕು. ಅನಗತ್ಯ ವಿಳಂಬ ಸಲ್ಲದು ಎಂದರು.

ಸಣ್ಣ ಕೈಗಾರಿಕಾ ಸಚಿವ ಎಂ.ಟಿ.ಬಿ. ನಾಗರಾಜ್, ಸಣ್ಣ ಕೈಗಾರಿಕೆಗಳಿಗೂ ಭೂಮಿ ನೀಡುವಂತೆ ಮನವಿಗಳು ಬಂದಿವೆ. ಕೆಐಎಡಿಬಿ ಮೂಲಕ ಜಮೀನು ನೀಡಬೇಕು ಎಂದು ಕೋರಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business to Business

Business

VAMSHADHARA PROJECT Services, Selling/ Buying/ JDS/ Takeovers/ Solutions/ Constructions/ Maintenance, Finance, Institutions, Softskills. Dr.Swamy:- 9342247637.

BADMINTON COURTS World Starndard Electronic City 10,000 sft Shed, Carpeting, Lighting, for Takeover. Rs. 5,00,000/- Month collection. Dr.Swamy:- Vamshadhara Projects:- 9342247637.

TEAM DIRECTS- BWSSB & BESCOM Contractors for applying Water & Electrical Metre Connections. Rain Water Harvesting & Auto Water level Controllers. 9980460155/ 9243441327

Business Offers

Business Centre

RUNNING HOTEL Available For RENT, 1500 Sqft. Ground Floor, Suitable For HOTEL Longford Road, Opposite Hockey Stadium, Shanthinagar, Bangalore-27 Call 9731395308, 9538628390.

General

RUNNING BAR (CL9) FOR LEASE (ARAKERE, Bannerghatta Road) with MRP Counter, 2 Dine, Terrace Garden &.Kitchen Contact: 8904522650

PERSONAL

Change of Name

JYOSTNA. M.MEHTA, Jyostna. Mahendra, Jyotsna. Mahendra, Jyostna.M, Jyotsna.M. Wadher, Jyostna Wadher (all being Old names) W/o.Mahendra Wadher, aged about 76years, residing at No.59 &60, Sheetal Shanti Central Street, Railway Parallel Road, KumaraParkWest, Bangalore-560020, have changed my name to JYOTSNA.M vide affidavit dated 02.02.2022 before Notary R.Basavaraja, Bangalore. Henceforth I shall be called as JYOTSNA.M only.

CHANGE OF NAME
I, **Namitha. S,** Daughter of K. Shivaramu, residing at No.59/8, SHILANA, 7th Cross, G- Block, Sahakaranagar, Bengaluru- 560 092, have changed my name to **NAMITHA S GOWDA** vide affidavit dated 01/07/2022 before notary K. Ramegowda., Bengaluru

CHANGE OF NAME
I, **Mr. DHIRENDRA KUMAR CHAUHAN,** residing at Flat No. D5, 3rd Floor, Gunina Iris, Bannerghatta Road, Gottigere, Bengaluru - 560 083, have changed my son's name from **VIBHAV KUMAR CHAUHAN** to **VIBHAV CHAUHAN** vide affidavit dated: 10th June 2022, sworn before Notary Mohammed Hussain K, Bangalore.

I, C M NAVEENA KUMARA have changed my name to C M NAVEENKUMAR vide affidavit dated: 2/7/2022 Before Notary Manohar Jeerige Bangalore.

AFFIDAVIT
I, **Sathyavathi Krishna Shastry** alias Sathyavathi Murthy, D/o. Late Krishna Shastry, W/o. Late L.N. Murthy, aged about 83 years, residing at No.G804, Salarpuria Sattva Laurel Heights, Hesaraghatta Main Road, Rangappa Layout, Mallasandra, Jalahalli West, Bangalore, Karnataka-560 057 declare that my father's name is Krishna Shastry and my husband's name is L.N. Murthy and before marriage I was recognised as Sathyavathi Krishna Shastry and subsequent to my marriage I have changed my name to Sathyavathi Murthy and in aadhar card my name is reflected as K. Sathyavathi and in PAN card my name is reflected as Sathyavathi K. S. That, as per the prevailing Indian culture I have changed my name after my marriage and names reflected in different documents as Sathyavathi Krishna Shastry, Sathyavathi Murthy, K. Sathyavathi and Sathyavathi K.S. are refers to me only, vide affidavit dated 02-07-2022, before Notary R.S. VIJAY at Bangalore.

CHANGE OF NAME
I, **BABITHA P.** Vattarambath Poyilil, Koyilandi Peruvattur (PO), Pathalayani, Kozikode, Kerala - 673620 presently residing at No. 07, 2nd Cross, Samrat Layout, Arekere, Bannerghatta Road, Bangalore - 560 076 have changed my name to **Jeevan P. Nair** and gender from Female to Male vide affidavit Dated: 02.07.2022 before Notary K.V. Mani, B.A, LL.B, Bangalore. Henceforth I shall be called as **Jeevan P. Nair** only.

I, KRISHNACHARI BANGALORE SRINIVASA CHAR (Name As Old Passport No. T9387874) (DOB 06.08.1962) S/o Srinivasachar. H.N. R/o #133, 6th Main Road, Vidhanasoudha Layout, Laggere, Bengaluru- 560058 Have Changed My Name to KRISHNACHAR BANGALORE SRINIVASA CHAR vide Affidavit Dated 02.07.2022 Before Notary R.Basavaraja Bengaluru

I, RAMAN K, S/o Kandan, aged about 55 years, R/o #E003, Saibya Senary Apartment, Chikkanagamangala, Rayasandra Main Road Bengaluru-560099 Have changed my name from ‘RAMAN K’ to ‘THOMAS KANDAN KALLUKETTKULAM’. Vide affidavit dated 29/6/2022. Sworn before Advocate and Notary A. Gerard Bangalore

I. VENKATESHA.L residing at No.52/4, 4th Cross, 5th Main, Ganganagar, R.T.Nagar Post, Bangalore-560032, have changed my name to VENKATESH.L vide affidavit dated 01-07-2022 before Notary Y.R.Chandrasekar, Bangalore.

I, MANJUNATH B KENCHANNAVAR R/a#154, Pattar Oni Mane, 125 Adahalli, Athani Belagavi-591248 Have Changed My Son Name From SUMITH M.K to SUMITH KENCHANNAVAR (DOB 18.10.2012) vide Affidavit Dated 25.06.2022 Before Notary Devaraja.E Bangalore

I, MANJUNATH B KENCHANNAVAR R/a#154, Pattar Oni Mane, 125 Adahalli, Athani Belagavi-591248 Have Changed My Daughter Name From SAMIKSHA M.K to SAMIKSHA KENCHANNAVAR (DOB 29.10.2009) vide Affidavit Dated 25.06.2022 Before Notary Devaraja.E Bangalore

I ASHA PATEL w/o Nilesh Patel residing at No.1, Ganesh Nilayam, 5th cross, Trinity Enclave, Banjara layout, near Banjara bakery, Kalkere, Horamavu Bangalore-43, have changed my name to ISHA PATEL vide affidavit dated 02/07/2022, before notary Uday Kumar.K. Bangalore.

I, BIRAJDAR PARASHRAM SIDGONDA Residing at 3rd Floor, Sri Manjunatha Hospital, DBM Road, Chickballapur- 562101 have changed my name to PARASHURAM SIDAGONDA BIRADAR vide affidavit dated 01-07-2022 sworn to before notary K.H. Venkatappa, Chickballapur.

I, BHUVANESHVARI ATHANI Residing at 3rd Floor, Sri Manjunatha Hospital, DBM Road, Chickballapur-562101 have changed my name to BHUVANESHVARI PARASHURAM BIRADAR vide affidavit dated 01-07-2022 sworn to before notary K.H. Venkatappa, Chickballapur.

I, VASANTHI C, W/o Sri Thomas Kandan Kallukettkulam, aged about 54 years, R/o #E003, Saibya Senary Apartment Chikkanagamangala Rayasandra Main Road, Bengaluru- 560099 Have changed my name from ‘VASANTHI. C’ to ‘MARY THOMAS’. Vide affidavit dated 29/6/2022. Sworn before Advocate and Notary A.Gerard Bangalore.

I, PIS-2016IA1048–VEHICLE Oper A- RAJU YADAV at DG(ECS), DRDO, LRDE Campus, Bangalore changed my minor Daughter's name from ANKITA to ANKITA YADAV notary K.V.Mani Bangalore.

I, PIS-2016IA1048– Vehicle Oper A- RAJU YADAV at DG(ECS), DRDO, LRDE Campus, Bangalore changed my minor Son's name from ANKUR to ANKUR YADAV notary K.V.Mani Bangalore.

6507276M SEP KARMVEER 1ATC BROTHER name DHAMCHAND KUMAR DOB MY SERVICE RECORDS 03/06/2003 instead of 02/07/2003 NOTARY KV MANI

I, PARVEEN TAJ, Residing at Anjuman Road, Ward No. 17, Chickballapur-562101 have changed my name to PARVEEN TAJ PYREJAN vide affidavit dated 30-06-2022 sworn to before notary K.H. Venkatappa, Chickballapur.

Lost

ಕಳೆದಿದೆ
ನಾನು ಶ್ರೀಮತಿ ಮಂಜುಳ ನಂ. 290/5, ಪಿ.ಎಮ್.ಆರ್ ಬಿಲ್ಡಿಂಗ್ ಪಂಚಾಯಿತಿ ಕಛೇರಿ ಹತ್ತಿರ, ಮರಸೂರು ಗ್ರಾಮ, ಕಸಬಾ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಇಲ್ಲಿ ವಾಸವಾಗಿದ್ದು ಆನೇಕಲ್ ಟೌನ್ ಬಹದ್ದೂರ್ಪುರ ವ. ನಂ 20ಕ್ಕೆ ಸೇರಿರುವ ಮುನಿಸಿಪಲ್ ಅಸೆಸ್ಮೆಂಟ್ ಪ್ರಕಾರ ನಂ. 42 ಸ್ವತ್ತಿನ ನಂ 196/79, 790 ಚ.ಅ. ಸ್ವತ್ತಿನಲ್ಲಿ 9.90* 3.35 ಮೀ ಉಳ್ಳ ಮಂಗಳೂರು ಹೆಂಚಿನ ಮನೆಯ ಮೂಲ ಕ್ರಯಪತ್ರ ದಿನಾಂಕ 17-06-2022 ರಂದು ಮೆಜೆಸ್ಟಿಕ್ ಬಳಿ ಜೆರಾಕ್ಸ್ ಮಾಡಲು ಹೋದಾಗ ಕಳೆದು ಹೋಗಿರುತ್ತದೆ. ಯಾರಿಗಾದರೂ ಸಿಕ್ಕಿದ್ದಲ್ಲಿ ಸಂಪರ್ಕಿಸಿ: 9535829256 ಅಥವಾ ಹತ್ತಿರದ ಪೊಲೀಸ್ ಠಾಣೆಗೆ ತಿಳಿಸಿ.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಯುವಕ ಸಾವು

ಬೆಂಗಳೂರು: ಗಸ್ತಿನಲ್ಲಿದ್ದ ಪೊಲೀಸರ ಕಂಡು ಭಯದಲ್ಲಿ ಓಡಿಹೋಗಲು ಯತ್ನಿಸಿದ್ದ ರವಿ (20) ಎಂಬುವವರು ಕಟ್ಟಡದಿಂದ ಬಿದ್ದು ಮೃತಪಟ್ಟಿದ್ದು, ಈ ಬಗ್ಗೆ ಪೀಣ್ಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ **‘ಪಿವಿ ಬ್ರ್ಯಾಂಡ್ ಸ್ಪಾಟ್’**ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಮುತ್ತಾನಲ್ಲೂರು ಕೆರೆ ಉಳಿವಿಗೆ ಪಾದಯಾತ್ರೆ

ಆನೇಕಲ್: ‘ನಮ್ಮ ಕೆರೆ ನಮ್ಮ ಹಕ್ಕು’ ಘೋಷಣೆಯೊಂದಿಗೆ ಮುತ್ತಾನಲ್ಲೂರಿನ ಗ್ರಾಮಸ್ಥರು ಹಾಗೂ ಮುತ್ತಾನಲ್ಲೂರು ಕೆರೆ ವ್ಯಾಪ್ತಿಗೆ ಒಳಪಡುವ ವಿವಿಧ ಗ್ರಾಮದ ಜನರು ಬೊಮ್ಮಸಂದ್ರದವರೆಗೆ ಶನಿವಾರ 10 ಕಿ.ಮೀ. ಕಾಲ್ನಡಿಗೆ ಜಾಥಾ ನಡೆಸಿ ಮುತ್ತಾನಲ್ಲೂರು ಕೆರೆಯನ್ನು ಸಂರಕ್ಷಿಸಬೇಕು ಎಂದು ಒಕ್ಕೊರಲಿನಿಂದ ಒತ್ತಾಯಿಸಿದರು.

ಮುತ್ತಾನಲ್ಲೂರಿನಿಂದ, ಚಂದಾಪುರ ಪುರಸಭೆ, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಕಚೇರಿ, ಸ್ಪರ್ಶ ಆಸ್ಪತ್ರೆ, ಬೊಮ್ಮಸಂದ್ರ ಕೈಗಾರಿಕಾ ಸಂಘದವರೆಗೆ ಪಾದಯತ್ರೆ ನಡೆಸಿ ಸಂಬಂಧಿಸಿದವರಿಗೆ ಮನವಿ ಪತ್ರ ಸಲ್ಲಿಸಿ, ಕೆರೆಗಳಿಗೆ ಕಲುಷಿತ ನೀರು ಹರಿಯದಂತೆ ಕ್ರಮ ಕೈಗೊಳ್ಳಬೇಕು. ಇಲ್ಲವಾದರೆ ಕೆರೆ ನಾಶವಾಗಿ ಜಲಚರಗಳು, ಜಾನುವಾರು, ಜನರು ಸಂಕಷ್ಟಕ್ಕೆ ಸಿಲುಕಿಕೊಳ್ಳುತ್ತಾರೆ. ಹಾಗಾಗಿ, ಕೆರೆ ಸಂರಕ್ಷಣೆ ಮಾಡಬೇಕು ಎಂದು ಮನವಿ ಮಾಡಿದರು.

ಮುತ್ತಾನಲ್ಲೂರು ಅಮಾನಿಕೆರೆಯು 664 ಎಕರೆ ವಿಸ್ತೀರ್ಣ ಹೊಂದಿದೆ. ತಾಲ್ಲೂಕಿನಲ್ಲಿಯೇ ಅತಿ ದೊಡ್ಡ ಕೆರೆ ಎಂಬ ಹೆಗ್ಗಳಿಕೆಯಿದೆ. ಆದರೆ, ಈ ಕೆರೆಗೆ ಚಂದಾಪುರ ಚೋಳರ ಕೆರೆಯಿಂದ ಪ್ರತಿದಿನ ಕಲುಷಿತ ನೀರು ಹರಿಯುತ್ತಿದೆ. ಇದರಿಂದ ಮುತ್ತಾನಲ್ಲೂರು ಕೆರೆ ಹಾಳಾಗಿದ್ದು ನೀರು ಗಬ್ಬು ನಾರುತ್ತಿದೆ ಎಂದು ದೂರಿದರು.

ಕೈಗಾರಿಕೆಗಳು ಮತ್ತು ಆಸ್ಪತ್ರೆಗಳ ತ್ಯಾಜ್ಯ ನೀರು ಸಂಸ್ಕರಣೆಯಾಗದೆ ಚಂದಾಪುರ ಚೋಳರ ಕೆರೆಗೆ ಬರುತ್ತಿದ್ದು ಈ ನೀರು ಮುತ್ತಾನಲ್ಲೂರು ಕೆರೆಗೆ ಹರಿಯುತ್ತಿದೆ. ಹಾಗಾಗಿ, ಕೆರೆಯ ನೀರು ಕಲುಷಿತಗೊಂಡಿದೆ. ಚಂದಾಪುರ ಪುರಸಭೆ ವ್ಯಾಪ್ತಿಯ ಲಕ್ಷ್ಮೀಸಾಗರ, ರಾಮಸಾಗರ, ಹಳೇ ಚಂದಾಪುರ ಗ್ರಾಮಗಳಿಂದ ಒಳಚರಂಡಿಯ ನೀರನ್ನು ಎಸ್‌ಟಿಪಿ ಘಟಕಗಳ ಮೂಲಕ ಸಂಸ್ಕರಣೆಯಾದೆ ನೇರವಾಗಿ ಕೆರೆಗೆ ಬಿಟ್ಟಿರುವುದರಿಂದ ಕೆರೆ ಕಲುಷಿತವಾಗಿದೆ. ಹಾಗಾಗಿ, ಕೆರೆಯನ್ನು ಸಂರಕ್ಷಿಸಬೇಕು ಎಂದು ಒತ್ತಾಯಿಸಿದರು.

ಮುತ್ತಾನಲ್ಲೂರು ಗ್ರಾಮ ಪಂಚಾಯಿತಿ ಅಧ್ಯಕ್ಷ ವಿಶ್ವನಾಥರೆಡ್ಡಿ, ಬಿಎಸ್‌ಪಿ ತಾಲ್ಲೂಕು ಅಧ್ಯಕ್ಷ ಚಿನ್ನಪ್ಪ ವೈ. ಚಿಕ್ಕಹಾಗಡೆ, ಬಿಜೆಪಿ ಮಂಡಲ ಅಧ್ಯಕ್ಷ ಬಿ.ಬಿ.ಐ. ಮುನಿರೆಡ್ಡಿ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಸುಜಾತಾ, ಕೇಶವರೆಡ್ಡಿ, ನಾಗವೇಣಿ, ಪುರಸಭಾ ಸದಸ್ಯರಾದ ವೆಂಕಟಸ್ವಾಮಿ ಮತ್ತಿತರರು ಇದ್ದರು.

ಸಂಚಾರ ದಟ್ಟಣೆ: ಪಾದಯಾತ್ರೆಯು ಚಂದಾಪುರಕ್ಕೆ ಬಂದಾಗ ಒಂದು ತಾಸಿಗೂ ಹೆಚ್ಚು ಕಾಲ ರಾಷ್ಟ್ರೀಯ ಹೆದ್ದಾರಿಯಲ್ಲಿ ದಟ್ಟಣೆ ಉಂಟಾಗಿತ್ತು.

ಕಟ್ಟಡ ತೆರವಿಗೆ ಸೂಚಿಸಿದ ಬೊಮ್ಮನಹಳ್ಳಿ ಜಂಟಿ ವಲಯ ಆಯುಕ್ತ

ರಾಜಕಾಲುವೆ ಒತ್ತುವರಿ: ನೋಟಿಸ್ ಜಾರಿ

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ಹೊಸೂರು ರಸ್ತೆ ಬಂಡೇಪಾಳ್ಯ ಗ್ರಾಮದ ಸರ್ವೆ ನಂ.45/1 ರಲ್ಲಿ ತ್ಯಾಗರಾಜು ಮತ್ತು ಶ್ರೀದೇವಿ ಎಂಬುವವರು ರಾಜಕಾಲುವೆಯನ್ನು ಒತ್ತುವರಿ ಮಾಡಿ ಬೃಹತ್ತಾದ ಕಟ್ಟಡ ನಿರ್ಮಾಣ ಮಾಡುತ್ತಿದ್ದಾರೆಂದು ಸ್ಥಳೀಯರು ಆರೋಪಿಸಿದ್ದಾರೆ.

’ಬಿ‘ ಖಾತಾ ಹೊಂದಿರುವ ಎರಡು ಎಕರೆ ಜಾಗದಲ್ಲಿ ಆರು ಮಹಡಿಯ ವಾಣಿಜ್ಯ ಸಂಕೀರ್ಣ ನಿರ್ಮಾಣ ಮಾಡಲಾಗುತ್ತಿದೆ. ಜತೆಗೆ ಕೇವಲ 15 ಅಡಿ ರಸ್ತೆ ಇದ್ದು, ನಿಯಮಾವಳಿ ಪ್ರಕಾರ ಈ ಕಟ್ಟಡಕ್ಕೆ ನಕ್ಷೆ ಮಂಜೂರಾತಿ ನೀಡಲು ಸಾಧ್ಯವಿಲ್ಲ. ಆದಾಗ್ಯೂ ರಾಜಕೀಯ ಪ್ರಭಾವ ಬಳಸಿ ಕಟ್ಟಡ ನಿರ್ಮಿಸಲಾಗುತ್ತಿದೆ. ರಾಜಕಾಲುವೆಯನ್ನು ಒತ್ತುವರಿ ಮಾಡಿರುವುದರಿಂದ ಹರಿಯುವ ನೀರು ನಿಂತಲ್ಲೇ ನಿಂತು ನೆರೆಗೆ ಕಾರಣವಾಗುತ್ತಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಈ ಸಂಬಂಧ ಕ್ರಮಕೈಗೊಳ್ಳುವಂತೆ ಬಿಬಿಎಂಪಿ ಬೊಮ್ಮನಹಳ್ಳಿ ವಲಯ ಜಂಟಿ ಆಯುಕ್ತರಿಗೆ ಸ್ಥಳೀಯರು ದೂರು ನೀಡಿದ್ದರು. ಸಾರ್ವಜನಿಕರ ದೂರು ಮತ್ತು ಹೈಕೋರ್ಟ್ ಆದೇಶದ ಅನ್ವಯ ಸ್ವಯಂಪ್ರೇರಿತ ದೂರು ದಾಖಲಿಸಿ, ಸ್ಥಳ ಮಹಜರ್ ಮಾಡಿದ ತರುವಾಯ ಕಟ್ಟಡದ ಮಾಲೀಕರಿಗೆ ನೋಟಿಸ್ ಜಾರಿ ಮಾಡಲಾಗಿತ್ತು. ಆದರೆ ಕಟ್ಟಡದ ಮಾಲೀಕರು ಅದಕ್ಕೆ ಉತ್ತರ ನೀಡಿರಲಿಲ್ಲ. ನಕ್ಷೆ ಮಂಜೂರಾತಿಯನ್ನು ಪಡೆಯದೇ, ರಾಜಕಾಲುವೆಯನ್ನು ಒತ್ತುವರಿ ಮಾಡಿ, ಸಾರ್ವಜನಿಕ ಆಸ್ತಿಯನ್ನು ಕಬಳಿಸಿದ್ದು ಸಾಬೀತಾದ ಹಿನ್ನೆಲೆಯಲ್ಲಿ ಮಾಲೀಕರಿಗೆ ನೋಟೀಸ್ ಜಾರಿ ಮಾಡಿದ ಜಂಟಿ ಆಯುಕ್ತರು, ‘ಕಟ್ಟಡದ ಮಾಲೀಕರು ತಮ್ಮ ಸ್ವಂತ ಖರ್ಚಿನಲ್ಲಿ ಕಟ್ಟಡ ತೆರವು ಮಾಡಬೇಕು’ ಎಂದು ಆದೇಶಿದ್ದರು.

ರಾಜಕಾಲುವೆ ಒತ್ತುವರಿ ಮಾಡಿ ಕಟ್ಟಲಾಗುತ್ತಿರುವ ಕಟ್ಟಡ

ಸಹಾಯಕ ಕಾರ್ಯಪಾಲಕ ಎಂಜಿನಿಯರ್ ರವಿ ಮಾತನಾಡಿ, ‘ಕಟ್ಟಡದ ಮಾಲೀಕರಿಗೆ ನೋಟಿಸ್ ಜಾರಿ ಮಾಡಲಾಗಿದೆ. ಜಂಟಿ ಆಯುಕ್ತರೂ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಆದರೆ ಅವರಿಂದ ಯಾವುದೇ ಉತ್ತರ ಬಂದಿಲ್ಲ. ಸ್ಥಳಕ್ಕೆ ಹಲವು ಬಾರಿ ಹೋದರೂ ಮಾಲೀಕರು ಸಿಗುತ್ತಿಲ್ಲ, ಕಂದಾಯ ದಾಖಲಾತಿಗಳನ್ನು ಕೂಡಲೇ ಸಲ್ಲಿಸುವಂತೆ ಸೂಚಿಸಲಾಗಿದೆ’ ಎಂದರು.

‘ಬಿಬಿಎಂಪಿ ಜಂಟಿ ಆಯುಕ್ತರು ಕಟ್ಟಡ ತೆರವುಗೊಳಿಸುವಂತೆ ಮೇ 30ರಂದೇ ಆದೇಶ ನೀಡಿದ್ದರೂ ಈವರೆಗೂ ಪಾಲಿಸಿಲ್ಲ. ಇದರಿಂದಾಗಿ ದಿನವೂ ಸುರಿಯುತ್ತಿರುವ ಮಳೆಯಿಂದ ಮನೆಗಳಿಗೆ ನೀರು ನುಗ್ಗುತ್ತಿದೆ. ಇಷ್ಟೆಲ್ಲಾ ಆಗಿಯೂ ಬಿಬಿಎಂಪಿ ಅಧಿಕಾರಿಗಳೂ ಕ್ರಮಕ್ಕೆ ಮುಂದಾಗದಿರುವುದು ಅನುಮಾನ ಮೂಡಿಸಿದೆ’ ಎಂದು ಸ್ಥಳೀಯರಾದ ರಾಮಚಂದ್ರ ಆರೋಪಿಸಿದ್ದಾರೆ.

ದಲಿತ ಸಂಘಟನೆಯ ಮುಖಂಡ ಚಂದ್ರಪ್ಪ, ‘ಬಂಡೇಪಾಳ್ಯ ಕೊಳೆಗೇರಿಯಲ್ಲಿ ಬಹುತೇಕ ದಲಿತರೇ ವಾಸವಾಗಿದ್ದಾರೆ. ರಾಜಕಾಲುವೆ ಒತ್ತುವರಿಯಿಂದಾಗಿ ಮನೆಗಳಿಗೆ ನೀರು ನುಗ್ಗಿದಲ್ಲಿ ಬಡ ಜನ ಎಲ್ಲಿ ಹೋಗಬೇಕು’ ಎಂದು ಪ್ರಶ್ನಿಸುತ್ತಾರೆ.

ಬಿಬಿಎಂಪಿ ಬೊಮ್ಮನಹಳ್ಳಿ ವಲಯ ಜಂಟಿ ಆಯುಕ್ತರು ಪ್ರತಿಕ್ರಿಯೆಗಾಗಿ ಕರೆ ಮಾಡಿದಾಗ, ಕರೆ ಸ್ವೀಕರಿಸಲಿಲ್ಲ.

ನಲ್ಲಿ ನೀರು ಕುಡಿಯಲೂ ಯೋಗ್ಯವಲ್ಲ!

• ಕೆ.ಎಸ್.ಗಿರೀಶ

ಕಲಬುರಗಿ ನಗರ ವಿವೇಕಾನಂದ ನಗರದಲ್ಲಿ ಪೂರೈಕೆಯಾದ ಹಸಿರು ಬಣ್ಣದ ನೀರು

ಮಡಿಕೇರಿ: ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ ಮತ್ತು ವಿವಿಧ ಸ್ಥಳೀಯ ಸಂಸ್ಥೆಗಳ ಘಟಕಗಳಲ್ಲಿ ಶುದ್ಧೀಕರಣಗೊಂಡ ಬಳಿಕವೂ ನಗರ ಪ್ರದೇಶದ ಮನೆಗಳಿಗೆ ನಲ್ಲಿ ಮೂಲಕ ತಲುಪುವಷ್ಟರಲ್ಲಿ ನೀರು ಮತ್ತೆ ಅಶುದ್ಧಗೊಳ್ಳುತ್ತದೆ. ಬೇರೆಯೇ ಬಣ್ಣಕ್ಕೆ ತಿರುಗುತ್ತದೆ!

ನದಿ ಮೂಲದಿಂದ ಬರುವ ನೀರನ್ನು ಮೊದಲು ಮೇಲಿನಿಂದ ಕೆಳಗೆ ರಭಸವಾಗಿ ಬೀಳುವಂತೆ ಮಾಡಲಾಗುತ್ತದೆ. ನಂತರ ನದಿಯೊಳಗಿನ ನೀರಿನಲ್ಲಿ ಸೇರಿರಬಹುದಾದ ವಿವಿಧ ಅನಿಲ ಅಂಶಗಳು ಹೊರಬರುವಂತೆ ಮಾಡಲಾಗುತ್ತದೆ. ಜೊತೆಗೆ, ಈ ವಿಧಾನದಿಂದ ಆಮ್ಲಜನಕವು ನೀರಿನ ಜತೆ ಸೇರುತ್ತದೆ.

ನಂತರ, ಸಣ್ಣ ಪ್ರಮಾಣದಲ್ಲಿ ಕ್ಲೋರಿನ್ ಸೇರಿಸಿ ಸೆಡಿಮೆಂಟೇಷನ್ ಪ್ಲಾಂಟ್‌ಗೆ ಸಣ್ಣ ಕಾಲುವೆ ಮೂಲಕ ಹರಿಸಲಾಗುತ್ತದೆ. ಅಲ್ಲಿ ಕನಿಷ್ಠ 3 ಗಂಟೆ ನೀರು ನಿಂತು, ತಿಳಿಯಾದ ಬಳಿಕ ಪಾಲಿ ಅಲ್ಯುಮಿನಿಯಂ ಕ್ಲೋರೈಡ್ (ಪಿಎಚ್‌ಸಿ) ಸೇರಿಸಲಾಗುತ್ತದೆ. ಸಾಮಾನ್ಯವಾಗಿ ಈ ರಾಸಾಯನಿಕ ಅಂಶವನ್ನು ಪ್ರತಿ ಲೀಟರ್ ನೀರಿಗೆ ನಿಗದಿತ ಪ್ರಮಾಣದಲ್ಲಿ ಸೇರಿಸಲಾಗುತ್ತದೆ. ಅದರಿಂದ ನೀರಿನಲ್ಲಿನ ಬ್ಯಾಕ್ಟೀರಿಯಾಗಳು ನಾಶವಾಗುತ್ತವೆ.

ಬಳಿಕ ನೀರನ್ನು 'ರ‍್ಯಾಪಿಡ್ ಸ್ಯಾಂಡ್ ಫಿಲ್ಟರ್'ಗೆ ಹಾಯಿಸಲಾಗುತ್ತದೆ. ಅಲ್ಲಿ ಮರಳು ಮತ್ತು ಕಲ್ಲುಗಳ ಮೂಲಕ ನೀರು ಹರಿದು ಸಂಪ್‌ನಲ್ಲಿ ಶೇಖರಣೆಗೊಳ್ಳುತ್ತದೆ. ನಂತರ, ಬ್ಯಾಕ್ಟೀರಿಯಾಮುಕ್ತಗೊಳಿಸಲು ನಿಗದಿತ ಪ್ರಮಾಣದಲ್ಲಿ ಕ್ಲೋರಿನ್ ಅನ್ನು ಸೇರಿಸಿ, ಅಂತಿಮವಾಗಿ ಶುದ್ಧೀಕರಣಗೊಳಿಸಲಾಗುತ್ತದೆ.

'ಈ ನೀರು ನೇರವಾಗಿ ಕುಡಿಯಲು ಯೋಗ್ಯವಾಗಿರುತ್ತದೆ' ಎಂದು ಮೈಸೂರಿನ ವಾಣಿವಿಲಾಸ ನೀರು ಸರಬರಾಜು ಕೇಂದ್ರದ ಅಧಿಕಾರಿಗಳು ಹೇಳುತ್ತಾರೆ.

> **ರಾಜ್ಯದ ಎಲ್ಲ ನಗರಗಳಲ್ಲೂ ಶುದ್ಧೀಕರಿಸಿದ ನೀರನ್ನೇ ಪೂರೈಸಲಾಗುತ್ತಿದೆ. ನೀರಿನ ಶುದ್ಧತೆಗೆ ಪ್ರಥಮ ಆದ್ಯತೆ ಕೊಡಲಾಗುತ್ತದೆ. ಆದರೂ ಸಾರ್ವಜನಿಕರು ಕಾಯ್ದಾರಿಸಿದ ನೀರು ಕುಡಿಯುವುದು ಒಳ್ಳೆಯದು.**
> **ನಟರಾಜ್,** ಮುಖ್ಯ ಎಂಜಿನಿಯರ್, ರಾಜ್ಯ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ

ನಲ್ಲಿಗೆ ತಲುಪುವಷ್ಟರಲ್ಲಿ ಮಾಲಿನ್ಯ

ಶುದ್ಧೀಕರಣಗೊಂಡ ನೀರು ಕೊಳವೆಗಳ ಮೂಲಕ ಹರಿದು ಓವರ್ ಹೆಡ್ ಟ್ಯಾಂಕ್ ತಲುಪಿ, ಮನೆಗಳ ನಳಕ್ಕೆ ತಲುಪುವಷ್ಟರಲ್ಲಿ ನದಿ ನೀರಿಗಿಂತಲೂ ಅಧಿಕ ಕಲುಷಿತಗೊಳ್ಳುವ ಸಾಧ್ಯತೆ ಇರುತ್ತದೆ. ಓವರ್ ಹೆಡ್ ಟ್ಯಾಂಕ್‌ನ್ನು ನಿಯಮಿತವಾಗಿ ಸ್ವಚ್ಛಗೊಳಿಸದಿದ್ದರೆ, ಅಪಾಯಕಾರಿ ಸೂಕ್ಷ್ಮಾಣುಜೀವಿಗಳು ನೀರಿನಲ್ಲಿ ಸೇರುತ್ತವೆ. ಒಳಚರಂಡಿ ನೀರಿನ ಪೈಪ್‌ಗಳ ಜೊತೆಗೆ ನೀರಿನ ಪೈಪ್‌ಗಳೂ ಸೇರುವುದರಿಂದ ಕುಡಿಯುವ ನೀರಿನ ಜೊತೆ ಒಳಚರಂಡಿ ನೀರೂ ಸೇರಿಕೊಳ್ಳುತ್ತದೆ.

ಕೊಳವೆಬಾವಿಯ ನೀರಿನ ಮಿಶ್ರಣ

ಮೈಸೂರು ಸೇರಿ ಬಹುತೇಕ ನಗರಗಳಲ್ಲಿ ಓವರ್‌ಹೆಡ್ ಟ್ಯಾಂಕ್‌ನಲ್ಲಿ ಲಭ್ಯವಿರುವ ನೀರಿನ ಜೊತೆ ಕೊಳವೆ ಬಾವಿ ನೀರನ್ನು ನೇರವಾಗಿ ಸೇರಿಸಲಾಗುತ್ತಿದೆ. ಶುದ್ಧೀಕರಣ ಆಗಿರದ ಕೊಳವೆಬಾವಿಯ ನೀರಿನಲ್ಲಿ ಅಪಾಯಕಾರಿ ಸೂಕ್ಷ್ಮಾಣುಜೀವಿ, ಅನಗತ್ಯ ಲವಣಗಳು ಇರುತ್ತವೆ.

ಬಹುತೇಕ ಕಡೆ ಕೊಳವೆಬಾವಿಗಳ ನೀರು ಸಹ ಕುಡಿಯಲು ಯೋಗ್ಯವಾಗಿಲ್ಲ. ಕೊಳವೆಬಾವಿಯ ನೀರು, ಶುದ್ಧೀಕರಣಗೊಂಡ ನೀರಿನ ಜೊತೆ ಮಿಶ್ರಣಗೊಂಡು ಮನೆಗೆ ತಲುಪುವಷ್ಟರಲ್ಲಿ ಪುನಃ ಕಲುಷಿತಗೊಳ್ಳುತ್ತದೆ.

ಶುದ್ಧ ನೀರು ಎಂಬುದೇ ಮರೀಚಿಕೆ

ಮನೆ ಮನೆಗೆ ಕಲುಷಿತ ನೀರೇ ಪೂರೈಕೆ

ರಾಮನಗರ: ರಾಜಧಾನಿಯ ಮಗ್ಗುಲಲ್ಲೇ ಇರುವ ರಾಮನಗರದ 10 ವಾರ್ಡ್‌ಗಳಿಗೆ ಇಂದಿಗೂ ಅರ್ಕಾವತಿ ನದಿ ನೀರನ್ನು ನೇರವಾಗಿ ಪೂರೈಸಲಾಗುತ್ತಿದೆ. ಈ ನೀರು ಕುಡಿಯುವುದಿರಲಿ, ದಿನಬಳಕೆಗೂ ಯೋಗ್ಯವಲ್ಲ ಎಂದು ಪ್ರಯೋಗಾಲಯಗಳು ವರದಿ ನೀಡಿವೆ. ಆದರೂ, 'ನಿತ್ಯ ನೀರು ಸಿಕ್ಕರೆ ಸಾಕು' ಎನ್ನುವ ಪರಿಸ್ಥಿತಿಯಲ್ಲಿ ಜನರಿದ್ದಾರೆ.

'ಜನರಿಗೆ ನೀರು ಪೂರೈಕೆ ಮಾಡಿ, ಕುಡಿಯಲು ಬಳಸಬೇಡಿ ಎಂದು ರಾಮನಗರದಲ್ಲಿ ನಗರಸಭೆಯವರೇ ಪ್ರಚಾರ ಮಾಡುತ್ತಾರೆ. ಕಲುಷಿತಗೊಂಡ ನದಿ ನೀರನ್ನು ಕನಿಷ್ಠ ಶುದ್ಧೀಕರಣ ಮಾಡುವ ಗೋಜಿಗೂ ಹೋಗಿಲ್ಲ. ಜನ ಒಂದು ಲೀಟರ್ ನೀರಿಗೂ ಕ್ಯಾನ್ ಹಿಡಿದು ಶುದ್ಧ ಘಟಕಗಳಿಗೆ ಅಲೆಯುವ ಪರಿಸ್ಥಿತಿ ಇದೆ' ಎಂದು ರಾಮನಗರದ ನಿವಾಸಿ ಕಿರಣ್ ಅವರು ವಾಸ್ತವಕ್ಕೆ ಕನ್ನಡಿ ಹಿಡಿಯುತ್ತಾರೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ಪಟ್ಟಣದ ಪರಿಸ್ಥಿತಿ ಇದಕ್ಕಿಂತ ಭಿನ್ನವೇನಿಲ್ಲ. ಕೆ.ಸಿ. (ಕೋರಮಂಗಲ– ಚಲ್ಲಘಟ್ಟ) ವ್ಯಾಲಿ ಮೂಲಕ ಚಿತ್ರಾವತಿ ನದಿಗೆ ಸೇರುವ ಕೊಳಕು ನೀರೇ ಇಲ್ಲಿ ಮನೆಗಳಿಗೆ ಪೂರೈಕೆ ಆಗುತ್ತಿದೆ. ಈ ರಾಡಿ (ಕದಡಿದ) ನೀರನ್ನೇ ಇಲ್ಲಿನ 23 ವಾರ್ಡುಗಳಿಗೆ ಸರಬರಾಜು ಮಾಡಲಾಗುತ್ತಿದೆ.

ನಗರ ಸ್ಥಳೀಯ ಸಂಸ್ಥೆಗಳು ನೀರಿನ ಗುಣಮಟ್ಟ ಪರಿಶೀಲಿಸುವ ಗೋಜಿಗೇ ಹೋಗುವುದಿಲ್ಲ. ಬಯಲುಸೀಮೆಯ ಕೆಲ ಪಟ್ಟಣಗಳಲ್ಲಿ ಶೇ 60ರಿಂದ 70 ಪ್ರಮಾಣದ ಫ್ಲೋರೈಡ್‌ಯುಕ್ತ ನೀರು ಸರಬರಾಜು ಆಗುತ್ತಿದೆ. ಇದರಿಂದ ಸಾಮಾನ್ಯ ಅನಾರೋಗ್ಯದ ಜೊತೆಗೆ ಫ್ಲೋರೋಸಿಸ್‌ನಂತಹ ಕಾಯಿಲೆಗಳೂ ಜನರಿಗೆ ಕಾಡುತ್ತಿದೆ.

ಕಲಬುರಗಿ ತಾಲ್ಲೂಕಿನ ಹೊನ್ನಕಿರಣಗಿ ಗ್ರಾಮದಲ್ಲಿ ಫ್ಲೋರೈಡ್ ಯುಕ್ತ ನೀರನ್ನು ಕುಡಿದು ಹಲವರು ಅಂಗವಿಕಲರಾಗಿದ್ದಾರೆ. ಈ ಬಗ್ಗೆ ಆರೋಗ್ಯ ಇಲಾಖೆ ತಪಾಸಣೆ ನಡೆಸಿ ವರದಿ ನೀಡಿದೆ. ಆದರೂ ಪರಿಸ್ಥಿತಿ ಈಗಲೂ ಅಷ್ಟೇನೂ ಸುಧಾರಿಸಿಲ್ಲ.

ರಾಜ್ಯದ ವಿವಿಧೆಡೆ ಶುದ್ಧ ನೀರಿನ ಘಟಕಗಳಿದ್ದರೂ ಅವುಗಳ ಸಮರ್ಪಕ ನಿರ್ವಹಣೆಯಾಗುತ್ತಿಲ್ಲ. ಅಲ್ಲಿ ಸಿಗುವ ನೀರಿನ ಶುದ್ಧತೆ ಪ್ರಮಾಣವನ್ನೂ ಅಳೆಯಲಾಗುತ್ತಿಲ್ಲ. ಕಾಲಕಾಲಕ್ಕೆ ಫಿಲ್ಟರ್‌ಗಳ ಬದಲಾವಣೆ ಆಗುತ್ತಿಲ್ಲ. ಪರಿಸ್ಥಿತಿ ಸುಧಾರಿಸುತ್ತಿಲ್ಲ.

ನೀರಿನ ಗುಣಮಟ್ಟ ತಪಾಸಣೆ ಹೇಗೆ?

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು (ಬಿಡಬ್ಲ್ಯೂಎಸ್‌ಎಸ್‌ಬಿ) ನೀರಿನ ಗುಣಮಟ್ಟ ಪರಿಶೀಲನೆಗೆ ಹಲವು ಮಾನದಂಡ ಅನುಸರಿಸುತ್ತಿದೆ. ತೊರೆಕಾಡನಹಳ್ಳಿಯಿಂದ ಬೆಂಗಳೂರಿನ ಮನೆಗಳಿಗೆ ತಲುಪುವವರೆಗೆ ನೀರನ್ನು ಹಲವು ಬಾರಿ ಪರೀಕ್ಷಿಸಲಾಗುತ್ತದೆ.

'ಶುದ್ಧ ನೀರಿನ ಪಿ.ಎಚ್. ಗುಣಮಟ್ಟ 6.5 ರಿಂದ 7.5ರ ಒಳಗೆ ಇರಬೇಕು ಮತ್ತು ಬ್ಯಾಕ್ಟೀರಿಯಾಗಳಿಂದ ಮುಕ್ತವಾಗಿರಬೇಕು. ಕ್ಲೋರೈಡ್, ಫ್ಲೋರೈಡ್, ಕಬ್ಬಿಣ ಮೊದಲಾದ ರಾಸಾಯನಿಕಗಳು ಸುರಕ್ಷಿತ ಪ್ರಮಾಣದಲ್ಲಿ ಇರಬೇಕು' ಎಂಬ ನಿಯಮ ಇದೆ.

'ನದಿ ಮೂಲದಿಂದ ಮನೆಮನೆಗೆ ನೀರು ಪೂರೈಸುವ ಮುನ್ನ ಭಾರತೀಯ ಮಾನದಂಡಗಳ ಮಂಡಳಿಯ (ಬಿಐಎಸ್) ಮಾನದಂಡಗಳ ಪ್ರಕಾರ, 68 ಬಗೆಯ ಮಾಪನ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ. ಇದರಲ್ಲಿ ಶೇ 95ರಷ್ಟು ಪರೀಕ್ಷೆಯಲ್ಲಿ ಪ್ರಮಾಣೀಕರಿಸಿದರೆ ಮಾತ್ರ ಅದು ಕುಡಿಯಲು ಯೋಗ್ಯ. ಸದ್ಯ ಬಿಡಬ್ಲ್ಯುಎಸ್‌ಎಸ್‌ಬಿ ವ್ಯಾಪ್ತಿಯಲ್ಲಿ ಇಂತಹ ಗುಣಮಟ್ಟ ಪರೀಕ್ಷೆ ನಡೆಯುತ್ತಿದೆ' ಎಂದು ಬಿಡಬ್ಲ್ಯುಎಸ್‌ಎಸ್‌ಬಿ ನಿವೃತ್ತ ಮುಖ್ಯ ಎಂಜಿನಿಯರ್ ತಿಪ್ಪೇಸ್ವಾಮಿ ತಿಳಿಸಿದ್ದಾರೆ.

'ಉಳಿದ ಜಿಲ್ಲೆಗಳಲ್ಲಿ ಈ ಪರಿಸ್ಥಿತಿ ಇಲ್ಲ. ನೀರಿನ ಶುದ್ಧತೆ ಕಾಪಾಡುವುದು ಜಲಮಂಡಳಿ ಜೊತೆಗೆ ನಗರ ಸ್ಥಳೀಯ ಸಂಸ್ಥೆಗಳು, ಮಾಲಿನ್ಯ ನಿಯಂತ್ರಣ ಮಂಡಳಿ ಕರ್ತವ್ಯ' ಎಂದೂ ಅವರು ತಿಳಿಸಿದ್ದಾರೆ.

'ಅಂಗವೈಕಲ್ಯ ಸಮಸ್ಯೆ'

'ಫ್ಲೋರೈಡ್, ಕ್ಯಾಲ್ಸಿಯಂ ಹೆಚ್ಚಿನ ಪ್ರಮಾಣದಲ್ಲಿರುವ ನೀರು ಕುಡಿದು ಬಹಳಷ್ಟು ಜನರು ಅಂಗವೈಕಲ್ಯಕ್ಕೆ ಒಳಗಾಗುತ್ತಿದ್ದಾರೆ. ಕಾಲುಗಳು ಡೊಂಕು, ಮೂಳೆಗಳು ಪೊಳ್ಳು ಮತ್ತು ಕೂದಲು ಉದುರುವ ಪ್ರಮಾಣ ಹೆಚ್ಚಾಗುತ್ತದೆ. ಕೀಲುನೋವು, ಕಿಡ್ನಿಯಲ್ಲಿ ಹರಳು, ಗರ್ಭಪಾತ ಮುಂತಾದ ಸಮಸ್ಯೆಗಳು ಉಂಟಾಗುತ್ತದೆ' ಎಂದು ಬಾಗಲಕೋಟೆ ಜಿಲ್ಲಾ ಆಸ್ಪತ್ರೆಯ ಶಸ್ತ್ರಚಿಕಿತ್ಸಕ ಡಾ. ಪ್ರಕಾಶ ಬಿರಾದಾರ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ತ್ಯಾಜ್ಯದಿಂದ ಮುಕ್ತಿ ಕಾಣದ ನದಿ, ಕೆರೆಗಳು

ಕಾರ್ಖಾನೆ, ಚರಂಡಿ ನೀರು ಸೇರಿ ಪರಿಸರ ಇನ್ನಷ್ಟು ಗಲೀಜು

• ಬಸವರಾಜ ಹವಾಲ್ದಾರ

ಬಾಗಲಕೋಟೆ: ರಾಜ್ಯದ ಬಹುತೇಕ ನದಿಗಳು ಕುಡಿಯುವ ನೀರಿನ ಜಲಮೂಲಗಳಾಗಿವೆ. ಆದರೆ ಚರಂಡಿ ನೀರು, ಕಾರ್ಖಾನೆಗಳ ತ್ಯಾಜ್ಯ ನೀರು, ಪ್ಲಾಸ್ಟಿಕ್, ಹೂವಿನ ಹಾರ ಸೇರಿ ವಿವಿಧ ತ್ಯಾಜ್ಯಗಳು ನದಿಯ ಒಡಲನ್ನು ಸೇರುತ್ತಿವೆ.

ಮಾಂಜರಿ, ಯಡೂರ, ಇಂಗಳಿ, ಬಾಗಲಕೋಟೆ ಸೇರಿದಂತೆ ನದಿ ದಂಡೆಯ ಬಹುತೇಕ ಗ್ರಾಮ, ಪಟ್ಟಣಗಳ ಚರಂಡಿ ನೀರು ಕೃಷ್ಣಾ ನದಿ ಒಡಲನ್ನು ಸೇರುತ್ತಿದೆ. ಚರಂಡಿ ನೀರನ್ನು ತಡೆಯುವ ಕೆಲಸ ಪರಿಣಾಮಕಾರಿಯಾಗಿ ಆಗುತ್ತಿಲ್ಲ.

ಬಾಗಲಕೋಟೆಯಲ್ಲಿ ಕೃಷ್ಣಾ ನದಿಗೆ ಸೇರುತ್ತಿರುವ ಚರಂಡಿ ನೀರು

ಕೃಷ್ಣಾ ನದಿಯಷ್ಟೇ ಅಲ್ಲ, ಮಲಪ್ರಭಾ, ಘಟಪ್ರಭಾ, ಕಾವೇರಿ, ಭೀಮಾ, ಕಾವೇರಿ, ಬೆಣ್ಣೆತೊರೆ, ಕಾಮಿನಿ ಸೇರಿದಂತೆ ಬಹುತೇಕ ನದಿಗಳ ಸ್ಥಿತಿಯಲ್ಲಿ ಹೆಚ್ಚೇನೂ ವ್ಯತ್ಯಾಸವಿಲ್ಲ. ನದಿ ದಡದಲ್ಲಿ ನಡೆಯುವ ಧಾರ್ಮಿಕ ಕಾರ್ಯಗಳಿಂದಲೂ ತ್ಯಾಜ್ಯ ನೀರಿನಲ್ಲಿ ಸೇರುತ್ತಿದೆ.

ಹುಬ್ಬಳ್ಳಿಯ ಉಣಕಲ್, ತೋಳನಕೆರೆ, ಬೆಳಗಾವಿಯ ಕೋಟೆ ಕೆರೆ ಸೇರಿದಂತೆ ನಗರ ವ್ಯಾಪ್ತಿಯಲ್ಲಿನ ಕೆರೆಗಳಿಗೂ ಚರಂಡಿ ನೀರು ಸೇರುತ್ತಲೇ ಇದೆ. ರಾಜ್ಯದ ನಗರ ಮತ್ತು ಗ್ರಾಮೀಣ ಪ್ರದೇಶದ ಬಹುತೇಕ ಕೆರೆಗಳು ಇದೇ ರೀತಿ ಮಲಿನಗೊಳ್ಳುತ್ತಿವೆ.

ಪಡುಬಿದ್ರಿ ಸಮೀಪದ ಕಾಮಿನಿ ನದಿಯ ನೀರು ಕಲುಷಿತಗೊಂಡು ಲಕ್ಷಾಂತರ ರೂಪಾಯಿ ಮೌಲ್ಯದ ಮೀನುಗಳು ಸತ್ತವು. ನದಿಯ ನೀರು ಕಪ್ಪು ಬಣ್ಣಕ್ಕೆ ತಿರುಗಿತು. ಎಚ್.ಡಿ.ಕೋಟೆ ಪಟ್ಟಣದ ಕಸಾಯಿಖಾನೆ ತ್ಯಾಜ್ಯವನ್ನು ಹೆಬ್ಬಾಳದ ಜಲಾಶಯಕ್ಕೆ ಸುರಿಯಲಾಗುತ್ತದೆ.

ಬಹುಗ್ರಾಮ ಕುಡಿಯುವ ನೀರು ಯೋಜನೆಯಡಿ ರಾಜ್ಯದ ಬಹುತೇಕ ಗ್ರಾಮಗಳಿಗೆ ನದಿ ನೀರನ್ನು ಪೂರೈಸಲಾಗುತ್ತದೆ. ಶುದ್ಧ ಕುಡಿಯುವ ನೀರಿನ ಘಟಕಗಳಿವೆ. ಆದರೆ, ನಿರ್ವಹಣೆಯ ಕೊರತೆಯಿಂದ ಅವು ಪಾಳು ಬಿದ್ದಿವೆ. ಕೊಳವೆಬಾವಿಗಳನ್ನು ಕೊರೆಯಲಾಗುತ್ತಿದೆ. ಆದರೆ, ಶುದ್ಧ ನೀರು ಸಿಗುವುದೆಂಬ ಖಾತ್ರಿ ಇಲ್ಲ.

ಜೀವಕ್ಕೆ ಎರವಾಗುತ್ತಿದೆ ಜೀವಜಲ

ಒಂದನೇ ಪುಟದಿಂದ

ಬಹುತೇಕ ಕಡೆ ನೀರು ಶುದ್ಧೀಕರಣ ಘಟಕಗಳು ಸುಸ್ಥಿತಿಯಲ್ಲಿಲ್ಲ. ಹಳೆಯ ಕಾಲದ ಯಂತ್ರಗಳೇ ಕಾರ್ಯನಿರ್ವಹಿಸುತ್ತಿವೆ. ಅದೂ ಅಸಮರ್ಪಕವಾಗಿ. ಹೊಸ ಯಂತ್ರಗಳ ಅಳವಡಿಕೆಯಾಗಿಲ್ಲ ಎಂಬ ಆರೋಪ ಒಂದೆಡೆ ಕೇಳಿಬಂದರೆ, ಮತ್ತೊಂದೆಡೆ ಸುಧಾರಣೆಗೆಂದು ಅನುದಾನ ನೀಡಿದರೂ ಅದರ ಸದ್ಬಳಕೆ ಆಗುತ್ತಿಲ್ಲ ಎನ್ನುವ ದೂರುಗಳಿವೆ. ಕುಡಿಯುವ ನೀರು ಸೇರಿದಂತೆ ವಿವಿಧ ಯೋಜನೆಗಳಿಗೆ ಸರ್ಕಾರವು ರಾಯಚೂರು ನಗರಸಭೆಗೆ 2020 ರಿಂದ 2023ರ ವರೆಗಿನ ಅವಧಿಯಲ್ಲಿ ₹ 23.51 ಕೋಟಿ ಅನುದಾನ ನೀಡಿದೆ. ಆದರೆ, ನಗರಸಭೆ ಅಧಿಕಾರಿಗಳು ಅನುದಾನ ಬಳಕೆ ಮಾಡುವುದಿರಲಿ, ಅದಕ್ಕೆ ಪೂರಕವಾಗಿ ಕ್ರಿಯಾಯೋಜನೆಯನ್ನೂ ಸಿದ್ಧಪಡಿಸಿಲ್ಲ ಎನ್ನುವುದೇ ದುರಂತ.

ರಾಯಚೂರಿನಲ್ಲಿ ಮೃತಪಟ್ಟ ಏಳು ನತದೃಷ್ಟರ ಪೈಕಿ ಮೂವರ ಕುಟುಂಬಕ್ಕೆ ನಗರಸಭೆಯಿಂದ ತಲಾ ₹ 10 ಲಕ್ಷ ಪರಿಹಾರ ಧನ ಕೈಸೇರಿದೆ. ರಾಜ್ಯ ಸರ್ಕಾರ ಘೋಷಿಸಿದ ₹ 5 ಲಕ್ಷ ಇನ್ನೂ ಅವರಿಗೆ ದೊರಕಿಲ್ಲ. ಉಳಿದ ನಾಲ್ವರಿಗೆ ಯಾವುದೇ ಪರಿಹಾರ ಬಂದಿಲ್ಲ. 'ಎಷ್ಟು ಲಕ್ಷ ಪರಿಹಾರ ಕೊಟ್ಟರೇನು, ಅಗಲಿದವರು ಮತ್ತೆ ಬದುಕಿ ಬರುತ್ತಾರೆಯೇ' ಎಂದು ಕುಟುಂಬ ಸದಸ್ಯರು ಕಣ್ಣೀರಾಗುತ್ತಾರೆ.

'ಈಗಲಾದರೂ ಸಾವಿನ ಸರಣಿ ನಿಲ್ಲಿಸಿ, ಜನರು ಆರೋಗ್ಯದಿಂದ ಬದುಕಲು ಶುದ್ಧ ನೀರು ಪೂರೈಸಿ' ಎಂದು ರಾಯಚೂರಿನ ನಿವಾಸಿಗಳು ಜಿಲ್ಲಾಡಳಿತಕ್ಕೆ ಮೊರೆ ಇಟ್ಟಿದ್ದಾರೆ.

'ಕುದಿಸಿ ಆರಿಸಿದ ನೀರಿನ ಬಳಕೆ ಸೂಕ್ತ'

'ಟ್ಯಾಂಕ್ ಶುಚಿಗೊಳಿಸುವುದರ ಜೊತೆಗೆ ಕ್ಲೋರಿನೇಷನ್ ಮತ್ತು ಬ್ಲೀಚಿಂಗ್ ಪುಡಿ ಮಿಶ್ರಣ ಮಾಡುವ ಪ್ರಕ್ರಿಯೆ ಕೈಗೊಳ್ಳಲಾಗಿದ್ದು, ಪ್ರತಿದಿನವೂ ನೀರನ್ನು ಪರೀಕ್ಷಿಸಲಾಗುತ್ತಿದೆ. ಶುದ್ಧ ನೀರು ಪೂರೈಕೆಯಾಗುತ್ತಿದೆ. ಜನರು ಆತಂಕಪಡಬೇಕಿಲ್ಲ' ಎಂದು ರಾಯಚೂರು ಜಿಲ್ಲಾಧಿಕಾರಿ ಚಂದ್ರಶೇಖರ ನಾಯಕ ತಿಳಿಸಿದ್ದಾರೆ.

ಕಲುಷಿತ ನೀರು ಪೂರೈಕೆಯಾಗುತ್ತಿದ್ದ ವೇಳೆ 40ಕ್ಕೂ ಹೆಚ್ಚು ವಾಂತಿ ಮತ್ತು ಭೇದಿ ಪ್ರಕರಣಗಳು ಪತ್ತೆಯಾಗಿದ್ದವು. ಈಗ ಅದರ ಪ್ರಮಾಣ 8ರಿಂದ 10ಕ್ಕೆ ಇಳಿದಿದ್ದು, ಪರಿಸ್ಥಿತಿ ನಿಯಂತ್ರಣಕ್ಕೆ ಬರುವ ಲಕ್ಷಣಗಳು ಕಾಣಿಸಿವೆ.

'ಸ್ಥಾವರದಲ್ಲಿ ನೈರ್ಮಲ್ಯ ಕಾಪಾಡಿ, ಮನೆಗಳಿಗೆ ನೀರು ಪೂರೈಸಿದರೂ ಜನರು ಕುದಿಸಿ ಆರಿಸಿದ ನೀರು ಕುಡಿಯುವುದು ಅಗತ್ಯ. ಮಳೆಗಾಲದಲ್ಲಿ ಮಾತ್ರವಲ್ಲ, ಬೇರೆ ಸಮಯದಲ್ಲೂ ಕಾಯ್ದಾರಿಸಿದ ನೀರು ಕುಡಿಯುವುದು ಉತ್ತಮವೆಂದು ವೈದ್ಯರೇ ಸಲಹೆ ನೀಡುತ್ತಾರೆ. ಅದನ್ನು ಪಾಲಿಸುವುದು ಸೂಕ್ತ' ಎಂದು ಅವರು ಹೇಳುತ್ತಾರೆ.

'ಸುಧಾರಿಸದಿದ್ದರೆ ಮತ್ತೆ ಹೋರಾಟ'

'ಶುದ್ಧ ನೀರಿಗಾಗಿ ವರ್ಷಗಳಿಂದ ಹೋರಾಟ ನಡೆಸಿದ್ದೇವೆ. ರಾಜ್ಯ ಮಾನವ ಹಕ್ಕುಗಳ ಆಯೋಗದ ಗಮನಕ್ಕೂ ತಂದಿದ್ದೇವೆ. ಆದರೆ ಸಾವು ನೋವುಗಳು ಸಂಭವಿಸಿದ ನಂತರವೇ ಜಿಲ್ಲಾಡಳಿತ ಎಚ್ಚೆತ್ತುಕೊಂಡಿದೆ' ಎಂದು ಹೈದರಾಬಾದ್ ಕರ್ನಾಟಕ ಹೋರಾಟ ಸಮಿತಿ ಮುಖಂಡ ಡಾ.ರಜಾಕ್ ಉಸ್ತಾದ್ ಅಸಮಾಧಾನ ವ್ಯಕ್ತಪಡಿಸುತ್ತಾರೆ.

'ಟ್ಯಾಂಕ್‌ಗಳನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸಿ, ಶುದ್ಧ ನೀರು ಪೂರೈಸಲು ಜಿಲ್ಲಾಡಳಿತ ಕ್ರಮ ಕೈಗೊಂಡಿದೆ. ಆದರೆ, ಪುನಃ ಕಲುಷಿತ ನೀರು ಪೂರೈಕೆಯಾದಲ್ಲಿ ಹೋರಾಟ ಮಾಡುವುದು ಅನಿವಾರ್ಯ' ಎನ್ನುತ್ತಾರೆ.

ಅಲ್ಲಲ್ಲಿ ಕಳಪೆ ಕಾಮಗಾರಿ ಆರೋಪ

ಜೆಜೆಎಂ ಯೋಜನೆ ಆರಂಭವಾದ ದಿನಗಳಿಂದಲೂ ಕಳಪೆ ಕಾಮಗಾರಿಯ ಆರೋಪ ಕೇಳಿಬರುತ್ತಲೇ ಇದೆ. ಗ್ರಾಮ ಪಂಚಾಯಿತಿಗಳು ಹಿಂದೆ ನಿರ್ಮಿಸಿದ್ದ ನೀರು ಪೂರೈಕೆ ಜಾಲವನ್ನೇ ಈ ಯೋಜನೆ ಹೆಸರಿಗೆ ಬಳಸಿಕೊಂಡಿರುವ ದೂರು ಕೆಲವೆಡೆ ಇದೆ. ಕೆಲ ಗ್ರಾಮಗಳಲ್ಲಿ ಈ ಯೋಜನೆಯಡಿ ಹಾಕಿದ ಕೊಳವೆ ಮಾರ್ಗಗಳ ಪೈಪ್‌ಗಳು ಕೆಲವೇ ದಿನಗಳಲ್ಲಿ ಒಡೆದುಹೋಗಿದ್ದು, ಕಳಪೆ ಪೈಪ್ ಬಳಸುತ್ತಿರುವ ಆರೋಪವಿದೆ. ಕೆಲವೆಡೆ ನಲ್ಲಿ ಸಂಪರ್ಕ ಮಾತ್ರ ಇದ್ದು, ನೀರು ಹರಿಯುವುದೇ ಇಲ್ಲ ಎಂಬ ದೂರುಗಳಿವೆ.

ಜೆಜೆಎಂ ಅನುಷ್ಠಾನ: ಗುರಿ ತಲುಪಲು ಏದುಸಿರು

ಒಂದನೇ ಪುಟದಿಂದ

ಸುಸ್ಥಿರ ಜಲ ಮೂಲಗಳಿಂದ ಬಹು ಗ್ರಾಮ ಕುಡಿಯುವ ನೀರಿನ ಯೋಜನೆ ಮೂಲಕ ನೀರು ಪೂರೈಕೆಗೆ ಮೂಲಸೌಕರ್ಯ ಅಭಿವೃದ್ಧಿಪಡಿಸಲು ₹ 30,790 ಕೋಟಿ ವ್ಯಯಿಸಲಾಗುತ್ತಿದೆ.

ಜೆಜೆಎಂ ಅಡಿ ರಾಜ್ಯದಲ್ಲಿ 1.01 ಕೋಟಿ ಮನೆಗಳಿಗೆ ನಲ್ಲಿ ಮೂಲಕ ನೀರು ಪೂರೈಸುವ ಗುರಿ ಇದೆ. ಈವರೆಗೆ 51.34 ಲಕ್ಷ ಮನೆಗಳಿಗೆ ನಲ್ಲಿ ಸಂಪರ್ಕ ಕಲ್ಪಿಸಲಾಗಿದೆ. ಶೇಕಡ 50.74ರಷ್ಟು ಪ್ರಗತಿಯಾಗಿದ್ದು, ಉಳಿದ ಸುಮಾರು 50 ಲಕ್ಷ ಮನೆಗಳಿಗೆ ಇನ್ನು ಒಂದೂವರೆ ವರ್ಷದೊಳಗೆ ಸಂಪರ್ಕ ಕಲ್ಪಿಸಬೇಕಿದೆ.

2020–21ರಲ್ಲಿ 3.43 ಲಕ್ಷ ಮನೆಗಳಿಗೆ ನಲ್ಲಿ ನೀರಿನ ಸಂಪರ್ಕ ಕಲ್ಪಿಸಿದ್ದರೆ, 2021–22ರಲ್ಲಿ 25.17 ಲಕ್ಷ ಮನೆಗಳಿಗೆ ಸಂಪರ್ಕ ಕಲ್ಪಿಸಲಾಗಿತ್ತು. 2021–22ರಲ್ಲಿ ಕೇಂದ್ರ ಸರ್ಕಾರ ₹ 10,000 ಕೋಟಿ ಅನುದಾನ ಒದಗಿಸಿತ್ತು. ಆದರೆ, ರಾಜ್ಯಕ್ಕೆ ಬಳಸಲು ಸಾಧ್ಯವಾಗಿದ್ದು ₹ 4,000 ಕೋಟಿ ಮಾತ್ರ.

'ಜೆಜೆಎಂ ಅನುಷ್ಠಾನದಲ್ಲಿ ನಿಗದಿತ ಗುರಿಗೆ ಹೋಲಿಸಿದರೆ ಶೇ 25ಕ್ಕಿಂತ ಕಡಿಮೆ ಸಾಧನೆ ಮಾಡಿದ ರಾಜ್ಯಗಳಲ್ಲಿ ಕರ್ನಾಟಕವೂ ಸೇರಿದೆ' ಎಂದು ಸಂಸತ್ತಿನ ಸ್ಥಾಯಿ ಸಮಿತಿಯ ವರದಿಯಲ್ಲೇ ಆಕ್ಷೇಪ ವ್ಯಕ್ತವಾಗಿತ್ತು.

ಆರಂಭದಲ್ಲೇ ತೊಡಕು: '2019ರಲ್ಲಿ ಯೋಜನೆ ಅನುಷ್ಠಾನ ಆರಂಭಿಸಿದಾಗಲೇ ತೊಡಕು ಎದುರಾಗಿದ್ದವು. ಜಲ ಮೂಲಗಳನ್ನು ಗುರುತಿಸುವುದು, ಗ್ರಾಮೀಣ ಪ್ರದೇಶಗಳಲ್ಲಿ ಕೊಳವೆ ಮಾರ್ಗದ ನಕ್ಷೆ ಮತ್ತು ಯೋಜನಾ ವರದಿ ಸಿದ್ಧಪಡಿಸುವುದು ವಿಳಂಬವಾಯಿತು. ಕೆಲವು ಪ್ರದೇಶಗಳಲ್ಲಿ ಭಾಗಶಃ ಯೋಜನಾ ವರದಿ ಸಿದ್ಧಪಡಿಸಿ ಸಲ್ಲಿಸಲಾಗಿತ್ತು. 2020ಲ್ಲಿ ಭೌತಿಕ ಅನುಷ್ಠಾನ ಆರಂಭವಾದ ಬಳಿಕವೇ ಲೋಪಗಳು ಸ್ಪಷ್ಟವಾಗಿ ಗೋಚರಿಸಿದವು' ಎನ್ನುತ್ತವೆ ಜೆಜೆಎಂ ಅನುಷ್ಠಾನ ಘಟಕದ ಮೂಲಗಳು.

ಜಲಜೀವನ ಮಿಷನ್ ಯೋಜನೆ	
ಯೋಜನೆ ವ್ಯಾಪ್ತಿಯಲ್ಲಿರುವ ಒಟ್ಟು ಮನೆಗಳು	1.01 ಕೋಟಿ
ನಲ್ಲಿ ಸಂಪರ್ಕ ಕಲ್ಪಿಸಿರುವ ಮನೆಗಳು	51.34 ಲಕ್ಷ
ಒಟ್ಟು ಯೋಜನಾ ವೆಚ್ಚ	₹ 41,800 ಕೋಟಿ
ನಲ್ಲಿ ಸಂಪರ್ಕ ಕಲ್ಪಿಸಲು	₹ 11,010 ಕೋಟಿ
ಜಲ ಮೂಲಗಳಿಂದ ನೀರು ತರಲು	₹ 30,790 ಕೋಟಿ

'ಈಗಲೂ ನಲ್ಲಿ ಸಂಪರ್ಕ ಕಲ್ಪಿಸುವ ಕೆಲಸ ಸ್ವಲ್ಪ ವೇಗವಾಗಿ ನಡೆದಿದೆ. ಆದರೆ, ಸುಸ್ಥಿರ ಜಲ ಮೂಲಗಳಿಂದ ನೀರು ತರುವುದಕ್ಕೆ ಪೂರಕ ಕಾಮಗಾರಿಗಳು ಹೆಚ್ಚು ವೇಗ ಪಡೆದಿಲ್ಲ. ಹೆಚ್ಚಿನ ಕಾಮಗಾರಿಗಳಿಗೆ ಟೆಂಡರ್ ಪ್ರಕ್ರಿಯೆ ಅಂತಿಮ ಹಂತ ತಲುಪಿದೆ. ಅವು ಪೂರ್ಣಗೊಂಡು ನೀರು ಪೂರೈಕೆ ಆರಂಭವಾಗಲು ದೀರ್ಘ ಕಾಲ ಬೇಕಾಗಬಹುದು' ಎನ್ನುತ್ತಾರೆ ಅಧಿಕಾರಿಗಳು.

ಸಮಾಧಾನಕರ ಸ್ಥಿತಿಗೆ ತಲುಪಿದ್ದೇವೆ: ಅತೀಕ್

'ಜೆಜೆಎಂ ಅಡಿಯಲ್ಲಿ ರಾಜ್ಯದ 28,630 ಹಳ್ಳಿಗಳಿಗೆ ನೀರು ಪೂರೈಸಬೇಕಿದೆ. ಆರಂಭದ ದಿನಗಳಲ್ಲಿ ಈ ಯೋಜನೆಯ ಪ್ರಗತಿ ಕುಂಠಿತವಾಗಿತ್ತು. ಈಗ ಸಮಾಧಾನಕರ ಸ್ಥಿತಿಗೆ ಬಂದು ತಲುಪಿದೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್ ಹೇಳಿದರು.

'ಏಳು ಜಿಲ್ಲೆಗಳಲ್ಲಿ ನೀರಿನ ಮೂಲದ ಕೊರತೆ ಇದೆ. ಅಲ್ಲಿ ಕಾಮಗಾರಿ ಸ್ವಲ್ಪ ವಿಳಂಬವಾಗಿದೆ. ಜೆಜೆಎಂ ಅನುಷ್ಠಾನ ಪೂರ್ಣಗೊಳಿಸಬೇಕಿರುವ ಗಡುವನ್ನು 2024ರವರೆಗೂ ವಿಸ್ತರಿಸಬೇಕೆಂಬ ರಾಜ್ಯ ಸರ್ಕಾರದ ಕೋರಿಕೆಯನ್ನು ಕೇಂದ್ರ ಸರ್ಕಾರ ಮಾನ್ಯ ಮಾಡಿದೆ' ಎಂದರು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಭಾನುವಾರ ಜುಲೈ 3, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಶುಕ್ಲ ಚತುರ್ಥಿ ಗಂ. 17-07 ನಕ್ಷತ್ರ: ಆಶ್ಲೇಷ ಗಂ. 06-30 ಯೋಗ: ವಜ್ರ ಗಂ. 12-06, ಕರಣ: ವಿಷ್ಟಿ ಗಂ. 17-07, ಮಿಥುನ ಮಾಸದ 18 ನೇ ದಿನ.
ರಾಹುಕಾಲ : ಸಾಯಂಕಾಲ 04:30 – 06:00
ಸೂರ್ಯೋದಯ : 06-12 ಸೂರ್ಯಾಸ್ತ : 06-58
ಮುಸ್ಲಿಂ ದಿನಾಂಕ : 03 ಜುಲ್‌ಹಿಜಾ
ಅದೃಷ್ಟ ಸಂಖ್ಯೆ : 2, 7

ಮೇಷ: ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಹೆಚ್ಚಿನ ತಯಾರಿ ನಡೆಸುವುದರಿಂದ ಮನೋಲ್ಲಾಸ ಪ್ರತಿಫಲ ಸಿಗುತ್ತದೆ. ಬರಬೇಕಾಗಿದ್ದ ಹಣಕ್ಕಾಗಿ ಹೆಚ್ಚು ಓಡಾಡ ಬೇಕಾಗುವುದು. ಉಷ್ಣವ್ಯಾಧಿ ಉಪಶಮನಕ್ಕೆ ಬೇಕಾದ ಔಷಧಿಯನ್ನು ಸ್ವೀಕರಿಸಿ.

ವೃಷಭ: ಸಂಸಾರದ ಕೆಲ ವಿಷಯಗಳ ಗೋಪ್ಯತೆಯನ್ನು ಕಾಪಾಡುವುದು ಒಳ್ಳೆಯದು. ನಿಮ್ಮಲ್ಲಿರುವ ಲೋಪ ದೋಷಗಳನ್ನು ತಿದ್ದಿ ಕೊಳ್ಳುವಂತೆ ಹಿರಿಯರಿಂದ ಸೂಚನೆ, ಅವರ ಅನುಭವದ ಮಾತು ಒದಗಿಬರುವುದು.

ಮಿಥುನ: ನಿಮ್ಮ ವಿರುದ್ಧ ರಾಜಕೀಯ ಪಿತೂರಿ ನಡೆಸುತ್ತಿರುವವರು ಯಾರು ಎಂಬುದು ತಿಳಿಯಲಿದೆ. ಷೇರು ವ್ಯವಹಾರಗಳ ಲಾಭಾಂಶ ಕಡಿಮೆ ಇರುವುದು. ಮಕ್ಕಳಿಂದ ಸಂತೋಷ, ಗೃಹ ಸೌಖ್ಯವಿರುವುದು.

ಕರ್ಕಾಟಕ: ಸಂಸ್ಥೆಯ ಅಭಿವೃದ್ಧಿಗೆ ನೀವು ತೆಗೆದುಕೊಳ್ಳಬೇಕಾದ ನಿರ್ಧಾರಕ್ಕಾಗಿ ಹೆಚ್ಚಿನ ಅಧ್ಯಯನ ನಡೆಸುವುದು ಉತ್ತಮ. ಸಾಮಾಜಿಕ ಕಾರ್ಯಗಳಲ್ಲಿ ಚಟುವಟಿಕೆಯಿಂದ, ಆಕರ್ಷಣಾ ರೀತಿಯಲ್ಲಿ ಭಾಗವಹಿಸುವಿರಿ.

ಸಿಂಹ: ಲೇಖಕರಿಗೆ ವಿಷಯ ಸಂಗ್ರಹಕ್ಕೆ ಬೇಕಾದ ವಾತಾವರಣ ಸಿಗುತ್ತದೆ. ಈ ದಿನ ಬರೆಯುವ ಲೇಖನಕ್ಕೆ ಸರಸ್ವತಿಯ ಅನುಗ್ರಹ ಇದ್ದಂತೆ ಅನುಭವವಾಗಲಿದೆ. ವಿದ್ಯುತ್ ಉಪಕರಣಗಳ ಬಳಕೆಯಲ್ಲಿ ಬಹಳ ಜಾಗರೂಕತೆ ಇರಲಿ.

ಕನ್ಯಾ: ಬರಬೇಕಾಗಿದ್ದ ಹಣ ವಸೂಲು ಮಾಡಿಕೊಳ್ಳಲು ನಿಷ್ಠುರವಾಗಿ ವರ್ತಿಸ ಬೇಕಾಗುವುದು. ಸೋದರರನ್ನು ಸರಿಹಾದಿಗೆ ತರುವಲ್ಲಿ ಶ್ರಮ ವಹಿಸುವಿರಿ. ಸಾಧು ಸಂತರ ಭೇಟಿಯಿಂದ ಮನಸ್ಸಿಗೆ ಸಮಾಧಾನ ಕಂಡುಕೊಳ್ಳಬಹುದು.

ತುಲಾ: ಮಗನ ಗೌರವದಿಂದ ಕೂಡಿದ ಸಂಪಾದನೆಯನ್ನು ನೋಡಿ ಹರ್ಷವಾಗುವುದು. ದೀರ್ಘ ಪ್ರಯಾಣ ಕೈಗೊಳ್ಳಬೇಕಾದ ಅನಿವಾರ್ಯತೆ. ನಿಮ್ಮಲ್ಲಿನ ನಾಯಕತ್ವದ ಗುಣ ಸಹೋದ್ಯೋಗಿಗಳ ಸಹಕಾರದಿಂದ ವೃದ್ಧಿ.

ವೃಶ್ಚಿಕ: ವಾಹನ ರಿಪೇರಿಗಾಗಿ ಸಣ್ಣ-ಪುಟ್ಟ ಖರ್ಚು ಸಂಭವಿಸಲಿದೆ. ಧಾನ್ಯ ಸಗಟು ಮಾರಾಟಗಾರರಿಗೆ ವಹಿವಾಟು ಜೋರಾಗಿ ನಡೆಯುವುದು. ಮನೆಯವರಿಂದ ಕೆಲ ವಿಷಯಗಳ ಬಗ್ಗೆ ಆಕ್ಷೇಪಣೆ ಎದುರಾಗಲಿದೆ.

ಧನು: ವ್ಯವಸ್ಥಿತವಾಗಿ ನಿಮ್ಮ ದಿನಚರಿ ರೂಪಿಸಿಕೊಂಡರೆ ಆರಂಭಿಸಿರುವ ಯೋಜನೆಗಳು ಪೂರ್ಣಗೊಳ್ಳಲಿವೆ. ಜಾಮೀನು ವಿಷಯಕ್ಕೆ ಸಂಬಂಧಿಸಿದಂತೆ ನೆರೆಯವರಲ್ಲಿ ಮಾತುಕತೆ ನಡೆಯಲಿವೆ, ಉಪಾಯದಿಂದ ಉತ್ತರಿಸಿ.

ಮಕರ: ದಾಂಪತ್ಯದಲ್ಲಿ ಹೊಂದಾಣಿಕೆಯ ಮನೋಭಾವದಿಂದ ಸಾಮರಸ್ಯ ವೃದ್ಧಿಯಾಗುವುದು. ಕಾನೂನಾತ್ಮಕವಾಗಿ ನಿಯಮ ಪಾಲಿಸುವುದರಿಂದ ವ್ಯವಹಾರದಲ್ಲಿ ಮುನ್ನಡೆ ಸಿಗುವುದು. ವಿದ್ಯಾರ್ಥಿಗಳಿಗೆ ಶ್ರಮ ಅವಶ್ಯಕವಾಗುತ್ತದೆ.

ಕುಂಭ: ಬಾಲ್ಯ ಸ್ನೇಹಿತನಿಗೆ ಮನೆಯಲ್ಲಿ ವಿಶೇಷ ಭೋಜನದ ವ್ಯವಸ್ಥೆ ಸಂತೋಷಪೂರ್ವಕವಾಗಿ ನಡೆಯುವುದು. ಮೂತ್ರಕೋಶದ ಅನಾರೋಗ್ಯ ಕಂಡುಬಂದಲ್ಲಿ ನಿರ್ಲಕ್ಷಿಸುವುದು, ಮನೆಮದ್ದು ಮಾಡುವುದು ಸರಿಯಲ್ಲ.

ಮೀನ: ಪಾಲುದಾರಿಕೆ ವ್ಯವಹಾರದಲ್ಲಿ ಚರ್ಚೆಗೆ ಆಸ್ಪದ ಬೇಡ. ಬಟ್ಟೆ ವ್ಯಾಪಾರಿಗಳಿಗೆ ಒಳ್ಳೆಯ ದಿನ. ಸಾಮಾಜಿಕ ಕೆಲಸಗಳಿಗಾಗಿ ಓಡಾಟ ಹೆಚ್ಚಳ. ಸಾಂಸಾರಿಕವಾಗಿ ತಪ್ಪುಗಳು ಪುನರಾವರ್ತನೆಯಾಗದಂತೆ ಎಚ್ಚರ ವಹಿಸಿ.

25 ವರ್ಷಗಳ ಹಿಂದೆ — ಗುರುವಾರ, 3-7-1997

• ರಾಜ್ಯ ಜನತಾದಳ ವಿಭಜನೆಯತ್ತ

ಬೆಂಗಳೂರು, ಜುಲೈ 2– ಜನತಾದಳದ ರಾಷ್ಟ್ರೀಯ ಅಧ್ಯಕ್ಷ ಸ್ಥಾನಕ್ಕೆ ನಾಳೆ ನಡೆಯಲಿರುವ ಚುನಾವಣೆಯನ್ನು ಬಹಿಷ್ಕರಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಎಚ್ಚರಿಕೆ ನೀಡಿದ್ದರೂ ಚುನಾವಣೆಯನ್ನು ಬಹಿಷ್ಕರಿಸಲು ಪಕ್ಷದ ಕೆಲವು ನಾಯಕರು ನಿರ್ಧರಿಸಿದ್ದರಿಂದ ರಾಜ್ಯದಲ್ಲೂ ಜನತಾದಳ ವಿಭಜನೆಯಾಗುವುದು ಖಚಿತವಾಗಿದೆ.

ಚುನಾವಣೆ ಬಹಿಷ್ಕರಿಸುವುದು ಪಕ್ಷದ ಶಿಸ್ತು, ಉಲ್ಲಂಘನೆ ಮತ್ತು ಪ್ರಜಾತಂತ್ರ ವಿರೋಧಿ ಕ್ರಮವೆಂದು ಪರಿಗಣಿಸಿ ಅಂಥವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಜೆ.ಎಚ್. ಪಟೇಲ್ ಅವರು ಎಚ್ಚರಿಸಿದರು.

50 ವರ್ಷಗಳ ಹಿಂದೆ — ಸೋಮವಾರ, 3-7-1972

• ಬಲಪ್ರಯೋಗ ಬಳಸದೆಯೇ ಎಲ್ಲ ಸಮಸ್ಯೆಗಳ ಇತ್ಯರ್ಥ: ಭಾರತ – ಪಾಕ್ ನಡುವೆ ಒಪ್ಪಂದ

ಸಿಮ್ಲಾ, ಜುಲೈ 2 – ತಮ್ಮ ಎಲ್ಲ ಸಮಸ್ಯೆಗಳನ್ನು ದ್ವಿಪಕ್ಷೀಯ ಮಾತುಕತೆ ಮೂಲಕ ಹಾಗೂ ಬಲಪ್ರಯೋಗ ಬಳಸದೇ ಇತ್ಯರ್ಥಪಡಿಸಿಕೊಳ್ಳುವುದಕ್ಕೆ ಭಾರತ ಮತ್ತು ಪಾಕಿಸ್ತಾನಗಳು ಇಂದು ಸಮ್ಮತಿಸಿದವು.

ಹಿಮಾಚಲ ಭವನದ ವಿಶಾಲ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಈ ಒಪ್ಪಂದಕ್ಕೆ ಪ್ರಧಾನಿ ಇಂದಿರಾ ಗಾಂಧಿ ಹಾಗೂ ಪಾಕಿಸ್ತಾನದ ಅಧ್ಯಕ್ಷ ಜುಲ್ಫಿಕರ್ ಅಲೀ ಭುಟ್ಟೊ ಅವರು ಇಂದು ರಾತ್ರಿ, 12:40 ಗಂಟೆಯಲ್ಲಿ ಸಹಿ ಹಾಕಿದರು.

ಪದಬಂಧ 5007 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಪ್ರತಿಯಲ್ಲಿರುವ ನಕಲು ಚಿತ್ರ (4)
3.ಒಳಗಿರುವ ಬೆಳಗು (4)
4.ಮಿಡಿ ಧರಿಸಿದವಳ ಸ್ಪಂದನ! (3)
5.ವರ ಪಡೆದುಕೊಂಡಿರುವ ಬೇಡ! (4)
7.ರಸ ಸ್ವಾದನೆಯನ್ನು ಬಲ್ಲವನು (3)
9.ಕಾನೂನು ಬಲ್ಲವನು ನೋಡುತ್ತಿರುವ ಕಾಡು (3)
10.ಬಟ್ಟೆ ಇಲ್ಲದೆ (3)
11.ಮಗನಿಗೆ ಇದು ತುಂಬಾ ಸಲೀಸು! (3)
13.ಮತದಲ್ಲಿರುವ ಉದ್ದೇಶ ಗೊತ್ತಾಯಿತೇ? (4)
15.ರುಮಾಲನ್ನು ಧರಿಸಿದವನು ನೀಡಿದ ಹೂವು (3)
16.ಮಾತುಕತೆಯಲ್ಲೇ ಏರಿದ ಅಮಲು! (4)
17.ಕಣದಲ್ಲಿ ಹಾಕಿರುವ ಲಗಾಮು! (4)

ಮೇಲಿಂದ ಕೆಳಕ್ಕೆ
1.ಹಿಂದೂ ಸಂವತ್ಸರದಲ್ಲಿ ಮೊದಲನೆಯದು (3)
2.ತೀರದ ಹತ್ತಿರ ತೋರಿಸಿದ ಅಜ್ಞಾನ! (3)
3.ಅಂತರಂಗದಲ್ಲಿ ತೋರಿರುವ ವ್ಯತ್ಯಾಸ! (3)
6.ಈ ರೀತಿ ಕೋಮಲವಾಗಿರು (5)
8.ಕಸ್ತೂರಿಯನ್ನು ನೀಡುವ ಕೊಂಬಿಲ್ಲದ ಜಿಂಕೆ (5)
12.ಮಾತೆಯು ಮತ್ತೆ ಮತ್ತೆ ತೋರುತ್ತಿರುವ ಪ್ರೀತಿ (3)
13.ಕರುವಿಗೆ ತೋರಿಸುತ್ತಿರುವ ದಯೆ (3)
14.ತಾರುಣ್ಯವನ್ನು ಹೊಂದಿದವನು (3)



5006ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಬಳಪ 3.ಬಸದಿ
5.ಲವಲವಿಕೆ 7.ರದ
9.ವಾರ 10.ಪಿಕ
12.ನರ 14.ತಲವಿನ್ಯಾಸ
16.ಹರಕೆ 17.ನಯನ

ಮೇಲಿಂದ ಕೆಳಕ್ಕೆ:
1.ಬಡಿವಾರ 2.ಪತ್ತಲ
3.ಬಯಕೆ 4.ದಿನಕರ
6.ಲಕ್ಷ್ಯ 8.ದಶಕ
9.ವಾಮನ 10.ಪಿತಾಮಹ
11.ಭವಿ 13.ರಸಾಯನ
14.ತಡಿಕೆ

ಸುಡೊಕು 5393

		6		4				9
5			6		9		4	2
	9	4		7		3		
7	8			2			5	3
			4	9	5			7
6		5		8			2	
		7					9	5
	5				7			
9				5	8	2		4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5392 ಸುಡೊಕು

2	3	9	8	5	7	1	6	4
8	6	4	1	3	2	7	5	9
5	1	7	4	9	6	2	8	3
7	9	8	2	4	5	6	3	1
4	5	1	6	8	3	9	2	7
3	2	6	9	7	1	5	4	8
6	7	2	3	1	4	8	9	5
9	4	5	7	6	8	3	1	2
1	8	3	5	2	9	4	7	6

ಹೊರಗೆ ಹೋಗುವಾಗ ಮುಖಗವಸು ಧರಿಸಿ
ಪರಸ್ಪರ ಅಂತರ ಕಾಯ್ದುಕೊಳ್ಳಿ

‘ಜನತಾ ಮಿತ್ರ’ ಕರಪತ್ರ ಬಿಡುಗಡೆ

ಜೆಡಿಎಸ್ ಅತಿದೊಡ್ಡ ಪಕ್ಷವಾಗಲಿದೆ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ವಿಧಾನಸಭಾ ಚುನಾವಣೆ ಕುರಿತು ಕಪೋಲಕಲ್ಪಿತ ಸಮೀಕ್ಷಾ ವರದಿಗಳು ಪ್ರಕಟವಾಗುತ್ತಿವೆ. ಜೆಡಿಎಸ್ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮುವುದು ಖಚಿತ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ಪಕ್ಷದ ಕಚೇರಿಯಲ್ಲಿ ಶನಿವಾರ ‘ಜನತಾ ಮಿತ್ರ’ ಕರಪತ್ರ ಬಿಡುಗಡೆ ಮಾಡಿದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕಾಂಗ್ರೆಸ್ ಪಕ್ಷ 130 ಸ್ಥಾನ ಗಳಿಸುತ್ತದೆ ಎಂಬ ವರದಿಯೇ ಸುಳ್ಳು. 65 ಸ್ಥಾನ ಗಳಿಸಲಿದೆ ಎಂಬ ಸಮೀಕ್ಷಾ ವರದಿಯನ್ನು ತಿರುಚಿ ಮಾಹಿತಿ ಹಂಚಲಾಗಿದೆ. ಬಿಜೆಪಿ, ಕಾಂಗ್ರೆಸ್‌ಗಿಂತ ನಮ್ಮ ಪಕ್ಷ ಹೆಚ್ಚು ಸ್ಥಾನ ಗಳಿಸಲಿದೆ’ ಎಂದರು.

2013ರಲ್ಲಿ ಬಿ.ಎಸ್. ಯಡಿಯೂರಪ್ಪ ಪ್ರತ್ಯೇಕ ಪಕ್ಷ ಕಟ್ಟಿದ್ದರಿಂದ ಕಾಂಗ್ರೆಸ್‌ಗೆ ಬಹುಮತ ಲಭಿಸಿತ್ತು. ಇಲ್ಲದಿದ್ದರೆ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗುತ್ತಿರಲಿಲ್ಲ. 2018ರ ಚುನಾವಣೆಯಲ್ಲಿ ಕಾಂಗ್ರೆಸ್ 78 ಸ್ಥಾನಕ್ಕೆ ಇಳಿಯಿತು. ಈ ಬಾರಿಯೂ ಆ ಪಕ್ಷ 70 ಸ್ಥಾನ ದಾಟುವುದಿಲ್ಲ ಎಂದು ಹೇಳಿದರು.

‘ಸಿದ್ದರಾಮಯ್ಯ ಅವರ ಜನ್ಮದಿನದ ಪ್ರಯುಕ್ತ ನಡೆಸುವ ಕಾರ್ಯಕ್ರಮಕ್ಕೆ ಅಡ್ಡಿಪಡಿಸಲು ಯತ್ನಿಸುತ್ತಿದ್ದೇನೆ ಎಂಬುದು ಸತ್ಯಕ್ಕೆ ದೂರವಾದುದು. ಆ ಕಾರ್ಯಕ್ರಮಕ್ಕೂ ಜೆಡಿಎಸ್‌ಗೂ ಸಂಬಂಧವಿಲ್ಲ. ಸಿದ್ದರಾಮಯ್ಯ ವಿರುದ್ಧ ನನಗೆ ದ್ವೇಷವಿಲ್ಲ. ನಾನೇಕೆ ವಿರೋಧಿಸಲಿ’ ಎಂದು ಪ್ರಶ್ನಿಸಿದರು.

ಹಿಂದಿನ ಸರ್ಕಾರಗಳ ವೈಫಲ್ಯದಿಂದ ಈಗ ಬೆಂಗಳೂರಿಗೆ ಸಮಸ್ಯೆಯಾಗಿದೆ ಎಂದು ಬಸವರಾಜ ಬೊಮ್ಮಾಯಿ ಹೇಳುತ್ತಿದ್ದಾರೆ.ಬಿಜೆಪಿ, ಕಾಂಗ್ರೆಸ್‌ನ ದುರಾಡಳಿತವೇ ಬೆಂಗಳೂರಿನ ಸಮಸ್ಯೆಗೆ ಕಾರಣ ಎಂದು ದೂರಿದರು.

ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ.ಇಬ್ರಾಹಿಂ, ಮುಖಂಡರಾದ ಸುರೇಶ್ ಬಾಬು, ಎಚ್‌.ಎಂ.ರಮೇಶ್ ಗೌಡ ಹಾಜರಿದ್ದರು.

‘ಸಿದ್ದರಾಮಯ್ಯ ಆಪ್ತವಲಯ ಚರ್ಚೆ ಬಹಿರಂಗ’

‘ದೇವೇಗೌಡರ ಆಯಸ್ಸಿನ ಕುರಿತು ಸಿದ್ದರಾಮಯ್ಯ ಆಪ್ತ ವಲಯದಲ್ಲಿ ಚರ್ಚೆ ನಡೆದಿರುತ್ತದೆ. ‘ಅವರ ಕಾಲ ಮುಗಿಯಿತು. ಇನ್ನೆಷ್ಟು ದಿನ ಇರುತ್ತದೆ’ ಎಂದು ಮಾತನಾಡಿಕೊಂಡಿರುತ್ತಾರೆ. ಅದನ್ನೇ ಕೆ.ಎನ್. ರಾಜಣ್ಣ ಬಾಯಿತಪ್ಪಿ ಬಹಿರಂಗವಾಗಿ ಹೇಳಿದ್ದಾರೆ’ ಎಂದು ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ದೇವೇಗೌಡರು ರಾಜ್ಯಕ್ಕಾಗಿ ಏನು ಕೆಲಸ ಮಾಡಿದ್ದಾರೆ? ಪರಿಶಿಷ್ಟ ಪಂಗಡಗಳ ಜನರಿಗೆ ಯಾವ ಕೊಡುಗೆ ನೀಡಿದ್ದಾರೆ ಎಂಬುದು ಜನರಿಗೆ ಗೊತ್ತಿದೆ ಎಂದರು.

‘ಪಿ.ಯು ಕಾಲೇಜು: ಎನ್‌ಇಪಿ ಪಠ್ಯ ಡಿಸೆಂಬರ್ ಒಳಗೆ ಸಿದ್ಧ’

ಪ್ರಜಾವಾಣಿ ವಾರ್ತೆ

ಮಂಗಳೂರು: ‘ಕೇಂದ್ರ ಸರ್ಕಾರವು ಜಾರಿಗೆ ತಂದಿರುವ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ವಯ (ಎನ್‌ಇಪಿ) ರಾಜ್ಯದಲ್ಲಿ ಪದವಿ ಪೂರ್ವ ತರಗತಿಗಳಲ್ಲಿ ಅಳವಡಿಸಿಕೊಳ್ಳುವ ಪಠ್ಯಕ್ರಮವನ್ನು ಇದೇ ವರ್ಷದ ಡಿಸೆಂಬರ್ ಒಳಗೆ ಅಂತಿಮಗೊಳಿಸಿ, ನಂತರ ಕಾರ್ಯರೂಪಕ್ಕೆ ತರಲಿದ್ದೇವೆ’ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ತಿಳಿಸಿದರು.

ಜಿಲ್ಲಾ ಪಿ.ಯು ಕಾಲೇಜುಗಳ ಪ್ರಾಂಶುಪಾಲರಿಗಾಗಿ ಶನಿವಾರ ಇಲ್ಲಿ ಏರ್ಪಡಿಸಿದ್ದ ‘ರಾಷ್ಟ್ರೀಯ ಶಿಕ್ಷಣ ನೀತಿ-2020’ ಕಾರ್ಯಾಗಾರದ ಸಮಾರೋಪದಲ್ಲಿ ಅವರು ಮಾತನಾಡಿದರು.

‘ಎನ್‌ಇಪಿ ಅಡಿ ಒಂದನೇ ತರಗತಿಯಿಂದ 12ನೇ ತರಗತಿವರೆಗೆ ರೂಪಿಸಲಾದ ಪಠ್ಯಕ್ರಮವನ್ನು ಬೇರೆ ರಾಜ್ಯಗಳಲ್ಲಿ ಅಳವಡಿಸಲಾಗಿದೆ. ಆದರೆ ಕರ್ನಾಟಕದಲ್ಲಿ ಎನ್‌ಇಪಿಯನ್ನು ಹಂತ ಹಂತವಾಗಿ ಅನುಷ್ಠಾನಕ್ಕೆ ತರಲಾಗುತ್ತಿದೆ’ ಎಂದರು.

‘ಹೊಸ ಶಿಕ್ಷಣ ನೀತಿ ಜಾರಿಗೆ ಸಂಬಂಧಿಸಿದ ಪಿ.ಯು ಉಪನ್ಯಾಸಕರಿಂದಲೂ ಸಲಹೆಗಳನ್ನು ಕೇಳಲಾಗಿತ್ತು. ಆದರೆ ನಿರೀಕ್ಷಿತ ಸ್ಪಂದನೆ ಸಿಕ್ಕಿಲ್ಲ. ಶಿಕ್ಷಣ ಇಲಾಖೆಯ ಪೋರ್ಟಲ್‌ನಲ್ಲಿ ಇನ್ನೂ ಸಲಹೆ ನೀಡಲು ಅವಕಾಶ ಇದೆ. ಉಪನ್ಯಾಸಕರು ನೀಡುವ ಉತ್ತಮ ಸಲಹೆಗಳನ್ನು ಅಳವಡಿಸಿಕೊಳ್ಳಲಿದ್ದೇವೆ’ ಎಂದರು.

ನೇಮಕಾತಿ ನಿಯಮ ಬದಲು: ಸಚಿವ ನಾಗೇಶ್ ಸುಳಿವು

‘ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಡಿ ಶಿಕ್ಷಣ ವ್ಯವಸ್ಥೆಯನ್ನು ಮರುರೂಪಿಸುವಾಗ ಶಿಕ್ಷಕರ ನೇಮಕಾತಿಯಲ್ಲೂ ಭವಿಷ್ಯದಲ್ಲಿ ಬದಲಾವಣೆ ತರಬೇಕಾದ ಅಗತ್ಯ ಎದುರಾಗಬಹುದು’ ಎಂದು ಸಚಿವ ನಾಗೇಶ್ ಹೇಳಿದರು.

‘ವೃಂದ ಮತ್ತು ನೇಮಕಾತಿಗೆ ಸಂಬಂಧಿಸಿದ ತಕ್ಷಣ ಯಾವುದೇ ಬದಲಾವಣೆಯನ್ನು ಜಾರಿಗೆ ತರುವುದಿಲ್ಲ. ಪ್ರಸಕ್ತ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ ತರಬೇತಿ ನೀಡಿ ಹೊಸ ಶಿಕ್ಷಣ ನೀತಿಗೆ ಹೊಂದಿಕೊಳ್ಳುವಂತೆ ಮಾಡುವುದು ನಮ್ಮ ಉದ್ದೇಶ’ಎಂದರು.

SARDAR VALLABHBHAI PATEL
International School of Textiles & Management
Autonomous Institute, Ministry of Textiles, Government of India
Approved by AICTE
1483, Avinashi Road, Peelamedu, COIMBATORE – 641004
Ph : 0422 – 2571675, 2592205
CENTRAL GOVERNMENT COLLEGE
SVPISTM ADMISSIONS OPEN 2022-23
BACHELOR PROGRAMMES
B.Sc. Textiles
B.Sc. Technical Textiles
BBA Textile Business Analytics
MASTER PROGRAMMES
MBA Textile Management
MBA Apparel Management
MBA Retail Management
MBA Technical Textiles Management
The only GOVT. OF INDIA INSTITUTE FOR TEXTILE SECTOR
Courses offered in collaboration with Central University of Tamil Nadu
Admissions are open for short term courses in
• Non-woven Textiles • Medical Textiles
• Block Chain Technology in Textile • Textile Design
For Admission details contact : 88704 79675, 98438 14145, 75025 86867, 99528 87313
Application form for SVP Entrance Test is available in www.svpitm.ac.in E-mail : admission@svpitm.ac.in
Director.

ಸಂಶೋಧನಾ ಕಮ್ಮಟಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ ಉತ್ತರ ಕನ್ನಡದ ಸೋಂದಾದಲ್ಲಿ ಇದೇ 18ರಿಂದ 22ರ ವರೆಗೆ ಹಮ್ಮಿಕೊಂಡಿರುವ ರಾಷ್ಟ್ರೀಯ ಕನ್ನಡ ಸಂಶೋಧನಾ ಕಮ್ಮಟಕ್ಕೆ ಮತ್ತೊಮ್ಮೆ ಅರ್ಜಿ ಆಹ್ವಾನಿಸಿದೆ.

ಭಾಗವಹಿಸುವವರು ಅರ್ಜಿಗಳನ್ನು ಅಕಾಡೆಮಿ ವೆಬ್‌ಸೈಟ್‌ನಿಂದ ಪಡೆದು, ಸಲ್ಲಿಸಬೇಕು. ಪ್ರಬಂಧ ಮಂಡಿಸುವವರು ಪಠ್ಯಕ್ರಮದ ಆಧಾರದ ಮೇಲೆ ತಾವು ಮಂಡಿಸುವ ಪ್ರಬಂಧಗಳನ್ನು ಅರ್ಜಿಯೊಂದಿಗೆ ಸಲ್ಲಿಸಬೇಕು. ಅರ್ಜಿ ಹಾಗೂ ಪ್ರಬಂಧ ಸಲ್ಲಿಸಲು ಇದೇ 8 ಕಡೆ ದಿನ ಎಂದು ಅಕಾಡೆಮಿ ತಿಳಿಸಿದೆ.

ಅರ್ಜಿ ನಮೂನೆಯ ನಿಬಂಧನೆಗಳು ಹಾಗೂ ಪಠ್ಯಕ್ರಮದ ವಿವರಗಳಿಗಾಗಿ ಅಕಾಡೆಮಿಯ ವೆಬ್‌ಸೈಟ್ sahithyaacademy.karnataka.gov.in ಸಂಪರ್ಕಿಸಬಹುದು. ಈಗಾಗಲೇ ಪ್ರಬಂಧಗಳನ್ನು ಸಲ್ಲಿಸಿ, ಆಯ್ಕೆಯಾದವರು ಮತ್ತೊಮ್ಮೆ ಅರ್ಜಿ ಸಲ್ಲಿಸುವ ಅವಶ್ಯಕತೆಯಿಲ್ಲ ಎಂದು ಪ್ರಕಟಣೆ ತಿಳಿಸಿದೆ.

ನಿಧನ ವಾರ್ತೆ

ಸಾಹಿತಿ ಕುಂ.ಬಾ. ಸದಾಶಿವಪ್ಪ

ಹರಪನಹಳ್ಳಿ (ವಿಜಯನಗರ ಜಿಲ್ಲೆ): ಹಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಇಲ್ಲಿನ ಸಾಹಿತಿ ಕುಂ.ಬಾ. ಸದಾಶಿವಪ್ಪ (83) ಶನಿವಾರ ನಿಧನರಾದರು.

ಮೃತರಿಗೆ ಇಬ್ಬರು ಗಂಡು ಮಕ್ಕಳಿದ್ದಾರೆ. ಗೋಕಾಕ ಚಳವಳಿಯಲ್ಲಿ ಪಾಲ್ಗೊಂಡಿದ್ದ ಅವರು ಕನ್ನಡದಲ್ಲಿ 55, ಆಂಗ್ಲ ಭಾಷೆಯಲ್ಲಿ 7 ಕೃತಿಗಳನ್ನು ರಚಿಸಿದ್ದಾರೆ. 32 ಸಂಶೋಧನಾ ಪ್ರಬಂಧ ಮಂಡಿಸಿದ್ದಾರೆ. ಜೀವನ ಜೋಕಾಲಿ, ಬಳ್ಳಾರಿ ಜಿಲ್ಲೆ ಸಾಂಸ್ಕೃತಿಕ ದರ್ಶನ, ಕರ್ನಾಟಕ ಕುತೂಹಲ, ರಾಯಸಂ ಸಂಸ್ಕೃತಿ ಅವರ ಪ್ರಮುಖ ಕೃತಿಗಳು.

ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಅಧ್ಯಕ್ಷರಾಗಿ, ಬಳ್ಳಾರಿ ಜಿಲ್ಲಾಧ್ಯಕ್ಷರಾಗಿ, ಇತಿಹಾಸ ಅಕಾಡೆಮಿ, ಪುಠ್ಯಪುಸ್ತಕ ರಚನಾ ಸಮಿತಿ ಸದಸ್ಯರಾಗಿ ಕೆಲಸ ನಿರ್ವಹಿಸಿದ್ದರು. ದಾವಣಗೆರೆ ಜಿಲ್ಲೆ ಐದನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರ ಗೌರವಕ್ಕೆ ಭಾಜನರಾಗಿದ್ದರು. ಮೃತರ ಅಂತ್ಯ ಸಂಸ್ಕಾರ ಶನಿವಾರ ಸಂಜೆ ಪಟ್ಟಣದ ರುದ್ರಭೂಮಿಯಲ್ಲಿ ನೆರವೇರಿತು.

ನಟಿ ಹೇಮಲತಾ



ದೊಡ್ಡಬಳ್ಳಾಪುರ: ಗುಬ್ಬಿ ವೀರಣ್ಣ ಅವರ ಕೊನೆಯ ಪುತ್ರಿ ಹಾಗೂ ನಟಿ ಜಿ.ವಿ. ಹೇಮಲತಾ (75) ಶನಿವಾರ ನಗರದ ಸೋಮೇಶ್ವರ ಬಡಾವಣೆಯಲ್ಲಿ ಹೃದಯಾಘಾತದಿಂದ ನಿಧನರಾದರು.

ಲಘು ಹೃದಯಾಘಾತವಾಗಿದ್ದ ಹಿನ್ನೆಲೆಯಲ್ಲಿ ಅವರನ್ನು ಬಾಶೆಟ್ಟಿಹಳ್ಳಿ ಸಮೀಪದ ಮಣಿಪಾಲ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ನಿಧನರಾದರು. ಮೃತರಿಗೆ ಇಬ್ಬರು ಪುತ್ರರು ಮತ್ತು ಪುತ್ರಿ ಇದ್ದಾರೆ.

ಕಳೆದ ಐದು ವರ್ಷಗಳಿಂದಲೂ ಅವರು ಗುಬ್ಬಿ ವೀರಣ್ಣ ಅವರ ಮಗನ ಪುತ್ರಿಯಾದ ಜಯಭಾರತಿ ಅವರ ಮನೆಯಲ್ಲಿ ವಾಸವಾಗಿದ್ದರು.

ಹೇಮಲತಾ ಅವರು ವರನಟ ಡಾ.ರಾಜ್‌ಕುಮಾರ್ ನಟನೆಯ ‘ಎಮ್ಮೆ ತಮ್ಮಣ್ಣ’ ಮತ್ತು ಕಲ್ಯಾಣ್ ಕುಮಾರ್ ನಟನೆಯ ‘ಕಲಾವತಿ’ ಚಿತ್ರದಲ್ಲಿ ನಾಯಕಿಯಾಗಿ ಅಭಿನಯಿಸಿದ್ದಾರೆ. ನಟ ಉದಯಕುಮಾರ್ ಅವರೊಂದಿಗೂ ಹಲವು ಚಿತ್ರಗಳಲ್ಲಿ ನಟಿಸಿದ್ದಾರೆ.

ಅವರ ಕೊನೆಯ ಆಸೆಯಂತೆಯೇ ಮೃತದೇಹವನ್ನು ಬೆಂಗಳೂರಿನ ಹೆಸರಘಟ್ಟ ರಸ್ತೆಯಲ್ಲಿರುವ ಸಪ್ತಗಿರಿ ಆಸ್ಪತ್ರೆಗೆ ದಾನ ಮಾಡಲಾಗಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ
ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ
ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ,
ತೇಲಿರಾಮ್‌ಜಿ ರಸ್ತೆ, ಶಾರದಾ ಕಟ್ಟಡ, ಕಾರವಾರ–581301
Ph: 08382-226575/9480843047 Email: dtwo.karwar@gmail.com
ಸಂ: ಜಿಪವಕಅ/ಕಾ/ಪೌ.ಆಹಾರ/ಸಿ.ಆರ್–13/2022–23 ದಿನಾಂಕ: 29.06.2022
ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ
2022–23ನೇ ಸಾಲಿಗೆ ಉತ್ತರ ಕನ್ನಡ ಜಿಲ್ಲೆಯ ಮೂಲನಿವಾಸಿಗಳಾದ ಸಿದ್ದಿ ಜನಾಂಗದವರಿಗೆ ಪೌಷ್ಠಿಕ ಆಹಾರ ಯೋಜನೆಯನ್ನು ಜಾರಿಗೊಳಿಸಲು ಆಹಾರ ಸಾಮಾಗ್ರಿಗಳ ಸರಬರಾಜು ಮಾಡಲು ದ್ವಿ ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಇ–ಟೆಂಡರ್ ಕರೆಯಲಾಗಿದ್ದು, ಆಸಕ್ತ ಟೆಂಡರ್‌ದಾರರು ಕೊನೆಯ ದಿನಾಂಕ: 14.07.2022 ರ ಸಂಜೆ 5:30 ಗಂಟೆಯೊಳಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅಲ್ಪಾವಧಿ ಟೆಂಡರನ್ನು ಸಲ್ಲಿಸಬಹುದಾಗಿದೆ. ಟೆಂಡರ್ ನಮೂನೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವಿಳಾಸ http://eproc.karnataka.gov.in ನಲ್ಲಿ ಪಡೆಯಬಹುದಾಗಿದೆ.
ಸಹಿ/– (ಅಜ್ಜಪ್ಪ ಸೊಗಲದ್, ಕ.ಸಾ.ಸೇ)
ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿ, ಉತ್ತರ ಕನ್ನಡ ಜಿಲ್ಲೆ, ಕಾರವಾರ.
DIPR/ADK/MCA/165/22-23 Dt. 02.07.2022

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ
ವಿಜಯನಗರ. ಇ–ಮೇಲ್ ; dhovijayanagara21@gmail.com
ಸಂಖ್ಯೆ:.ಜಿಆಕುಕಅ/ಟೆಂಡರ ಪ್ರಕಟಣೆ/ಹೊರಗುತ್ತಿಗೆ/01/2022–23
ದಿನಾಂಕ : 01/07/2022
ಅಲ್ಪಾವಧಿ ಟೆಂಡರ್ ಪ್ರಕಟಣೆ
2022–23 ನೇ ಸಾಲಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ ವಿಜಯನಗರ ಜಿಲ್ಲೆ ವ್ಯಾಪ್ತಿಗೆ ಬರುವ ರಾಜ್ಯ ವಲಯದ ತಾಲೂಕು ಸಾರ್ವಜನಿಕ ಆಸ್ಪತ್ರೆಗಳು ಮತ್ತು ಹೊಸಪೇಟೆ ಎಂ.ಸಿ.ಹೆಚ್. ಕೇಂದ್ರಗಳಲ್ಲಿ ಖಾಲಿ ಇರುವ ವಿವಿಧ 57 (ಫಾರ್ಮಸಿಸ್ಟ್, ಕಿರಿಯ ಪ್ರಯೋಗ ಶಾಲಾ ತಂತ್ರಜ್ಞರು, ಡಾಟಾ ಎಂಟ್ರಿ ಆಪರೇಟರ್, ಗ್ರೂಪ್–ಡಿ, ಸಫಾಯಿ ಕರ್ಮಚಾರಿ) ಹುದ್ದೆಗಳನ್ನು ಹೊರ ಗುತ್ತಿಗೆ ಆಧಾರದ ಮೇಲೆ ಪಡೆಯಲು ಖಾಸಗಿ ಸಂಸ್ಥೆಗಳಿಂದ ಇ–ಪ್ರೋಕ್ಯೂರ್ಮೆಂಟ್ ಪ್ಲಾಟ್‌ಫಾರ್ಮ್‌ನಲ್ಲಿ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. ಇ–ಟೆಂಡರ್‌ನ್ನು ಕರ್ನಾಟಕ ಸರ್ಕಾರದ ಇ–ಪ್ರೋಕ್ಯೂರ್ಮೆಂಟ್ ಪೋರ್ಟಲ್ http://eproc.karnataka.gov.in ನಲ್ಲಿ ವೀಕ್ಷಣೆ ಹಾಗೂ ಡೌನ್‌ಲೋಡ್‌ಗೆ ಲಭ್ಯವಿರುತ್ತದೆ. ಆನ್‌ಲೈನ್‌ನಲ್ಲಿ ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ 26–07–2022 ಸಂಜೆ 04:00 ಗಂಟೆಯವರೆಗೆ ನಿಗಧ ಪಡಿಸಲಾಗಿದೆ. ಟೆಂಡರ್ ಅವಧಿಯು ಆದೇಶ ನೀಡುವ ದಿನಾಂಕ ದಿಂದ ದಿನಾಂಕ : 31–03–2023 ರ ವರೆಗೆ ಮಾತ್ರ ಇರುತ್ತದೆ. ಒಟ್ಟು ಟೆಂಡರಿನ ಅಂದಾಜು ಮೌಲ್ಯ ವರ್ಷಕ್ಕೆ ರೂ. 88,67,000/– (ರೂಪಾಯಿ ಎಂಬತ್ತೇಂಟು ಲಕ್ಷ ಅರವತ್ತೇಳು ಸಾವಿರ ರೂ.ಗಳು ಮಾತ್ರ) ಗಳು ಇರುತ್ತದೆ.
ಸಹಿ/–ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ವಿಜಯನಗರ.
ಡಿಐಪಿಆರ್/ಹೊಸಪೇಟ್/28/ಎಂಸಿಎ/2022–23

ಕರ್ನಾಟಕ ಸರ್ಕಾರ
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ
ಶಿಶು ಅಭಿವೃದ್ಧಿ ಯೋಜನೆ, ಬಸವನ ಬಾಗೇವಾಡಿ
ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
2022–23 ನೇ ಸಾಲಿಗೆ ಶಿಶು ಅಭಿವೃದ್ಧಿ ಯೋಜನೆ ಬಸವನ ಬಾಗೇವಾಡಿ ವ್ಯಾಪ್ತಿಯಲ್ಲಿನ 420 ಅಂಗನವಾಡಿ ಕೇಂದ್ರಗಳಿಗೆ ಕಛೇರಿ ಗೋದಾಮಿನಿಂದ ಆಹಾರ ಸಾಮಗ್ರಿಗಳನ್ನು ಅಂಗನವಾಡಿ ಕೇಂದ್ರಗಳಿಗೆ ಸಾಗಾಣಿಕೆ ಮಾಡಲು ಇ–ಪ್ರಕ್ಯೂರಮೆಂಟ್ ಮೂಲಕ ಟೆಂಡರ್ ಕರೆಯಲಾಗಿದೆ. ಟೆಂಡರ್ ವೆಬ್‌ಸೈಟ್ ನಂಬರ “www.eproc.karnataka.gov.in” ಆಗಿರುತ್ತದೆ. ಸದರ ಟೆಂಡರದಲ್ಲಿ ವಿಜಯಪುರ ಜಿಲ್ಲೆಯ ವ್ಯಾಪ್ತಿಯ ಮಹಿಳಾ ಮಂಡಳಿ/ ಸ್ವಸಹಾಯ ಗುಂಪು/ ಗ್ರಾಮ ಸಮುದಾಯ ಮಾತ್ರ ಭಾಗವಹಿಸಬಹುದಾಗಿರುತ್ತದೆ. ಟೆಂಡರ್ ಇ.ಎಂ.ಡಿ ಮೊತ್ತ ರೂ.37,500/–ಗಳು. ಟೆಂಡರ್ ಸಲ್ಲಿಸುವ ವಿವರ ಕೆಳಗಿನಂತಿರುತ್ತದೆ.
1) ಇ–ಪ್ರಕ್ಯೂರ್‌ಮೆಂಟ್ ಮೂಲಕ ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸುವ ಕೊನೆಯ ದಿನಾಂಕ: 30.06.2022 ರಿಂದ 29.07.2022 ಸಂಜೆ 5.30 ಘಂಟೆಯವರೆಗೆ. 2) ಟೆಕ್ನಿಕಲ್ ಬಿಡ್‌ನ್ನು ತೆರೆಯುವ ದಿನಾಂಕ: 01.08.2022 ರಂದು ಬೆಳಿಗ್ಗೆ 11.00 ಘಂಟೆಗೆ. 3) ಫೈನಾನ್ಸಿಯಲ್ ಬಿಡನ್ನು ತೆರೆಯುವ ದಿನಾಂಕ: 03.08.2022 ಸಾಯಂಕಾಲ 4.00 ಘಂಟೆಗೆ. 4) ಟೆಂಡರ್ ತೆರೆಯುವ ಸ್ಥಳ: ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ, ಬಸವನ ಬಾಗೇವಾಡಿ. ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 9739468505
ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಶಿಶು ಅಭಿವೃದ್ಧಿ ಯೋಜನೆ, ಬಸವನ ಬಾಗೇವಾಡಿ
ವಾಸಾಸಂಇ/ವಿಜಯಪುರ/220/ಎಂಸಿಎ/2022–23

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ತುಮಕೂರು ಪ್ರಾದೇಶಿಕ ವಿಭಾಗ, ತುಮಕೂರು
ಇ–ಮೇಲ್: dcftmk_dcftmk@yahoo.co.in
ಸಂಖ್ಯೆ–ಎ/ಬಿಯುಡಿ/ಕಾಂಪಾ/ಎನ್‌ಪಿವಿ/ಟೆಂಡರ್/ಸಿಆರ್–33/2022–23
ದಿನಾಂಕ: 28.06.2022
ಇ–ಟೆಂಡರ್ ಪ್ರಕಟಣೆ
2022–23ನೇ ಸಾಲಿನಲ್ಲಿ ವಿವಿಧ ಯೋಜನೆಯಡಿ ವಿಭಾಗದ ಎಲ್ಲಾ ವಲಯಗಳಲ್ಲಿ ಮುಂಗಡ ಕಾಮಗಾರಿ, ವಾಚ್‌ಟವರ್ ನಿರ್ಮಾಣ, ಸಿ.ಪಿ.ಟಿ, ಚೈನ್‌ಲಿಂಕ್ ಮೆಷ್ ನಿರ್ಮಾಣ ಹಾಗೂ ಇನ್ನಿತರೆ ಕಾಮಗಾರಿಗಳನ್ನು ಕೈಗೊಳ್ಳಲು 2022–23ನೇ ಸಾಲಿಗೆ ತುಮಕೂರು ವಿಭಾಗದ ಅರಣ್ಯ ಗುತ್ತಿಗೆದಾರರಾಗಿ ನೋಂದಾವಣೆಯಾಗಿರುವ ಗುತ್ತಿಗೆದಾರರಿಂದ ಹಾಗೂ ಸಿವಿಲ್ ಕಾಮಗಾರಿಗಳಿಗೆ ಪಿ.ಡಬ್ಲ್ಯು.ಡಿ ಗುತ್ತಿಗೆದಾರರಿಂದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರತ್ಯೇಕವಾಗಿ ಟೆಂಡರ್‌ಗಳನ್ನು ದಾಖಲಿಸಲು ಕೋರಿ ಟೆಂಡರ್ ಆಹ್ವಾನಿಸಲಾಗಿದೆ. ಒಟ್ಟು 37 ಕಾಮಗಾರಿಗಳ ಪೈಕಿ ಗರಿಷ್ಠ ಅಂದಾಜು ಮೊತ್ತ ರೂ. 95,18,400/–ಗಳಿಗೆ ಇ.ಎಂ.ಡಿ ಮೊತ್ತ ರೂ.190368/– ಗಳಾಗಿರುತ್ತದೆ ಮತ್ತು ಕನಿಷ್ಠ ಅಂದಾಜು ಮೊತ್ತ ರೂ.3,59,000/–ಗಳಿಗೆ ಇ.ಎಂ.ಡಿ. ಮೊತ್ತ ರೂ.8975/–ಗಳಾಗಿರುತ್ತದೆ. ದಿನಾಂಕ: 28.7.2022 ರ ಅಪರಾಹ್ನ 3.00 ಗಂಟೆಯವರೆಗೆ ಟೆಂಡರ್ ಸಲ್ಲಿಸಬಹುದಾಗಿದೆ. ಒಂದು ವೇಳೆ ದಿನಾಂಕ: 28.7.2022 ರಂದು ನಡೆಯುವ ಟೆಂಡರ್‌ನಲ್ಲಿ ಯಾವ ಅರಣ್ಯ ಗುತ್ತಿಗೆದಾರರು ಭಾಗವಹಿಸದೇ ಇದ್ದ ಪಕ್ಷದಲ್ಲಿ ಎರಡನೇ ಬಾರಿಗೆ ದಿನಾಂಕ 1.8.2022 ಕ್ಕೆ ನಿಗಧಿ ಪಡಿಸಿರುತ್ತದೆ. ದಿನಾಂಕ: 29.7.2022 ಹಾಗೂ 2.8.2022ರಂದು ಸಂಜೆ 4.00 ಗಂಟೆಗೆ ತಾಂತ್ರಿಕ ಬಿಡ್ಡುಗಳನ್ನು ಆ ಸಮಯದಲ್ಲಿ ಹಾಜರಿರುವ ಟೆಂಡರ್‌ದಾರರ ಸಮಕ್ಷಮ ತೆರೆಯಲಾಗುವುದು. ಪರಿಮಾಣ, ಇಎಂಡಿ ಹಾಗೂ ಇನ್ನಿತರೆ ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಮತ್ತು ಅಂತರ್ಜಾಲದ ಮೂಲಕ ಪಡೆಯಬಹುದಾಗಿದೆ.
ವೆಬ್‌ಸೈಟ್ ವಿಳಾಸ– http://www.eproc.karnataka.gov.in.
ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ, ತುಮಕೂರು ವಿಭಾಗ, ತುಮಕೂರು
DIPR/TUM/248/MCA/2022-23

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ. 8, ಎಂಎಸ್‌ಬಿ–1, 6ನೇ ಮತ್ತು 7ನೇ ಮಹಡಿ,
ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು–560052.
ಸಂ.: ಕವಶಿಸಸ/ಮೂಭೂ–2/ಸಿ.ಆರ್–89/2022–23 ದಿನಾಂಕ: 30.06.2022
ಟೆಂಡರ್ ಪ್ರಕಟಣೆ (ಇ–ಟೆಂಡರ್ ಮೂಲಕ ಮಾತ್ರ)
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಸತಿ ಶಾಲೆ / ಕಾಲೇಜುಗಳಿಗೆ ಡೆಸ್ಕ್ ಕಂ ಬೆಂಚ್‌ಗಳನ್ನು ಸರಬರಾಜು ಮಾಡಲು ಅರ್ಹ ಏಜೆನ್ಸಿಯನ್ನು ನೇಮಿಸಲು (Indent No. KREIS/2022-23/IND343) ಇ–ಪೋರ್ಟಲ್ ಮುಖಾಂತರ ದಿನಾಂಕ: 01.07.2022ರಂದು ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 30.07.2022ರಂದು ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ https://eproc.karnataka.gov.in ರಲ್ಲಿ ನೋಡಬಹುದಾಗಿದೆ.
ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು, ಕ.ವ.ಶಿ.ಸ.ಸಂ.
ವಾಸಾಸಂಇ/ವಾಪ್ರ/ಎಲ್‌ಸಿ/1176/2022–23
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

राष्ट्रीय न्यायालयिक विज्ञान विश्वविद्यालय
(राष्ट्रीय महत्त्व का संस्थान, गृह मंत्रालय, भारत सरकार)
गृह मंत्रालय MINISTRY OF HOME AFFAIRS
National Forensic Sciences University
(An Institution of National Importance under Ministry of Home Affairs, Government of India)
Admission Announcement
NFSU, a specialized university invites online applications from eligible candidates for admission to the below mentioned programme for the Academic Year 2022-2023.
School of Forensic Psychology
• BA-MA in Criminology (5-year integrated course)
Last date of applying for Admission is 20th July 2022
For details related to eligibility, admission form and others, please visit www.nfsu.ac.in
Date: 30/06/2022
INF/763/22-23 Executive Registrar

ಕರ್ನಾಟಕ ಸರ್ಕಾರ (ಜಲ ಸಂಪನ್ಮೂಲ ಇಲಾಖೆ)
ಕಾರ್ಯನಿರ್ವಾಹಕ ಅಭಿಯಂತರರು, ಕೃಮೇಯೋ, ಪುನರ್ವಸತಿ ವಿಭಾಗ ನಂ.3, ಜಮಖಂಡಿ. (ಕಡಕೋಳ ಪುನರ್ವಸತಿ ಕೇಂದ್ರ) ಇವರ ಕಾರ್ಯಾಲಯ.
ಸಂ:ಕೃಮೇಯೋ/ಪುವಿ–3/ಯೋ.ವಿ–3/ಟೆಂಡರ್/2022–23/521 ದಿನಾಂಕ:30–06–2022
ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೋಕ್ಯೂರಮೆಂಟ್ ಮುಖಾಂತರ)
ಕಾರ್ಯನಿರ್ವಾಹಕ ಅಭಿಯಂತರರು, ಕೃಮೇಯೋ, ಪುನರವಸತಿ ವಿಭಾಗ ನಂ–3, ಜಮಖಂಡಿ (ಕ್ಯಾಂಪ ಕಡಕೋಳ ಪುನರವಸತಿ ಕೇಂದ್ರ) ಇವರ ಕಛೇರಿ ವ್ಯಾಪ್ತಿಯಲ್ಲಿ ಬರುವ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮದಂತೆಯಾವುದೇ ರಾಜ್ಯದ ಲೋಕೋಪಯೋಗಿ ಇಲಾಖೆ/ಕೃ.ಭಾ.ಜ.ನಿ.ನಿ ಹಾಗೂ ವಿದ್ಯುತ ಸರಬರಾಜು ಮಂಡಳಿಗಳಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ (ಕೆ.ಡಬ್ಲ್ಯೂ–2 & 3 ರನ್ವಯ) ಸ್ಟ್ಯಾಂಡರ್ಡ ಟೆಂಡರ್ ಡಾಕ್ಯೂಮೆಂಟ್ ಮುಖಾಂತರ ಶೇಕಡಾವಾರು ಟೆಂಡರಗಳನ್ನು ಆಹ್ವಾನಿಸಲಾಗಿದೆ. ಟೆಂಡರಗಳನ್ನು ಇ–ಪ್ರೋಕ್ಯರಮೆಂಟ್ ಪೋರ್ಟಲ್‌ನಲ್ಲಿ www.eproc Karnataka govt.in ದಿನಾಂಕ:30–06–2022 ರಿಂದ ದಿ:16–07–2022 ವರೆಗೆ ಡೌನಲೋಡ ಮಾಡಿಕೊಂಡು ಸಲ್ಲಿಸಬಹುದಾಗಿದೆ. ಕಾಮಗಾರಿಗಳ ನಿಬಂಧನೆ ಹಾಗೂ ವಿವರಗಳನ್ನು ಇ–ಪ್ರೋಕ್ಯೂರಮೆಂಟ್ ಪೋರ್ಟಲ್ನಲ್ಲಿ ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. (ಮೋ ಸಂ: 9620892102 ಅಥವಾ 9108335489).
ಸಹಿ/–ಕಾರ್ಯನಿರ್ವಾಹಕ ಅಭಿಯಂತರರು, ಕೃಮೇಯೋ,ಪುನರ್ವಸತಿ ವಿಬಾಗ ನಂ–3, ಕಡಕೋಳ ಪುನರ್ವಸತಿ ಕೇಂದ್ರ, ಜಮಖಂಡಿ.
DIPR/BGK/RO-NO-214/MCA/2022-23

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರವರ ಕಛೇರಿ,
ಲೋ.ಇ ವಿಶೇಷ ವಿಭಾಗ, ಶಿವಮೊಗ್ಗ
ಫೋನ್ ನಂ : 08182-222942, ಇ–ಮೇಲ್: spdivision@gmail.com
ಅಲ್ಪಾವಧಿ ಟೆಂಡರ್ ಪ್ರಕಟಣೆ
(ದ್ವಿ–ಲಕೋಟೆ ಪದ್ದತಿ) (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
ಐ.ಎಫ್.ಟಿ ಸಂಖ್ಯೆ: 08/2022-23 ದಿನಾಂಕ : 28.06.2022
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂ–4 ನಿಯಮದನ್ವಯ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ 3ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಗೆ ಭದ್ರಾವತಿ ತಾಲ್ಲೂಕಿನಲ್ಲಿ 5054-04-337-0-01-422 ಜಿಲ್ಲಾ ಮತ್ತು ಇತರೆ ರಸ್ತೆಗಳು ಪರಿಶಿಷ್ಟ ಜಾತಿ ಉಪಯೋಜನೆ (ಎಸ್.ಸಿ.ಪಿ) ಲೆಕ್ಕಶೀರ್ಷಿಕೆಯಡಿಯಲ್ಲಿ ಅನುಮೋದನೆಗೊಂಡಿರುವ Construction of Alternate road to Shivamogga Central Jail and Siddaragudi village because of disconnected road due to construction of Airport near Sogane village in Shivamogga Taluk, (Indent No.153047) ಕಾಮಗಾರಿಗೆ, ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಈ ಕೆಳಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಸದರಿ ಕಾಮಗಾರಿಗೆ ಟೆಂಡರ್‌ಗಿಟ್ಟ ಮೊತ್ತ ರೂ. 305.34 ಲಕ್ಷ ಹಾಗೂ ಇ.ಎಂ.ಡಿ. ಮೊತ್ತ ರೂ. 4.58 ಲಕ್ಷ, ಸದರಿ ಕಾಮಗಾರಿಯ ಟೆಂಡರ್ ಅವಧಿ 09 ತಿಂಗಳು ಮಳೆಗಾಲ ಸೇರಿ.
ಅರ್ಹ ಗುತ್ತಿಗೆದಾರರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ http://eproc.karnataka.gov.in ಮುಖಾಂತರ ಟೆಂಡರ್ ದಸ್ತಾವೇಜಿನ ಸೆಕ್ಷನ್ –2ರ (ಟೆಂಡರ್‌ದಾರರಿಗೆ ತಿಳುವಳಿಕೆ) ಕ್ಲಾಸ್–3 ರನ್ವಯ ಅರ್ಹತೆ ವಿವರಗಳನ್ನು ಗಮನಿಸತಕ್ಕದ್ದು. ವಿದ್ಯುನ್ಮಾನ ಜಾಲದಲ್ಲಿ ದಿನಾಂಕ: 29-06-2022 ರಿಂದ 14-07-2022 ರ 17.30 ಗಂಟೆವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ನ್ನು ದಿನಾಂಕ: 14-07-2022 ರ ಸಂಜೆ 5:30 ಗಂಟೆಯೊಳಗೆ ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ ಭರಿಸತಕ್ಕದ್ದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ದಿನಾಂಕ: 15-07-2022 ರಂದು ಸಂಜೆ 5.30ಕ್ಕೆ ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ: 16-07-2022 ರ ನಂತರ ತೆರೆಯಲಾಗುವುದು. ಪ್ರಕಟಿತ ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿಯೇ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ವೆಬ್‌ಸೈಟ್‌ನಲ್ಲಿರುವ ಟೆಂಡರ್ ವಿವರಗಳೇ ಅಂತಿಮವಾಗಿರುತ್ತವೆ.
ವಾಸಾಸಂಇ/ಶಿ/ನಂ.08-07/ಝುಂಕಾರ್/2022-23
ಸಹಿ/– ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ವಿಜಯಪುರ
ನೀಲಕಂಠೇಶ್ವರ ಮಾರ್ಕೆಟ್ ಯಾರ್ಡ, ಇಂಡಿ ರಸ್ತೆ, ವಿಜಯಪುರ
ದೂರವಾಣಿ ಸಂ:08352–250073, ಫ್ಯಾಕ್ಸ್:08352–253349 ಇ–ಮೇಲ್:apmcvijayapur@gmail.com
ಕ್ರ.ಸಂ:ಕೃಮಾಇ/ಕೃಉಮಾಸ/ವಿ/505/2022–23 ದಿನಾಂಕ:29.06.2022
ಪ್ರಕಟಣೆ
ವಿಜಯಪುರ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ವಸತಿ ಗೃಹಗಳನ್ನು ತೆರವುಗೊಳಿಸಿ ವಾರ್ಡ್ ನಂ.03 ರ ಸರ್ವೆ ನಂ.1134, 1176ರಲ್ಲಿ ನಿವೇಶನಗಳನ್ನು ರಚಿಸಲಾಗಿದ್ದು, ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ:ಕೃಮಾಇ/ಮಾಅಯೋ/ಅಅ/ 12774/2021–22 ದಿ:11–03–2022ರ ಅನುಮೋದಿತ ನೀಲಿ ನಕ್ಷೆಯಂತೆ ಹಾಗೂ ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ:ಕೃಮಾಇ/ಅಭಿವಿ–3/ಲೀಕಂಸೇ/ಇ–5313/2022 ದಿ:02–06–2022ರಲ್ಲಿ ಹಂಚಿಕೆಗೆ ಕ್ರಮವಹಿಸಲು ಸೂಚಿಸಿದರನ್ವಯ ಈ ಕೆಳಕಂಡಂತೆ ವಿವಿಧ ಅಳತೆಯ 27 ನಿವೇಶನಗಳನ್ನು ಜೇಷ್ಠತೆ ಆಧಾರದ ಮೇಲೆ ನಿಯಮಾನುಸಾರ 10 ವರ್ಷಗಳ ಅವಧಿಗೆ ಲೀಸ್–ಕಂ–ಸೇಲ್ ಆಧಾರದ ಮೇಲೆ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿನ ಆಸ್ತಿ ಹಂಚಿಕೆ ನಿಯಂತ್ರಣ) ನಿಯಮಾವಳಿ 2004 ರ ನಿಯಮ–10ರನ್ವಯ ಈ ಸಮಿತಿಯಿಂದ ಅಧಿಕೃತ ಲೈಸನ್ಸ್ ಪಡೆದು ವ್ಯವಹರಿಸುತ್ತಿರುವ ಅರ್ಹ ಪೇಟೆಕಾರ್ಯಕರ್ತರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ವಿಜಯಪುರ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಹಂಚಿಕೆ ಮಾಡಲು ಉದ್ದೇಶಿಸಿರುವ ನಿವೇಶನಗಳ ವಿವರಗಳು.

ಕ್ರ. ಸಂ	ನಿವೇಶನ ಸಂಖ್ಯೆ	ಅಳತೆ (ಅಡಿಗಳಲ್ಲಿ)	ಪ್ರತಿ ನಿವೇಶನದ ಒಟ್ಟು ವಿಸ್ತೀರ್ಣ (ಚ.ಅಡಿಗಳಲ್ಲಿ)	ಪ್ರತಿ ನಿವೇಶನದ ದರ (ಪ್ರತಿ ಚ.ಅಡಿಗೆ)	ಪ್ರತಿ ನಿವೇಶನದ ಲೀಸ್–ಕಂ–ಸೇಲ್‌ನ ಒಟ್ಟು ಮೊತ್ತ (ರೂ.ಗಳಲ್ಲಿ)	ಪ್ರತಿ ನಿವೇಶನದ ಶೇ.25 ರಂತೆ ಮೊತ್ತ (ರೂ.ಗಳಲ್ಲಿ)
ಸಾಮಾನ್ಯ ವರ್ಗಕ್ಕೆ (15 ಸಂಖ್ಯೆ)						
1	113,114,115,116, 117,120,122,123, 124,	40' x 50'	2000.00	ರೂ.700	14,00,000	3,50,000
2	141	(45'+40')/2 x (52'–6"+74'3")/2	2693.43	ರೂ.700	18,85,401	4,71,351
3	142	(45'+39'3")/2 x (74'–3"+92')/2	3501.64	ರೂ.700	24,51,148	6,12,787
4	145	49' x 103'	5047.00	ರೂ.700	35,32,900	8,83,225
5	151	35' x 103'	3605.00	ರೂ.700	25,23,500	6,30,875
6	152	17'–16" x 32'–6"	568.75	ರೂ.700	3,98,125	99,531
7	133	50' x 40'	2000.00	ರೂ.700	14,00,000	3,50,000
ಮಹಿಳಾ ಮೀಸಲಾತಿ (03 ಸಂಖ್ಯೆ)						
8	125 ರಿಂದ 126	40' x 50'	2000.00	ರೂ.700	14,00,000	3,50,000
9	138	50' x 40'	2000.00	ರೂ.700	14,00,000	3,50,000
ರೈತ ಉತ್ಪಾದಕರ ಸಂಘ (02 ಸಂಖ್ಯೆ)						
10	131, 132	40' x 50'	2000.00	ರೂ.700	14,00,000	3,50,000
ಪರಿಶಿಷ್ಟ ಜಾತಿಗೆ ಮೀಸಲಿರಿಸಿದೆ (04 ಸಂಖ್ಯೆ)						
11	118,119,121,136,	40' x 50'	2000.00	ರೂ.700	14,00,000	3,50,000
ಪರಿಶಿಷ್ಟ ಪಂಗಡಕ್ಕೆ ಮೀಸಲಿರಿಸಿದೆ (01 ಸಂಖ್ಯೆ)						
12	144	23' x 59'	1357.00	ರೂ.700	9,49,900	2,37,475
ಮಾಜಿ ಸೈನಿಕರಿಗೆ ಮೀಸಲಿರಿಸಿದೆ (01 ಸಂಖ್ಯೆ)						
13	140	(45'+50')/2 x (30'–9'+52'–6')/2	1769.06	ರೂ.700	12,38,342	3,09,586
ಅಂಗವಿಕಲರಿಗೆ ಮೀಸಲಿರಿಸಿದೆ (01 ಸಂಖ್ಯೆ)						
14	137	50' x 40'	2000.00	ರೂ.700	14,00,000	3,50,000

–: ಷರತ್ತು ಮತ್ತು ನಿಬಂಧನೆಗಳು :– 1) ಈ ಸಮಿತಿಯಿಂದ ಅಧಿಕೃತ ಲೈಸನ್ಸ್ ಪಡೆದು ವ್ಯವಹರಿಸುತ್ತಿರುವ , ನಿವೇಶನ ಅಂಗಡಿ–ವ–ಗೋದಾಮು ಹೊಂದಿದ ಹಾಗೂ ನಿವೇಶನ, ಅಂಗಡಿ–ವ–ಗೋದಾಮು ಹೊಂದಿರುವ ಭಾಗೀದಾರರ ಸಂಸ್ಥೆಯಲ್ಲಿ ಭಾಗೀದಾರರು ಆಗಿರುವ ಮತ್ತು ಈ ಹಿಂದೆ ಪ್ರಾಂಗಣದಲ್ಲಿ ವ್ಯಾಪಾರಕ್ಕಾಗಿ ನಿವೇಶನ, ಅಂಗಡಿ–ವ–ಗೋದಾಮನ್ನು ಪಡೆದು ಅದನ್ನು ಇತರರಿಗೆ ಮಾರಾಟ/ವರ್ಗಾವಣೆ ಮಾಡಿದವರನ್ನು ಹೊರತುಪಡಿಸಿ ಇನ್ನುಳಿದ ಅರ್ಹ ಪೇಟೆಕಾರ್ಯಕರ್ತರಿಗೆ ಹಂಚಿಕೆ ಪಡೆದುಕೊಳ್ಳಲು ಅರ್ಹರಿದ್ದು, ಈ ಕೆಳಕಂಡ ಷರತ್ತು–ವ–ನಿಭಂದನೆಗೊಳ್ಳಪಟ್ಟು ಸಾಮಾನ್ಯ ನಿವೇಶನ ಪಡೆದುಕೊಳ್ಳಲು ಇಚ್ಛಿಸಿದವರು ಸಮಿತಿಗೆ ಅರ್ಜಿ ಸಲ್ಲಿಸಲು ಕೋರಲಾಗಿದೆ. 2) ಏಕವ್ಯಕ್ತಿ ಅಥವಾ ಪಾಲುದಾರಿಕೆ ಸಂಸ್ಥೆಯಾದರೆ ಒಂದೇ ಸಂಸ್ಥೆಗೆ ಒಂದಕ್ಕಿಂತ ಹೆಚ್ಚಿಗೆ ಮಳಿಗೆ / ನಿವೇಶನ ಹಂಚಿಕೆ ಮಾಡಲಾಗುವುದಿಲ್ಲ. ನಿವೇಶನಕ್ಕಾಗಿ ಅರ್ಜಿ ಸಲ್ಲಿಸುವವರು ಪ್ರಾಂಗಣದಲ್ಲಿ ಯಾವುದೇ ಮಳಿಗೆ / ನಿವೇಶನವನ್ನಾಗಲೀ ಹೊಂದಿರಬಾರದು ಹಾಗೂ ಮಳಿಗೆ / ನಿವೇಶನವನ್ನಾಗಲೀ ಹೊಂದಿರುವ ಸಂಸ್ಥೆಯಲ್ಲಿ ಪಾಲುದಾರರಾಗಿದ್ದರೂ ಹಂಚಿಕೆಗೆ ಪರಿಗಣಿಸಲಾಗುವುದಿಲ್ಲ. 3) ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಖಾಲಿ ಇರುವ ಮೇಲ್ಕಂಡ ನಿವೇಶನಗಳನ್ನು ಲೀಸ್ ಕಂ ಸೇಲ್ ಆಧಾರದ ಮೇಲೆ ಹಂಚಿಕೆ ಪಡೆಯಲು ಇಚ್ಛಿಸುವ ಲೈಸನ್ಸ್ ಹೊಂದಿರುವ ಪೇಟೆಕಾರ್ಯಕರ್ತರು ದಿನಾಂಕ:13–07–2022 ರಂದು ಸಾಯಂಕಾಲ 5.00 ಗಂಟೆಯೊಳಗಾಗಿ ನೊಂದಣಿ ಶುಲ್ಕ ರೂ.500–00 (ಐದು ನೂರು ಮಾತ್ರ)ಗಳನ್ನು (ಮರುಪಾವತಿಸಲಾಗುವುದಿಲ್ಲ) ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ವಿಜಯಪುರ. ಈ ಹೆಸರಿಗೆ ಡಿ.ಡಿ. ಪಡೆದು ಈ ಕಛೇರಿಗೆ ಸಲ್ಲಿಸಿ ನೊಂದಣಿ ಮಾಡಿಕೊಳ್ಳತಕ್ಕದ್ದು. 4) ಈ ಹಿಂದೆ ಸಮಿತಿಯಲ್ಲಿ ಹಂಚಿಕೆಗಾಗಿ ನೋಂದಾಯಿಸಿಕೊಂಡವರು ಅದರ ಪ್ರತಿಯನ್ನು ಸಮಿತಿಗೆ ಸಲ್ಲಿಸುವುದು, ಮತ್ತೊಮ್ಮೆ ನೋಂದಾಯಿಸಿಕೊಳ್ಳುವ ಅವಶ್ಯಕತೆ ಇರುವುದಿಲ್ಲ. 5) ನಿವೇಶನ ಹಂಚಿಕೆ ಪಡೆಯಲು ಇಚ್ಛಿಸುವ ನೊಂದಾಯಿತ ಅರ್ಹ ಪೇಟೆಕಾರ್ಯಕರ್ತರುಗಳು ಶೇ.18 ರಂತೆ ಜಿ.ಎಸ್.ಟಿ. ಸೇರಿ ಒಟ್ಟು ಅರ್ಜಿ ಶುಲ್ಕ ರೂ.1180–00 (ರೂ. ಒಂದು ಸಾವಿರದ ನೂರ ಎಂಬತ್ತು ಮಾತ್ರ) ಗಳನ್ನು (ಮರುಪಾವತಿಸಲಾಗುವುದಿಲ್ಲ) ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ವಿಜಯಪುರ. ಈ ಹೆಸರಿಗೆ ಡಿ.ಡಿ. ಪಡೆದು ಈ ಕಛೇರಿಗೆ ಪಾವತಿಸಿ ನಮೂನೆ (3)ನ್ನು ಪಡೆಯತಕ್ಕದ್ದು. 6) ನಿವೇಶನ ಮೌಲ್ಯದ ಶೇ.25 ರಷ್ಟು ಠೇವಣಿ ಮೊತ್ತವನ್ನು ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ವಿಜಯಪುರ. ಇವರ ಹೆಸರಿನಲ್ಲಿ ಡಿ.ಡಿ. ಪಡೆದು ದಿನಾಂಕ: 20–07–2022ರಂದು ಸಾಯಂಕಾಲ 5.00 ಗಂಟೆಯೊಳಗಾಗಿ ನಿಗಧಿತ ಅರ್ಜಿ ನಮೂನೆಯೊಂದಿಗೆ ಲಗತ್ತಿಸತಕ್ಕದ್ದು. (ನಿವೇಶನ ಹಂಚಿಕೆಯಾಗದೇ ಇದ್ದಲ್ಲಿ ಶೇಕಡಾ 25% ರಷ್ಟು ಮೊತ್ತವನ್ನು ಬಡ್ಡಿ ರಹಿತವಾಗಿ ಹಿಂದುರುಗಿಸಲಾಗುವುದು) 7) ನಿವೇಶನ ಹಂಚಿಕೆಗೆ ಮಾಡುವಾಗ ಸರಕಾರದ ಅಧಿಸೂಚನೆ ಸಂಖ್ಯೆ :ಸಇ/264/ಎಂಆರ್‌ಇ/2010/ ದಿನಾಂಕ : 22–08–2013 ರ ಆದೇಶದ ಪ್ರಕಾರ ಪರಿಶಿಷ್ಠ ಜಾತಿಗೆ ಶೇಕಡಾ 16.22 ರಷ್ಟು ಪರಿಶಿಷ್ಠ ಪಂಗಡಕ್ಕೆ ಶೇಕಡಾ 6.55 % ರಷ್ಟು ಹಾಗೂ ಅಂಗವಿಕಲರಿಗೆ ಮತ್ತು ಮಾಜಿ ಸೈನಿಕರಿಗೆ ಶೇಕಡಾ 2% ರಷ್ಟು ಮೀಸಲಾತಿ ಕಾಯ್ದಿರಿಸಿದೆ. ಅಥವಾ ಸರಕಾರವು ಕಾಲಕಾಲಕ್ಕೆ ನಿಗದಿಪಡಿಸುವ ಪರಿಶಿಷ್ಠ ಜಾತಿ ಮತ್ತು ಪಂಗಡಕ್ಕೆ, ಅಂಗವಿಕಲರಿಗೆ ಮಾಜಿ ಸೈನಿಕರಿಗೆ ಮೀಸಲಾತಿ ಕಾಯ್ದಿರಿಸಲಾಗಿದೆ. ಮತ್ತು ಸರಕಾರದ ಅಧಿಸೂಚನೆ ಸಂಖ್ಯೆ : ಸಿಓ/19/ಎಂಆರ್‌ಇ/2019 ದಿನಾಂಕ : 25/02/2020 ರ ಆದೇಶದ ಪ್ರಕಾರ ರೈತ ಉತ್ಪಾದಕರ ಸಂಘ (Farmer-Producer Organization) (FPO ಕಂಪನಿ ಆಕ್ಟ್‌ಯಡಿಯಲ್ಲಿ ನೋಂದಾಯಿಸಿರುವ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು) ಶೇಕಡಾ 10% ರಂತೆ ಮೀಸಲಾತಿ ಹಾಗೂ ಮಹಿಳಾ ಮೀಸಲಾತಿ ಕಾಯ್ದಿರಿಸಲಾಗಿದೆ, ಸದರಿ ಪ್ರವರ್ಗಗಳ ಮೀಸಲಾತಿ ಪಡೆಯಲಿಚ್ಛಿಸುವವರು ಅರ್ಜಿಯೊಂದಿಗೆ ತಮ್ಮ ಜಾತಿ ಪ್ರಮಾಣ ಪತ್ರ ಹಾಗೂ ಇನ್ನಿತರ ಅವಶ್ಯಕ ದಾಖಲಾತಿಗಳನ್ನು ಲಗತ್ತಿಸತಕ್ಕದ್ದು. 8) ಮೀಸಲಾತಿ ಕೋರಿ ಯಾವುದೇ ಅರ್ಜಿಗಳು ಸ್ವೀಕೃತವಾಗದೇ ಇದ್ದಲ್ಲಿ ಸದರಿ ನಿವೇಶನಗಳನ್ನು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿ ಆಸ್ತಿ ಹಂಚಿಕೆ ನಿಯಂತ್ರಣ) ನಿಯಮಗಳು 2004 ರ ನಿಯಮ 17(3) (2) (i) (ii) ಸಾಮಾನ್ಯ ಎಂತಲ್ಲೂ ಪರಿಗಣಿಸಲಾಗುವುದು. 9) ಕಳೆದ ಮೂರು ವರ್ಷಗಳ ಅಂದರೆ, 2019–2020, 2020–2021 ಮತ್ತು 2021–2022 ನೇ ಸಾಲಿನಲ್ಲಿ (ದಿನಾಂಕ : 31/03/2022) ರ ಅಂತ್ಯದವರೆಗೆ ಸಮಿತಿಗೆ ಪಾವತಿಸಿರುವ ಮಾರುಕಟ್ಟೆ ಶುಲ್ಕ / ಬಳಕೆದಾರರ ಶುಲ್ಕದ ವಿವರಗಳನ್ನು ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು. ಸಮಿತಿಯಿಂದ ಪರವಾನಗಿ ಪಡೆದ ಬಗ್ಗೆ ವಿವರಗಳೊಂದಿಗೆ ಲೈಸನ್ಸ್ ಪ್ರತಿಯನ್ನು ಲಗತ್ತಿಸತಕ್ಕದ್ದು. 10)ನಿವೇಶನ ಕೋರಿ ಸಲ್ಲಿಸಿದ ಅರ್ಜಿಗಳನ್ನು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿನಆಸ್ತಿ ಹಂಚಿಕೆ ನಿಯಂತ್ರಣ) ನಿಯಮಗಳು 2004 ನಿಯಮ 8ರಲ್ಲಿ ನಿಗಧಿಪಡಿಸಿರುವಂತೆ ಲೈಸನ್ಸ್ ಅರ್ಹತೆ, ಹಂಚಿಕೆ ಪ್ರಯತ್ನಗಳು ಮತ್ತು ಮಾರುಕಟ್ಟೆ ಶುಲ್ಕ / ಬಳಕೆದಾರರ ಶುಲ್ಕ ಪಾವತಿಯ ಆದ್ಯತೆ ಮೇರೆಗೆ ಪರಿಗಣಿಸಲಾಗುವುದು. 11) ಹಂಚಿಕೆಗೆ ಪ್ರಸ್ತಾಪಿಸಿರುವ ನಿವೇಶನ ಸಂಖ್ಯೆ ಹಾಗೂ ವಿಸ್ತೀರ್ಣಗಳಲ್ಲಿ ಹೆಚ್ಚು ಅಥವಾ ಕಡಿಮೆ ಮಾಡುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿರುತ್ತದೆ. 12) ಅರ್ಜಿದಾರರು ಹಂಚಿಕೆಗೆ ಕೋರಿರುವ ನಿವೇಶನ ಸಂಖ್ಯೆ ಹಂಚಿಕೆಗೆ ಲಭ್ಯವಾಗದಿದ್ದಲ್ಲಿ, ಅನ್ವಯಿಸುವ ಬೇರೆ ನಿವೇಶನ ಹಂಚಿಕೆಗೆ ಪರಿಗಣಿಸಲಾಗುವುದು. ಈ ಕುರಿತು ಅರ್ಜಿದಾರರು ಅಫಿಡವಿಟ್ ಸಲ್ಲಿಸತಕ್ಕದ್ದು. ಹಾಗೂ ಹಂಚಿಕೆಗೆ ಕೋರಿರುವ ನಿವೇಶನದ ಶೇ:25 ರಷ್ಟು ಠೇವಣಿಯು ಗರಿಷ್ಠ ಮೊತ್ತದ ಡಿ.ಡಿ.ಯಾಗಿರತಕ್ಕದ್ದು. 13) ನಿವೇಶನ ಹಂಚಿಕೆಯನ್ನು ನಿಯಮಾನುಸಾರ ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ಇವರ ಅನುಮೋದನೆಯ ಷರತ್ತಿಗೊಳಪಟ್ಟು ಹಂಚಿಕೆ ಮಾಡಲಾಗುವುದು. 14) ಸಮಿತಿಯು ನಿವೇಶನ ಹಂಚಿಕೆಯನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ. 15) ನಿಗದಿಪಡಿಸಿದ ದಿನಾಂಕದೊಳಗೆ ಅರ್ಜಿ ಹಾಗೂ ಡಿ.ಡಿ. ಸಲ್ಲಿಸುವುದು ತದನಂತರ ಬಂದಂತಹ ಅರ್ಜಿಗಳನ್ನಾಗಲಿ/ಡಿ.ಡಿ. ಗಳನ್ನು ಪರಿಗಣಿಸಲಾಗುವುದಿಲ್ಲ.
ಹೆಚ್ಚಿನ ವಿವರಗಳನ್ನು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ವಿಜಯಪುರ. ಇಲ್ಲಿ ರಜಾ ದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ಪಡೆಯಬಹುದು.
ಸಹಿ/– ಕಾರ್ಯದರ್ಶಿ, ಕೃ.ಉ.ಮಾ.ಸ, ವಿಜಯಪುರ
ಸಹಿ/– ಆಡಳಿತಾಧಿಕಾರಿಗಳು, ಕೃ.ಉ.ಮಾ.ಸ, ವಿಜಯಪುರ
ವಾಸಾಸಂಇ/ವಿಜಯಪುರ/214/ಎಂಸಿಎ/2022–23

ಎರಡನೇ ದಿನಕ್ಕೆ ಪ್ರತಿಭಟನೆ • ಸೇವೆ ಕಾಯಂ ಕುರಿತು ಲಿಖಿತ ಭರವಸೆ ನೀಡುವಂತೆ ಒತ್ತಾಯ

ಮುಷ್ಕರ: ಪಟ್ಟು ಸಡಿಲಿಸದ ಪೌರಕಾರ್ಮಿಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಸ್ವಚ್ಛತಾ ಕಾರ್ಮಿಕರನ್ನು ಸೇವೆಯಲ್ಲಿ ಕಾಯಂಗೊಳಿಸುವಂತೆ ಒತ್ತಾಯಿಸಿ ಪೌರಕಾರ್ಮಿಕರು ನಡೆಸುತ್ತಿರುವ ಅನಿರ್ದಿಷ್ಟಾವಧಿ ಮುಷ್ಕರ ಶುಕ್ರವಾರ ಎರಡನೇ ದಿನ ಪೂರೈಸಿತು.

ರಾಜ್ಯದ ಜಿಲ್ಲಾ ಕೇಂದ್ರ ಹಾಗೂ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರರಿಂದ ಮುಷ್ಕರ ಆರಂಭಗೊಂಡಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಸಚಿವರ ಜೊತೆಗೆ ನಡೆದಿದ್ದ ಮಾತುಕತೆ ವಿಫಲವಾಗಿದ್ದರಿಂದ ಪೌರಕಾರ್ಮಿಕರು, ಮುಷ್ಕರ ಮುಂದುವರಿಸಿದ್ದಾರೆ.

ಸ್ವಾತಂತ್ರ್ಯ ಉದ್ಯಾನದಲ್ಲಿ ನಿರ್ಮಿಸಿರುವ ಶೆಡ್‌ನಲ್ಲಿ ಶುಕ್ರವಾರ ರಾತ್ರಿಯಿಡೀ ತಂಗಿದ್ದ ಪೌರಕಾರ್ಮಿಕರು, ಶನಿವಾರವು ಮುಷ್ಕರ ಮುಂದುವರಿಸಿದರು. ಬೇಡಿಕೆ ಈಡೇರಿಸುವ ಬಗ್ಗೆ ಲಿಖಿತ ಭರವಸೆ ಸಿಗುವವರೆಗೆ ಮುಷ್ಕರ ಕೈಬಿಡುವುದಿಲ್ಲ-ವೆಂದು ಘೋಷಿಸಿದರು.

ಬೆಂಗಳೂರು ಸೇರಿ ಹಲವು ನಗರಗಳಲ್ಲಿ ಕೆಲಸಕ್ಕೆ ಗೈರಾಗಿದ್ದ ಪೌರಕಾರ್ಮಿಕರು, ಮುಷ್ಕರದಲ್ಲಿ ಪಾಲ್ಗೊಂಡು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. 'ಕೆಲಸ ಕಾಯಂಮಾತಿ ನಮ್ಮ ಹಕ್ಕು' ಎಂಬುದು ಸೇರಿ ಹಲವು ಘೋಷಣೆಯುಳ್ಳ ಫಲಕ ಪ್ರದರ್ಶಿಸಿದರು.

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಮುಷ್ಕರದಲ್ಲಿ ಪಾಲ್ಗೊಂಡಿದ್ದ ಪೌರಕಾರ್ಮಿಕರು

ಸಿದ್ದರಾಮಯ್ಯ ಭೇಟಿ: ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಶಾಸಕ ಜಮೀರ್ ಅಹ್ಮದ್ ಖಾನ್ ಅವರು ಮುಷ್ಕರ ಸ್ಥಳಕ್ಕೆ ಭೇಟಿ ನೀಡಿ ಬೆಂಬಲ ಸೂಚಿಸಿದರು.

'ತಳ ಸಮುದಾಯದ ಪೌರಕಾರ್ಮಿಕರ ಜೀವನ ಕಷ್ಟಕರ-ವಾಗಿದೆ. ಜೀವದ ಹಂಗು ತೊರೆದು, ಆರೋಗ್ಯವನ್ನೂ ಲೆಕ್ಕಿಸದೆ ಕೆಲಸ ಮಾಡುವ ಅವರ ಹಿತ ಕಾಯುವುದು ಸರ್ಕಾರದ ಜವಾಬ್ದಾರಿ' ಎಂದು ಸಿದ್ದರಾಮಯ್ಯ ಹೇಳಿದರು.

'ನಾನು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಪೌರಕಾರ್ಮಿಕರ ಹಲವು ಬೇಡಿಕೆಗಳನ್ನು ಈಡೇರಿಸಿದ್ದೆ. ಇಂದಿನ ಬಿಜೆಪಿ ಸರ್ಕಾರ ಪೌರಕಾರ್ಮಿಕರ ಹಿತ ಕಾಯುವಲ್ಲಿ ವಿಫಲವಾಗಿದೆ' ಎಂದು ದೂರಿದರು.

ಜಮೀರ್ ಅಹ್ಮದ್ ಖಾನ್, 'ಪೌರಕಾರ್ಮಿಕರ ಬೇಡಿಕೆಗಳನ್ನು ಎರಡು ವಾರದೊಳಗೆ ಈಡೇರಿಸಬೇಕು. ಇಲ್ಲದಿದ್ದರೆ, ಉದ್ಯಾನದಲ್ಲೇ ನಾನು ಸಹ ಮುಷ್ಕರ ಕುಳಿತುಕೊಳ್ಳುತ್ತೇನೆ' ಎಂದರು.

ಸಮಿತಿ ಶಿಫಾರಸು ಆಧರಿಸಿ ಕ್ರಮ – ಸಿ.ಎಂ

ಬೆಂಗಳೂರು: 'ಪೌರ ಕಾರ್ಮಿಕರ ಸೇವೆ ಕಾಯಂ, ಇತರೆ ಸಮಸ್ಯೆಗಳಿಗೆ ಪರಿಹಾರಕ್ಕೆ ಕುರಿತು ಅಧ್ಯಯನ ಮಾಡಲು ಪೌರ ಕಾರ್ಮಿಕರ ಪ್ರತಿನಿಧಿಗಳು, ಅಧಿಕಾರಿಗಳ-ನ್ನು ಒಳಗೊಂಡ ಜಂಟಿ ಸಮಿತಿ ರಚಿಸಲಾಗಿದೆ. ಸಮಿತಿಯ ಶಿಫಾರಸು ಮಾಡಿದ ತಕ್ಷಣ ಪ್ರಕ್ರಿಯೆ ಆರಂಭಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಪೌರ ಕಾರ್ಮಿಕರ ಸಮಸ್ಯೆಗಳನ್ನು ಸರ್ಕಾರ ಸಹಾನುಭೂತಿಯಿಂದ ಪರಿಶೀಲಿಸಲಿದೆ.ನೇರ ವೇತನ ಪಾವತಿ ವ್ಯವಸ್ಥೆಯಡಿ ಕಾರ್ಯನಿರ್ವಹಿಸುತ್ತಿರುವ ಪೌರ ಕಾರ್ಮಿಕರನ್ನು ಕಾಯಂಗೊಳಿಸಲು ತಾತ್ವಿಕವಾಗಿ ಸರ್ಕಾರ ಒಪ್ಪಿಕೊಂಡಿದೆ.' ಎಂದರು.

'ಪೌರ ಕಾರ್ಮಿಕರಿಗೆ ಆರೋಗ್ಯ, ಶಿಕ್ಷಣ ಸೇರಿದಂತೆ ಎಲ್ಲ ಸುರಕ್ಷತೆ ನೀಡಲು ಒಪ್ಪಲಾಗಿದೆ. ಮುಂದಿನ ವಿಧಾನಸಭಾ ಅಧಿವೇಶನದಲ್ಲಿ ಈ ಬಗ್ಗೆ ಚರ್ಚಿಸಲಾಗು-ವುದು. ಸೌಹಾರ್ದತೆಯಿಂದ ಸಮಸ್ಯೆಗಳನ್ನು ಬಗೆಹರಿಸಲಾಗುವುದು' ಎಂದರು.

ವಿಷ ಕುಡಿಯಲು ಪೌರಕಾರ್ಮಿಕರ ಯತ್ನ

ಹಾಸನ: ಕೆಲಸ ಕಾಯಂಗೆ ಆಗ್ರಹಿಸಿ ನಗರದ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಪೌರಕಾರ್ಮಿಕರು ನಡೆಸುತ್ತಿರುವ ಮುಷ್ಕರ 2ನೇ ದಿನಕ್ಕೆ ಕಾಲಿಟ್ಟಿದ್ದು, ಶನಿವಾರ ಕೆಲವರು ವಿಷ ಕುಡಿಯಲು ಯತ್ನಿಸಿದರು.

ಸ್ವಚ್ಛತೆ ಹಾಗೂ ಕುಡಿಯುವ ನೀರು ಪೂರೈಕೆ ಸ್ಥಗಿತಗೊಳಿಸಿರುವ ಪೌರಕಾರ್ಮಿಕರು ಮುಷ್ಕರದಲ್ಲಿ ನಿರತರಾಗಿದ್ದಾರೆ. ಕಸ ವಿಲೇವಾರಿ ವಾಹನಗಳ ಕೀ ಹಾಗೂ ವಿಷದ ಬಾಟಲಿಗಳನ್ನು ಎದುರಿನಲ್ಲಿ ಇಟ್ಟುಕೊಂಡು ಧರಣಿ ನಡೆಸಿದರು.

ಈ ವೇಳೆ ಕೆಲವರು ಏಕಾಏಕಿ ವಿಷದ ಬಾಟಲಿ ಕೈಗೆತ್ತಿಕೊಂಡು ಕುಡಿಯಲು ಮುಂದಾದರು. ಕೂಡಲೇ ತಡೆದ ಪೊಲೀಸರು, 10 ಬಾಟಲಿಗಳನ್ನು ವಶಕ್ಕೆ ಪಡೆದರು. ಈ ವೇಳೆ ಸ್ಥಳದಲ್ಲಿ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು.

ಸುದ್ದಿ 2 ನಿಮಿಷ

ಎಂಟು ಅನಾಹುತಗಳೇ ಮೋದಿ ಸಾಧನೆ: ಸಿದ್ದರಾಮಯ್ಯ

ಬೆಂಗಳೂರು: 'ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ್ದು ಎಂಟು ವರ್ಷಗಳಲ್ಲಿ ಸಾಲದ ಸುಳಿ, ಬೆಲೆಯೇರಿಕೆ, ತಾರಕಕ್ಕೇರಿದ ನಿರುದ್ಯೋಗ, ಕುಸಿದ ಆರ್ಥಿಕತೆ ಸೇರಿದಂತೆ ಎಂಟು ಅನಾಹುತಗಳೇ ದೊಡ್ಡ ಸಾಧನೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ಮೋದಿ ಸರ್ಕಾರದ ಆಡಳಿತ ವೈಫಲ್ಯಗಳೆಂದು ಪಟ್ಟಿ ಮಾಡಿದ ಕಿರುಹೊತ್ತಿಗೆ 'ವರುಷ ಎಂಟು, ಅವಾಂತರಗಳು ನೂರೆಂಟು'ವನ್ನು ಶನಿವಾರ ಬಿಡುಗಡೆಗೊಳಿಸಿ ಅವರು ಮಾತನಾಡಿದರು. 'ಹೈದರಾಬಾದ್‌ನಲ್ಲಿ ಬಿಜೆಪಿಯ ರಾಷ್ಟ್ರೀಯ ಕಾರ್ಯಕಾರಣಿ ಸಭೆ ನಡೆಯುತ್ತಿದ್ದು, ಈ ಪುಸ್ತಕದಲ್ಲಿರುವ ವಿಷಯಗಳಿಗೆ ಬಿಜೆಪಿಯವರು ಉತ್ತರ ನೀಡಬೇಕು' ಎಂದು ಆಗ್ರಹಿಸಿದರು.

'ಮೋದಿ ಸರ್ಕಾರ ಬಂದ ಬಳಿಕ ರೂಪಾಯಿ ಬೆಲೆ ಪಾತಾಳಕ್ಕೆ ಕುಸಿಯುತ್ತಿದೆ. ಹಣದುಬ್ಬರ 17 ವರ್ಷಗಳಲ್ಲಿ ತೀವ್ರಗತಿಗೆ ತಲುಪಿದೆ. ಒಕ್ಕೂಟ ವ್ಯವಸ್ಥೆ ಶಿಥಿಲವಾಗುತ್ತಿದೆ. ಪ್ರಜಾಪ್ರಭುತ್ವ ಭಯಭೀತವಾಗಿದೆ. ಜಿಎಸ್‌ಟಿ, ನೋಟು ರದ್ದತಿ, ಕೋವಿಡ್ ನಿರ್ವಹಣೆಯ ಎಡಬಿಡಂಗಿ ನಿಲುವುಗಳು ದೇಶದ ಬೆನ್ನುಮೂಳೆಯನ್ನು ಟೊಳ್ಳು ಮಾಡಿದೆ' ಎಂದು ದೂರಿದರು.

'ಲಾಭದಾಯಕ ಸಂಸ್ಥೆ, ಕಾರ್ಖಾನೆಗಳನ್ನು ಖಾಸಗಿಯವರಿಗೆ ಮಾರಲಾಗುತ್ತಿದೆ. ರೈತರು, ಕಾರ್ಮಿಕ, ಮಹಿಳೆ, ಯುವಜನ ವಿರೋಧಿ ಕಾನೂನುಗಳನ್ನು ಜಾರಿಗೊಳಿಸಿ ಜನರನ್ನು ದಮನಿಸಲಾಗುತ್ತಿದೆ. ಅಂಬಾನಿ, ಅದಾನಿಗಳಂಥ ಕಾರ್ಪೋರೇಟ್ ಬಂಡವಾಳಿಗರ-ನ್ನು ಕೊಬ್ಬಿಸಿ ಮೆರೆಸಲಾಗುತ್ತಿದೆ' ಎಂದರು.

'2014ರ ಲೋಕಸಭೆ ಚುನಾವಣೆಯಲ್ಲಿ ಮೋದಿ ಏನು ಹೇಳಿದ್ದರು? ಪ್ರಧಾನಿಯಾಗಿ ಏನು ಮಾಡಿದರು? ಬಡವರ, ಸಾಮಾನ್ಯರ ಜೀವನ ಹೇಗೆ ದುಸ್ತರವಾಗಿದೆ? ಎಂಬುದನ್ನು ಈ ಮೂಲಕ ತಿಳಿಸುವ ಪ್ರಯತ್ನ ಮಾಡಿದ್ದೇವೆ' ಎಂದು ಆರೋಪಿಸಿದರು.



ಶಿಕ್ಷಕನ ವಿರುದ್ಧ ಪ್ರಕರಣ ದಾಖಲು

ಕೊಪ್ಪಳ: ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಸಿಂಗಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಮಹಮ್ಮದ್ ಅಜರುದ್ದೀನ್ ಎಂಬಾತನ ವಿರುದ್ಧ ಕಾರಟಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಮಹಿಳೆ ಜೊತೆ ಅನೈತಿಕ ಸಂಬಂಧ ಹೊಂದಿದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆದ ಹಿನ್ನೆಲೆಯಲ್ಲಿ ಶಿಕ್ಷಕ ಈಗಾಗಲೇ ಅಮಾನ-ತುಗೊಂಡಿದ್ದು, ನಾಲ್ಕು ದಿನಗಳಿಂದ ಪತ್ತೆಯಾಗಿಲ್ಲ. ಕಾರಟಗಿಯ ಬಾಡಿಗೆ ಮನೆಯಲ್ಲಿ ವಾಸವಿದ್ದ ಆತನ ಮೊಬೈಲ್ ಫೋನ್ ಕೂಡ ಸ್ವಿಚ್ ಆಫ್ ಆಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಮಗಳಿಗೆ ಟ್ಯೂಷನ್ ಹೇಳಿಕೊಡುವುದರ ಜೊತೆಗೆ ಸರ್ಕಾರಿ ಸೌಲಭ್ಯ ಕಲ್ಪಿಸುವುದಾಗಿ ಹೇಳಿ ಮಹಮ್ಮದ್ ಅಜರುದ್ದೀನ್ ನನ್ನನ್ನು ಓಲೈಸಿ, ಮನೆಗೆ ಕರೆದೊಯ್ದು. ಲೈಂಗಿಕ ಕ್ರಿಯೆಗೆ ಸಹಕರಿಸಲು ಪದೇ ಪದೇ ಒತ್ತಾಯಿಸಿದ. ಇಲ್ಲದಿದ್ದರೆ, ವಿಡಿಯೊಗಳನ್ನು ತವರು ಮನೆಯವರಿಗೆ ಕಳುಹಿಸಿ, ಮಾನ-ಮರ್ಯಾದೆ ತೆಗೆಯುವುದಾಗಿ ಬೆದರಿಕೆ ಒಡ್ಡಿದ' ಎಂದು ಮಹಿಳೆಯೊಬ್ಬರು ದೂರು ನೀಡಿದ್ದಾರೆ.

ಕೋವಿಡ್: 17,092 ಹೊಸ ಪ್ರಕರಣ

ನವದೆಹಲಿ (ಪಿಟಿಐ): ದೇಶದಲ್ಲಿ ಶನಿವಾರ ಬೆಳಿಗ್ಗೆ 8 ಗಂಟೆಗೆ ಮುಕ್ತಾಯವಾದ 24 ತಾಸುಗಳಲ್ಲಿ ಹೊಸದಾಗಿ 17,092 ಕೋವಿಡ್ ಪ್ರಕರಣಗಳು ದೃಢಪಟ್ಟಿವೆ. ಇದೇ ಅವಧಿಯಲ್ಲಿ 29 ಮಂದಿ ಮೃತಪಟ್ಟಿದ್ದಾರೆ.

ಇದರೊಂದಿಗೆ ದೇಶದಲ್ಲಿ ಕೊರೊನಾ ಸೋಂಕಿತರ ಒಟ್ಟು ಸಂಖ್ಯೆ 4,34,86,326ಕ್ಕೆ ಏರಿಕೆಯಾಗಿದೆ, ಸಾವಿನ ಸಂಖ್ಯೆ 5,25,168ಕ್ಕೆ ತಲುಪಿದೆ.

ಹೊಸ ಸೋಂಕಿತರೂ ಸೇರಿ ಸಕ್ರಿಯ ಪ್ರಕರಣಗಳ ಸಂಖ್ಯೆ 1,09,568ಕ್ಕೆ ಏರಿಕೆಯಾಗಿದೆ. ಚೇತರಿಕೆ ಪ್ರಮಾಣ ಶೇ 98.54ರಷ್ಟಿದೆ. ದೈನಂದಿನ ಪಾಸಿಟಿವಿಟಿ ದರ ಶೇ 4.14ರಷ್ಟಿದೆ.

ಈ ಮಧ್ಯೆ ಕೊರೊನಾ ಸೋಂಕಿತರ ಪೈಕಿ 4,28,51,590 ಮಂದಿ ಗುಣಮುಖರಾಗಿದ್ದಾ-ರೆ. ದೇಶದಾದ್ಯಂತ 197.84 ಕೋಟಿ ಡೋಸ್ ಲಸಿಕೆ ವಿತರಣೆ ಮಾಡಲಾಗಿದೆ.

ಪ್ರೊ. ಬಿ.ಕೆ. ಚಂದ್ರಶೇಖರ್, ಸಿ.ಎನ್‌.ರಾಮಚಂದ್ರನ್ ಸೇರಿ ಹಲವು ಪ್ರಮುಖರ ಪ್ರಶ್ನೆ

'ಪಠ್ಯ ಪರಿಷ್ಕರಣೆ ಹಿಂದೆ ಯಾವ ಸಿದ್ಧಾಂತ?'

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಈಗ ಕೇವಲ ತೇಪೆ ಹಾಕುವ ಕೆಲಸ ಆಗಿದೆ
- ಶಿಕ್ಷಣ ಎಂದರೆ ಜೀವಪರ ಮೌಲ್ಯಗಳನ್ನು ಕಲಿಸುವುದು

ಬೆಂಗಳೂರು: 'ರೋಹಿತ್ ಚಕ್ರತೀರ್ಥ ನೇತೃತ್ವದ ಪಠ್ಯ ಪರಿಷ್ಕರಣ ಸಮಿತಿ ತೆಗೆದುಹಾಕಿರುವ ಮತ್ತು ಹೊಸದಾಗಿ ಸೇರಿಸಿರುವ ಪಠ್ಯಗಳನ್ನು ನೋಡಿದರೆ, ಆ ಸಮಿತಿಯಲ್ಲಿ ಇದ್ದವರಿಗೆ ಯಾವ ಜೀವಪರ ಮೌಲ್ಯವೂ ಬೇಕಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ' ಎಂದು ಸಿ.ಎನ್.ರಾಮಚಂದ್ರನ್, ಕೆ.ಮರುಳಸಿದ್ದಪ್ಪ, ಪ್ರೊ. ಬಿ.ಕೆ. ಚಂದ್ರಶೇಖರ್ ಅಭಿಪ್ರಾಯಪಟ್ಟಿದ್ದಾರೆ.

ಈ ಹೇಳಿಕೆಗೆ ಹಿ.ಶಿ. ರಾಮಚಂದ್ರೇಗೌಡ, ಎಸ್.ಜಿ.ಸಿದ್ಧ-ರಾಮಯ್ಯ, ಕಾಳೇಗೌಡ ನಾಗವಾರ, ಬಂಜಗೆರೆ ಜಯಪ್ರಕಾಶ್, ದಿನೇಶ್ ಅಮೀನ್ ಮಟ್ಟು ಅವರೂ ಸಹಮತ ವ್ಯಕ್ತಪಡಿಸಿದ್ದಾರೆ.

'10ನೇ ತರಗತಿಯ ಕನ್ನಡ ಪಠ್ಯ ಪುಸ್ತಕದಲ್ಲಿ ಸಮಿತಿಯು ಪರಿಷ್ಕರಿಸಿರುವುದು ಕೇವಲ ಕೆಲವು ಪದಗಳನ್ನು ಅಥವಾ ವಾಕ್ಯಗಳನ್ನು ಮಾತ್ರ. ಅಂದರೆ, ಸರ್ಕಾರ ಮಾಡಿರುವುದು ಕೇವಲ ತೇಪೆ ಹಾಕುವ ಕೆಲಸ. ಶಿಕ್ಷಣವೆಂದರೆ ಜೀವಪರ ಮೌಲ್ಯಗಳನ್ನು ವಿದ್ಯಾರ್ಥಿಗಳಿಗೆ ಕಲಿಸುವುದು. ಜೀವಪರ ಮೌಲ್ಯಗಳೆಂದರೆ ಪ್ರೀತಿ, ಲಿಂಗ ಸಮಾನತೆ, ಜಾತಿ ಪದ್ಧತಿ ವಿರೋಧ, ಶಾಂತಿ, ಸರ್ವ ಸಮಾನತೆ ಇತ್ಯಾದಿ' ಎಂದಿದ್ದಾರೆ.

ಪಠ್ಯಗಳ ಲೋಪಗಳನ್ನು ಪಟ್ಟಿ ಮಾಡಿರುವ ಅವರು, ಸಾಹಿತ್ಯ ಕ್ಷೇತ್ರದಲ್ಲಿ ಹಾಗೂ ವೈಚಾರಿಕ ವಲಯದಲ್ಲಿ ಹೆಸರು ಮಾಡಿರುವ ದಲಿತ ಬರಹಗಾರರ ಗದ್ಯ – ಪದ್ಯಗಳನ್ನು ಬಿಟ್ಟಿರುವುದರ ಹಿಂದೆ ಯಾವ ಸಿದ್ಧಾಂತವಿತ್ತು? ಸೇರಿಸಿರುವ ಪಠ್ಯಗಳಲ್ಲಿರುವ ಮೌಲ್ಯಗಳು ಊಳಿಗಮಾನ್ಯ ಸಮಾಜದ ಮೌಲ್ಯಗಳೇ ಹೊರತು ಪ್ರಜಾಪ್ರಭುತ್ವದ ಮೌಲ್ಯಗಳಲ್ಲ. ನಾವು ಯಾರನ್ನು ಸದ್ಗುಣಗಳ ಸಾಕಾರ ಸ್ವರೂಪನೆಂದು ಸರ್ವಥಾ ಪ್ರಮಾದಾತೀತನೆಂದು ಭಾವಿಸುವೆವೋ ಆ ವ್ಯಕ್ತಿಯೇ ನಮ್ಮ ಆದರ್ಶ ಆಗಬೇಕು' ಎಂದು ಪ್ರತಿಪಾದಿಸುತ್ತಾ 'ವ್ಯಕ್ತಿಪೂಜೆ' ಎತ್ತಿ ಹಿಡಿಯುವ ಹೆಡಗೇವಾರ್ ಅವರ 'ನಿಜವಾದ ಆದರ್ಶ ಪುರುಷ ಯಾರಾಗಬೇಕು?' (ಬೇರೆ ಯಾರ 'ಭಾಷಣ'ವಾಗಲೀ 'ಬರಹ'ವಾಗಲೀ ಸಿಗಲಿಲ್ಲವೇ?) ಎಂಬ ಲೇಖನ ಸೇರಿಸಿರುವುದಕ್ಕೂ ಆಕ್ಷೇಪಿಸಿದ್ದಾರೆ.

'ಪಠ್ಯ ಪರಿಷ್ಕರಣೆ ಸಂದರ್ಭದಲ್ಲಿ, ಬಾಲ್ಯದಿಂದಲೇ ಮಹಿಳಾ ಸಬಲೀಕರಣ ಮತ್ತು ಲಿಂಗ ಸಮಾನತೆಯನ್ನು ಸರಳವಾಗಿ ಪರಿಚಯಿಸುವ ಪಠ್ಯಗಳ ಅಗತ್ಯವನ್ನು ಈಗಲಾದರೂ ಸರ್ಕಾರಗಳು ಮನಗಾಣಬೇಕು. ಲಿಂಗ ಸಂವೇದನೆಯನ್ನು ಬೆಳಗಲು ಇದು ಪರಿಣಾಮಕಾರಿ ಹಾಗೂ ಹೆಣ್ಣಿನ ಸಾಂಪ್ರದಾಯಿಕ ವ್ಯಕ್ತಿತ್ವದ ಮಾದರಿಗಳು ಪಠ್ಯಗಳಲ್ಲಿ ಇರದಂತೆ ನೋಡಿಕೊಳ್ಳುವುದು ಅಷ್ಟೇ ಮುಖ್ಯ. ಹೆಚ್ಚಿನ ಶ್ರಮ ಹಾಗೂ ಬದ್ಧತೆಗಳು ಕೌಟುಂಬಿಕ ಹಾಗೂ ಸಾಮಾಜಿಕ ಸಂದ-ರ್ಭಗಳಲ್ಲಿ ನಿರ್ಣಾಯಕ ಎನ್ನುವುದನ್ನು ಎತ್ತಿ ಹಿಡಿಯುವ ನಿರೂಪಣೆಗಳು ಪಠ್ಯ-ದಲ್ಲಿರಬೇಕು' ಎಂದಿದ್ದಾರೆ.

'ಮಹಾತ್ಮಗಾಂಧಿಯವರ ಹತ್ಯೆಯ ಘಟನೆ, ಹಂತಕ ಗೋಡ್ಸೆ ಕುರಿತ ಮಾಹಿತಿಯನ್ನೆಲ್ಲಾ ಕೈ ಬಿಟ್ಟಿದ್ದು 'ಆರೋಗ್ಯಕರ ಚಿಂತನೆ'ಗೆ ಮಾರಕವಾಗಿತ್ತೇ' ಎಂದೂ ಪ್ರಶ್ನಿಸಿರುವ ಅವರು, '20ನೇ ಶತಮಾನದ ಬಹುದೊಡ್ಡ ಮುತ್ಸದ್ದಿ ಜವಾಹರಲಾಲ್ ನೆಹರು ಅವರು ಬರೆದಿದ್ದ, ನಿರಂತರವಾಗಿ ಪ್ರತಿಪಾದಿಸಿದ್ದ, ಭಾರತದ 'ವಿವಿಧತೆ ಮತ್ತು ಪ್ರಜಾಪ್ರಭುತ್ವದ ಮಾದರಿ' ಎಂಬ ಪಠ್ಯ ಉತ್ತಮ ಚಿಂತನೆಗೆ ವಿರುದ್ಧವಾಗಿತ್ತೇ' ಎಂದೂ ಕೇಳಿದ್ದಾರೆ.

ಪ್ರಜಾವಾಣಿ – ಡೆಕ್ಕನ್ ಹೆರಾಲ್ಡ್ ವತಿಯಿಂದ ಕರ್ನಾಟಕದ ಅತಿ ದೊಡ್ಡ ಶೈಕ್ಷಣಿಕ ಮೇಳ

ಶೈಕ್ಷಣಿಕ ಮಾಹಿತಿಯ ರಸದೌತಣ 'ಎಡ್ಯುವರ್ಸ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿಗಳ ಗೊಂದಲಗಳಿಗೆ ತಜ್ಞರಿಂದ ಪರಿಹಾರ, ಪಿಯುಸಿ ನಂತರ ಮುಂದೇನು ಎನ್ನುವ ತೊಳಲಾಟದಲ್ಲಿರುವ ಮನಸ್ಸುಗಳಲ್ಲಿ ಭವಿಷ್ಯದ ಬದುಕು ರೂಪಿಸಿಕೊಳ್ಳುವ ಶಿಕ್ಷಣದ ಮಾಹಿತಿ, ಸಿಇಟಿ, ಕಾಮೆಡ್‌–ಕೆ ಕುರಿತ ವಿವರಗಳ ಅನಾವರಣ....

'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ವತಿಯಿಂದ ಶನಿವಾರ ನಗರದ ಜಯಮಹಲ್ ಪ್ಯಾಲೇಸ್ ಹೋಟೆಲ್ ಆವರಣದಲ್ಲಿ ಆಯೋಜಿಸಿದ್ದ ಕರ್ನಾಟಕದ ಅತಿ ದೊಡ್ಡ ಶೈಕ್ಷಣಿಕ ಮೇಳ 'ಎಡ್ಯುವರ್ಸ್' ಜ್ಞಾನ ದೇಗುಲ–2022 ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗ-ಳಿಗೆ ಶಿಕ್ಷಣ ಕ್ಷೇತ್ರಗಳ ಒಳನೋಟಗಳನ್ನು ಪರಿಚಯಿಸುವ ಮೂಲಕ ಸುಂದರ ಬದುಕು ರೂಪಿಸಿಕೊಳ್ಳುವ ಮಾರ್ಗ ತೋರಿಸುವ ಪ್ರಯತ್ನ ಮಾಡಲಾಯಿತು.

ವಿದ್ಯಾರ್ಥಿಗಳ ಭವಿಷ್ಯಕ್ಕಾಗಿ ಉತ್ತಮ ಮಾರ್ಗದರ್ಶನ ಒದಗಿಸುವ ಉದ್ದೇಶದ ಈ ಶೈಕ್ಷಣಿಕ ಮೇಳದಲ್ಲಿ ವಿವಿಧೆಡೆಯಿಂದ ಬಂದಿದ್ದ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಬೆಂಗಳೂರಿನಲ್ಲಿ ಶನಿವಾರ 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕೆ ಆಯೋಜಿಸಿದ್ದ 'ಎಡ್ಯುವರ್ಸ್'–2022ರ 12ನೇ ಆವೃತ್ತಿಯ ಶೈಕ್ಷಣಿಕ ಮೇಳವನ್ನು ದಿ ಬಂಜಾರ ಅಕಾಡೆಮಿ ಅಧ್ಯಕ್ಷ ಡಾ. ಅಲಿ ಖ್ವಾಜಾ ಉದ್ಘಾಟಿಸಿದರು. ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಸಾರ್ವಜನಿಕ ಸಂಪರ್ಕಾಧಿಕಾರಿ ಶ್ರೀನಿವಾಸ ಮೂರ್ತಿ, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್‌ನ ಜಂಟಿ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್. ತಿಲಕ್ ಕುಮಾರ್, ವಿದ್ಯಾರ್ಥಿಗಳಾದ ಗ್ರೀಷ್ಮಾ ಮತ್ತು ಗರ್ವ್, ಕಾಮೆಡ್–ಕೆ ಅಧಿಕಾರಿ ಪ್ರೊ. ಶಾಂತಾರಾಮ ನಾಯಕ್ ಇದ್ದರು – ಪ್ರಜಾವಾಣಿ ಚಿತ್ರ

ಪಿಯುಸಿ ಬಳಿಕ ಲಭ್ಯವಿರುವ ಕೋರ್ಸ್‌ಗಳು, ಅವಕಾಶಗಳ ಬಗ್ಗೆ ಮಾಹಿತಿ ತಜ್ಞರಿಂದ ದೊರೆಯಿತು. ಸಿಇಟಿ, ನೀಟ್, ಕಾಮೆಡ್‌–ಕೆ ಕೌನ್ಸೆಲಿಂಗ್ ಕುರಿತು ಅಧಿಕಾರಿಗಳ ಜತೆ ನೇರ ಸಂವಹನ ನಡೆಸುವ ಮೂಲಕ ವಿದ್ಯಾರ್ಥಿಗಳು ಮತ್ತು ಪೋಷಕರು ಗೊಂದಲಗಳನ್ನು ಪರಿಹರಿಸಿಕೊಂಡರು.

ಬಂಜಾರ ಅಕಾಡೆಮಿ ಸಂಸ್ಥಾಪಕ ಮತ್ತು ಅಧ್ಯಕ್ಷ ಡಾ. ಅಲಿ ಖ್ವಾಜಾ, ವಿದ್ಯಾರ್ಥಿಗಳಿಗೆ ಸ್ಫೂರ್ತಿ ತುಂಬುವ ಮಾತುಗಳ ಮೂಲಕ ಮಾರ್ಗದರ್ಶನ ಮಾಡಿದರು.

ಕಾಮೆಡ್‌–ಕೆ ಕೌನ್ಸೆಲಿಂಗ್ ಕುರಿತು ಪ್ರೊ.ಶಾಂತಾರಾಮ ನಾಯಕ್, ಸಿಇಟಿ ಪ್ರಕ್ರಿಯೆ ಮತ್ತು ಕೌನ್ಸೆಲಿಂಗ್ ಕುರಿತು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಸಾರ್ವಜನಿಕ ಸಂಪರ್ಕಾಧಿಕಾರಿ ಶ್ರೀನಿ-ವಾಸಮೂರ್ತಿ ಹಾಗೂ ಮಲ್ಲೇಶ್ವರದ ಸರ್ಕಾರಿ ಕಾಲೇಜಿನ ಪ್ರಾಂಶುಪಾಲ ಎಸ್. ರವಿಕುಮಾರ್ ಅವರು ವಿದ್ಯಾ-ರ್ಥಿಗಳಿಗೆ ಮಾರ್ಗದರ್ಶನ ಮಾಡಿದರು.

ದೇಶದ ವಿವಿಧೆಡೆಯ 50ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳು ಮಳಿಗೆಗಳನ್ನು ಮೇಳದಲ್ಲಿ ತೆರೆದಿದ್ದು, ವಿದ್ಯಾ-ರ್ಥಿಗಳಿಗೆ ಮತ್ತು ಪೋಷಕರಿಗೆ ವಿವಿಧ ಕೋರ್ಸ್‌ಗಳು ಮತ್ತು ಸೌಲಭ್ಯಗಳು ಕುರಿತು ಮಾಹಿತಿ ನೀಡಲಾಯಿತು.

ಜುಲೈ 3ರಂದು ಸಹ ಈ ಶೈಕ್ಷಣಿಕ ಮೇಳ ನಡೆಯಲಿದೆ.

ಪಿಎಸ್‌ಐ ಅಕ್ರಮ: ಬೆನ್ನಟ್ಟಿ ಅಭ್ಯರ್ಥಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮ ಎಸಗಿ ರಾಜ್ಯಕ್ಕೆ 4ನೇ ರ‍್ಯಾಂಕ್ ಪಡೆದಿದ್ದ ಆರೋಪಿ ಎಸ್. ಜಾಗೃತ್ ಅವರನ್ನು ಸಿಐಡಿ ಅಧಿಕಾರಿಗಳು ಸಿನಿಮೀಯ ರೀತಿಯಲ್ಲಿ ಬೆನ್ನಟ್ಟಿ ಶುಕ್ರವಾರ ರಾತ್ರಿ ಬಂಧಿಸಿದ್ದಾರೆ.

'ಹೈಗ್ರೌಂಡ್ಸ್ ಠಾಣೆಯಲ್ಲಿ ಪ್ರಕರಣ ದಾಖಲಾಗುತ್ತಿದ್ದಂತೆ ತಲೆಮರೆಸಿ-ಕೊಂಡಿದ್ದ ಜಾಗೃತ್‌ನನ್ನು ಬಂಧಿಸಿ ನ್ಯಾಯಾಲಯಕ್ಕೆ ಶನಿವಾರ ಹಾಜರುಪ-ಡಿಸಲಾಯಿತು. ಹೆಚ್ಚಿನ ವಿಚಾರಣೆಗಾಗಿ ಈತನನ್ನು 10 ದಿನ ಕಸ್ಟಡಿಗೆ ಪಡೆಯಲಾಗಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

'ಒಎಂಆರ್ ಪ್ರತಿ ತಿದ್ದುಪಡಿ ಮಾಡಿಸಿ ರ‍್ಯಾಂಕ್ ಪಡೆದಿದ್ದ ಜಾಗೃತ್, ಅದಕ್ಕಾಗಿ ಲಕ್ಷಾಂತರ ರೂಪಾಯಿ ನೀಡಿರುವ ಮಾಹಿತಿ ಇದೆ. ಆತ ಯಾರಿಗೆಲ್ಲ ಹಣ ನೀಡಿದ್ದನೆಂಬುದು ವಿಚಾರಣೆಯಿಂದ ಗೊತ್ತಾಗಬೇಕಿದೆ' ಎಂದೂ ಮೂಲಗಳು ತಿಳಿಸಿವೆ.

ಕಾರು ಬೆನ್ನಟ್ಟಿ ಬಂಧನ: 'ಏ.30ರಿಂದ ನಾಪತ್ತೆಯಾಗಿದ್ದ ಜಾಗೃತ್, ನಿರೀಕ್ಷಣಾ ಜಾಮೀನು ಕೋರಿ ವಕೀಲರ ಮೂಲಕ ಅರ್ಜಿ ಸಲ್ಲಿಸಿದ್ದ. ಆದರೆ, ಜಾಮೀನು ಸಿಕ್ಕಿರಲಿಲ್ಲ. ಇದಾದ ನಂತರವೂ ಆತ ತಲೆಮರೆಸಿಕೊಂಡು ಓಡಾಡುತ್ತಿದ್ದ' ಎಂದು ಸಿಐಡಿ ಮೂಲಗಳು ಹೇಳಿವೆ.

'ಮೈಸೂರಿನಲ್ಲಿದ್ದ ಜಾಗೃತ್, ಗುತ್ತಿಗೆದಾರರೂ ಆಗಿರುವ ತಂದೆ ಜೊತೆ ಕಾರಿನಲ್ಲಿ ಶುಕ್ರವಾರ ಬೆಂಗಳೂರಿನತ್ತ ಬರುತ್ತಿದ್ದ. ಈ ಬಗ್ಗೆ ಮಾಹಿತಿ ಕಲೆಹಾಕಿದ್ದ ವಿಶೇಷ ತಂಡದ ಅಧಿಕಾರಿಗಳು, ಮೈಸೂರಿಗೆ ಹೋಗಿ ಕಾರ್ಯಾಚರಣೆ ಆರಂಭಿಸಿದ್ದರು.'

'ಮೈಸೂರಿನಿಂದ ಹೊರಟಿದ್ದ ಜಾಗೃತ್‌ನ ಕಾರನ್ನು ಅಧಿಕಾರಿಗಳು ಹಿಂಬಾಲಿಸುತ್ತಿದ್ದರು. ಚನ್ನಪಟ್ಟಣ ಬಳಿ ಕಾರು ತಡೆಯಲು ಯತ್ನಿಸಿದ್ದರು. ಸಿಐಡಿ ಅಧಿಕಾರಿಗಳನ್ನು ಕಂಡ ಜಾಗೃತ್, ಅತೀ ವೇಗವಾಗಿ ಕಾರು ಚಲಾಯಿಸಿಕೊಂಡು ಪರಾರಿಯಾಗಲು ಯತ್ನಿಸಿದ್ದ. ಮುಖ್ಯ ರಸ್ತೆ ಬಿಟ್ಟು ಒಳರಸ್ತೆಗಳಲ್ಲಿ ಕಾರು ಚಲಾಯಿಸಿದ್ದ.'

'ಸ್ಥಳೀಯ ಪೊಲೀಸರಿಗೆ ಮಾಹಿತಿ ನೀಡಿದ್ದ ಸಿಐಡಿ ಅಧಿಕಾರಿಗಳು, ಅವರ ಸಹಾಯದಿಂದ ಕಾರ್ಯಾಚರಣೆ ನಡೆಸಿ ಜಾಗೃತ್‌ನನ್ನು ಬಂಧಿಸುವಲ್ಲಿ ಯಶಸ್ವಿಯಾದರು. ಕಾರಿನಲ್ಲಿ ತಂದೆ ಸಹ ಇದ್ದರು. ಅಗತ್ಯವಿದ್ದ-ರೆ ಅವರಿಗೂ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು' ಎಂದೂ ಮೂಲಗಳು ತಿಳಿಸಿವೆ.

ಬಂಧನಕ್ಕೆ ವಾರೆಂಟ್: ತಲೆ ಮರೆಸಿಕೊಂಡಿರುವ ಅಭ್ಯರ್ಥಿಗಳಾದ ರಚನಾ ಹನುಮಂತ, ಜಿ.ಶಿವರಾಜ್ ಸೇರಿ ನಾಲ್ವರ ಬಂಧನಕ್ಕೆ ನ್ಯಾಯಾಲಯದಿಂದ ವಾರೆಂಟ್ ಜಾರಿಯಾಗಿದೆ.

ಅಧಿಕಾರಕ್ಕಾಗಿ ಕಾಂಗ್ರೆಸ್ ಸೇರಿದ ಸಿದ್ದರಾಮಯ್ಯ: ಛಲವಾದಿ

ಕೋಲಾರ: 'ಸಿದ್ದರಾಮಯ್ಯ ವಿರುದ್ಧ ದೂರು ದಾಖಲಿಸಿದ ಉದ್ದೇಶ ಅವರನ್ನು ಜೈಲಿಗೆ ಕಳುಹಿಸಬೇಕು ಎಂಬುದಲ್ಲ. ತಮ್ಮ ವರ್ತನೆಯನ್ನು ಅವರು ಬದಲಿಸಿಕೊಳ್ಳಬೇಕು' ಎಂದು ವಿಧಾನ ಪರಿಷತ್ ಸದಸ್ಯ ಛಲವಾದಿ ನಾರಾಯಣಸ್ವಾಮಿ ಟೀಕಿಸಿದರು.

ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ದಲಿತರು ಹೊಟ್ಟೆಪಾಡಿಗೆ ಬಿಜೆಪಿಗೆ ಹೋಗುತ್ತಾರೆ ಎಂಬುದಾಗಿ ಸಿದ್ದರಾಮಯ್ಯ ಲಘುವಾಗಿ ಮಾತನಾಡಿದ್ದರು. ಗುಲಾಮಗಿರಿ ಎಂಬ ಪದವನ್ನೂ ಬಳಸಿದ್ದರು. ಅವರು ಕೂಡ ಅಧಿಕಾರಕ್ಕಾಗಿ ಕಾಂಗ್ರೆಸ್ ಸೇರಿದ ಗುಲಾಮ' ಎಂದು ಹೇಳಿದರು.

'ಅಸ್ಪೃಶ್ಯರು ಎಂಬ ಪದ ಬಳಸಿದ್ದಾರೆ. ಮುಖ್ಯಮಂತ್ರಿಯಾ-ಗಿದ್ದ ವ್ಯಕ್ತಿ ದಲಿತರನ್ನು ಇನ್ನೂ ಅಸ್ಪೃಶ್ಯರಂತೆ ನೋಡುತ್ತಿದ್ದು, ತಮ್ಮ ಮನೋಭಾವವನ್ನು ಬದಲಾಯಿಸಿಕೊಂಡಿಲ್ಲ. ಹೀಗಾಗಿ, ದೂರು ದಾಖಲಿಸಿದೆ' ಎಂದರು.

ಹುಲಿ ದಾಳಿ: ಇಬ್ಬರು ರೈತರಿಗೆ ಗಾಯ

ಪ್ರಜಾವಾಣಿ ವಾರ್ತೆ

ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಕಾಡಂಚಿನ ಗ್ರಾಮ ಲಕ್ಕಿಪುರದ ಜಮೀನಲ್ಲಿ ಶನಿವಾರ ಹುಲಿ ಇಬ್ಬರು ರೈತರ ಮೇಲೆ ದಾಳಿ ನಡೆಸಿದೆ. ಇಬ್ಬರಿಗೂ ತೀವ್ರ ಗಾಯಗಳಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.

ತಾಲ್ಲೂಕಿನ ಗೋಪಾಲಪುರ ಗ್ರಾಮದ ಗವಿಯಪ್ಪ ಹಾಗೂ ರಾಜಶೇಖರ ಗಾಯಗೊಂಡವರು.

ಗವಿಯಪ್ಪ ಜಮೀನಿನಲ್ಲಿ ಹಸು ಮೇಯಿಸಿಕೊಂಡು ಕೃಷಿ ಚಟುವ-ಟಿಕೆಯಲ್ಲಿ ತೊಡಗಿದ್ದರು. ಈ ವೇಳೆ ಹುಲಿ ಹಸುವಿನ ಮೇಲೆ ದಾಳಿ ಮಾಡಿದೆ. ಹಸು ರಕ್ಷಿಸಲು ಗವಿಯಪ್ಪ ಯತ್ನಿಸಿದಾಗ ಅವರ ಮೇಲೂ ದಾಳಿ ನಡೆಸಿ ಗಾಯಗೊಳಿಸಿದೆ. ಬಲ ಕಣ್ಣಿನ ಭಾಗ, ತಲೆಗೆ ತೀವ್ರವಾಗಿ ಗಾಯಗಳಾಗಿದ್ದು, ದೇಹದಲ್ಲಿ ಪರಚಿದ ಗಾಯಗಳಾಗಿವೆ.

ಅವರು ಜೋರಾಗಿ ಕಿರುಚಿದಾಗ ಅಕ್ಕಪಕ್ಕದ ಜಮೀನಿನಲ್ಲಿದ್ದ ರೈತರೆಲ್ಲ ಒಟ್ಟಾಗಿ ಬಂದಿದ್ದಾರೆ. ಅದರಿಂದ ಬೆದರಿದ ಹುಲಿ ಸಮೀಪದಲ್ಲಿರುವ ಶಿವಬಸಪ್ಪ ಎಂಬುವರ ಬಾಳೆ ತೋಟಕ್ಕೆ ನುಗ್ಗಿತು.

ವಿಷಯ ತಿಳಿದು ಅರಣ್ಯ ಇಲಾಖೆ ಸಿಬ್ಬಂದಿ ಮತ್ತು ಗ್ರಾಮಸ್ಥರು ಹುಲಿಗಾಗಿ ಹುಡುಕಾಡುತ್ತಿದ್ದಾಗ ಕೆಲವರು ಹುಲಿಗೆ ಕಲ್ಲು ಹೊಡೆದರು.

ಕೋಪಗೊಂಡ ಹುಲಿ. ರಾಜಶೇಖರ ಎಂಬುವರ ಮೇಲೆ ದಾಳಿ ನಡೆಸಿ ಎಳೆದೊಯ್ದಲು ಪ್ರಯತ್ನಿಸಿತು. ಸಮೀಪದಲ್ಲಿದ್ದವ-ರು ಗದ್ದಲ ಮಾಡಿದ್ದರಿಂದ ಮತ್ತೆ ಬಾಳೆ ತೋಟದೊಳಕ್ಕೆ ಓಡಿತು. ರಾಜಶೇಖರ ಅವರ ಮಂಡಿಗೆ ತೀವ್ರ ಗಾಯವಾಗಿದೆ.

ಹುಲಿಯು ಬಾಳೆ ತೋಟದಲ್ಲೇ ಇದೆ ಎಂದು ಹೇಳಲಾಗುತ್ತಿದ್ದು, ಬಂಡೀಪುರದ ಅರಣ್ಯ ಸಿಬ್ಬಂದಿ ಸ್ಥಳದಲ್ಲಿ ಬೀಡು ಬಿಟ್ಟಿದ್ದಾರೆ. ನಾಳೆ ಆನೆಯ ಮೂಲಕ ಕಾರ್ಯಾಚರಣೆ ನಡೆಸಲು ಅಧಿಕಾರಿಗಳು ಚಿಂತನೆ ನಡೆಸಿದಾರೆ.

ಹುಲಿಯ ದಾಳಿಯಿಂದ ಗವಿಯಪ್ಪ ಅವರಿಗೆ ಗಾಯವಾಗಿದೆ

ಗುಂಡ್ಲುಪೇಟೆ ತಾಲ್ಲೂಕಿನ ಲಕ್ಕಿಪುರ ಗ್ರಾಮದ ಬಾಳೆ ತೋಟದಲ್ಲಿ ಕಾಣಿಸಿಕೊಂಡ ವ್ಯಾಘ್ರ

ಕಾಡಾನೆ ದಾಳಿ: ವೃದ್ಧ ಸಾವು

ಹಾಸನ: ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಕೆಳಗಳಲೆ ಗ್ರಾಮದಲ್ಲಿ ಕಾಡಾನೆ ದಾಳಿಯಿಂದ ವೃದ್ಧರೊಬ್ಬರು ಮೃತಪಟ್ಟಿದ್ದಾರೆ.

ಕೃಷ್ಣೇಗೌಡ (67) ಮೃತ. ಶನಿವಾರ ಬೆಳಿಗ್ಗೆ ಪುತ್ರ ಸುದೀಶ್, ಮೊಮ್ಮಗ ಪ್ರಥಮ್ ಜೊತೆ ತೋಟಕ್ಕೆ ತೆರಳುವ ವೇಳೆ ಕಾಡಾನೆ ದಾಳಿ ಮಾಡಿದೆ. ಇದನ್ನು ನೋಡಿದ ಇತರರು ಓಡಿ ಹೋಗಿದ್ದಾರೆ. ಈ ವೇಳೆ ಕೃಷ್ಣೇಗೌಡ ಕೆಳಗೆ ಬಿದ್ದಿದ್ದು ಆನೆಯು ಕಾಲಿನಿಂದ ತುಳಿದಿದೆ. ಸ್ಥಳದಲ್ಲೇ ಕೃಷ್ಣೇಗೌಡ ಮೃತಪಟ್ಟಿದ್ದಾರೆ.

ಕೃಷ್ಣೇಗೌಡ ಅವರ ಮನೆಯಲ್ಲಿ ಶೋಕ ಮಡುಗಟ್ಟಿದ್ದು, ಸಂಬಂಧಿಕರ ಆಕ್ರಂದನ ಮುಗಿಲು ಮುಟ್ಟಿದೆ. ತೀವ್ರ ಆಕ್ರೋಶ ವ್ಯಕ್ತಪಡಿಸಿದ ಗ್ರಾಮಸ್ಥರು, ಬೆಂಗಳೂರು– ಮಂಗಳೂರು ಹೆದ್ದಾರಿಯಲ್ಲಿ ಅರ್ಧ ಗಂಟೆ ಪ್ರತಿಭಟನೆ ನಡೆಸಿದರು.

ಅಂಗವಿಕಲ ವಿದ್ಯಾರ್ಥಿನಿಗೆ ಹೈಕೋರ್ಟ್ ನ್ಯಾಯ

ಬೆಂಗಳೂರು: ಅಂಗವಿಕಲತೆಯ ಪ್ರಮಾಣಪತ್ರ ಸಲ್ಲಿಸಲು ಐದು ನಿಮಿಷ ವಿಳಂಬವಾಗಿದೆ ಎಂಬ ಕಾರಣಕ್ಕೆ ವೈದ್ಯಕೀಯ ಸೀಟು ಪಡೆಯಲು ವಿಫಲವಾಗಿದ್ದ ಬೆಳಗಾವಿಯ ಯುವತಿಗೆ ನ್ಯಾಯ ಒದಗಿಸಿರುವ ಹೈಕೋರ್ಟ್, ಎಂಬಿಬಿಎಸ್ ಸೀಟು ನೀಡುವಂತೆ ಬೆಳಗಾವಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಆದೇಶಿಸಿದೆ.

ಈ ಸಂಬಂಧ ವಿದ್ಯಾರ್ಥಿನಿ ತಜೀನ್ ಇನಾಂದಾರ್ ಸಲ್ಲಿಸಿದ್ದ ಅರ್ಜಿಯನ್ನು ಧಾರವಾಡ ಹೈಕೋರ್ಟ್ ಪೀಠದ, ನ್ಯಾಯ-ಮೂರ್ತಿಗಳಾದ ಕೃಷ್ಣ ಎಸ್. ದೀಕ್ಷಿತ್ ಮತ್ತು ಪಿ.ಕೃಷ್ಣಭಟ್ ಅವರಿದ್ದ ವಿಭಾಗೀಯ ನ್ಯಾಯಪೀಠ ಮಾನ್ಯ ಮಾಡಿದೆ.

'ಕಾಲ ಕೆಲವೊಮ್ಮ ಕೆಲವರ ಜೀವನದಲ್ಲಿ ಏರುಪೇರು ಉಂಟು ಮಾಡುತ್ತದೆ ಮತ್ತು ಅವರು ಆ ಸನ್ನಿವೇಶದಲ್ಲಿ ಸಂತ್ರಸ್ತರಾಗುತ್ತಾರೆ. ಅಲ್ಪ ಸಂಖ್ಯಾತ ಸಮುದಾಯಕ್ಕೆ ಸೇರಿದ ಬಡ ಕುಟುಂಬದಿಂದ ಬುದ್ಧಿವಂತ ಹುಡುಗಿಗೆ ತೊಂದರೆ ಆಗಬಾರದು. ಆಕೆ ತನ್ನ ಜ್ಯೇಷ್ಠತೆ ಆಧಾರದಲ್ಲಿ ಪಡೆದಿರುವ ಸೀಟನ್ನು ಅಕೆಗೆ ನೀಡಬೇಕು' ಎಂದು ನ್ಯಾಯಪೀಠ ಆದೇಶಿಸಿದೆ.

ಮಾಜಿ ಶಾಸಕರ ಸೇರ್ಪಡೆಗೆ ನನ್ನನೇಕೆ ಕರೆಯಲಿಲ್ಲ: ಮುನಿಯಪ್ಪ ಪ್ರಶ್ನೆ

'ರಮೇಶ್ ಕುಮಾರ್ ಶಕುನಿ ಇದ್ದಂತೆ'

ಪ್ರಜಾವಾಣಿ ವಾರ್ತೆ

ಕೋಲಾರ: ಮಾಜಿ ಶಾಸಕರಾದ ಕೊತ್ತೂರು ಮಂಜುನಾಥ್ ಹಾಗೂ ಡಾ.ಎಂ.ಸಿ. ಸುಧಾಕರ್ ಸೇರ್ಪಡೆ ಬೆನ್ನಲ್ಲೇ ಜಿಲ್ಲಾ ಕಾಂಗ್ರೆಸ್‌ನಲ್ಲಿ ಭಿನ್ನಮತ ಸ್ಫೋಟಗೊಂಡಿದ್ದು, ಕೇಂದ್ರದ ಮಾಜಿ ಸಚಿವ ಕೆ.ಎಚ್. ಮುನಿಯಪ್ಪ ಶನಿವಾರ ಇಲ್ಲಿ ಕರೆದ ಬೆಂಬಲಿಗರ ಸಭೆಯಲ್ಲಿ ಕೆ.ಆರ್. ರಮೇಶ್ ಕುಮಾರ್, ಡಿ.ಕೆ. ಶಿವಕುಮಾರ್ ಹಾಗೂ ಸಿದ್ದರಾಮಯ್ಯ ವಿರುದ್ಧ ಆಕ್ರೋಶ ವ್ಯಕ್ತವಾಯಿತು.

'ಕಳೆದ ಲೋಕಸಭಾ ಚುನಾವಣೆಯಲ್ಲಿ ಬಹಿರಂಗವಾಗಿ ಬಿಜೆಪಿ ಬೆಂಬಲಿಸಿದ ಕಳ್ಳರನ್ನು, ವ್ಯಾಪಾ-ರಿಗಳನ್ನು ಪಕ್ಷಕ್ಕೆ ಕರೆತರಲಾಗಿದೆ. ಅವರು ರಾತ್ರಿ ಬೇರೆ ಪಕ್ಷದಲ್ಲಿರುತ್ತಾರೆ. ಹಗಲು ಕಾಂಗ್ರೆಸ್‌ನಲ್ಲಿರುತ್ತಾರೆ. ಪಕ್ಷ ಕಟ್ಟಿ ಬೆಳೆಸಿದ ಮುನಿಯಪ್ಪ ಅವರನ್ನು ಮೂಲೆಗುಂಪು ಮಾಡಲು ಪ್ರಯತ್ನ ನಡೆದಿದೆ. ಇದೆಲ್ಲದಕ್ಕೂ ಮೂಲ ಕಾರಣ ರಮೇಶ್ ಕುಮಾರ್' ಎಂದು ಮುಖಂಡರು ಹರಿಹಾಯ್ದರು.

'ದಲಿತರ, ಹಿಂದುಳಿದವರ, ಅಲ್ಪಸಂಖ್ಯಾತರ ಹಾಗೂ ಬಡವರ ನಿಜವಾದ ನಾಯಕ ಮುನಿಯಪ್ಪ. ರಾಜಕೀಯ ವ್ಯಾಪಾರದಲ್ಲಿ ತೊಡಗಿರುವ ನೀವು ನಕಲಿ ನಾಯಕರು. ಮುನಿಯಪ್ಪ ಆಸರೆಯಲ್ಲಿ ಬೆಳೆದವರು ಈಗ ಅವರ ಬೆನ್ನಿಗೇ ಚೂರಿ ಹಾಕುತ್ತಿದ್ದಾರೆ. ವಿರೋಧ ಪಕ್ಷದ ನಾಯಕರು ಹಾಗೂ ಕೆಪಿಸಿಸಿ ಅಧ್ಯಕ್ಷರು ಕೊತ್ತೂರು ಮಂಜುನಾಥ್, ಸುಧಾಕರ್ ಹೆಗಲ ಮೇಲೆ ಕೈಹಾಕಿಕೊಂಡು ಓಡಾಡುತ್ತಾರೆ' ಎಂದು ವಾಗ್ದಾಳಿ ನಡೆಸಿದರು.

ಕೋಲಾರದಲ್ಲಿ ಶನಿವಾರ ಬೆಂಬಲಿಗರ ಸಭೆ ನಡೆಸಿದ ಕೇಂದ್ರದ ಮಾಜಿ ಸಚಿವ ಕೆ.ಎಚ್.ಮುನಿಯಪ್ಪ

'ಮುನಿಯಪ್ಪ ಅವರು ಬಿಜೆಪಿ ಹೊರತುಪಡಿಸಿ ಬೇರೆ ಯಾವುದೇ ಪಕ್ಷ ಸೇರಿದರೂ ನಮ್ಮ ಬೆಂಬಲವಿದೆ' ಎಂದರು. ಆಗ ಕೆಲವರು, 'ಕಾಂಗ್ರೆಸ್ ಕಟ್ಟಿದ್ದೇ ಮುನಿಯಪ್ಪ. ಅವರೇಕೆ ಪಕ್ಷ ಬಿಡಬೇಕು' ಎಂದು ಪ್ರಶ್ನಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಮುನಿಯಪ್ಪ, 'ರಮೇಶ್ ಕುಮಾರ್ ಶಕುನಿ ಇದಂತೆ. ಒಮ್ಮೊಮ್ಮೆ ದಾನಶೂರನ ಕರ್ಣನ ಪಾತ್ರವನ್ನೂ, ಮಗದೊಮ್ಮೆ ದುರ್ಯೋಧನನ ಪಾತ್ರವನ್ನೂ ಮಾಡುತ್ತಾರೆ. ನಾನು ಬೆಳೆಸಿದವರನ್ನೆಲ್ಲಾ ಮಾಟ, ಮಂತ್ರ ಮಾಡಿ ತಮ್ಮ ವಶದಲ್ಲಿಟ್ಟುಕೊಂಡಿದ್ದಾ-ರೆ' ಎಂದು ಟೀಕಿಸಿದರು.

'ಯಾವ ಕಾರಣಕ್ಕಾಗಿ ನನ್ನನ್ನು ದೂರವಿಟ್ಟು ಅವರನ್ನು ಸೇರಿಸಿಕೊಂಡಿರಿ. ಸೋತಿದ್ದರೂ ಒಂದು ಹಂತದಲ್ಲಿ ರಾಜಿಗೆ ಸಿದ್ಧನಿದ್ದ ನನಗೆ ಏಕೆ ಮಾಹಿತಿ ನೀಡಲಿಲ್ಲ? ನನ್ನ ಸೋಲಿಸಿದವರಿಗೆ ಏಕೆ ಮಣೆ ಹಾಕಿದಿರಿ? ಅವರ ಅಗತ್ಯ ಕಾಂಗ್ರೆಸ್‌ಗೆ ಬೇಕಿತ್ತಾ ಎಂಬುದನ್ನು ಕ್ಷೇತ್ರದ ಜನರಿಗೆ ತಿಳಿಸಬೇಕು' ಎಂದು ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯಗೆ ಪ್ರಶ್ನಿಸಿದರು.

> ಯಾವುದೇ ಪಕ್ಷ ಸೇರುವ ತೀರ್ಮಾನ ಕೈಗೊಂಡಿಲ್ಲ. ಆ ನಿರ್ಣಯ ಕೈಗೊಳ್ಳುವ ನಿರ್ಧಾರವನ್ನು ಮತ ನೀಡಿದ ಜನರಿಗೆ ಬಿಡುತ್ತೇನೆ
>
> **ಕೆ.ಎಚ್. ಮುನಿಯಪ್ಪ,** ಕೇಂದ್ರದ ಮಾಜಿ ಸಚಿವ

'ಮಹಾಭಾರತ ಈಗ ಮುಕ್ಕಾಲು ಭಾಗ ಮುಗಿದಿದೆ. ಇನ್ನು ಕಾಲೂ ಭಾಗ ಮಾತ್ರ ಇದೆ. ನಾವು ಪಾಂಡವರಾಗಿ ವನವಾಸ ಮುಗಿಸಿದ್ದೇವೆ. ಇನ್ನೇನು ಕೆಲವೇ ತಿಂಗಳಲ್ಲಿ ವಾಪಸ್ ಬರುತ್ತೇವೆ. ಯುದ್ಧ ಆರಂಭವಾಗುತ್ತದೆ. ಶಕುನಿ, ದುಶ್ಯಾಸನ, ದ್ರೋಣಾಚಾರ್ಯ ಸೇರಿದಂತೆ ಇನ್ನಿತರರು ಯಾವ ರೀತಿ ಹತವಾಗುತ್ತಾರೆ ಎಂಬುದನ್ನು ಕಾದು ನೋಡಬೇಕಾಗುತ್ತದೆ. ಕೌರವರು ಸೋಲುತ್ತಾರೆ; ಪಾಂಡವರು ಗೆಲ್ಲುತ್ತಾರೆ. ಕೃಷ್ಣ ಪರಮಾತ್ಮ ಯಾರು ಎಂಬುದನ್ನು ಹೇಳುತ್ತೇನೆ' ಎಂದರು.

ಕಾಂಗ್ರೆಸ್‌ನಿಂದ ಸತತವಾಗಿ ಏಳು ಬಾರಿ ಸಂಸದರಾಗಿ ಆಯ್ಕೆಯಾಗಿದ್ದ ಮುನಿಯಪ್ಪ, ಕಳೆದ ಲೋಕಸಭಾ ಚುನಾವಣೆಯಲ್ಲಿ ಪರಾಭ-ವಗೊಂಡಿದ್ದರು. ಸದ್ಯದಲ್ಲೇ ಜೆಡಿಎಸ್ ಸೇರಲಿದ್ದಾರೆ ಎಂಬ ಸುದ್ದಿಯೂ ಅವರ ಬೆಂಬಲಿಗರ ಸಮೂಹದಲ್ಲಿ ಹರಿದಾಡುತಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ದೇಶವನ್ನು ಧ್ರುವೀಕರಣಗೊಳಿಸುವ ಯತ್ನ • ಕಾಂಗ್ರೆಸ್ ಆರೋಪ ನಿರಾಕರಿಸಿದ ಬಿಜೆಪಿ

ಟೇಲರ್ ಹತ್ಯೆ ಆರೋಪಿ ಬಿಜೆಪಿ ಕಾರ್ಯಕರ್ತ: ಕಾಂಗ್ರೆಸ್

ಪ್ರಜಾವಾಣಿ ವಾರ್ತೆ

ಟೇಲರ್ ಕನ್ಹಯ್ಯ ಲಾಲ್ ಹತ್ಯೆ ಪ್ರಕರಣದ ಮುಖ್ಯ ಆರೋಪಿಯ ಮೇಲೆ ಜೈಪುರದಲ್ಲಿ ಕೋರ್ಟ್ ಆವರಣದಲ್ಲಿಯೇ ವಕೀಲರು, ಸಾರ್ವಜನಿಕರು ಹಲ್ಲೆ ನಡೆಸಿದರು —ಪಿಟಿಐ ಚಿತ್ರ

ನವದೆಹಲಿ: ಉದಯಪುರದಲ್ಲಿ ನಡೆದ ಟೇಲರ್ ಕನ್ಹಯ್ಯ ಲಾಲ್ ಹತ್ಯೆಯ ಪ್ರಮುಖ ಆರೋಪಿಯು 'ಬಿಜೆಪಿಯ ಸಕ್ರಿಯ ಕಾರ್ಯಕರ್ತ' ಎಂದು ಕಾಂಗ್ರೆಸ್ ಪಕ್ಷ ಆರೋಪಿಸಿದೆ.

'ಇದೇ ಕಾರಣದಿಂದ ಈ ಕೃತ್ಯದ ತನಿಖೆಯನ್ನು ತ್ವರಿತಗತಿಯಲ್ಲಿ ಎನ್ಐಎಗೆ ಒಪ್ಪಿಸಲಾಯಿತೇ' ಎಂದೂ ಕೇಂದ್ರ ಸರ್ಕಾರವನ್ನು ಪ್ರಶ್ನಿಸಿದೆ.

'ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರ 'ಮೌನ'ವನ್ನು ಕಾಂಗ್ರೆಸ್ ಪಕ್ಷ ಪ್ರಶ್ನಿಸಿದ್ದು, ಬಿಜೆಪಿಯ ವಕ್ತಾರರ ಮೂಲಕ ಪಕ್ಷ ದೇಶವನ್ನು ಧ್ರುವೀಕರಣಗೊಳಿಸಲು ಯತ್ನಿಸುತ್ತಿದ್ದೆಯೇ? ಧಾರ್ಮಿಕ ಭ್ರಮಾಲೋಕವನ್ನು ಸೃಷ್ಟಿಸಲಾಗುತ್ತಿದೆಯೇ' ಎಂದು ಕೇಳಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್ ಪಕ್ಷದ ಮಾಧ್ಯಮ ವಿಭಾಗದ ಮುಖ್ಯಸ್ಥ ಪವನ್ ಖೇರಾ, 'ಮಾಧ್ಯಮದ ಗುಂಪೊಂದು ಬಹಿರಂಗಪಡಿಸಿದ ಸ್ಫೋಟಕ ಮಾಹಿತಿಯು, ಟೇಲರ್ ಹತ್ಯೆ ಪ್ರಕರಣದ ಪ್ರಮುಖ ಆರೋಪಿ ರಿಯಾಜ್ ಅನ್ಸಾರಿಗೆ ಬಿಜೆಪಿ ಜೊತೆಗೆ ಸಂಪರ್ಕವಿತ್ತು ಎಂದು ಹೇಳುತ್ತಿದೆ' ಎಂದು ಹೇಳಿದರು.

'ಕನ್ಹಯ್ಯ ಲಾಲ್ ಹತ್ಯೆಯ ಆರೋಪಿಗಳಲ್ಲಿ ಒಬ್ಬನಾದ ರಿಯಾಜ್ ಬಿಜೆಪಿಯ ಸಕ್ರಿಯ ಸದಸ್ಯ' ಎಂದು ಖೇರಾ ಟ್ವೀಟ್ ಮಾಡಿದ್ದಾರೆ. ಇನ್ನೊಂದೆಡೆ, ಬಿಜೆಪಿಯ ಐಟಿ ಘಟಕದ ಮುಖ್ಯಸ್ಥ ಅಮಿತ್ ಮಾಳವೀಯ ಅವರು 'ಇದೊಂದು ಸುಳ್ಳು ಸುದ್ದಿ' ಎಂದು ಈ ಆರೋಪವನ್ನು ತಳ್ಳಿಹಾಕಿದರು.

'ನೀವು ಸುಳ್ಳು ಸುದ್ದಿ ಹರಡುತ್ತಿರುವುದು ನನಗೆ ಆಶ್ಚರ್ಯ ಮೂಡಿಸಿಲ್ಲ. ಉದಯಪುರದ ಹತ್ಯೆಕೋರರಿಗೂ ಬಿಜೆಪಿಗೂ ಸಂಬಂಧವಿಲ್ಲ. ಕಾಂಗ್ರೆಸ್‌ನವರು ಹೇಳುತ್ತಿರುವುದು 'ರಾಜೀವ್‌ಗಾಂಧಿ ಅವರ ಹತ್ಯೆಗೆ ಎಲ್‌ಟಿಟಿಇ ದಾಳಿಕೋರರು ಕಾಂಗ್ರೆಸ್ ಸೇರಿದ್ದರು ಎಂಬಂತಾಗುತ್ತದೆ' ಎಂದು ಮಾಳವೀಯ ಪ್ರತಿಕ್ರಿಯಿಸಿದ್ದಾರೆ.

ಆದರೆ, ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಖೇರಾ ಅವರು ತಮ್ಮ ಆರೋಪಕ್ಕೆ ಪೂರಕವಾಗಿ ಹತ್ಯೆ ಆರೋಪಿ ರಿಯಾಜ್ ಮತ್ತು ಬಿಜೆಪಿ ನಾಯಕರಾದ ಇರ್ಷಾದ್ ಚೇನ್‌ವಾಲಾ ಮತ್ತು ಮೊಹಮ್ಮದ್ ತಾಹೀರ್ ನಡುವೆ ಸಂಪರ್ಕವಿತ್ತು ಎಂದು ಸಾಬೀತು ಪಡಿಸುವ ಚಿತ್ರಗಳನ್ನು ಪ್ರದರ್ಶಿಸಿದರು.

ರಾಜಸ್ಥಾನದ ಬಿಜೆಪಿ ನಾಯಕ, ಮಾಜಿ ಸಚಿವ ಗುಲಾಬ್‌ಚಂದ್ ಕಟಾರಿಯ ಅವರ ಕಾರ್ಯಕ್ರಮದಲ್ಲಿ ಆರೋಪಿ ರಿಯಾಜ್ ಆಗಾಗ್ಗೆ ಭಾಗವಹಿಸಿರುವ ಚಿತ್ರಗಳು ಇವೆ ಎಂದರು.

ಬಿಜೆಪಿ ಮುಖಂಡರಾದ ಇರ್ಷಾದ್ ಚೇನ್‌ವಾಲಾ ಅವರು ಫೇಸ್‌ಬುಕ್‌ನಲ್ಲಿ 2018ರ ನವೆಂಬರ್ 30ರಂದು ಮತ್ತು ಮಹಮ್ಮದ್ತಾ ಹೀರ್ ಅವರು 2019ರ ಫೆಬ್ರುವರಿ 3, 2019ರ ಅಕ್ಟೋಬರ್ 27, 2021ರ ಆಗಸ್ಟ್ 10, 2019ರ ನವೆಂಬರ್ 28ರಂದು ಹಂಚಿಕೊಂಡಿರುವ ಪೋಸ್ಟ್‌ಗಳು ಆರೋಪಿ ರಿಯಾಜ್ 'ಬಿಜೆಪಿ ಮುಖಂಡರಿಗೆ ಆಪ್ತನಷ್ಟೇ ಅಲ್ಲ, ಬಿಜೆಪಿಯ ಸಕ್ರಿಯ ಕಾರ್ಯಕರ್ತ ಎಂಬುದನ್ನು ಸ್ಪಷ್ಟವಾಗಿ ದೃಢಪಡಿಸಲಿವೆ' ಎಂದು ಪ್ರತಿಪಾದಿಸಿದರು.

ನೂಪುರ್ ವಿರುದ್ಧ ಲುಕ್‌ಔಟ್ ನೋಟಿಸ್

ಕೋಲ್ಕತ್ತ (ಪಿಟಿಐ): ಪ್ರವಾದಿ ಮಹಮ್ಮದ್ ಅವರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ ಪ್ರಕರಣಕ್ಕೆ ಸಂಬಂಧಿಸಿದ ವಿಚಾರಣೆಗೆ, ನೂಪುರ್ ಶರ್ಮಾ ಹಾಜರಾಗದ ಕಾರಣ ಅವರಿಗೆ ಲುಕ್‌ಔಟ್ ನೋಟಿಸ್ ನೀಡಲಾಗಿದೆ ಎಂದು ಪಶ್ಚಿಮ ಬಂಗಾಳದ ಹಿರಿಯ ಅಧಿಕಾರಿಯೊಬ್ಬರು ಶನಿವಾರ ತಿಳಿಸಿದ್ದಾರೆ.

'ಅಮ್ಹೆರ್ಸ್ಟ್ ಸ್ಟ್ರೀಟ್ ಮತ್ತು ನರ್ಕಲ್‌ದಂಗ ಠಾಣೆಗಳ ಪೊಲೀಸರು ತಲಾ ಎರಡು ಬಾರಿ ನೂಪುರ್ ಅವರಿಗೆ ಸಮನ್ಸ್ ನೀಡಿದರೂ ಅವರು ವಿಚಾರಣೆಗೆ ಹಾಜರಾಗಿಲ್ಲ. ಆದ್ದರಿಂದ ಶನಿವಾರ ಲುಕ್‌ಔಟ್ ನೋಟಿಸ್ ಜಾರಿ ಮಾಡಲಾಗಿದೆ' ಎಂದು ಅಧಿಕಾರಿಗಳು ಹೇಳಿದರು.ಕೋಲ್ಕತ್ತಗೆ ಭೇಟಿ ನೀಡಿದರೆ ತಮ್ಮ ಮೇಲೆ ಹಲ್ಲೆ ನಡೆಯಬಹುದು ಎಂಬ ಕಾರಣವನ್ನು ನೀಡಿ ಪೊಲೀಸ್ ಅಧಿಕಾರಿಗಳ ಮುಂದೆ ಹಾಜರಾಗಲು ನಾಲ್ಕು ವಾರಗಳ ಕಾಲಾವಕಾಶವನ್ನು ನೂಪುರ್ ಅವರು ಕೋರಿದ್ದರು.

ಉದಯಪುರ ಪ್ರಕರಣ: ಹತ್ಯೆ ಆರೋಪಿಗಳ ಮೇಲೆ ಹಲ್ಲೆ

ಒಂದನೇ ಪುಟದಿಂದ

ಕೋರ್ಟ್ ಆವರಣದಲ್ಲಿ ಬಿಗಿ ಭದ್ರತೆ ಏರ್ಪಡಿಸಲಾಗಿತ್ತು. ಭದ್ರತೆಯಲ್ಲಿಯೇ ಕೋರ್ಟ್‌ನಿಂದ ಮರಳಿ ಕರೆದೊಯ್ಯುವಾಗ ವಕೀಲರ ಗುಂಪು ಆರೋಪಿಗಳ ಮೇಲೆರಗಿತು. ಪೊಲೀಸ್ ಸಿಬ್ಬಂದಿ ಜಾಗೃತರಾಗಿ ಅವರನ್ನು ವಾಹನದೊಳಗೆ ಒಯ್ಯುವಲ್ಲಿ ಯಶಸ್ವಿಯಾದರು. ಆದರೆ, ಆ ವೇಳೆಗಾಗಲೇ ಸಾಕಷ್ಟು ಪೆಟ್ಟುಗಳು ಬಿದ್ದಿದ್ದವು. 'ಪಾಕಿಸ್ತಾನ್ ಮುರ್ದಾಬಾದ್', 'ಕನ್ಹಯ್ಯ ಹತ್ಯೆಕೋರರಿಗೆ ಗಲ್ಲುಶಿಕ್ಷೆ ವಿಧಿಸಿ' ಎಂಬ ಘೋಷಣೆಗಳು ಕೇಳಿಬಂದವು.

ಅನ್ಸಾರಿ ಮತ್ತು ಗೌಸ್ ಅವರು ಉದಯಪುರದ ಟೇಲರ್ ಕನ್ಹಯ್ಯ ಲಾಲ್ ಅವರನ್ನು ಅವರ ಮಳಿಗೆಯಲ್ಲಿ ಕತ್ತು ಕತ್ತರಿಸಿ ಹತ್ಯೆ ಮಾಡಿದ್ದರು. 'ಇದು, ಇಸ್ಲಾಂಗೆ ಮಾಡಿದ ಅಪಮಾನಕ್ಕೆ ಪ್ರತೀಕಾರ' ಎಂದು ಬಳಿಕ ಜಾಲತಾಣದಲ್ಲಿ ಹತ್ಯೆ ದೃಶ್ಯಗಳನ್ನು ಹಂಚಿಕೊಂಡಿದ್ದರು. ಮುಖ್ಯ ಆರೋಪಿಗಳನ್ನು ಕೃತ್ಯ ನಡೆದ ದಿನ ಹಾಗೂ ಕನ್ಹಯ್ಯ ಹತ್ಯೆಗೆ ಸಂಚು ರೂಪಿಸಿದ್ದ ಆರೋಪದಡಿ ಇತರ ಇಬ್ಬರನ್ನು ನಂತರ ಪೊಲೀಸರು ಬಂಧಿಸಿದ್ದರು.

ಕನ್ಹಯ್ಯ ಕುಟುಂಬಕ್ಕೆ ₹ 1 ಕೋಟಿ ನೆರವು

ಉದಯಪುರ, ರಾಜಸ್ಥಾನ (ಪಿಟಿಐ): ಹತ್ಯೆಗೀಡಾದ ಟೇಲರ್ ಕನ್ಹಯ್ಯ ಲಾಲ್ ಕುಟುಂಬಕ್ಕೆ ಬಿಜೆಪಿ ನಾಯಕ ಕಪಿಲ್ ಮಿಶ್ರಾ ಅವರು ದೇಣಿಗೆ ಸ್ವರೂಪದಲ್ಲಿ ಸಂಗ್ರಹಿಸಿ ₹1 ಕೋಟಿ ನೆರವು ಒದಗಿಸಿದ್ದಾರೆ.

ಕನ್ಹಯ್ಯಲಾಲ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಅವರ ಕುಟುಂಬ ಸದಸ್ಯರನ್ನು ಭೇಟಿ ಮಾಡಿದ್ದ ಮಿಶ್ರಾ, ನಮಗೆ ₹ 1 ಕೋಟಿ ಸಂಗ್ರಹಿಸುವ ಗುರಿ ಇತ್ತು. ಆದರೆ, ಈಗಾಗಲೇ ₹ 1.70 ಕೋಟಿ ಸಂಗ್ರಹವಾಗಿದೆ ಎಂದರು. ಇದರಲ್ಲಿ ಮನೆ ಸಾಲ ತೀರಿಸಲು, ಮಕ್ಕಳ ಶಿಕ್ಷಣ ಉದ್ದೇಶಕ್ಕಾಗಿ ಕನ್ಹಯ್ಯಲಾಲ್ ಕುಟುಂಬಕ್ಕೆ ₹ 1 ಕೋಟಿ ವರ್ಗಾಯಿಸಲಾಗುವುದು ಎಂದು ತಿಳಿಸಿದರು.

ಉಳಿದಂತೆ, ಹತ್ಯೆ ವೇಳೆ ಗಾಯಗೊಂಡಿರುವ ಈಶ್ವರ್ ಅವರಿಗೆ ₹ 25 ಲಕ್ಷ, ರಾಜಸಮದ್ ಜಿಲ್ಲೆಯಲ್ಲಿ ಗುಂಪು ಹಲ್ಲೆಯಿಂದ ಗಾಯಗೊಂಡಿರುವ ಕಾನ್‌ಸ್ಟೆಬಲ್ ಸಂದೀಪ್ ಅವರಿಗೆ ₹ 5 ಲಕ್ಷ, ಮಹಾರಾಷ್ಟ್ರದ ಅಮರಾವತಿಯಲ್ಲಿ ಕೊಲೆಗೀಡಾದ ಉಮೇಶ್ ಪ್ರಹ್ಲಾದರಾವ್ ಕೊಲ್ಹೆ ಅವರ ಕುಟುಂಬಕ್ಕೆ ₹ 30 ಲಕ್ಷ ಆರ್ಥಿಕ ನೆರವು ನೀಡಲಾಗುವುದು ಎಂದು ಮಿಶ್ರಾ ಪ್ರಕಟಿಸಿದರು.

ರಾಹುಲ್‌ನ ತಿರುಚಿದ ವಿಡಿಯೊ ಹಂಚಿಕೆ ಕಾನೂನು ಕ್ರಮ: ಕಾಂಗ್ರೆಸ್ ಎಚ್ಚರಿಕೆ

ನವದೆಹಲಿ: ಉದಯಪುರ ಕೃತ್ಯದ ಆರೋಪಿಗಳಿಗೆ ಕ್ಷಮಿಸಬೇಕು ಎಂದು ಕಾಂಗ್ರೆಸ್‌ನ ರಾಹುಲ್‌ಗಾಂಧಿ ಹೇಳಿದ್ದಾರೆ ಎಂಬಂತೆ ತಿರುಚಿದ್ದ ವಿಡಿಯೊವನ್ನು ಬಿಜೆಪಿ ಸಂಸದರು, ಶಾಸಕರು ಸೇರಿ ಹಲವು ಮುಖಂಡರು ಜಾಲತಾಣದಲ್ಲಿ ಹಂಚಿಕೊಂಡಿದ್ದು, ಈ ಲೋಪಕ್ಕಾಗಿ ಕ್ಷಮೆ ಕೋರಬೇಕು ಎಂದು ಕಾಂಗ್ರೆಸ್ ಪಕ್ಷ ಆಗ್ರಹಪಡಿಸಿದೆ.

ಕೇರಳದಲ್ಲಿನ ತಮ್ಮ ಸಂಸದರ ಕಚೇರಿ ಗುರಿಯಾಗಿಸಿ ಗಲಾಟೆ ಮಾಡಿದ್ದ ಎಸ್‌ಎಫ್‌ಐ ಕಾರ್ಯಕರ್ತರನ್ನು ಕ್ಷಮಿಸಬೇಕು ಎಂದು ರಾಹುಲ್‌ಗಾಂಧಿ ಮಾತನಾಡಿದ್ದರು. ಆ ಹೇಳಿಕೆಯನ್ನು ತಿರುಚಿ ಉದಯಪುರ ಕೃತ್ಯಕ್ಕೆ ಅನ್ವಯಿಸಿ ಹೇಳಿದಂತೆ ವಿಡಿಯೊ ಅನ್ನು ರೂಪಿಸಿದ್ದು, ಬಿಜೆಪಿಯ ಹಲವು ಮುಖಂಡರು ಹಂಚಿಕೊಂಡಿದ್ದರು.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಂ ರಮೇಶ್ ಅವರು ಈ ಬೆಳವಣಿಗೆಗೆ ತೀವ್ರ ಆಕ್ರೋಶ ವ್ಯಕ್ತಪಡಿದ್ದು, ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಅವರಿಗೆ ಪತ್ರವನ್ನು ಬರೆದಿದ್ದು, ಕಾನೂನು ಕ್ರಮ ಕೈಗೊಳ್ಳುವ ಎಚ್ಚರಿಕೆಯನ್ನು ನೀಡಿದ್ದಾರೆ.

'ಸಾಮಾಜಿಕ ಜಾಲತಾಣವನ್ನು ಇಷ್ಟೊಂದು ಬೇಜವಾಬ್ದಾರಿಯಾಗಿ ಮತ್ತು ಕ್ರಿಮಿನಲ್ ಸ್ವರೂಪದ ದೃಷ್ಟಿಯಿಂದ ಬಳಸಿಕೊಳ್ಳಲು ಉತ್ತೇಜನ ನೀಡುವ ಬಿಜೆಪಿ ಮತ್ತು ಅದರ ಮುಖಂಡರ ವಿರುದ್ಧ ಕಾನೂನುಕ್ರಮ ಜರುಗಿಸಲಾಗುವುದು' ಎಂದು ಎಚ್ಚರಿಸಿದ್ದಾರೆ. ಹಲವು ಬಿಜೆಪಿ ನಾಯಕರು ಉದ್ದೇಶಪೂರ್ವಕವಾಗಿ ಮತ್ತು ಉತ್ಸಾಹದಿಂದ ಇಂತ ತಪ್ಪುಗ್ರಹಿಕೆಯ ಅಡಕವನ್ನು ಹಂಚಿಕೊಂಡಿದ್ದಾರೆ. ಆದರೆ, ಮೂಲ ವಿಡಿಯೊದಲ್ಲಿ ಇರುವಂತೆ ರಾಹುಲ್ ಗಾಂಧಿ ಅವರ ಹೇಳಿಕೆ ವಯನಾಡ್ ಘಟನೆಗೆ ಸಂಬಂಧಪಟ್ಟಿದಾಗಿದೆ ಎಂದು ತಿಳಿಸಿದ್ದಾರೆ.

ಛತ್ತೀಸಗಡ: ಬಂದ್ ಯಶಸ್ವಿ

ರಾಯಪುರ, ಛತ್ತೀಸಗಡ: ರಾಜಸ್ಥಾನದ ಉದಯಪುರದಲ್ಲಿ ನಡೆದ ಟೇಲರ್ ಹತ್ಯೆ ಖಂಡಿಸಿ ಶನಿವಾರ ಛತ್ತೀಸಗಡ ಬಂದ್‌ಗೆ ಕರೆ ನೀಡಿದ್ದವು. ಅಂಗಡಿಗಳು, ಶಿಕ್ಷಣ ಸಂಸ್ಥೆಗಳು ಮುಚ್ಚಿದ್ದವು. ಅಗತ್ಯ ವಸ್ತುಗಳ ಸೇವೆಗೆ ಬಂದ್‌ನಿಂದ ವಿನಾಯಿತಿ ನೀಡಲಾಗಿತ್ತು.

ರಾಜಧಾನಿ ರಾಯಪುರ ಸೇರಿದಂತೆ ಹಲವೆಡೆ ಸಾರಿಗೆ ವ್ಯವಸ್ಥೆಯು ಅಸ್ತವ್ಯಸ್ತಗೊಂಡಿತ್ತು. ಪೊಲೀಸರ ಪ್ರಕಾರ, ಬಂದ್‌ಗೆ ಉತ್ತಮ ಸ್ಪಂದನೆ ವ್ಯಕ್ತವಾಗಿದ್ದು, ಶಾಂತಿಯುತವಾಗಿತ್ತು. ಯಾವುದೇ ಅಹಿತಕರ ಘಟನೆಗಳು ವರದಿಯಾಗಿಲ್ಲ. ಛತ್ತೀಸಗಡ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಸೇರಿ ಹಲವು ಸಂಘಟನೆಗಳು ಬಂದ್‌ಗೆ ಬೆಂಬಲ ವ್ಯಕ್ತಪಡಿಸಿದ್ದವು.

ಬೆದರಿಕೆ ಕರೆ: ಬಿಜೆಪಿ ವಕ್ತಾರೆಯಾಗಿದ್ದ ನೂಪುರ್ ಶರ್ಮಾ ಅವರನ್ನು ಬೆಂಬಲಿಸಿ ಜಾಲತಾಣದಲ್ಲಿ ಪೋಸ್ಟ್ ಹಂಚಿಕೊಂಡ ಕಾರಣ ತನಗೆ ಬೆದರಿಕೆ ಕರೆಗಳು ಬರುತ್ತಿವೆ ಎಂದು ರಾಜಾ ಜಗತ್ ಹೆಸರಿನ ಯುವಕ ದೂರು ನೀಡಿದ್ದು, ಈ ಕುರಿತು ಎಫ್‌ಐಆರ್ ದಾಖಲಿಸಲಾಗಿದೆ ಎಂದು ದುರ್ಗ್ ಜಿಲ್ಲೆಯ ಪೊಲೀಸರು ತಿಳಿಸಿದ್ದಾರೆ. 'ಜೂನ್ 12ರಂದು ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಹಂಚಿಕೊಂಡಿದ್ದ. ಹಿಂದೆಯೇ ರಾಜಾ ಜಗತ್ ಅವರ ಎರಡು ಮೊಬೈಲ್ ಫೋನ್‌ಗಳಿಗೂ ಬೆದರಿಕೆ ಕರೆಗಳು ಬಂದಿವೆ' ಎಂದು ದೂರು ಆಧರಿಸಿ ಪೊಲೀಸರು ತಿಳಿಸಿದರು. 'ಬೆದರಿಕೆ ಕರೆ ಮಾಡಿದವರನ್ನು ರಾಯಪುರ ನಿವಾಸಿ ಕಾಸಿಫ್ ಎಂದು ದೂರುದಾರರು ಗುರುತಿಸಿದ್ದಾರೆ' ಎಂದೂ ತಿಳಿಸಿದರು.

ತೀಸ್ತಾ 14 ದಿನ ನ್ಯಾಯಾಂಗ ವಶಕ್ಕೆ

ಅಹಮದಾಬಾದ್ (ಪಿಟಿಐ): 2002ರ ಗುಜರಾತ್ ಕೋಮುಗಲಭೆ ಪ್ರಕರಣಗಳಿಗೆ ಸಂಬಂಧಿಸಿದಂತೆ ನಕಲಿ ಸಾಕ್ಷ್ಯಾಧಾರಗಳನ್ನು ಸೃಷ್ಟಿಸಿರುವ ಆರೋಪದಲ್ಲಿ ಬಂಧಿತವಾಗಿರುವ ಸಾಮಾಜಿಕ ಕಾರ್ಯಕರ್ತೆ ತೀಸ್ತಾ ಸೆಟಲ್‌ವಾಡ್ ಮತ್ತು ಮಾಜಿ ಡಿಜಿಪಿ ಆರ್.ಬಿ. ಶ್ರೀಕುಮಾರ್ ಅವರನ್ನು ಇಲ್ಲಿನ ಮೆಟ್ರೊಪಾಲಿಟನ್ ನ್ಯಾಯಾಲಯವು ಶನಿವಾರ 14 ದಿನಗಳ ಕಾಲ ನ್ಯಾಯಾಂಗ ವಶಕ್ಕೆ ನೀಡಿದೆ.

'ಪೊಲೀಸ್ ಕಸ್ಟಡಿ ಮುಗಿದ ಬಳಿಕ ಇಬ್ಬರನ್ನೂ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಎದುರು ಹಾಜರುಪಡಿಸಲಾಯಿತು. ಪೊಲೀಸರು ಅವರನ್ನು ಹೆಚ್ಚಿನ ಕಸ್ಟಡಿಗೆ ನೀಡುವಂತೆ ಕೋರಿಲ್ಲ' ಎಂದು ವಿಶೇಷ ಸರ್ಕಾರಿ ಅಭಿಯೋಜಕ ಅಮಿತ್ ಪಟೇಲ್ ತಿಳಿಸಿದ್ದಾರೆ.

'ತನಿಖಾಧಿಕಾರಿಯು ಬಂಧಿತರನ್ನು ಕಸ್ಟಡಿಗೆ ನೀಡುವಂತೆ ಕೋರಿಲ್ಲ. ಹಾಗಾಗಿ, ಇಬ್ಬರನ್ನೂ 14 ದಿನಗಳ ಕಾಲ ನ್ಯಾಯಾಂಗ ವಶಕ್ಕೆ ನೀಡಲಾಗಿದೆ' ಎಂದು ಪಟೇಲ್ ತಿಳಿಸಿದ್ದಾರೆ.

ತೀಸ್ತಾ, ಶ್ರೀಕುಮಾರ್ ವಿರುದ್ಧ ಅಹಮದಾಬಾದ್ ಅಪರಾಧ ವಿಭಾಗದ ಅಧಿಕಾರಿ ದೂರು ನೀಡಿದ್ದರು.

ಅವಶೇಷಗಳಡಿ ಸಿಲುಕಿದವರ ರಕ್ಷಣಾ ಕಾರ್ಯ ಮುಂದುವರಿಕೆ: ಇನ್ನೂ 38 ಮಂದಿ ಕಾಣೆ

ಮಣಿಪುರ ಭೂಕುಸಿತ: ಮೃತರ ಸಂಖ್ಯೆ 25ಕ್ಕೆ ಏರಿಕೆ

ಮಣಿಪುರದ ನೊನಿ ಜಿಲ್ಲೆಯಲ್ಲಿ ಸಂಭವಿಸಿದ ಭೂಕುಸಿತದಲ್ಲಿ ಸಿಲುಕಿದ ಸಂತ್ರಸ್ತರ ರಕ್ಷಣೆಯಲ್ಲಿ ತೊಡಗಿರುವ ಸೇನೆ —ಎಎಫ್‌ಪಿ ಚಿತ್ರ

ಗುವಾಹಟಿ/ಇಂಫಾಲ (ಪಿಟಿಐ): ಮಣಿಪುರದ ನೊನಿ ಜಿಲ್ಲೆಯ ರೈಲ್ವೆ ಕಾಮಗಾರಿ ಪ್ರದೇಶದ ಬಳಿ ನಡೆದ ಭೂಕುಸಿತದಿಂದಾಗಿ ಮೃತಪಟ್ಟವರ ಸಂಖ್ಯೆ 25ಕ್ಕೆ ಏರಿಕೆಯಾಗಿದೆ. ಇನ್ನೂ 38 ಮಂದಿ ಕಾಣೆಯಾಗಿದ್ದಾರೆ.

'ಅವಶೇಷಗಳ ಅಡಿ ಸಿಲುಕಿದ್ದ ಇನ್ನೂ 5 ಮೃತದೇಹಗಳನ್ನು ಶನಿವಾರ ಹೊರತೆಗೆಯಲಾಗಿದೆ. ರಕ್ಷಣಾ ಕಾರ್ಯವನ್ನು ಮತ್ತಷ್ಟು ಚುರುಕುಗೊಳಿಸಲಾಗಿದ್ದು, ಇದಕ್ಕಾಗಿ ಹೆಚ್ಚಿನ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಮೃತದೇಹಗಳನ್ನು ಹೊರತೆಗೆಯುವ ಕಾರ್ಯ ಮುಂದುವರಿದಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಭೂಕುಸಿತ ಉಂಟಾಗಿರುವ ತುಪುಲ್ ಪ್ರದೇಶದಲ್ಲಿ ಶನಿವಾರ ಮುಂಜಾನೆ ಮತ್ತೆ ಮಳೆ ಸುರಿದಿದೆ. ಪ್ರತಿಕೂಲ ಹವಮಾನವು ರಕ್ಷಣಾ ಕಾರ್ಯಕ್ಕೆ ತೊಡಕಾಗಿ ಪರಿಣಮಿಸಿದೆ' ಎಂದು ಮಣಿಪುರದ ಮುಖ್ಯಮಂತ್ರಿ ಬಿರೇನ್ ಸಿಂಗ್ ಟ್ವೀಟ್ ಮಾಡಿದ್ದಾರೆ.

'ಸೇನೆ, ಅಸ್ಸಾಂ ರೈಫಲ್ಸ್, ಟೆರಿಟೋರಿಯಲ್ ಆರ್ಮಿ, ಎಸ್‌ಡಿಆರ್‌ಎಫ್ ಮತ್ತು ಎನ್‌ಡಿಆರ್‌ಎಫ್ ಸಿಬ್ಬಂದಿ ಸ್ಥಳದಲ್ಲೇ ಬೀಡುಬಿಟ್ಟಿದ್ದಾರೆ. ನಾಪತ್ತೆಯಾದವರ ಪತ್ತೆಗೆ ಶ್ವಾನದಳವನ್ನೂ ನಿಯೋಜಿಸಲಾಗಿದೆ. ಘಟನೆಯಲ್ಲಿ 6 ನಾಗರಿಕರು ಸಾವಿಗೀಡಾಗಿದ್ದಾರೆ. ಒಂದು ಮೃತದೇಹದ ಗುರುತು ಇನ್ನೂ ಪತ್ತೆಯಾಗಿಲ್ಲ' ಎಂದು ರಕ್ಷಣಾ ಇಲಾಖೆಯ ಅಧಿಕಾರಿ ತಿಳಿಸಿದ್ದಾರೆ.

ಅಸ್ಸಾಂನ 8 ಮಂದಿ ಸಾವು (ಗುವಾಹಟಿ ವರದಿ): 'ಭೂಕುಸಿತದಲ್ಲಿ ಒಬ್ಬ ಭದ್ರತಾ ಸಿಬ್ಬಂದಿ ಸೇರಿದಂತೆ ಅಸ್ಸಾಂ ರಾಜ್ಯದ ಒಟ್ಟು 8 ಮಂದಿ ಮೃತಪಟ್ಟಿದ್ದಾರೆ. ರೈಲ್ವೆ ಎಂಜಿನಿಯರ್ ಸೇರಿದಂತೆ ಒಟ್ಟು 12 ಮಂದಿ ನಾಪತ್ತೆಯಾಗಿದ್ದಾರೆ' ಎಂದು ಸಚಿವ ಪಿಜುಸ್ ಹಜಾರಿಕ ಹೇಳಿದ್ದಾರೆ.

ಘಟನಾ ಸ್ಥಳಕ್ಕೆ ಶನಿವಾರ ಭೇಟಿ ನೀಡಿ ಮಾತನಾಡಿದ ಅವರು, 'ರಾಜ್ಯದ ಐವರನ್ನು ರಕ್ಷಿಸಲಾಗಿದೆ. ಈ ಪೈಕಿ ಇಬ್ಬರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದಿದ್ದಾರೆ.

'ಮೊರಿಗಾಂವ್ ಜಿಲ್ಲೆಯ ಐವರು ಘಟನೆಯಲ್ಲಿ ಮೃತರಾಗಿದ್ದಾರೆ. ಶವಗಳನ್ನು ಸಂಬಂಧಿಕರಿಗೆ ಹಸ್ತಾಂತರಿಸಲಾಗಿದೆ. ತುಪುಲ್ ರೈಲ್ವೆ ಕಾಮಗಾರಿಯಲ್ಲಿ ತೊಡಗಿದ್ದ ಜಿಲ್ಲೆಯ ಮತ್ತಷ್ಟು ಕಾರ್ಮಿಕರು ನಾಪತ್ತೆಯಾಗಿದ್ದಾರೆ. ಅವರ ಕುಟುಂಬ ಸದಸ್ಯರ ಜೊತೆ ಜಿಲ್ಲಾಡಳಿತ ನಿರಂತರ ಸಂಪರ್ಕದಲ್ಲಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಗುಜರಾತ್‌ನಲ್ಲಿ ಭಾರಿ ಮಳೆ: 380 ಮಂದಿ ಸ್ಥಳಾಂತರ

ಅಹಮದಾಬಾದ್ (ಪಿಟಿಐ): ಗುಜರಾತ್‌ನ ಹಲವೆಡೆ ಶನಿವಾರ ಭಾರಿ ಮಳೆಯಾಗಿದ್ದು, ಜನಜೀವನ ಅಸ್ತವ್ಯಸ್ತಗೊಂಡಿದೆ.

'ಸೂರತ್, ಬನಸ್‌ಕಾಂತಾ ಮತ್ತು ಆನಂದ್ ಜಿಲ್ಲೆಗಳಲ್ಲಿನ ಕೆಲವೆಡೆ ತಗ್ಗು ಪ್ರದೇಶಗಳಿಗೆ ಮಳೆ ನೀರು ನುಗ್ಗಿ ಪ್ರವಾಹದ ಸ್ಥಿತಿ ನಿರ್ಮಾಣವಾಗಿದೆ. ಆನಂದ್ ಜಿಲ್ಲೆಯ ಎರಡು ಗ್ರಾಮಗಳು ಮುಳುಗಡೆಯಾಗಿವೆ. ಎನ್‌ಡಿಆರ್‌ಎಫ್ ಸಿಬ್ಬಂದಿ ಒಟ್ಟು 380 ಮಂದಿಯನ್ನು ರಕ್ಷಿಸಿ, ಸುರಕ್ಷಿತ ಜಾಗಕ್ಕೆ ಸ್ಥಳಾಂತರಿಸಿದ್ದಾರೆ' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಅವಧಿಗೆ ಮುನ್ನ ಮಳೆ

ನವದೆಹಲಿ (ಪಿಟಿಐ): ದೇಶದಲ್ಲಿ ಅವಧಿಗಿಂತಲೂ ಮುನ್ನವೇ ಮುಂಗಾರು ಆರಂಭವಾಗಿದ್ದು, ಎಲ್ಲಾ ರಾಜ್ಯಗಳಲ್ಲೂ ಮಳೆಯಾಗಿದೆ. 'ವಾಡಿಕೆಯಂತೆ ಜುಲೈ 8ರಂದು ಮುಂಗಾರು ಪ್ರವೇಶವಾಗಬೇಕಿತ್ತು. ಆದರೆ ಈ ಬಾರಿ 6 ದಿನ ಮುಂಚಿತವಾಗಿ ಮುಂಗಾರು ಶುರುವಾಗಿದೆ. ಹೀಗಾಗಿ ಪಶ್ಚಿಮ ರಾಜಸ್ಥಾನ, ಉತ್ತರ ಗುಜರಾತ್‌ನ ವಿವಿಧೆಡೆ ಮಳೆ ಸುರಿದಿದೆ' ಎಂದು ಹವಾಮಾನ ಇಲಾಖೆ ತಿಳಿಸಿದೆ.

ನರೇಗಾದ ಮಹತ್ವ ಅರಿಯದ ಪ್ರಧಾನಿ: ರಾಹುಲ್ ಟೀಕೆ

ವಯನಾಡ್ (ಕೇರಳ, ಪಿಟಿಐ): ಕೋವಿಡ್ ಪಿಡುಗಿನ ಸಂದರ್ಭದಲ್ಲಿ ದೇಶದ ಲಕ್ಷಾಂತರ ಜನರ ಜೀವನವನ್ನು 'ನರೇಗಾ' ಯೋಜನೆ ಕಾಪಾಡಿದೆ. ಆದರೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅದನ್ನು ಒಪ್ಪುವ ಔದಾರ್ಯವಿಲ್ಲ ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಕಿಡಿಕಾರಿದರು.

ದೇಶದ ಅಸಹಾಯಕ ಜನರಿಗಾಗಿ ಯುಪಿಎ ಸರ್ಕಾರ ಜಾರಿಗೊಳಿಸಿದ ಈ ಯೋಜನೆಯ ಮಹತ್ವವನ್ನು ಅರಿಯುವಲ್ಲಿ ಪ್ರಧಾನಿ ವಿಫಲರಾಗಿದ್ದಾರೆ. ಈ ಹಿಂದೆ 'ನರೇಗಾ ಯೋಜನೆಯನ್ನು ಕಾಂಗ್ರೆಸ್‌ನ ವೈಫಲ್ಯದ ಪ್ರತೀಕ' ಎಂದು ಜರಿದಿದ್ದ ಮೋದಿ ಅವರಿಗೆ ಈ ಯೋಜನೆ ಎಷ್ಟು ಸಮಗ್ರ ಮತ್ತು ಆಳವಾದದ್ದು ಎಂಬುದು ಗೊತ್ತಿಲ್ಲ. ಇದು ದೇಶದಲ್ಲಿ ಹೇಗೆ ಉದ್ಯೋಗ ಸೃಷ್ಟಿಸುತ್ತದೆ ಮತ್ತು ಲಕ್ಷಾಂತರ ಜನರಿಗೆ ಜೀವನ ನಡೆಸಲು ಹೇಗೆ ನೆರವಾಗಿದೆ ಎಂಬುದರ ಬಗ್ಗೆಯೂ ಅವರಿಗೆ ತಿಳಿದಿಲ್ಲ ಎಂದರು.

ದೇಶದ ಆರ್ಥಿಕ ವ್ಯವಸ್ಥೆಯು ನೋಟು ಅಮಾನ್ಯೀಕರಣ ಮತ್ತು ಜಿಎಸ್‌ಟಿಯ ದೋಷ ಪೂರಿತ ಅನುಷ್ಠಾನದಿಂದ ದುರ್ಬಲ ಗೊಂಡಿದೆ. ಈ ಸಂದರ್ಭದಲ್ಲೂ ಸಾಮಾನ್ಯ ಜನರ ಜೀವನೋಪಾಯಕ್ಕೆ ಈ ಯೋಜನೆ ಅತ್ಯಂತ ಮಹತ್ವದ್ದಾಗಿದೆ ಎಂದು ವಯನಾಡಿನ ಸಂಸದರೂ ಆಗಿರುವ ರಾಹುಲ್ ಗಾಂಧಿ ಹೇಳಿದರು.

ಇಲ್ಲಿನ ನೆನ್ಮೆನಿ ಗ್ರಾಮ ಪಂಚಾಯಿತಿಯಲ್ಲಿ ನರೇಗಾ ಸ್ವಯಂ ಸೇವಕರನ್ನು ಉದ್ದೇಶಿಸಿ ಮಾತನಾಡಿದರು. ನರೇಗಾ ಕಾರ್ಮಿಕರನ್ನು 'ದೇಶದ ನಿರ್ಮಾತೃಗಳು' ಎಂದು ಉಲ್ಲೇಖಿಸಿದ ರಾಹುಲ್, ನರೇಗಾ ಯೋಜನೆಯಡಿ ಉದ್ಯೋಗ ಖಾತ್ರಿ ದಿನಗಳನ್ನು 200ಕ್ಕೆ ಏರಿಸಬೇಕು ಹಾಗೂ ಈ ಕಾರ್ಮಿಕರ ಕೂಲಿಯನ್ನು ದಿನಕ್ಕೆ ₹ 400ಕ್ಕೆ ಏರಿಸಬೇಕು. ಅಲ್ಲದೆ ಈ ಯೋಜನೆಯನ್ನು ಭತ್ತ ಕೃಷಿ ಪ್ರದೇಶಕ್ಕೂ ವಿಸ್ತರಿಸಬೇಕು ಎಂದು ಆಗ್ರಹಿಸಿದರು.

ಮತಗಟ್ಟೆ, ಯೋಜನೆ ಫಲಾನುಭವಿಗಳೇ ಗುರಿ

ಒಂದನೇ ಪುಟದಿಂದ

ಮೊದಲನೆಯದಾಗಿ, ಪ್ರತಿ ಮತಗಟ್ಟೆಯಲ್ಲಿ 200 ಕಾರ್ಯಕರ್ತರನ್ನು ಗುರುತಿಸುವುದು ಮತ್ತು ಮತದಾರರ ಜತೆ ಸಂಪರ್ಕದಲ್ಲಿ ಇರಲು ವಾಟ್ಸ್‌ಆ್ಯಪ್ ಗುಂಪುಗಳನ್ನು ರಚಿಸುವುದು. ಲೋಕಸಭೆಗೆ 2019ರಲ್ಲಿ ಚುನಾವಣೆ ನಡೆದಾಗ ದೇಶದಲ್ಲಿ 10 ಲಕ್ಷಕ್ಕೂ ಹೆಚ್ಚು ಮತಗಟ್ಟೆಗಳಿದ್ದವು.

ಎರಡನೆಯದಾಗಿ, ಪ್ರಧಾನಿಯವರ ತಿಂಗಳ ರೇಡಿಯೊ ಕಾರ್ಯಕ್ರಮ 'ಮನದ ಮಾತು' ಅನ್ನು ಜನರಿಗೆ ತಲುಪಿಸಲು ಕಾರ್ಯಕರ್ತರು ದಾರಿಗಳನ್ನು ಕಂಡುಕೊಳ್ಳಬೇಕು. ಮೂರನೆಯದಾಗಿ, ರಾಜ್ಯ ಘಟಕದ ಅಧ್ಯಕ್ಷರು ಮತ್ತು ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿಯು ಪ್ರತಿ ತಿಂಗಳು ಏಳರಿಂದ 10 ದಿನಗಳನ್ನು ಮತಗಟ್ಟೆ ಮಟ್ಟದ ಸಂಘಟನೆ ಬಲಪಡಿಸಲು ಮೀಸಲಿಡಬೇಕು.

ಪ್ರಧಾನಿ ನರೇಂದ್ರ ಮೋದಿ, ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಮತ್ತು ಕೇಂದ್ರ ಸಚಿವ ಪೀಯೂಷ್ ಗೋಯಲ್ ಅವರು ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಶನಿವಾರ ಭಾಗವಹಿಸಿದ್ದರು —ಪಿಟಿಐ ಚಿತ್ರ

'ಹರ್ ಘರ್ ತಿರಂಗ' ಅಭಿಯಾನ ಆರಂಭಕ್ಕೂ ನಿರ್ಧರಿಸಲಾಗಿದೆ. 75ನೇ ಸ್ವಾತಂತ್ರ್ಯೋತ್ಸವವನ್ನು ಆಚರಿಸುವುದಕ್ಕಾಗಿ ಪ್ರತಿ ಮನೆಯ ಮೇಲೆ ತ್ರಿವರ್ಣ ಧ್ವಜ ಹಾರಿಸುವಂತೆ ಮಾಡುವುದೇ ಈ ಅಭಿಯಾನದ ಉದ್ದೇಶ. 20 ಕೋಟಿ ಮನೆಗಳ ಮೇಲೆ ಧ್ವಜ ಹಾರಿಸುವಂತೆ ಮಾಡುವ ಗುರಿ ಇದೆ ಎಂದು ರಾಜೆ ತಿಳಿಸಿದ್ದಾರೆ.

ಮೋದಿಗೆ ಕಾರ್ಯಕಾರಿಣಿ ಅಭಿನಂದನೆ

ಇಡೀ ಜಗತ್ತನ್ನು ಕೋವಿಡ್ ಸಾಂಕ್ರಾಮಿಕ ಆವರಿಸಿಕೊಂಡಿದ್ದರೂ ಭಾರತವನ್ನು ಅಭಿವೃದ್ಧಿಯ ಹಾದಿಯಲ್ಲಿ ಮುನ್ನಡೆಸಿದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಶ್ಲಾಘಿಸುವ ನಿರ್ಣಯವನ್ನು ಕಾರ್ಯಕಾರಿಣಿಯಲ್ಲಿ ಶನಿವಾರ ಅಂಗೀಕರಿಸಲಾಗಿದೆ.

ಉಚಿತ ಪಡಿತರ ವಿತರಿಸುವುದಕ್ಕಾಗಿ ಕಳೆದ 25 ತಿಂಗಳಲ್ಲಿ ₹2.60 ಲಕ್ಷ ಕೋಟಿ ವೆಚ್ಚ ಮಾಡಲಾಗಿದೆ. 80 ಕೋಟಿ ಜನರು ಪ್ರಯೋಜನ ಪಡೆದಿದ್ದಾರೆ ಎಂದು ನಿರ್ಣಯದಲ್ಲಿ ಹೊಗಳಲಾಗಿದೆ. ಸೇನೆಗಳಿಗೆ ಅಲ್ಪಾವಧಿ ನೇಮಕಾತಿಯ 'ಅಗ್ನಿವೀರ್' ಯೋಜನೆಯ ಬಗ್ಗೆಯೂ ಕಾರ್ಯಕಾರಿಣಿಯಲ್ಲಿ ಚರ್ಚಿಸಲಾಗಿದೆ. ಪ್ರತಿ ವರ್ಷ 10 ಲಕ್ಷ ಉದ್ಯೋಗ ಸೃಷ್ಟಿಸಲಾಗುವುದು ಎಂದು ಕಾರ್ಯಕಾರಿಣಿ ಹೇಳಿದೆ.

ಉದ್ಘಾಟನಾ ಭಾಷಣ ಮಾಡಿದ ಜೆ.ಪಿ.ನಡ್ಡಾ ಅವರು, ಮೋದಿ ಅವರ ಎಂಟು ವರ್ಷಗಳ ಆಳ್ವಿಕೆಯನ್ನು ಹೊಗಳಿದ್ದಾರೆ. ಕಾಶ್ಮೀರದ ವಿಶೇಷ ಸ್ಥಾನಮಾನ ರದ್ದತಿಯ ಬಗ್ಗೆಯೂ ಅವರು ಮಾತನಾಡಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ರಾಜಕೀಯ ನಿರ್ಣಯವೊಂದನ್ನು ಕಾರ್ಯಕಾರಿಣಿಯ ಎರಡನೇ ದಿನವಾದ ಭಾನುವಾರ ಮಂಡಿಸಲಿದ್ದಾರೆ. ಕರ್ನಾಟಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರು ಅದನ್ನು ಅನುಮೋದಿಸಲಿದ್ದಾರೆ.

ನ್ಯಾಯಾಂಗ ಸಂವಿಧಾನಕ್ಕೆ ಮಾತ್ರ ಉತ್ತರದಾಯಿ: ಸಿಜೆಐ

ನವದೆಹಲಿ: 'ನ್ಯಾಯಾಂಗವು ಸಂವಿಧಾನಕ್ಕೆ ಮಾತ್ರ ಉತ್ತರದಾಯಿಯಾಗಿದೆಯೇ ವಿನಾ ಯಾವುದೇ ರಾಜಕೀಯ ಪಕ್ಷಗಳ ನಿಲುವು ಅಥವಾ ಸಿದ್ಧಾಂತಗಳಿಗೆ ಅಲ್ಲ' ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಅವರು ಶನಿವಾರ ಹೇಳಿದ್ದಾರೆ.

ಅಮೆರಿಕದ ಸ್ಯಾನ್‌ಫ್ರಾನ್ಸಿಸ್ಕೊದಲ್ಲಿ ಭಾರತೀಯ ಅಮೆರಿಕನ್ನರ ಒಕ್ಕೂಟ ಆಯೋಜಿಸಿದ್ದ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು, 'ಭಾರತದಲ್ಲಿ ಅಧಿಕಾರದಲ್ಲಿರುವ ಪ್ರತಿಯೊಂದು ಪಕ್ಷವು ಸರ್ಕಾರದ ಪ್ರತಿ ಕ್ರಮವೂ ನ್ಯಾಯಾಂಗದ ಅನುಮೋದನೆಗೆ ಅರ್ಹವಾಗಿದೆ ಎಂದು ನಂಬುತ್ತದೆ. ಅಂತೆಯೇ ವಿರೋಧ ಪಕ್ಷಗಳು ಕೂಡಾ ತಮ್ಮ ರಾಜಕೀಯ ಸ್ಥಾನ ಅಥವಾ ಸಿದ್ಧಾಂತಗಳನ್ನು ನ್ಯಾಯಾಂಗವೇ ಮುನ್ನಡೆಸಬೇಕೆಂದು ಬಯಸುತ್ತವೆ. ಆದರೆ, ನ್ಯಾಯಾಂಗವು ಸಂವಿಧಾನಕ್ಕೆ ಮಾತ್ರ ಉತ್ತರದಾಯಿಯಾಗಿದೆ' ಎಂದು ವಿವರಿಸಿದರು.

'ನಾವೀಗ ಸ್ವಾತಂತ್ರ್ಯದ 75ನೇ ವರ್ಷದ ಅಮೃತಮಹೋತ್ಸವದ ಆಚರಣೆಯಲ್ಲಿದ್ದೇವೆ. ಅಂತೆಯೇ ನಮ್ಮ ಗಣರಾಜ್ಯವು 72ನೇ ವರ್ಷಕ್ಕೆ ಕಾಲಿಟ್ಟಿರುವ ಸಂದರ್ಭದಲ್ಲೂ ನಾವು (ಜನರು) ಸಂವಿಧಾನವು ನಮಗೆ ವಹಿಸಿರುವ ಪಾತ್ರಗಳು ಮತ್ತು ಹೊಣೆಗಾರಿಕೆಯನ್ನು ನಿಭಾಯಿಸಲು ಕಲಿತಿಲ್ಲ ಎಂಬುದನ್ನು ನಾನಿಲ್ಲಿ ವಿಷಾದದಿಂದ ಹೇಳಬೇಕಿದೆ' ಎಂದರು.

'ಇಂತಹ ಆಲೋಚನಾ ಕ್ರಮಗಳ ಕಾರಣಕ್ಕಾಗಿಯೇ ರಾಜಕೀಯ ಪಕ್ಷಗಳು ಮತ್ತು ಜನರಿಗೆ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಬಗ್ಗೆ ತಿಳಿವಳಿಕೆಯ ಕೊರತೆ ಉಂಟಾಗಿದೆ. ನಾವು ಅಂದರೆ ನ್ಯಾಯಾಂಗವು ಸಂವಿಧಾನಕ್ಕೆ ಮಾತ್ರ ಉತ್ತರದಾಯಿತ್ವ ಮತ್ತು ಜವಾಬ್ದಾರರು ಎಂಬುದನ್ನು ಸ್ಪಷ್ಟಪಡಿಸುತ್ತೇನೆ. ಸಂವಿಧಾನದಲ್ಲಿ ರೂಪಿಸಲಾಗಿರುವ ಸಮತೋಲನವನ್ನು ಕಾಯ್ದುಗೊಳ್ಳಲು ಭಾರತದಲ್ಲಿ ಸಾಂವಿಧಾನಿಕ ಸಂಸ್ಕೃತಿಯನ್ನು ಪ್ರೋತ್ಸಾಹಿಸುವ ಅಗತ್ಯವಿದೆ' ಎಂದೂ ರಮಣ ಅವರು ಹೇಳಿದರು.

ಟಿಆರ್‌ಎಸ್ ಸಂಸದನ ₹96 ಕೋಟಿ ಆಸ್ತಿ ಜಪ್ತಿ

ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣದಡಿ ಟಿಆರ್‌ಎಸ್ ಸಂಸದ ನಾಮ ನಾಗೇಶ್ವರರಾವ್ ಒಡೆತನದ ಮಧುಕಾನ್ ಪ್ರಾಜೆಕ್ಟ್ಸ್ ಲಿಮಿಟೆಡ್‌ಗೆ ಸೇರಿದ ₹96.21 ಕೋಟಿ ಮೌಲ್ಯದ ಆಸ್ತಿಯನ್ನು ಜಾರಿ ನಿರ್ದೇಶನಾಲಯ ಮುಟ್ಟುಗೋಲು ಹಾಕಿದೆ.

'ಮಧುಕಾನ್ ಸಮೂಹಕ್ಕೆ ಸೇರಿದ ರಾಂಚಿ ಎಕ್ಸ್‌ಪ್ರೆಸ್‌ವೇ ಲಿಮಿಟೆಡ್, ರಾಂಚಿ–ರಾರ್‌ಗಾಂವ್–ಜೆಮ್‌ಶೆಡ್‌ಪುರ ವಿಭಾಗದಲ್ಲಿ 163.50 ಕಿ.ಮೀ. ರಸ್ತೆ ನಿರ್ಮಾಣಕ್ಕೆ ಟೆಂಡರ್ ಪಡೆದಿತ್ತು. ಇದಕ್ಕಾಗಿ ಬ್ಯಾಂಕ್‌ಗಳಿಂದ ಪಡೆದ ₹1,030 ಕೋಟಿ ಸಾಲದ ಮೊತ್ತವನ್ನು ತನ್ನ ಅಂಗ ಸಂಸ್ಥೆಗಳಿಗೆ ವರ್ಗಾಯಿಸಿತ್ತು' ಎಂದು ಇ.ಡಿ ಹೇಳಿದೆ.

'ತೆಲಂಗಾಣ, ಪಶ್ಚಿಮ ಬಂಗಾಳ ಮತ್ತು ಆಂಧ್ರಪ್ರದೇಶದ ವಿವಿಧೆಡೆ ಕಂಪನಿ ಹೊಂದಿದ್ದ ₹88.85 ಕೋಟಿ ಮೌಲ್ಯದ ಸ್ಥಿರಾಸ್ತಿ ಮತ್ತು ₹7.36 ಕೋಟಿ ಮೌಲ್ಯದ ಚರಾಸ್ಥಿ ಮುಟ್ಟುಗೋಲು ಹಾಕಲಾಗಿದೆ' ಎಂದೂ ತಿಳಿಸಿದೆ.

ಆದೇಶ ಮಾಧ್ಯಮಗಳಿಗೆ ಸೋರಿಕೆ: ಆಕ್ಷೇಪ

ಜುಬೈರ್ ಜಾಮೀನು ಅರ್ಜಿ ವಜಾ

ನವದೆಹಲಿ (ಪಿಟಿಐ): ಹಿಂದೂ ದೇವರ ಕುರಿತು 2018ರಲ್ಲಿ ಮಾಡಿದ್ದ ಆಕ್ಷೇಪಾರ್ಹ ಟ್ವೀಟ್ ಪ್ರಕರಣದಲ್ಲಿ ಬಂಧಿತರಾಗಿರುವ 'ಆಲ್ಟ್ ನ್ಯೂಸ್'ನ ಸಹ ಸಂಸ್ಥಾಪಕ ಮೊಹಮ್ಮದ್ ಜುಬೈರ್ ಅವರ ಜಾಮೀನು ಅರ್ಜಿಯನ್ನು ವಜಾಗೊಳಿಸಿರುವ ನ್ಯಾಯಾಲಯ, ಜುಬೈರ್‌ಗೆ 14 ದಿನಗಳ ನ್ಯಾಯಾಂಗ ಬಂಧನ ವಿಧಿಸಿ ಆದೇಶಿಸಿದೆ ಎಂದು ದೆಹಲಿ ಪೊಲೀಸರು ಶನಿವಾರ ತಿಳಿಸಿದ್ದಾರೆ.

ಆದರೆ ಇಲ್ಲಿಯವರೆಗೆ ಈ ಕುರಿತು ನ್ಯಾಯಾಲಯದ ಆದೇಶ ಪ್ರಕಟವಾಗಿಲ್ಲ ಎಂದು ಜುಬೈರ್ ಪರ ವಕೀಲ ಸೌತಿಕ್ ಬ್ಯಾನರ್ಜಿ ಹೇಳಿದ್ದಾರೆ.

ವಿಚಾರಣೆ ಸಲುವಾಗಿ ಜುಬೈರ್ ಅವರನ್ನು ವಶಕ್ಕೆ ಪಡೆಯಲಾಗಿದ್ದ ಐದು ದಿನಗಳ ಅವಧಿ ಮುಗಿದ ಕಾರಣ ಪೊಲೀಸರು, ಅವರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದರು. ಈ ವೇಳೆ ಆರೋಪಿಯ ನ್ಯಾಯಾಂಗ ಬಂಧನಕ್ಕೆ ಮನವಿ ಮಾಡಿದ್ದ ಪೊಲೀಸರು, ಅಗತ್ಯವಿದ್ದರೆ ಮುಂದಿನ ದಿನಗಳಲ್ಲಿ ಇನ್ನಷ್ಟು ವಿಚಾರಣೆ ನಡೆಸುವುದಾಗಿ ತಿಳಿಸಿದರು. ಇದೇ ವೇಳೆ ಜುಬೈರ್ ಜಾಮೀನು ಅರ್ಜಿ ಸಲ್ಲಿಸಿದ್ದರು.

'ಆದೇಶ ಮಾಧ್ಯಮಗಳಿಗೆ ಸೋರಿಕೆ': 'ಜುಬೈರ್ ಅವರಿಗೆ ಜಾಮೀನು ನಿರಾಕರಿಸಿರುವ ವಿಚಾರವನ್ನು ಡಿಸಿಪಿ ಕೆ.ಪಿ.ಎಸ್. ಮಲ್ಹೋತ್ರಾ ಅವರು ಮಾಧ್ಯಮಗಳಿಗೆ ಸೋರಿಕೆ ಮಾಡಿರುವುದರಿಂದ ಅಘಾತವುಂಟಾಗಿದೆ. ಕೆಲವು ಸುದ್ದಿ ವಾಹಿನಿಗಳು ಹಾಗೂ ವರದಿಗಾರರು ಟ್ವಿಟರ್‌ನಲ್ಲಿ ಮಾಡಿರುವ ಪೋಸ್ಟ್ ಕಂಡು ಈ ವಿಚಾರ ನನ್ನ ಗಮನಕ್ಕೆ ಬಂತು. ಅವರು ಮಲ್ಹೋತ್ರಾ ಅವರನ್ನು ಮೂಲವನ್ನಾಗಿ ಉಲ್ಲೇಖಿಸಿದ್ದಾರೆ' ಎಂದು ಜುಬೈರ್ ಪರ ವಕೀಲ ಸೌತಿಕ್ ಬ್ಯಾನರ್ಜಿ ಹೇಳಿದ್ದಾರೆ.

'ಇದೊಂದು ಹಗರಣವಾಗಿದೆ. ಜ್ಯುಡಿಶಿಯಲ್ ಮ್ಯಾಜಿಸ್ಟ್ರೇಟ್ ಅವರು ಆದೇಶ ನೀಡುವುದಕ್ಕೂ ಮುನ್ನ ಅದನ್ನು ಮಾಧ್ಯಮಗಳಿಗೆ ಸೋರಿಕೆ ಮಾಡಲಾಗಿದೆ. ಆದೇಶ ಏನೆಂದು ಮಲ್ಹೋತ್ರಾ ಅವರಿಗೆ ಹೇಗೆ ಗೊತ್ತಾಯಿತು. ಈ ಕುರಿತು ಗಂಭೀರವಾದ ಆತ್ಮಾವಲೋಕನದ ಅಗತ್ಯ ಇದೆ' ಎಂದೂ ಹೇಳಿದ್ದಾರೆ.

ತಪ್ಪೊಪ್ಪಿಕೊಂಡ ಪೊಲೀಸ್ ಅಧಿಕಾರಿ

ಜುಬೈರ್ ಅವರ ಜಾಮೀನು ಅರ್ಜಿಯ ಕುರಿತು ಮಾಧ್ಯಮಗಳಿಗೆ ತಪ್ಪಾಗಿ ಮಾಹಿತಿ ನೀಡಿರುವುದಾಗಿ ಡಿಸಿಪಿ ಮಲ್ಹೋತ್ರಾ ಅವರು ಒಪ್ಪಿಕೊಂಡಿದ್ದಾರೆ.

ಶನಿವಾರ ಬೆಳಿಗ್ಗೆ ಜುಬೈರ್ ಅವರ ಜಾಮೀನು ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಧೀಶರು ಆದೇಶವನ್ನು ಕಾಯ್ದಿರಿಸಿದ್ದರು, ಆದರೆ ಜುಬೈರ್ ಅವರಿಗೆ 14 ದಿನಗಳ ನ್ಯಾಯಾಂಗ ಬಂಧನ ವಿಧಿಸಲಾಗಿದೆ ಎಂದು ಈ ವೇಳೆ ಮಲ್ಹೋತ್ರಾ ಅವರು ಮಾಧ್ಯಮಗಳಿಗೆ ತಿಳಿಸಿದ್ದರು.

ಸ್ಪೈಸ್ ಜೆಟ್ ಕ್ಯಾಬಿನ್‌ನಲ್ಲಿ ಹೊಗೆ: ದೆಹಲಿಯಲ್ಲೇ ಇಳಿದ ವಿಮಾನ

ನವದೆಹಲಿ (ಪಿಟಿಐ): ದೆಹಲಿಯಿಂದ ಜಬಲ್‌ಪುರಕ್ಕೆ ಶನಿವಾರ ಪ್ರಯಾಣ ಬೆಳೆಸಿದ್ದ ಸ್ಪೈಸ್ ಜೆಟ್ ವಿಮಾನದ ಕ್ಯಾಬಿನ್‌ನಲ್ಲಿ ಹೊಗೆ ಕಂಡು ಬಂದ ಕಾರಣ ವಿಮಾನವು ಕೂಡಲೇ ದೆಹಲಿ ವಿಮಾನ ನಿಲ್ದಾಣದಲ್ಲಿಯೇ ಇಳಿಯಿತು.

ವಿಮಾನವು ಸುಮಾರು 5,000 ಅಡಿ ಎತ್ತರದಲ್ಲಿದ್ದಾಗ ಹೊಗೆಯನ್ನು ವಿಮಾನದ ಸಿಬ್ಬಂದಿ ಗಮನಿಸಿದ್ದಾರೆ ಎಂದು ಸ್ಪೈಸ್ ಜೆಟ್ ತಿಳಿಸಿದೆ. ವಿಮಾನದ ಎಂಜಿನ್‌ವೊಂದರಲ್ಲಿನ ಆಯಿಲ್ ಸೋರಿಕೆಯು ಹೊಗೆಗೆ ಕಾರಣವಿರಬಹುದು ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ ಎಂದು ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ (ಡಿಜಿಸಿಎ) ತಿಳಿಸಿದೆ.

ಸ್ಪೈಸ್ ಜೆಟ್‌ನ ವಿಮಾನಗಳಲ್ಲಿ ಎರಡು ವಾರಗಳಲ್ಲಿ ಸಂಭವಿಸಿದ ಐದನೇ ಪ್ರಕರಣ ಇದಾಗಿದೆ. ಈ ಎಲ್ಲ ಪ್ರಕರಣಗಳ ತನಿಖೆಯನ್ನು ಡಿಜಿಸಿಎ ನಡೆಸುತ್ತಿದೆ. 'ಪ್ರಯಾಣಿಕರನ್ನು ಪರ್ಯಾಯ ವಿಮಾನದಲ್ಲಿ ದೆಹಲಿಯಿಂದ ಜಬಲ್‌ಪುರಕ್ಕೆ ಕರೆದೊಯ್ಯಲಾಯಿತು' ಎಂದು ಸ್ಪೈಸ್ ಜೆಟ್ ವಕ್ತಾರರು ತಿಳಿಸಿದ್ದಾರೆ.

ಜೂನ್ 19ರಂದು ಪಟ್ನಾದ ವಿಮಾನ ನಿಲ್ದಾಣದಿಂದ 185 ಪ್ರಯಾಣಿಕರನ್ನು ಹೊತ್ತು ದೆಹಲಿಗೆ ಹೊರಟಿದ್ದ ಸ್ಪೈಸ್ ಜೆಟ್ ವಿಮಾನ ಟೇಕಾಫ್ ಆದ ಕೆಲವೇ ಕ್ಷಣಗಳಲ್ಲಿ ತುರ್ತು ಭೂಸ್ಪರ್ಶ ಮಾಡಿತ್ತು. ಹಕ್ಕಿಯೊಂದು ಡಿಕ್ಕಿ ಹೊಡೆದ ಪರಿಣಾಮ ಎಂಜಿನ್‌ಲ್ಲಿ ಬೆಂಕಿ ಕಾಣಿಸಿಕೊಂಡಿದ್ದು ಇದಕ್ಕೆ ಕಾರಣವಾಗಿತ್ತು.

ಸಂಕ್ಷಿಪ್ತ ಸುದ್ದಿ

ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆಗೆ ತಿದ್ದುಪಡಿ

ನವದೆಹಲಿ: ಕೇಂದ್ರ ಗೃಹ ಸಚಿವಾಲಯವು ವಿದೇಶಿ ದೇಣಿಗೆ (ನಿಯಂತ್ರಣ) ಕಾಯ್ದೆಗೆ (ಎಫ್‌ಸಿಆರ್‌ಎ) ಸಂಬಂಧಿಸಿದಂತೆ ಕೆಲವು ತಿದ್ದುಪಡಿಗಳನ್ನು ಮಾಡಿದ್ದು, ಅಧಿಕಾರಿಗಳಿಗೆ ಮಾಹಿತಿ ನೀಡದೇ ವಿದೇಶದಲ್ಲಿರುವ ಸಂಬಂಧಿಕರಿಂದ ಭಾರತೀಯರು ಒಂದು ವರ್ಷದಲ್ಲಿ ₹ 10 ಲಕ್ಷ ಪಡೆಯಬಹುದಾಗಿದೆ.

ಈ ಹಿಂದೆ ಹಣ ಪಡೆಯುವ ಮಿತಿಯು ₹ 1 ಲಕ್ಷ ಮಾತ್ರ ಇತ್ತು. ವಿದೇಶಿ ದೇಣಿಗೆ (ನಿಯಂತ್ರಣ) ತಿದ್ದುಪಡಿಯ ನಿಯಮಗಳು 2022 ಅನ್ನು ಕೇಂದ್ರ ಗೃಹ ಸಚಿವಾಲಯವು ಶುಕ್ರವಾರ ರಾತ್ರಿ ಗೆಜೆಟ್ ಅಧಿಸೂಚನೆಯ ಮೂಲಕ ಹೊರಡಿಸಿದೆ. ₹ 10 ಲಕ್ಷಕ್ಕಿಂತ ಹೆಚ್ಚಿನ ಮೊತ್ತವಿದ್ದರೆ, ವ್ಯಕ್ತಿಗಳು ಸರ್ಕಾರಕ್ಕೆ 90 ದಿನಗಳ ಕಾಲಾವಧಿಯೊಳಗೆ ಮಾಹಿತಿ ನೀಡಬೇಕು. ಈ ಹಿಂದೆ 30 ದಿನಗಳ ಮುಂಚೆಯೇ ಸರ್ಕಾರಕ್ಕೆ ಮಾಹಿತಿ ನೀಡಬೇಕಿತ್ತು.

ದುಡಿಯುವ ಮಹಿಳೆಯರಿಗಾಗಿ 50 ವಸತಿ ನಿಲಯ

ನವದೆಹಲಿ (ಪಿಟಿಐ): 'ಕೇಂದ್ರ ಸರ್ಕಾರವು ದುಡಿಯುವ ವರ್ಗದ ಮಹಿಳೆಯರಿಗಾಗಿ ಬಾಡಿಗೆ ಪದ್ಧತಿಯಡಿ ಹೊಸದಾಗಿ 50 ವಸತಿ ನಿಲಯಗಳನ್ನು ಆರಂಭಿಸಲು ನಿರ್ಧರಿಸಿದೆ' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

'ದುಡಿಯುವ ಮಹಿಳೆಯರ ವಸತಿ ನಿಲಯ (ಡಬ್ಲ್ಯುಡಬ್ಲ್ಯುಎಚ್) ಯೋಜನೆಯನ್ನು 'ಸಖಿ ನಿವಾಸ'ವೆಂದು ಮರು ನಾಮಕರಣ ಮಾಡಲಾಗಿದೆ. ಮಹಿಳೆಯರ ಬೇಡಿಕೆಗೆ ಅನುಸಾರವಾಗಿ ಪ್ರದೇಶವಾರು ಒಟ್ಟು 50 ವಸತಿ ನಿಲಯಗಳನ್ನು ಆರಂಭಿಸಲು ತೀರ್ಮಾನಿಸಲಾಗಿದೆ. ವಸತಿ ನಿಲಯಗಳಲ್ಲಿ ತಂಗುವ ತಾಯಂದಿರ ಜೊತೆ ಅವರ ಮಕ್ಕಳೂ ಉಳಿದುಕೊಳ್ಳಬಹುದಾಗಿದೆ. ಅವರಿಗೆ ವಯಸ್ಸಿನ ಮಿತಿ (ಹೆಣ್ಣು ಮಕ್ಕಳಿಗೆ 18, ಗಂಡು ಮಕ್ಕಳಿಗೆ 14) ನಿಗದಿಪಡಿಸಲಾಗಿದೆ' ಎಂದು ಅವರು ಹೇಳಿದ್ದಾರೆ.

ಪಾಕ್‌ಗೆ ಬಾಲಕ ಹಸ್ತಾಂತರ

ಚಂಡೀಗಡ (ಪಿಟಿಐ): ಪ್ರಮಾದವಶಾತ್ ಗಡಿ ದಾಟಿ ಭಾರತದ ಭೂ ಪ್ರದೇಶಕ್ಕೆ ಬಂದಿದ್ದ ಮೂರು ವರ್ಷದ ಬಾಲಕನನ್ನು ಗಡಿ ಭದ್ರತಾ ಪಡೆಯು (ಬಿಎಸ್‌ಎಫ್) ಶನಿವಾರ ಪಾಕಿಸ್ತಾನದ ರೇಂಜರ್ಸ್‌ಗೆ ಹಸ್ತಾಂತರಿಸಿದೆ.

ಪಂಜಾಬ್‌ನ ಫಿರೋಜ್‌ಪುರ ವಲಯದಲ್ಲಿ ಬಿಎಸ್‌ಎಫ್ ಸಿಬ್ಬಂದಿ ಪಾಕಿಸ್ತಾನದ ಈ ಬಾಲಕನನ್ನು ಗುರುತಿಸಿ ವಶಕ್ಕೆ ಪಡೆದಿದ್ದರು.

ಡ್ರಗ್ಸ್ ಮಾರಾಟ ಮಾಡಿ ಯುವಸಮೂಹವನ್ನು ವ್ಯಸನಿಗಳಾಗಿ ಮಾಡುತ್ತಿದ್ದ ಆರೋಪ

ಪಿಐಟಿ–ಎನ್‌ಡಿಪಿಎಸ್ ಕಾಯ್ದೆ: ಆರೋಪಿ ಜೈಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡ್ರಗ್ಸ್ ಮಾರಾಟವನ್ನೇ ವೃತ್ತಿ ಮಾಡಿಕೊಂಡು ಯುವ ಸಮೂಹವನ್ನು ಮಾದಕ ವ್ಯಸನಿಗಳಾಗಿ ಮಾಡುತ್ತಿದ್ದ ಆರೋಪದಡಿ ಜೆ. ನಾರಾಯಣ (42) ಎಂಬುವರನ್ನು 'ಮಾದಕ ದ್ರವ್ಯ ಹಾಗೂ ನಿದ್ರಾಜನ್ಯ ವಸ್ತುಗಳ ಅಕ್ರಮ ಸಾಗಾಣಿಕೆ ತಡೆ (ಪಿಐಟಿ–ಎನ್‌ಡಿಪಿಎಸ್)' ಕಾಯ್ದೆಯಡಿ ಬಂಧಿಸಿ ಜೈಲಿಗೆ ಕಳುಹಿಸಲಾಗಿದೆ.

'ಮಾಗಡಿ ರಸ್ತೆ ನಿವಾಸಿ ನಾರಾಯಣ, ಹಲವು ವರ್ಷಗಳಿಂದ ಡ್ರಗ್ಸ್ ಮಾರಾಟದಲ್ಲಿ ತೊಡಗಿದ್ದ. ನಂದಿನಿ ಲೇಔಟ್ ಹಾಗೂ ಶ್ರೀರಾಮಪುರ ಠಾಣೆಯಲ್ಲಿ ಈತನ ವಿರುದ್ಧ ಪ್ರಕರಣಗಳು ದಾಖಲಾಗಿದ್ದವು. ಜೈಲಿಗೆ ಹೋಗಿ ಜಾಮೀನಿನ ಮೇಲೆ ಹೊರಬಂದಿದ್ದ ಆರೋಪಿ, ಪುನಃ ಡ್ರಗ್ಸ್ ಮಾರಾಟದಲ್ಲಿ ತೊಡಗಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಶ್ರೀರಾಮಪುರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಡ್ರಗ್ಸ್ ಮಾರುತ್ತಿದ್ದ ನಾರಾಯಣ, ಸಮಾಜದ ಸ್ವಾಸ್ಥ್ಯ ಹಾಳು ಮಾಡುತ್ತಿದ್ದ. ಜಾಮೀನು ಷರತ್ತುಗಳನ್ನೂ ಉಲ್ಲಂಘಿಸುತ್ತಿದ್ದ. ಹೀಗಾಗಿ, ಈತನನ್ನು ಪಿಐಟಿ–ಎನ್‌ಡಿಪಿಎಸ್ ಕಾಯ್ದೆಯಡಿ ಬಂಧಿಸಲು ಕೋರಿ ಕಮಿಷನರ್ ಅವರಿಗೆ ಪ್ರಸ್ತಾವ ಸಲ್ಲಿಸಲಾಗಿತ್ತು. ಇದಕ್ಕೆ ಒಪ್ಪಿಗೆ ನೀಡಿರುವ ಕಮಿಷನರ್, ತಮ್ಮ ಅಧಿಕಾರ ಚಲಾಯಿಸಿ ಆರೋಪಿಯನ್ನು ಒಂದು ವರ್ಷ ಜೈಲಿನಲ್ಲಿಡಲು ಆದೇಶಿಸಿದ್ದಾರೆ' ಎಂದು ತಿಳಿಸಿವೆ.

ಮನೆಗೆ ನುಗ್ಗಿ ವೃದ್ಧೆ ಕೊಲೆ

ಚನ್ನಮ್ಮನಕೆರೆ ಅಚ್ಚುಕಟ್ಟು ಠಾಣೆ ವ್ಯಾಪ್ತಿಯ ಮನೆ ಯೊಂದರಲ್ಲಿ ಯಶೋದಮ್ಮ (75) ಅವರನ್ನು ಕೊಲೆ ಮಾಡಲಾಗಿದ್ದು, ಆರೋಪಿಗಳ ಪತ್ತೆಗೆ ಪೊಲೀಸರ ವಿಶೇಷ ತಂಡ ರಚಿಸಲಾಗಿದೆ.

'ವಿದ್ಯಾಪೀಠ ವೃತ್ತ ಬಳಿಯ ವಿನಾಯಕ್ ನಗರ ನಿವಾಸಿ ಯಶೋ ದಮ್ಮ ಬಹುಮಹಡಿ ಕಟ್ಟಡದ ಮಾಲೀಕರಾಗಿದ್ದರು. ನೆಲಮಹಡಿ ಯಲ್ಲಿ ಒಂಟಿಯಾಗಿದ್ದ ಅವರು, ಮೊದಲ ಮಹಡಿಯಲ್ಲಿದ್ದ ಮನೆಗಳನ್ನು ಬಾಡಿಗೆಗೆ ನೀಡಿದ್ದರು' ಎಂದು ಮೂಲಗಳು ಹೇಳಿವೆ.

'ಶುಕ್ರವಾರ ರಾತ್ರಿ ಮನೆಗೆ ನುಗ್ಗಿದ್ದ ದುಷ್ಕರ್ಮಿಗಳು ಕೊಲೆ ಮಾಡಿ ಪರಾರಿಯಾಗಿದ್ದಾರೆ. ಶನಿವಾರ ಬೆಳಿಗ್ಗೆ ಬಾಡಿಗೆದಾರರೊಬ್ಬರು ಯಶೋದಮ್ಮ ಮನೆಗೆ ಹೋಗಿದ್ದರು. ರಕ್ತದ ಮಡುವಿನಲ್ಲಿ ಬಿದ್ದಿದ್ದ ಯಶೋದಮ್ಮ ಅವರನ್ನು ಕಂಡು ಚೀರಾಡಿದ್ದರು. ಸ್ಥಳೀಯರು, ಯಶೋದಮ್ಮ ಅವರನ್ನು ಆಸ್ಪತ್ರೆಗೆ ಸಾಗಿಸಿದ್ದರು.

ಡ್ರಗ್ಸ್ ಮಾರಾಟ: ಮಾರಕಾಸ್ತ್ರ ತೋರಿಸಿ ಸುಲಿಗೆ

ಬೆಂಗಳೂರು: ಡ್ರಗ್ಸ್ ಮಾರಾಟ ಹಾಗೂ ಸುಲಿಗೆ ಪ್ರಕರಣದಲ್ಲಿ ಭಾಗಿಯಾಗಿದ್ದ ಮೂವರು ಆರೋಪಿಗಳನ್ನು ಬಾಣಸವಾಡಿ ಪೊಲೀಸರು ಬಂಧಿಸಿದ್ದಾರೆ.

'ಕಾಡುಗೊಂಡನಹಳ್ಳಿಯ (ಕೆ.ಜಿ.ಹಳ್ಳಿ) ಅನ್ವರ್ ಬಡಾವಣೆಯ ರೂಹಿತ್ ಹುಸೇನ್ (23), ಮಹಮ್ಮದ್ ರಿಜ್ವಾನ್ ಅಲಿಯಾಸ್ ಜೋಕನ್ (20) ಹಾಗೂ ದೇವರ ಜೀವನಹಳ್ಳಿಯ (ಡಿ.ಜೆ.ಹಳ್ಳಿ) ಮೊಹಮ್ಮದ್ ಸಾದಿಕ್ (20) ಬಂಧಿತರು. ಇವರಿಂದ ₹ 22 ಲಕ್ಷ ಮೌಲ್ಯದ 425 ಗ್ರಾಂ ಚಿನ್ನಾಭರಣ ಹಾಗೂ ₹ 3 ಲಕ್ಷ ಮೌಲ್ಯದ ಎಂಡಿಎಂಎ ಮಾತ್ರೆಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.



'ಬಾಣಸವಾಡಿ ಠಾಣೆ ವ್ಯಾಪ್ತಿಯಲ್ಲಿ ಸಿಬ್ಬಂದಿ ಜೂನ್ 29ರಂದು ವಾಹನ ತಪಾಸಣೆ ಮಾಡುತ್ತಿದ್ದರು. ಅನುಮಾನಾಸ್ಪದವಾಗಿ ಹೊರಟಿದ್ದ ಆರೋಪಿಗಳ ವಾಹನ ತಡೆದು ಪರಿಶೀಲಿಸಿದಾಗ ಡ್ರಗ್ಸ್ ಪತ್ತೆಯಾಗಿತ್ತು. ಠಾಣೆಗೆ ಕರೆದೊಯ್ದು ವಿಚಾರಿಸಿದಾಗ, ಸುಲಿಗೆ ಪ್ರಕರಣಗಳೂ ಬಯಲಾದವು' ಎಂದೂ ತಿಳಿಸಿದರು.

'ಆರೋಪಿಗಳು ವ್ಯವಸ್ಥಿತ ಜಾಲ ರೂಪಿಸಿಕೊಂಡು, ಡ್ರಗ್ಸ್ ಮಾರುತ್ತಿದ್ದರು. ಕೆಲ ಕಾಲೇಜು ವಿದ್ಯಾರ್ಥಿಗಳು ಹಾಗೂ ಕೆಲ ಖಾಸಗಿ ಕಂಪನಿ ಉದ್ಯೋಗಿಗಳು ಡ್ರಗ್ಸ್ ಖರೀದಿಸುತ್ತಿದ್ದರು' ಎಂದು ಹೇಳಿದರು.

ವಾಯುವಿಹಾರಕ್ಕೆ ಹೋಗುವವರ ಸುಲಿಗೆ: 'ಬೆಳಿಗ್ಗೆ ಹಾಗೂ ಸಂಜೆ ವಾಯುವಿಹಾರಕ್ಕೆ ಹೋಗುವ ಸಾರ್ವಜನಿಕರನ್ನು ಹಿಂಬಾಲಿಸುತ್ತಿದ್ದ ಆರೋಪಿಗಳು ಮಾರಕಾಸ್ತ್ರ ತೋರಿಸಿ ಬೆದರಿಸಿ ಚಿನ್ನಾಭರಣ ಹಾಗೂ ಮೊಬೈಲ್ ಸುಲಿಗೆ ಮಾಡುತ್ತಿದ್ದರು' ಎಂದು ಪೊಲೀಸರು ತಿಳಿಸಿದರು.

'ರಾಮಮೂರ್ತಿನಗರ, ಕೊಡಿಗೇಹಳ್ಳಿ, ಅಮೃತಹಳ್ಳಿ, ಯಲಹಂಕ, ಸದಾಶಿವನಗರ, ಹೆಣ್ಣೂರು ಸೇರಿದಂತೆ ವಿವಿಧ ಠಾಣೆ ವ್ಯಾಪ್ತಿಯಲ್ಲಿ ಆರೋಪಿಗಳು ಕೃತ್ಯ ಎಸಗಿದ್ದು ತನಿಖೆಯಿಂದ ಗೊತ್ತಾಗಿದೆ' ಎಂದು ಹೇಳಿದರು.

ಸುದ್ದಿ 2 ನಿಮಿಷ

ಮಗನ ಕಳ್ಳತನಕ್ಕೆ ತಂದೆ ತರಬೇತಿ

ಬೆಂಗಳೂರು: ನಗರದ 15 ಮನೆಗಳಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ಬಂಧಿಸಲಾಗಿರುವ ಆರೋಪಿ ಇಮ್ರಾನ್ ಅಲಿಯಾಸ್ ಚೋರ್, ತಂದೆಯಿಂದ ತರಬೇತಿ ಪಡೆದು ಕೃತ್ಯ ಎಸಗುತ್ತಿದ್ದ ಸಂಗತಿ ಸಿಸಿಬಿ ಪೊಲೀಸರ ತನಿಖೆಯಿಂದ ಗೊತ್ತಾಗಿದೆ.

'ನಗರದ ಹಲವು ಮನೆಗಳಲ್ಲಿ ಕಳ್ಳತನ ಮಾಡಿ ಪರಾರಿಯಾಗಿದ್ದ ಆರೋಪಿ ಇಮ್ರಾನ್‌ನನ್ನು ಇತ್ತೀಚೆಗಷ್ಟೇ ಮೈಸೂರಿನಲ್ಲಿ ಬಂಧಿಸಲಾಗಿದೆ. ಈತ ನೀಡಿದ್ದ ಮಾಹಿತಿ ಆಧರಿಸಿ, ತಂದೆ ಏಜಾಜ್ ಖಾನ್‌ನನ್ನು ಬಂಧಿಸಲಾಗಿದೆ. ಇಬ್ಬರಿಂದಲೂ ₹ 65 ಲಕ್ಷ ಮೌಲ್ಯದ 1 ಕೆ.ಜಿ. 300 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಮೂಲಗಳು ಹೇಳಿವೆ.

'ಅಪರಾಧ ಪ್ರಕರಣ ಭೇದಿಸಲು ಪೊಲೀಸರಿಗೆ ನೆರವಾಗುತ್ತಿದ್ದ ಏಜಾಜ್ ಖಾನ್, ಬಾತ್ಮಿದಾರನಾಗಿಯೂ ಮಾಹಿತಿ ನೀಡುತ್ತಿದ್ದ. ಪೊಲೀಸರ ತನಿಖಾ ವಿಧಾನ ತಿಳಿದಿದ್ದ ಏಜಾಜ್, ಕಳ್ಳತನ ಹೇಗೆ ಮಾಡಬೇಕೆಂದು ಮಗನಿಗೆ ಹೇಳುತ್ತಿದ್ದ. ಕಳ್ಳತನದ ನಂತರ ಪೊಲೀಸರಿಗೆ ಸಿಗದಂತೆ ಹೇಗೆ ಪರಾರಿಯಾಗಬೇಕು ಎಂಬುದನ್ನೂ ತಿಳಿಸುತ್ತಿದ್ದ. ತಂದೆ ನೀಡಿದ್ದ ತರಬೇತಿಯಿಂದಲೇ ನಗರದ 15 ಮನೆಗಳಲ್ಲಿ ಇಮ್ರಾನ್ ಕಳ್ಳತನ ಮಾಡಿದ್ದ.'

'ಮಗನನ್ನು ಪೊಲೀಸರು ಹುಡುಕುತ್ತಿದ್ದ ಬಗ್ಗೆಯೂ ತಂದೆಗೆ ಮಾಹಿತಿ ಸಿಗುತ್ತಿತ್ತು. ಅದೇ ಮಾಹಿತಿಯನ್ನು ಮಗನಿಗೆ ರವಾನಿಸುತ್ತಿದ್ದ ತಂದೆ, ತಲೆಮರೆಸಿಕೊಂಡು ಓಡಾಡಲು ನೆರವಾಗುತ್ತಿದ್ದ. ಐಷಾರಾಮಿ ಹೋಟೆಲ್‌ನಲ್ಲಿ ಪೊಲೀಸರು ಶೋಧ ನಡೆಸುವುದು ಕಡಿಮೆ ಎಂಬುದನ್ನು ತಿಳಿದಿದ್ದ ತಂದೆ, ಅಂಥ ಹೋಟೆಲ್‌ನಲ್ಲಿ ಮಗನನ್ನು ಇರಿಸುತ್ತಿದ್ದ. ಹೀಗಾಗಿಯೇ ಆರೋಪಿ ಬಗ್ಗೆ ಸುಳಿವು ಸಿಕ್ಕಿರಲಿಲ್ಲ' ಎಂದು ತಿಳಿಸಿವೆ. 'ಕಳ್ಳತನ ನಡೆದಿದ್ದ ಮನೆಯಲ್ಲಿ ಸಿಕ್ಕ ಬೆರಳಚ್ಚು ಆಧಾರದಲ್ಲಿ ತನಿಖೆ ನಡೆಸಿದಾಗ ಆರೋಪಿ ಸುಳಿವು ಸಿಕ್ಕಿತ್ತು. ಅದರ ಮೂಲಕವೇ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಯಿತು' ಎಂದೂ ಸಿಸಿಬಿ ಮೂಲಗಳು ಹೇಳಿವೆ.

ಫ್ರಿಡ್ಜ್ ಮುಟ್ಟಿದ ಬಾಲಕ ಸಾವು

ಸುಳ್ಯ (ದಕ್ಷಿಣ ಕನ್ನಡ): ತಾಲ್ಲೂಕಿನ ಐವರ್ನಾಡಿನ ಕೈಯೊಳ್ತಡ್ಕ ಎಂಬಲ್ಲಿ ಮನೆಯಲ್ಲಿದ್ದ ಫ್ರಿಡ್ಜ್ ಮುಟ್ಟಿದ 5 ವರ್ಷದ ಬಾಲಕ ವಿದ್ಯುತ್ ತಗುಲಿ ಶನಿವಾರ ಮೃತಪಟ್ಟಿದ್ದಾನೆ.

ಪುತ್ತೂರು ತಾಲ್ಲೂಕಿನ ಕೆದಂಬಾಡಿ ಗ್ರಾಮದ ಸನ್ಯಾಸಿಗುಡ್ಡೆ ನಿವಾಸಿಗಳಾದ ಹೈದರ್ ಅಲಿ–ಅಫ್ಸಾ ದಂಪತಿಯ ಪುತ್ರ ಮಹಮ್ಮದ್ ಆದಿಲ್ ಮೃತ ಬಾಲಕ.

ಅಫ್ಸಾ ಅವರು ಮಗ ಆದಿಲ್‌ನನ್ನು ಕರೆದುಕೊಂಡು ಸುಳ್ಯ ತಾಲ್ಲೂಕಿನ ಐವರ್ನಾಡಿನ ಕೈಯೊಳ್ತಡ್ಕದಲ್ಲಿರುವ ತವರು ಮನೆಗೆ (ಆದಂ ಎಂ.ಕೆ. ಅವರ ಮನೆಗೆ) ಐದು ದಿನಗಳ ಹಿಂದೆ ತೆರಳಿದ್ದರು.

'ಶನಿವಾರ ಮಧ್ಯಾಹ್ನ ಊಟ ಮಾಡಿದ ಬಳಿಕ ಆದಿಲ್ ಕೈಯೊಳ್ತಡ್ಕದ ಅಜ್ಜನ ಮನೆಯಲ್ಲೇ ಆಟವಾಡುತ್ತಿದ್ದ. ಈ ವೇಳೆ ಫ್ರಿಡ್ಜನ್ನು ಮುಟ್ಟಿದಾಗ ವಿದ್ಯುತ್ ಆಘಾತಕ್ಕೊಳಗಾಗಿ ಸ್ಥಳದಲ್ಲೇ ಕುಸಿದುಬಿದ್ದಿದ್ದ. ಚಿಕಿತ್ಸೆ ಕೊಡಿಸಲು ತಕ್ಷಣವೇ ಆತನನ್ನು ಸುಳ್ಯದ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ, ಅಷ್ಟರಲ್ಲೇ ಆತ ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದರು' ಎಂದು ತಂದೆ ಹೈದರ್ ಅಲಿ ದೂರಿನಲ್ಲಿ ತಿಳಿಸಿದ್ದಾರೆ.

ಎಟಿಎಂ ಕಾರ್ಡ್ ಬದಲಿಸಿ ವಂಚಿಸಿದ್ದವನ ಬಂಧನ

ಬೆಂಗಳೂರು: ಎಟಿಎಂ ಘಟಕಕ್ಕೆ ಹೋಗುವ ವೃದ್ಧರಿಗೆ ಸಹಾಯ ಮಾಡುವ ನೆಪದಲ್ಲಿ ಕಾರ್ಡ್ ಬದಲಿಸಿ ಹಣ ಡ್ರಾ ಮಾಡಿಕೊಂಡು ವಂಚಿಸುತ್ತಿದ್ದ ಆರೋಪಿ ಮಲ್ಲಿನಾಥ್ ಅಂಗಡಿ (32) ಎಂಬುವರನ್ನು ಈಶಾನ್ಯ ವಿಭಾಗದ ಸೈಬರ್ ಕ್ರೈಂ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಯಲಹಂಕ ಅಟ್ಟೂರು ಲೇಔಟ್ ನಿವಾಸಿ ಮಲ್ಲಿನಾಥ್, ವೃದ್ಧರೊಬ್ಬರ ಖಾತೆಯಿಂದ ₹ 8.51 ಲಕ್ಷ ಡ್ರಾ ಮಾಡಿಕೊಂಡು ವಂಚಿಸಿದ್ದ. ಈತನನ್ನು ಬಂಧಿಸಿ, 75 ಗ್ರಾಂ ಚಿನ್ನಾಭರಣ ಹಾಗೂ ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ದೂರುದಾರ ವೃದ್ಧ, ಹೊಸದಾಗಿ ಬ್ಯಾಂಕ್ ಖಾತೆ ತೆರೆದು ಡೆಬಿಟ್ ಕಾರ್ಡ್ ಪಡೆದಿದ್ದರು. ಹೊಸ ಕಾರ್ಡ್ ಆಗಿದ್ದರಿಂದ ಪಿನ್ ನಿಗದಿಪಡಿಸಲು ಯಲಹಂಕ ನ್ಯೂ ಟೌನ್‌ನಲ್ಲಿರುವ ಕೆನರಾ ಬ್ಯಾಂಕ್‌ನ ಎಟಿಎಂ ಘಟಕಕ್ಕೆ ಹೋಗಿದ್ದರು. ಪಿನ್ ನಮೂದಿಸಲು ಸಾಧ್ಯವಾಗಿರಲಿಲ್ಲ. ಘಟಕದ ಹೊರಗಿದ್ದ ಆರೋಪಿ ಮಲ್ಲಿನಾಥ್, ಸಹಾಯದ ನೆಪದಲ್ಲಿ ಒಳಗೆ ಹೋಗಿ ವೃದ್ಧರಿಂದ ಕಾರ್ಡ್ ಪಡೆದು ಪಿನ್ ನಿಗದಿ ಪಡಿಸಿ ಕೊಟ್ಟಿದ್ದ. ನಂತರ, ವೃದ್ಧರು ಮನೆಗೆ ಹೋಗಿದ್ದರು. 'ವಾರದ ಬಳಿಕ ಹಣದ ಅವಶ್ಯಕತೆ ಇದ್ದಿದ್ದರಿಂದ ಡ್ರಾ ಮಾಡಲೆಂದು ವೃದ್ಧ ಎಟಿಎಂ ಘಟಕಕ್ಕೆ ಹೋಗಿದ್ದರು. ಖಾತೆಯಲ್ಲಿ ಹಣವಿಲ್ಲವೆಂಬುದು ಆಗ ಗೊತ್ತಾಗಿತ್ತು. ಬ್ಯಾಂಕ್‌ನಲ್ಲಿ ವಿಚಾರಿಸಿದಾಗ ₹ 8.51 ಲಕ್ಷ ಡ್ರಾ ಆಗಿರುವುದು ತಿಳಿದಿತ್ತು.

ನಕಲಿ ಕಾರ್ಡ್ ಕೊಟ್ಟಿದ್ದ: 'ಪಿನ್ ನಿಗದಿಪಡಿಸಿದ ಸಮಯದಲ್ಲಿ ಆರೋಪಿ, ವೃದ್ಧರಿಗೆ ನಕಲಿ ಕಾರ್ಡ್ ಕೊಟ್ಟು ಕಳುಹಿಸಿದ್ದ. ಅಸಲಿ ಕಾರ್ಡನ್ನು ತನ್ನ ಬಳಿಯೇ ಇಟ್ಟುಕೊಂಡು ಹಂತ ಹಂತವಾಗಿ ಹಣ ಡ್ರಾ ಮಾಡಿಕೊಂಡಿದ್ದ. ಅದರಲ್ಲೇ ಚಿನ್ನಾಭರಣ ಖರೀದಿಸಿದ್ದ' ಎಂದು ಪೊಲೀಸರು ಹೇಳಿದರು.

ಸರ್ಕಾರಿ ಕೆಲಸದ ಆಮಿಷ: ಗುತ್ತಿಗೆದಾರ ಸೇರಿ ಇಬ್ಬರ ಬಂಧನ

ಕೆಲಸದ ಆಮಿಷ ₹1.53 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳಗಾವಿ ನಗರ ಪೊಲೀಸ್ ಕಮಿಷನರ್ ಎಂ.ಬಿ. ಬೋರಲಿಂಗಯ್ಯ ಚಿಕ್ಕಪ್ಪನೆಂದು ಹೇಳಿಕೊಂಡು ಸರ್ಕಾರಿ ಕೆಲಸ ಕೊಡಿಸುವ ಆಮಿಷವೊಡ್ಡಿ ಅಭ್ಯರ್ಥಿಗಳಿಂದ ₹ 1.58 ಕೋಟಿ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಇಬ್ಬರು ಆರೋಪಿಗಳನ್ನು ಚಿಕ್ಕಜಾಲ ಪೊಲೀಸರು ಬಂಧಿಸಿದ್ದಾರೆ.

'ಹೊಸಕೋಟೆ ತಾಲ್ಲೂಕಿನ ಚಿಕ್ಕಸಂದ್ರದ ನಾರಾಯಣಸ್ವಾಮಿ ಅಲಿಯಾಸ್ ನಾರಾಯಣಪ್ಪ (55) ಹಾಗೂ ಪ್ರಕಾಶ್ ಬಂಧಿತರು. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಏಳು ಅಭ್ಯರ್ಥಿಗಳಿಂದ ಲಕ್ಷಾಂತರ ರೂಪಾಯಿ ಪಡೆದು ವಂಚಿಸಿದ್ದರು. ಈ ಬಗ್ಗೆ ದಾಖಲಾದ ಪ್ರಕರಣದಲ್ಲಿ ಇಬ್ಬರನ್ನೂ ಬಂಧಿಸಿ, ವಿಚಾರಣೆಗಾಗಿ ಕಸ್ಟಡಿಗೆ ಪಡೆಯಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.



ನಾರಾಯಣ ಸ್ವಾಮಿ



ಪ್ರಕಾಶ್

'ಗುತ್ತಿಗೆದಾರ ನಾರಾಯಣಸ್ವಾಮಿ ರಿಯಲ್ ಎಸ್ಟೇಟ್ ವ್ಯವಹಾರವನ್ನೂ ಮಾಡುತ್ತಿದ್ದ. ಐಪಿಎಸ್ ಅಧಿಕಾರಿಗಳು, ಶಾಸಕರು ಹಾಗೂ ರಾಜಕೀಯ ಮುಖಂಡರು ಆತ್ಮೀಯರೆಂದು ಹೇಳಿಕೊಂಡು ಓಡಾಡುತ್ತಿದ್ದ. ದೂರುದಾರ ಮುನಿರಾಜು ಅವರಿಗೆ ಪರಿಚಯವಾಗಿದ್ದ ನಾರಾಯಣಸ್ವಾಮಿ, 'ಬೆಳಗಾವಿ ನಗರ ಪೊಲೀಸ್ ಕಮಿಷನರ್ ಎಂ.ಬಿ. ಬೋರಲಿಂಗಯ್ಯ ನನ್ನ ಚಿಕ್ಕಪ್ಪ. ಕುಣಿಗಲ್ ಶಾಸಕ ರಂಗನಾಥ್, ಸಂಸದ ಡಿ.ಕೆ. ಸುರೇಶ್ ಚಿರಪರಿಚಿತರು. ಇವರೆಲ್ಲರೂ ನಾನು ಹೇಳಿದಂತೆ ಕೇಳುತ್ತಾರೆ. ನನ್ನ ತಂದೆ ಸಹ ಜಲಮಂಡಳಿಯಲ್ಲಿ ಎಂಜಿನಿಯರ್ ಆಗಿದ್ದರು. ಪೊಲೀಸ್ ಇಲಾಖೆ, ಜಲಮಂಡಳಿ ಹಾಗೂ ಇತರೆ ಸರ್ಕಾರಿ ಇಲಾಖೆಯಲ್ಲಿ ಸಲೀಸಾಗಿ ಕೆಲಸ ಕೊಡಿಸುತ್ತೇನೆ' ಎಂಬುದಾಗಿ ಹೇಳಿದ್ದ.'

'ಆರೋಪಿ ಮಾತು ನಂಬಿದ್ದ ದೂರುದಾರ ಹಾಗೂ ಇತರರು, ಪೊಲೀಸ್ ಇಲಾಖೆ ಹಾಗೂ ಜಲಮಂಡಳಿಯಲ್ಲಿ ಕೆಲಸ ಸಿಗುವ ಆಸೆಯಿಂದ ಹಂತ ಹಂತವಾಗಿ ₹ 1.53 ಕೋಟಿ ನೀಡಿದ್ದರು. ಹಣ ಪಡೆದಿದ್ದ ಆರೋಪಿಗಳು, ಕೆಲಸ ಕೊಡಿಸದೇ ಸತಾಯಿಸುತ್ತಿದ್ದರು. ಹಣ ವಾಪಸ್ ನೀಡುವಂತೆ ಕೆಲ ಅಭ್ಯರ್ಥಿಗಳು ಒತ್ತಾಯಿಸಿದ್ದರಿಂದ, ಅವರಿಗೆಲ್ಲ ನಕಲಿ ನೇಮಕಾತಿ ಆದೇಶ ಪತ್ರ ನೀಡಿ ವಂಚಿಸಿದ್ದರು' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

ಎಸಿಪಿ, ಜಲಮಂಡಳಿ ಕಚೇರಿಯಲ್ಲೇ ಅರ್ಜಿ ಭರ್ತಿ: 'ಬ್ಯಾಟರಾಯನಪುರ ಬಳಿ ಇರುವ ಪೊಲೀಸ್ ಅಧಿಕಾರಿ ಕಚೇರಿ ಹಾಗೂ ಕಾವೇರಿ ಭವನದಲ್ಲಿರುವ ಜಲಮಂಡಳಿ ಕಚೇರಿಗಳಿಗೆ ಅಭ್ಯರ್ಥಿಗಳನ್ನು ಕರೆಸಿದ್ದ ಆರೋಪಿಗಳು, ಅಲ್ಲಿಯೇ ಅರ್ಜಿ ನಮೂನೆ ಭರ್ತಿ ಮಾಡಿಸಿಕೊಂಡಿದ್ದರು. ಈ ಬಗ್ಗೆ ದೂರುದಾರರು ಮಾಹಿತಿ ನೀಡಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪೊಲೀಸ್, ಎಂಜಿನಿಯರ್, ಮೀಟರ್ ರೀಡರ್, ಚಾಲಕ, ಲೆಕ್ಕಾಧಿಕಾರಿ ಸೇರಿದಂತೆ ಹಲವು ಹುದ್ದೆಗಳ ಆಮಿಷವೊಡ್ಡಿ ಆರೋಪಿಗಳು ವಂಚಿಸಿರುವುದು ಸದ್ಯಕ್ಕೆ ಗೊತ್ತಾಗಿದೆ. ಆರೋಪಗಳಿಗೆ ಸಂಬಂಧಪಟ್ಟಂತೆ ಮತ್ತಷ್ಟು ಪುರಾವೆಗಳನ್ನು ಕಲೆಹಾಕಲಾಗುತ್ತಿದೆ' ಎಂದು ತಿಳಿಸಿವೆ.

ಭೋವಿ ಅಭಿವೃದ್ಧಿ ನಿಗಮದ ನಾಗರಾಜಪ್ಪ ನ್ಯಾಯಾಂಗ ಬಂಧನಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ದಾಖಲೆ ಸೃಷ್ಟಿಸಿ ಸರ್ಕಾರದ ವಿವಿಧ ಯೋಜನೆಗಳ ಕೋಟ್ಯಂತರ ರೂಪಾಯಿ ಹಣವನ್ನು ದುರ್ಬಳಕೆ ಮಾಡಿರುವ ಆರೋಪ ಎದುರಿಸುತ್ತಿರುವ ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಪ್ರಧಾನ ವ್ಯವಸ್ಥಾಪಕ ಬಿ.ಕೆ. ನಾಗರಾಜಪ್ಪ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಪ್ರಕರಣಗಳ ವಿಶೇಷ ನ್ಯಾಯಾಲಯ ಶನಿವಾರ ಆದೇಶ ಹೊರಡಿಸಿದೆ.

ಹಲವು ದಿನಗಳಿಂದ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಬೆಂಗಳೂರು ನಗರ ಘಟಕದ ಅಧಿಕಾರಿಗಳು ಶುಕ್ರವಾರ ಸಂಜೆ ಬಂಧಿಸಿದ್ದರು.



ಬಿ.ಕೆ. ನಾಗರಾಜಪ್ಪ

ತನಿಖಾ ತಂಡ ಸೆರೆ ಹಿಡಿಯುತ್ತಿದ್ದಂತೆಯೇ ಎದೆ ನೋವು ಎಂದು ನಾಗರಾಜಪ್ಪ ಗೋಳಾಟ ಆರಂಭಿಸಿದ್ದರು. ತಕ್ಷಣ ಅವರನ್ನು ಬೌರಿಂಗ್ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಅಲ್ಲಿನ ವೈದ್ಯರ ಶಿಫಾರಸಿನಂತೆ ಜಯದೇವ ಹೃದ್ರೋಗ ಸಂಸ್ಥೆಗೆ ಕರೆದೊಯ್ಯಲಾಗಿತ್ತು.

'ಶುಕ್ರವಾರ ರಾತ್ರಿಯಿಂದ ಜಯದೇವ ಹೃದ್ರೋಗ ಸಂಸ್ಥೆಯ ವೈದ್ಯರು ಆರೋಪಿಯ ಆರೋಗ್ಯ ತಪಾಸಣೆ ನಡೆಸಿದ್ದರು. ಶನಿವಾರ ಬೆಳಿಗ್ಗೆಯಿಂದ ಪುನಃ ಆರೋಗ್ಯ ತಪಾಸಣೆ ನಡೆಸಲಾಯಿತು. ಆರೋಪಿಯ ಆರೋಗ್ಯ ಸ್ಥಿತಿಯಲ್ಲಿ ಯಾವುದೇ ಸಮಸ್ಯೆ ಇಲ್ಲ ಎಂಬುದಾಗಿ ವರದಿ ನೀಡಿದ ವೈದ್ಯರು, ನಾಗರಾಜಪ್ಪ ಅವರನ್ನು ಒಳರೋಗಿ ವಿಭಾಗದಿಂದ ಬಿಡುಗಡೆ ಮಾಡಿದರು. ಬಳಿಕ ವೈದ್ಯಕೀಯ ವರದಿಯೊಂದಿಗೆ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು' ಎಂದು ಮೂಲಗಳು ತಿಳಿಸಿವೆ.

ವೈದ್ಯಕೀಯ ವರದಿ ಪರಿಶೀಲಿಸಿದ ನ್ಯಾಯಾಲಯ ಆರೋಪಿಗೆ14 ದಿನ ನ್ಯಾಯಾಂಗ ಬಂಧನ ವಿಧಿಸಿದೆ. 'ಅಗತ್ಯವಿದ್ದಲ್ಲಿ ಆರೋಪಿಗೆ ಕಾರಾಗೃಹದ ಒಳಗಿನ ಆಸ್ಪತ್ರೆಯಲ್ಲಿ ಸೂಕ್ತ ಚಿಕಿತ್ಸೆ ನೀಡಬೇಕು' ಎಂದು ನ್ಯಾಯಾಲಯ ನಿರ್ದೇಶನ ನೀಡಿದೆ. ಬಳಿಕ ಆರೋಪಿಯನ್ನು ನ್ಯಾಯಾಲಯದಿಂದ ಕರೆದೊಯ್ದ ಎಸಿಬಿ ಅಧಿಕಾರಿಗಳು, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ವಶಕ್ಕೆ ಒಪ್ಪಿಸಿದರು.

ಒಂದೇ ದಿನ 3,247 ಪೊಲೀಸರ ವರ್ಗಾವಣೆ

ಬೆಂಗಳೂರು: ಬೆಂಗಳೂರು ಕಮಿಷನರೇಟ್ ವ್ಯಾಪ್ತಿಯಲ್ಲಿ ಕೆಲಸ ಮಾಡುವ ಪೊಲೀಸರ ವರ್ಗಾವಣೆ ನಿಯಮಗಳಿಗೆ ಇತ್ತೀಚೆಗಷ್ಟೇ ಕೆಲ ತಿದ್ದುಪಡಿ ಮಾಡಲಾಗಿದ್ದು, ಇದರ ಬೆನ್ನಲ್ಲೇ ಒಂದೇ ದಿನದಲ್ಲಿ 3,247 ಪೊಲೀಸರನ್ನು ವರ್ಗಾವಣೆ ಮಾಡಲಾಗಿದೆ.

ಒಂದು ಸ್ಥಳದಲ್ಲಿ ಕೆಲಸ ಮಾಡುವ ಪೊಲೀಸರ ಕನಿಷ್ಠ ಸೇವಾವಧಿಯನ್ನು 6 ವರ್ಷದಿಂದ 5 ವರ್ಷಕ್ಕೆ ಇಳಿಸಲಾಗಿತ್ತು. ಈ ತಿದ್ದುಪಡಿ ಅನ್ವಯ ಪಟ್ಟಿ ಸಿದ್ಧಪಡಿಸಿದ್ದ ಆಡಳಿತ ವಿಭಾಗ, ಕಾನ್‌ಸ್ಟೆಬಲ್‌ನಿಂದ ಹಿಡಿದು ಪಿಎಸ್‌ಐ ಹುದ್ದೆಯಲ್ಲಿದ್ದವರನ್ನು ವರ್ಗಾವಣೆ ಮಾಡಿ ಆದೇಶ ಹೊರಡಿಸಿದೆ.

'ಹಲವರು ಒಂದೇ ಠಾಣೆ ಹಾಗೂ ಒಂದೇ ಜಾಗದಲ್ಲಿ ಹಲವು ವರ್ಷಗಳಿಂದ ಕೆಲಸ ಮಾಡುತ್ತಿದ್ದರು. ಇದು ಅಕ್ರಮಗಳಿಗೆ ಎಡೆಮಾಡಿಕೊಟ್ಟಿದ್ದ ಬಗ್ಗೆ ದೂರುಗಳು ಬಂದಿದ್ದವು. ಹೀಗಾಗಿ, ವರ್ಗಾವಣೆ ನಿಯಮ ತಿದ್ದುಪಡಿ ಮಾಡಿ ಹಲವರನ್ನು ವರ್ಗಾವಣೆ ಮಾಡಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

'ಕೌನ್ಸೆಲಿಂಗ್ ಮೂಲಕ ವರ್ಗಾವಣೆ ಮಾಡಿ ಆದೇಶ ನೀಡಲಾಗಿದೆ. ತ್ವರಿತವಾಗಿ ಹೊಸ ಜಾಗದಲ್ಲಿ ಕೆಲಸಕ್ಕೆ ಹಾಜರಾಗುವಂತೆ ಆದೇಶದಲ್ಲಿ ತಿಳಿಸಲಾಗಿದೆ. 1,749 ಕಾನ್‌ಸ್ಟೆಬಲ್, 1,292 ಹೆಡ್ ಕಾನ್‌ಸ್ಟೆಬಲ್, 43 ಎಎಸ್‌ಐ ಹಾಗೂ 163 ಪಿಎಸ್‌ಐಗಳು ಪಟ್ಟಿಯಲ್ಲಿದ್ದಾರೆ' ಎಂದು ಹೇಳಿದರು.

ಓಲಾ ಕ್ಯಾಬ್ ಚಾಲಕ ಆತ್ಮಹತ್ಯೆ

ಬೆಂಗಳೂರು: ಬಾಗಲಗುಂಟೆ ಠಾಣೆ ವ್ಯಾಪ್ತಿಯಲ್ಲಿ ಸಂಜಯ್ (21) ಎಂಬುವವರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ಬಾಗಲಕೋಟೆಯ ಸಂಜಯ್, ಕೆಲ ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದರು. ಓಲಾ ಕಂಪನಿ ಕ್ಯಾಬ್ ಚಾಲಕರಾಗಿ ಕೆಲಸ ಮಾಡುತ್ತಿದ್ದರು. ಅಣ್ಣನ ಜೊತೆಯಲ್ಲಿ ಟಿ. ದಾಸರಹಳ್ಳಿಯಲ್ಲಿ ವಾಸವಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮನೆಯ ಕೊಠಡಿಯಲ್ಲಿ ನೇಣು ಹಾಕಿಕೊಂಡು ಸಂಜಯ್ ಆತ್ಮಹತ್ಯೆಗೆ ಶರಣಾಗಿದ್ದಾರೆ. ಕುಟುಂಬಸ್ಥರು ಹಾಗೂ ಸ್ನೇಹಿತರಿಂದ ಹೇಳಿಕೆ ಪಡೆದು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಆರಂಭಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಬೆಂಗಳೂರು ರೇಸ್

ಮಲ್ಟಿಫೆಸೆಟೆಡ್ ಗೆಲ್ಲುವ ನಿರೀಕ್ಷೆ

ಚೀಫ್ ಮಿನಿಸ್ಟರ್ಸ್ ಕಪ್ ಭಾನುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮಲ್ಟಿಫೆಸೆಟೆಡ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಹ್ಯಾಂಡ್ಸಮ್‌ರಾಕಿ 2, ಒಸಿಬಿಸ 7, ಲೈಟ್ನಿಂಗ್ ಫ್ಲೇಮ್ 6
2ನೇ ರೇಸ್: ಏರ್ ಬ್ಲಾಸ್ಟ್ 2, ಸ್ಪೀಡ್ ಸೆವೆನ್ 8, ಗೋಲ್ಡ್‌ಗ್ರೇ 3
3ನೇ ರೇಸ್: ರಾಯಲ್ ಗ್ಲೋರಿ 11, ಟೈಕೂನಿಸ್ಟ್ 4, ರಾಪಿಡಸ್ 2
4ನೇ ರೇಸ್: ಮಲ್ಟಿಫೆಸೆಟೆಡ್ 1, ಸ್ವಾಷಿಂಗ್ ಬ್ಲೂ 7, ಗೋಲ್ಡನ್ ಓಕ್ಸ್ 6
5ನೇ ರೇಸ್: ಲಾರ್ಡ್ ವೇಡರ್ 2, ಸ್ಟಾರ್ ಗ್ಲೋರಿ 5, ಗ್ಯಾರಮಾಂಡ್ 4
6ನೇ ರೇಸ್: ಒಂಬುಡ್ಸ್‌ಮನ್ 5, ಕ್ವೀನ್ ರೆಗ್ನೆಂಟ್ 3, ಅಕಸ್ಟರ್ 2
7ನೇ ರೇಸ್: ಬುಲ್ ಬುಲ್ ರಾಣಿ 4, ಡಿವೈನ್ ಬ್ಲೆಸಿಂಗ್ಸ್ 2, ಎಕ್ಸ್ಟ್ರಾ ಆರ್ಡಿನರಿ 71

ಉತ್ತಮ ಬೆಟ್: ರಾಯಲ್ ಗ್ಲೋರಿ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

'ಸಂವಾದ' ಪ್ರತಿನಿಧಿ ಮೇಲೆ ಹಲ್ಲೆ ಆರೋಪಿಗಳಿಗೆ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯೂಟ್ಯೂಬ್ ಚಾನೆಲ್ 'ಸಂವಾದ'ದ ಪ್ರತಿನಿಧಿ ತೇಜ ಅವರ ಮೇಲೆ ಹಲ್ಲೆ ನಡೆಸಿದ ಆರೋಪಿಗಳಿಗೆ ನಗರದ ವಿಶೇಷ ನ್ಯಾಯಾಲಯ ಷರತ್ತುಬದ್ಧ ಜಾಮೀನು ನೀಡಿದೆ.

ಪಠ್ಯಪುಸ್ತಕ ಮರು ಪರಿಷ್ಕರಣೆ ವಿರೋಧಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ಜೂನ್ 18ರಂದು ಪ್ರತಿಭಟನೆ ನಡೆದ ಸಂದರ್ಭದಲ್ಲಿ ತೇಜ ಮೇಲೆ ಹಲ್ಲೆ ನಡೆದಿತ್ತು. ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದ ನೀಲಪ್ಪ ಮತ್ತು ಶಿವರಾಜ್ ನಿಯಮಿತ (ರೆಗ್ಯುಲರ್) ಜಾಮೀನು ಕೋರಿದ್ದರು. ನಿರೀಕ್ಷಣಾ ಜಾಮೀನು ಕೋರಿ ಬೈರಪ್ಪ ಹರೀಶ್‌ಕುಮಾರ್ ಮತ್ತು ದೀಪುಗೌಡ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಗಳನ್ನು ನ್ಯಾಯಾಧೀಶ ವಿ.ಪ್ರಕಾಶ್ ಶನಿವಾರ ವಿಚಾರಣೆ ನಡೆಸಿದರು.

ಎಲ್ಲ ಅರ್ಜಿದಾರರ ಪರ ವಾದ ಮಂಡಿಸಿದ ವಕೀಲ ಸಿ.ಎಚ್. ಹನುಮಂತರಾಯ ಅವರು, 'ದೂರುದಾರ ತೇಜ ಪತ್ರಕರ್ತರಲ್ಲ. ಸಂವಾದ ಎನ್ನುವುದು ಟಿವಿ ಚಾನೆಲ್ ಕೂಡ ಅಲ್ಲ. ಅದೊಂದು ಯೂಟ್ಯೂಬ್ ಅಕೌಂಟ್. ಅದರಲ್ಲಿ ಯಾವುದೇ ಸುದ್ದಿಗಳು ಪ್ರಸಾರವಾಗುವುದಿಲ್ಲ. ಅದರ ಪ್ರತಿನಿಧಿ ಪ್ರತಿಭಟನೆಗೆ ಬಂದದ್ದು ತನ್ನ ಸಂಘಟನೆಯ ನಾಯಕರಿಗೆ ವರದಿ ಒಪ್ಪಿಸಲಿಕ್ಕೇ ಹೊರತು ಪತ್ರಿಕೋದ್ಯಮದ ವರದಿ ಮಾಡಲು ಅಲ್ಲ. ಆದ್ದರಿಂದ, ಆರೋಪಿಗಳಿಗೆ ಜಾಮೀನು ಮಂಜೂರು ಮಾಡಬೇಕು' ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಾಧೀಶರು, ಎಲ್ಲ ಆರೋಪಿಗಳಿಗೆ ಷರತ್ತುಬದ್ಧ ಜಾಮೀನು ನೀಡಿದರು. ಅರ್ಜಿದಾರರ ಪರ ಸೂರ್ಯ ಮುಕುಂದರಾಜ್ ವಕಾಲತ್ತು ವಹಿಸಿದ್ದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧೀಕ್ಷಕ ಅಭಿಯಂತರರ ಕಛೇರಿ, ಘನತ್ಯಾಜ್ಯ ನಿರ್ವಹಣೆ ಎನ್.ಆರ್. ಚೌಕ, ಬೆಂಗಳೂರು – 560 002.

ಸಂ: ಅಅ/ಘತ್ಯಾನಿ/ದರಪಟ್ಟಿ/01/2022–23 ದಿನಾಂಕ: 02.07.2022

ದರಪಟ್ಟಿಗಾಗಿ ಆಹ್ವಾನ

1. ಬೆಂಗಳೂರು ನಗರದ ರಸ್ತೆಗಳ ಸ್ವಚ್ಛತೆಗೆ ಮೂಲ ಆಧಾರವಾದ ಪೌರ ಕಾರ್ಮಿಕರ ಒಕ್ಕೂಟದಿಂದ ನಡೆಯುತ್ತಿರುವ ಮುಷ್ಕರದ ಹಿನ್ನೆಲೆಯಲ್ಲಿ ಬೆಂಗಳೂರು ನಗರದಲ್ಲಿ ರಸ್ತೆ ಗುಡಿಸುವ ಕಾಮಗಾರಿಗೆ ತುರ್ತು ಪರಿಸ್ಥಿತಿ ಎದುರಾಗಿರುವುದರಿಂದ ಸಾರ್ವಜನಿಕ ಹಿತಾಸಕ್ತಿ ಮತ್ತು ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ಬೀದಿ ಕಸಗುಡಿಸುವ ಯಂತ್ರಗಳ ಸೇವೆಯನ್ನು ತೊಡಗಿಸಿಕೊಳ್ಳುವುದು ಅತ್ಯಗತ್ಯ ಎಂದು ಭಾವಿಸಲಾಗಿದೆ.
2. ಇದನ್ನು ಗಮನದಲ್ಲಿಟ್ಟುಕೊಂಡು, ಮುಖ್ಯ ಆಯುಕ್ತರು, ಬಿಬಿಎಂಪಿ, ಬೆಂಗಳೂರು ಇವರ ಪರವಾಗಿ ಅಧೀಕ್ಷಕ ಎಂಜಿನಿಯರ್, ಘನತ್ಯಾಜ್ಯ ನಿರ್ವಹಣಾ ವಿಭಾಗ ಇವರ ವತಿಯಿಂದ ಅರ್ಹ ಸೇವಾ ಪೂರೈಕೆದಾರರಿಂದ ರಸ್ತೆಗಳನ್ನು ಗುಡಿಸಲು ಯಂತ್ರೋಪಕರಣಗಳನ್ನು ನಿಯೋಜಿಸಲು ದರ ಪಟ್ಟಿಯನ್ನು ಆಹ್ವಾನಿಸಲಾಗಿದೆ.
3. ಮೊಹರು ಮಾಡಿದ ದರಪಟ್ಟಿಗಳನ್ನು **ದಿನಾಂಕ 05.07.2022ರ ಸಂಜೆ 4.00 ಗಂಟೆಯವರೆಗೆ** ಸಲ್ಲಿಸಬಹುದು ಮತ್ತು ದಿನಾಂಕ **05.07.2022 ರಂದು ಸಂಜೆ 5.00 ಗಂಟೆಗೆ** ಮೊಹರು ಮಾಡಿದ ದರಪಟ್ಟಿಗಳನ್ನು ತೆರೆಯಲಾಗುವುದು.
4. ದರಪಟ್ಟಿ ದಾಖಲೆಗಳಿಗೆ ಸಂಬಂಧಿಸಿದ ಇತರ ವಿವರಗಳನ್ನು ಅಧೀಕ್ಷಕ ಅಭಿಯಂತರರ ಕಛೇರಿ, ಘನತ್ಯಾಜ್ಯ ನಿರ್ವಹಣೆ ಎನ್.ಆರ್. ಚೌಕ, ಬೆಂಗಳೂರು – 560 002 ದಿಂದ ಪಡೆದುಕೊಳ್ಳಬಹುದು.

Sl. No.		Qty.	Unit	Rate in Rs. Day Shift 8 hours	Rate in Rs. Night Shift 8 hours
1	Sweeping of Arterial and Sub Arterial roads in BBMP limits for a length of 30 kms of sweeping length per shift by deploying 1 No of Mechanical Sweeping machine on hire basis having effective dust collecting capacity of 5 Cum including O&M for a minimum period of 2 months. The registration of the vehicle to be deployed shall be after December – 2018. The minimum standard of the vehicle shall comply with BS- IV norms and the agency shall enclose the certificate. The Cost of the service of operation and maintenance shall include cost of fuel, tyres, batteries, crew charges (1 driver, 1 helper) , footpath cleaning, 2 labours, collection and transportation of loose stone, street litters, dried leaf, paper, plastic, rubber, cardboard, glass and other small quantity of municipal waste that may come on the road surface and footpath including all lead and lift and as per the directions of the Engineer incharge.	1	Nos.		
2	Sweeping of collector roads and smaller streets using sweeping machines of minimum of 2 cum capacity in BBMP limits for a length of 10 kms of sweeping length per shift by deploying 1 No of Mechanical Sweeping machine on hire basis including O&M for a minimum period of 2 months. The registration of the vehicle to be deployed shall be after December – 2018. The minimum standard of the vehicle shall comply with BS-IV norms and the agency shall enclose the certificate. The Cost of the service of operation and maintenance shall include cost of fuel, tyres, batteries,crew charges (1driver)footpath cleaning,2labours,collectionand transportation of loose stone, street litters, dried leaf, paper, plastic, rubber, cardboard, glass and other small quantity of municipal waste that may come on the road surface and footpath including all lead and lift and as per the directions of the Engineer incharge.	1	Nos.		

ಸೂಚನೆ:

1. ತಮ್ಮ ದರಪಟ್ಟಿಗಳನ್ನು ಸಲ್ಲಿಸುವ ಏಜೆನ್ಸಿಗಳು ಸೇವೆಗಳಿಗೆ ಪ್ರತಿ ಘಟಕಕ್ಕೆ ದರಗಳನ್ನು ಉಲ್ಲೇಖಿಸಬೇಕು.
2. ಮೇಲಿನಂತೆ ಸೇವೆಗಳನ್ನು ಸಲ್ಲಿಸಲು ದರದ ಅನುಮೋದನೆಯ ಮೇರೆಗೆ ಪ್ರತಿಯೊಂದು ಏಜೆನ್ಸಿಗಳು ತಮ್ಮ ವಾಹನಗಳನ್ನು ತಕ್ಷಣವೇ ನಿಯೋಜಿಸಲು ಜವಾಬ್ದಾರರಾಗಿರುತ್ತಾರೆ.
3. ಘಟಕ ವೆಚ್ಚವು ಎಲ್ಲಾ ತೆರಿಗೆಗಳನ್ನು ಒಳಗೊಂಡಿರುತ್ತದೆ.
4. ತುರ್ತು ಪರಿಸ್ಥಿತಿಗಳ ಸಂದರ್ಭದಲ್ಲಿ ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ 2 ತಿಂಗಳ ಅವಧಿ ಮೀರಿ ವಿಸ್ತರಣೆಯನ್ನು ನೀಡಲಾಗುವುದು.
5. ಪ್ರತಿಯೊಂದು ಏಜೆನ್ಸಿಗಳು ಒಂದಕ್ಕಿಂತ ಹೆಚ್ಚು ಯಂತ್ರಗಳನ್ನು ನಿಯೋಜಿಸಬಹುದು. ಕ್ರ.ಸಂ. 1ಕ್ಕೆ ವಿವಿಧ ಸೇವಾ ಪೂರೈಕೆದಾರರಿಂದ ಕನಿಷ್ಠ 10 ಸಂಖ್ಯೆ ಯಂತ್ರಗಳನ್ನು ನಿಯೋಜಿಸಲು ಉದ್ದೇಶಿಸಲಾಗಿದೆ. ಕ್ರ. ಸಂ. 2 ಕ್ಕೆ ಕನಿಷ್ಠ 5 ಸಂಖ್ಯೆ ಯಂತ್ರಗಳನ್ನು ನಿಯೋಜಿಸಲು ಉದ್ದೇಶಿಸಲಾಗಿದೆ.

ಸಹಿ/– ಅಧೀಕ್ಷಕ ಎಂಜಿನಿಯರ್ ಘನತ್ಯಾಜ್ಯ ನಿರ್ವಹಣಾ ವಿಭಾಗ.

ಕೋವಿಡ್-19 – ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸಂಕ್ಷಿಪ್ತ ಸುದ್ದಿ

ಬೈಕ್‌ಗಳ ಕರ್ಕಶ ಶಬ್ದ: 137 ಪ್ರಕರಣ ದಾಖಲು

ದೇವನಹಳ್ಳಿ: ಪಟ್ಟಣದ ಮಾರ್ಗವಾಗಿ ವಾರಾಂತ್ಯದ ಹಿನ್ನೆಲೆಯಲ್ಲಿ ನಂದಿ ಬೆಟ್ಟದ ಸೂರ್ಯೋದಯದ ದೃಶ್ಯ ಸವಿಯಲು ಸಾಗುತ್ತಿದ್ದ ಐಷಾರಾಮಿ ಹಾಗೂ ನಿಯಮಬಾಹಿರವಾಗಿ ಕರ್ಕಶ ಶಬ್ದ ಮಾಡುತ್ತಾ ಕಿರಿಕಿರಿ ಉಂಟು ಮಾಡುತ್ತಿದ್ದ ಬೈಕ್‌ಗಳನ್ನು ಶನಿವಾರ ಬೆಳ್ಳಂಬೆಳಿಗ್ಗೆ ಆರ್‌ಟಿಒ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ 137 ಪ್ರಕರಣ ದಾಖಲಿಸಿದ್ದಾರೆ.

ಸಾರ್ವಜನಿಕವಾಗಿ ಸಾಕಷ್ಟು ದೂರುಗಳು ಬಂದ ಹಿನ್ನೆಲೆಯಲ್ಲಿ ಸಾರಿಗೆ ಇಲಾಖೆಯ ಜಂಟಿ ಆಯುಕ್ತ ಕೆ.ಟಿ. ಹಾಲಸ್ವಾಮಿ ನೇತೃತ್ವದಲ್ಲಿ ಪಟ್ಟಣದ ನಂದಿ ಕ್ರಾಸ್ ಬಳಿ ಕಾರ್ಯಾಚರಣೆ ನಡೆಸಿದ ಅಧಿಕಾರಿಗಳು ಬೈಕ್ ಸವಾರರಿಗೆ ಕೊರೆಯುವ ಚಳಿಯಲ್ಲಿ ಬಿಸಿ ಮುಟ್ಟಿಸಿದರು.

ಐದು ತಂಡಗಳನ್ನು ರಚಿಸಿಕೊಂಡು ಶನಿವಾರ ಬೆಳಿಗ್ಗೆ 5ರ ಸುಮಾರಿಗೆ ರಸ್ತೆಗಿಳಿದಿದ್ದ ಅಧಿಕಾರಿಗಳು ಬೈಕ್ ವ್ಹೀಲಿಂಗ್, ಕರ್ಕಶ ಶಬ್ದ ಮಾಡುವ, ನಿಯಮಬಾಹಿರವಾಗಿ ತಮಗೆ ಇಷ್ಟಬಂದಂತೆ ರೂಪಿಸಿಕೊಂಡಿದ್ದ 120 ಬೈಕ್‌ಗಳನ್ನು ವಶಕ್ಕೆ ಪಡೆದಿದ್ದಾರೆ.

ಸೈಲೆನ್ಸರ್ ಬದಲಾಯಿಸಿಕೊಂಡು ಶಬ್ದ ಮಾಲಿನ್ಯಕ್ಕೆ ಕಾರಣವಾಗಿರುವ ಸವಾರರನ್ನು ತರಾಟೆಗೆ ತೆಗೆದುಕೊಂಡ ಅಧಿಕಾರಿಗಳು, ಕಾನೂನಿನ ಬಗ್ಗೆ ಪಾಠ ಹೇಳಿ ದಂಡ ಸಂಗ್ರಹಿಸಿದ್ದಾರೆ. ಇದರೊಂದಿಗೆ ಎಫ್‌ಸಿ ಮುಗಿದು ಹೋಗಿದ್ದ ಬಸ್‌ಗಳು ಸೇರಿದಂತೆ ಶಾಲಾ ವಾಹನಗಳನ್ನು ವಿಶೇಷ ಕಾರ್ಯಾಚರಣೆಯಲ್ಲಿ ವಶಕ್ಕೆ ಪಡೆದು ಪ್ರಕರಣ ದಾಖಲು ಮಾಡಿದ್ದಾರೆ.

ಕಾರ್ಯಾಚರಣೆಯಲ್ಲಿ ಆರ್‌ಟಿಒ ಅಧಿಕಾರಿಗಳಾದ ಉಮೇಶ್, ನರಸಿಂಹ ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು.

ತಮ್ಮನ ಕೊಲೆ

ಬೆಂಗಳೂರು: ಕೆ.ಆರ್.ಪುರ ಠಾಣೆ ವ್ಯಾಪ್ತಿಯಲ್ಲಿ ಬಾಲಕೃಷ್ಣ (25) ಎಂಬುವವರನ್ನು ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದ್ದು, ಈ ಸಂಬಂಧ ಅಣ್ಣ ರಾಮಕೃಷ್ಣ ಅವರನ್ನು ಪೊಲೀಸರು ಬಂಧಿಸಿದ್ದಾರೆ.

'ಪ್ರಿಯಾಂಕನಗರ ನಿವಾಸಿ ಬಾಲಕೃಷ್ಣ, ಬಾರ್ ಬೆಂಡಿಂಗ್ ಕೆಲಸ ಮಾಡುತ್ತಿದ್ದರು. ಅವರನ್ನು ಕೊಲೆ ಮಾಡಿದ ಆರೋಪದಡಿ ರಾಮಕೃಷ್ಣನನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು. 'ಕೆಲಸದ ವಿಚಾರವಾಗಿ ಅಣ್ಣ–ತಮ್ಮನ ನಡುವೆ ಆಗಾಗ ಗಲಾಟೆ ನಡೆಯುತ್ತಿತ್ತು. ಶನಿವಾರವೂ ಜಗಳ ನಡೆದು ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು. ಇದೇ ವೇಳೆಯೇ ರಾಮಕೃಷ್ಣ, ಚಾಕುವಿನಿಂದ ಬಾಲಕೃಷ್ಣ ಅವರ ಹೊಟ್ಟೆ ಹಾಗೂ ಎದೆಗೆ ಇರಿದಿದ್ದ.'

'ರಕ್ತಸ್ರಾವದಿಂದ ಬಾಲಕೃಷ್ಣ ಮೃತಪಟ್ಟಿದ್ದಾರೆ. ಮಾಹಿತಿ ಬರುತ್ತಿದ್ದಂತೆ ಸ್ಥಳಕ್ಕೆ ಹೋಗಿ ಪರಿಶೀಲಿಸಿ ಆರೋಪಿಯನ್ನು ಬಂಧಿಸಲಾಯಿತು' ಎಂದು ತಿಳಿಸಿದರು.

ಗಲಾಟೆಯಲ್ಲಿ ಗಾಯಗೊಂಡ ವ್ಯಕ್ತಿ ಸಾವು

ಮಾಗಡಿ: ತಾಲ್ಲೂಕಿನ ಸೋಲೂರು ಬಳಿ ಶುಕ್ರವಾರ ರಾತ್ರಿ ಅಪಘಾತವೊಂದಕ್ಕೆ ಸಂಬಂಧಿಸಿ ಆರಂಭವಾದ ಗಲಾಟೆ

ಅಪರಾಧ ಸುದ್ದಿ

ವ್ಯಕ್ತಿಯ ಸಾವಿನಲ್ಲಿ ಅಂತ್ಯವಾಗಿದೆ.

ಬೆಂಗಳೂರಿನ ಆರ್.ಟಿ. ನಗರದ ವೆಲ್ಡಿಂಗ್ ಕಾರ್ಮಿಕ ಸಯ್ಯದ್ ಮಸೂದ್ (36) ಮೃತರು. ಪ್ರಕರಣಕ್ಕೆ ಸಂಬಂಧಿಸಿ ಸೋಲೂರಿನವರಾದ ರಾಘವೇಂದ್ರ, ಬಾಬು ಮತ್ತು ಪ್ರದೀಪ ಎಂಬುವರನ್ನು ಕುದೂರು ಪೊಲೀಸರು ಬಂಧಿಸಿದ್ದಾರೆ.

ರಾತ್ರಿ ಬೆಂಗಳೂರು–ಮಂಗಳೂರು ಹೆದ್ದಾರಿಯಲ್ಲಿ ಆರೋಪಿಗಳು ಪ್ರಯಾಣಿಸುತ್ತಿದ್ದ ಕಾರಿಗೆ ಸಯ್ಯದ್ ಬೈಕ್ ತಗುಲಿದೆ ಎನ್ನಲಾಗಿದೆ. ಇದಕ್ಕೆ ಸಂಬಂಧಿಸಿ ಮಾತಿಗೆ ಮಾತು ಬೆಳೆದು ಪರಸ್ಪರ ಕೈಕೈ ಮಿಲಾಯಿಸಿದ್ದಾರೆ. ಇದರಿಂದ ಸಯ್ಯದ್ ತೀವ್ರವಾಗಿ ಗಾಯಗೊಂಡಿದ್ದು, ಸೋಲೂರು ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಬೆಂಗಳೂರಿನ ನಿಮ್ಹಾನ್ಸ್‌ಗೆ ಕರೆದೊಯ್ಯುವ ವೇಳೆ ಮೃತಪಟ್ಟಿದ್ದಾರೆ. ಘಟನೆ ಸಂಬಂಧ ಕುದೂರು ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ಪೊಲೀಸರು ತನಿಖೆಯನ್ನು ಆರಂಭಿಸಿದ್ದಾರೆ..

ಹತ್ತು ವರ್ಷಗಳಿಂದ ಬರಿದಾಗಿದ್ದ ಕೆರೆ

ಕೋಡಿ ಹರಿದ ಬರದಿ ಕೆರೆ ಗ್ರಾಮಸ್ಥರಿಂದ ಬಾಗಿನ

ನೆಲಮಂಗಲ: ಕಳೆದ ಹತ್ತು ವರ್ಷಗಳಿಂದ ಬರದಿ ಕೆರೆ ಬರಿದಾಗಿತ್ತು. ಕುಡಿಯುವ ನೀರಿಗೆ ಮತ್ತು ರೈತರಿಗೆ ಸಮಸ್ಯೆ ಎದುರಾಗಿತ್ತು. ಪ್ರಸ್ತುತ ಪರಿಸ್ಥಿತಿ ಬದಲಾಗಿದ್ದು, ಕೆರೆ ಮೈದುಂಬಿ ಸಮಸ್ಯೆ ನಿವಾರಣೆಯಾಗಿದೆ.

ದಶಕಗಳ ನಂತರ ಮೈದುಂಬಿ ಕೋಡಿ ಹರಿದ ತಾಲ್ಲೂಕಿನ ಬರದಿ ಕೆರೆಗೆ ಗ್ರಾಮಸ್ಥರು ಪೂಜೆ ಸಲ್ಲಿಸಿ, ಅಭಿವೃದ್ಧಿಗೆ ನೆರವಾದ ವರುಣ್ ಬ್ರುವರೀಸ್ (ಪೆಪ್ಸಿ) ಮತ್ತು ಅಧಿಕಾರಿಗಳ ಮುಖಾಂತರ ಬಾಗಿನ ಅರ್ಪಿಸಿದರು.

ಗ್ರಾಮದ ಮುಖಂಡರು ಅಂದಿನ ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿಯಾಗಿದ್ದ ಕರಿಗೌಡ ಹಾಗೂ ತಹಶೀಲ್ದಾರ್ ರಾಜಶೇಖರ್ ಅವರನ್ನು ಸಮಸ್ಯೆ ಬಗೆಹರಿಸುವಂತೆ ಕೇಳಿಕೊಂಡಾಗ, ತಕ್ಷಣ ಕಾರ್ಯಪ್ರವೃತ್ತರಾದ ಅವರು ಬತ್ತಿಹೋಗಿದ್ದ ಬರದಿ ಕೆರೆಯನ್ನು ಪರಿಶೀಲಿಸಿ, ವರುಣ್ ಬ್ರುವರೀಸ್ ಅವರಿಗೆ ಸಾಮಾಜಿಕ ಜವಾಬ್ದಾರಿ ಯೋಜನೆ ಅಡಿಯಲ್ಲಿ ಕೆರೆ ಅಭಿವೃದ್ಧಿ ಪಡಿಸಲು ಸೂಚಿಸಿದರು.

ಸಂಘಟಿತ ಪ್ರಯತ್ನದ ಫಲವಾಗಿ ಕೆರೆ ಮೈದುಂಬಿ ಕೋಡಿ ಹರಿಯುತ್ತಿದೆ ಎಂದು ಮುಖಂಡ ಎಂ.ರಾಜಣ್ಣ ಹರ್ಷ ವ್ಯಕ್ತಪಡಿಸಿದರು.

ನೆಲಮಂಗಲ ತಾಲ್ಲೂಕಿನಲ್ಲಿ ಕೋಡಿ ಹರಿದ ಬರದಿ ಕೆರೆಗೆ ಗ್ರಾಮಸ್ಥರು ಅಭಿವೃದ್ಧಿಗೆ ನೆರವಾದ ವರುಣ್ ಬ್ರುವರೀಸ್ (ಪೆಪ್ಸಿ) ಮತ್ತು ಅಧಿಕಾರಿಗಳ ಮುಖಾಂತರ ಬಾಗಿನ ಅರ್ಪಿಸಿದರು.

ವರುಣ್ ಬ್ರುವರೀಸ್ ಮ್ಯಾನೇಜರ್ ನಾಗರಾಜು ಮಾತನಾಡಿ, '₹1 ಕೋಟಿ ವೆಚ್ಚದಲ್ಲಿ 46 ಎಕರೆ ವಿಸ್ತೀರ್ಣದ ಕೆರೆಯ 3ರಿಂದ 4 ಅಡಿಗಳ ಹೂಳು ತೆಗೆದು, ಉಳಿದ ಅಗತ್ಯ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದೆವು. ನಮ್ಮ ಕೆಲಸಕ್ಕೆ ಸಾರ್ಥಕ್ಯ ದೊರೆತಿದೆ' ಎಂದರು.

ವರುಣ್ ಬ್ರೂವರೀಸ್‌ನ ಉಪಾಧ್ಯಕ್ಷ ವಿನೋದ್ ಪಮೋಚಾ, ಅಧಿಕಾರಿ ಮಂಜುನಾಥ್, ಮಾಹಿತಿ ಹಕ್ಕು ಮಾಜಿ ಆಯುಕ್ತ ಎಲ್.ಕೃಷ್ಣಮೂರ್ತಿ, ಗ್ರಾಮ ಪಂಚಾಯಿತಿ ಅಧ್ಯಕ್ಷ ಮುನಿರಾಜು, ರೈತಸಂಘದ ವರದನಾಯಕನಹಳ್ಳಿ ನಾಗರಾಜು, ಮುನಿರಾಮೇಗೌಡ ಬಿ.ಟಿ. ರವೀಂದ್ರಕುಮಾರ್ ಇದ್ದರು.

ಬೊಮ್ಮನಹಳ್ಳಿ, ಬೆಂಗಳೂರು ದಕ್ಷಿಣ ಕ್ಷೇತ್ರಗಳಲ್ಲಿ ಅವೈಜ್ಞಾನಿಕ ವಿಂಗಡಣೆ

ವಾರ್ಡ್ ವಿಂಗಡಣೆ: ಸ್ಥಳೀಯರ ತಕರಾರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾರ್ಡ್ ಮರು ವಿಂಗಡಣೆಗೆ ಆಕ್ಷೇಪಣೆಗಳ ಮಹಾಪೂರವೇ ಹರಿದುಬರುತ್ತಿದ್ದು, ಬೊಮ್ಮನಹಳ್ಳಿ ಮತ್ತು ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರಗಳಲ್ಲಿ ಅವೈಜ್ಞಾನಿಕ ವಿಂಗಡಣೆ ಬಗ್ಗೆ ಸ್ಥಳೀಯರಿಂದ ಅಸಮಾಧಾನ ವ್ಯಕ್ತವಾಗಿದೆ.

ಬೊಮ್ಮನಹಳ್ಳಿ ವ್ಯಾಪ್ತಿಯಲ್ಲಿ ಎಎಸ್ಆರ್ ಮತ್ತು ರೂಪೇನ ಅಗ್ರಹಾರ ವಾರ್ಡ್‌ಗಳ ಚಿತ್ರಣವನ್ನು ಗಮನಿಸಿದರೆ ಈ ಅವೈಜ್ಞಾನಿಕ ವಿಂಗಡಣೆ ಗೊತ್ತಾಗುತ್ತದೆ. ಎಚ್ಎಸ್ಆರ್ ಲೇಔಟ್, ಮಂಗಮ್ಮನಪಾಳ್ಯ, ಸಿಂಗಸಂದ್ರ ವಾರ್ಡ್‌ಗಳ ಕೆಲ ಭಾಗಗಳನ್ನು ಸೇರಿಸಿ ಎಚ್ಎಸ್ಆರ್ ವಾರ್ಡ್ ಎಂದು ವಿಂಗಡಿಸಲಾಗಿದೆ.

ಸಿಲ್ಕ್ ಬೋರ್ಡ್ ಕಡೆಯಿಂದ ಹೊಸೂರು ರಸ್ತೆಯ ಎಡಭಾಗಕ್ಕೆ ಎಚ್ಎಸ್ಆರ್ ಲೇಔಟ್‌ನಿಂದ ಆರಂಭವಾಗುವ ವಾರ್ಡ್, ಸುಮಾರು ಐದು ಕಿಲೋ ಮೀಟರ್ ದೂರದ ತನಕ ಇದೆ. ಬಿರಟೇನೆ ಅಗ್ರಹಾರ ಮತ್ತು ಎಲೆಕ್ಟ್ರಾನಿಕ್ ಸಿಟಿ ಹತ್ತಿರದ ತನಕ ಇದೆ.

ಹೊಸೂರು ರಸ್ತೆಯ ಇನ್ನೊಂದು ಬದಿಗೆ ರೂಪೇನ ಅಗ್ರಹಾರ ವಾರ್ಡ್ ವಿಂಗಡಿಸಲಾಗಿದೆ. ಅದು ಕೂಡ ಸಿಲ್ಕ್ ಬೋರ್ಡ್‌ನಿಂದ ಬಸವನಪುರ ರಸ್ತೆ ತನಕ ರಸ್ತೆ ಬದಿಯಲ್ಲೇ ನಾಲ್ಕು ಕಿಲೋ ಮೀಟರ್‌ನಷ್ಟು ಉದ್ದಕ್ಕೆ ವಿಸ್ತರಿಸಲಾಗಿದೆ. ಬೊಮ್ಮನಹಳ್ಳಿ, ಹೊಂಗಸಂದ್ರ, ಮಂಗಮ್ಮನಪಾಳ್ಯ, ಸಿಂಗಸಂದ್ರ ವಾರ್ಡ್‌ಗಳಲ್ಲಿನ ಕೆಲ ಭಾಗಗಳನ್ನು ಸೇರಿಸಿಕೊಂಡು ರೂಪೇನ ಅಗ್ರಹಾರ ವಾರ್ಡ್ ಮಾಡಲಾಗಿದೆ.

'ಎಚ್ಎಸ್ಆರ್ ವಾರ್ಡ್ ಮತ್ತು ರೂಪೇನ ಅಗ್ರಹಾರ ವಾರ್ಡ್‌ಗಳನ್ನು ಹೊಸೂರು ರಸ್ತೆಯ ಎರಡು ಬದಿಯಲ್ಲಿ ಐದು ಕಿಲೋ ಮೀಟರ್‌ನಷ್ಟು ಉದ್ದಕ್ಕೆ ವಿಂಗಡಿಸಿರುವುದು ಸರಿಯಲ್ಲ. ವಾರ್ಡ್ ಕಚೇರಿಗೆ ನಾಗರಿಕರು ಬಂದು ಹೋಗುವುದು ಕಷ್ಟವಾಗಲಿದೆ' ಎಂದು ಸ್ಥಳೀಯರು ಹೇಳುತ್ತಾರೆ. ಈ ರೀತಿ ಅವೈಜ್ಞಾನಿಕ ವಿಂಗಡಣೆ ಬಗ್ಗೆ ಸರ್ಕಾರಕ್ಕೆ ಆಕ್ಷೇಪಣೆ ಸಲ್ಲಿಸಲಾಗುತ್ತಿದೆ ಎಂದು ಅವರು ಹೇಳಿದರು.



ಬೇಗೂರು ಗ್ರಾಮವೇ ಎತ್ತಂಗಡಿ

ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿರುವ ಬೇಗೂರು ವಾರ್ಡ್ ಕೂಡ ವಿಚಿತ್ರವಾಗಿ ವಿಂಗಡಣೆಯಾಗಿದೆ. ಬೇಗೂರಿನ ದೇವಸ್ಥಾನ ಮತ್ತು ಚರ್ಚ್ ಬೇಗೂರು ವಾರ್ಡ್‌ನಲ್ಲಿ ಉಳಿದುಕೊಂಡಿವೆ.

ಆದರೆ, ಊರಿನ ಬಹುತೇಕ ಮನೆಗಳನ್ನು ಕಾಳೇನ ಅಗ್ರಹಾರ ವಾರ್ಡ್‌ಗೆ ಸೇರಿಸಲಾಗಿದೆ.

'ಹೋಬಳಿ ಕೇಂದ್ರವಾಗಿದ್ದ ಬೇಗೂರಿಗೆ 1,200 ವರ್ಷಗಳ ಇತಿಹಾಸ ಇದೆ. ರಾಜಕೀಯ ಹಿತಾಸಕ್ತಿಗಾಗಿ ವಿಭಾಗ ಮಾಡಿರುವುದು ಸರಿಯಲ್ಲ. ಹಳೇ ಊರನ್ನು ಬೇಗೂರು ವಾರ್ಡ್‌ನಲ್ಲೇ ಉಳಿಸಬೇಕು. ಇಲ್ಲದಿದ್ದರೆ ಗ್ರಾಮದ ಅಭಿವೃದ್ಧಿಗೆ ತೊಂದರೆಯಾಗಲಿದೆ' ಎಂದು ಬೇಗೂರು ವಾರ್ಡ್‌ನ ಈ ಹಿಂದಿನ ಪಾಲಿಕೆ ಸದಸ್ಯ ಎಂ. ಆಂಜನಪ್ಪ ಹೇಳಿದರು.

'ಸಹಕಾರ ಪದವೀಧರರಿಗೆ ಉದ್ಯೋಗ ಮೀಸಲಾತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಹಕಾರ ವಿಷಯದಲ್ಲಿ ಡಿಪ್ಲೊಮಾ ಪದವಿ ಪಡೆದಿರುವವರಿಗೆ ಸಹಕಾರಿ ಸಂಸ್ಥೆಗಳ ಉದ್ಯೋಗಗಳಲ್ಲಿ ಮೀಸಲಾತಿ ಕಲ್ಪಿಸಲು ಸಹಕಾರ ಕಾಯ್ದೆಗೆ ತಿದ್ದುಪಡಿ ತರಲಾಗುವುದು ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ತಿಳಿಸಿದರು.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಶನಿವಾರ ಆಯೋಜಿಸಿದ್ದ 100ನೇ ಅಂತರರಾಷ್ಟ್ರೀಯ ಸಹಕಾರ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, 'ಸಹಕಾರಿ ಸಂಸ್ಥೆಗಳಲ್ಲಿ ವೃತ್ತಿಪರರು, ಸಹ ಕಾರ ವಿಷಯದ ಕುರಿತು ಹೆಚ್ಚಿನ ಜ್ಞಾನ ಹೊಂದಿದವರನ್ನು ನೇಮಿಸಬೇಕಿದೆ. ಅದಕ್ಕೆ ಪೂರಕ ವಾಗಿ ಮೀಸಲಾತಿ ಕಲ್ಪಿಸಲು ವಿಧಾನಮಂಡಲದ ಮುಂಬರುವ ಅಧಿವೇಶನದಲ್ಲೇ ತಿದ್ದುಪಡಿ ಮಸೂದೆ ಮಂಡಿಸಲಾಗುವುದು' ಎಂದರು.

ಸೋಮಶೇಖರ್

ರಾಜ್ಯದ ಎಲ್ಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ವಹಿವಾಟನ್ನು ಸಂಪೂರ್ಣ ಡಿಜಿಟಲೀಕರಣ ಮಾಡಲು ₹ 2,500 ಕೋಟಿ ನೆರವು ನೀಡಲು ಕೇಂದ್ರ ಸರ್ಕಾರ ಒಪ್ಪಿಗೆ ಸೂಚಿಸಿದೆಎಂದು ಹೇಳಿದರು.

ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್ ಸ್ಥಾಪನೆಗೆ ಇರುವ ತೊಡಕುಗಳನ್ನು ನಿವಾರಿಸುವಂತೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಪತ್ರ ಬರೆಯಲಾಗಿದೆ. ಯಶಸ್ವಿನಿ ಯೋಜನೆಯನ್ನು ಅಕ್ಟೋಬರ್ 2ರಿಂದ ಪುನರಾರಂಭಿಸಲು ಸಿದ್ಧತೆ ನಡೆದಿದೆ ಎಂದರು.

ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷ ಜಿ.ಟಿ. ದೇವೇಗೌಡ ಅಧ್ಯಕ್ಷತೆ ವಹಿಸಿದ್ದರು. ಮೈಸೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಯಶವಂತ ಡೋಂಗ್ರೆ ಅಂತರರಾಷ್ಟ್ರೀಯ ಸಹಕಾರ ದಿನಾಚರಣೆ ಕುರಿತು ಉಪನ್ಯಾಸ ನೀಡಿದರು. ಸಹಕಾರ ಸಂಘಗಳ ರಿಜಿಸ್ಟ್ರಾರ್ ಡಾ.ಎಂ.ವಿ. ವೆಂಕಟೇಶ್, ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕ ಅರಳಿ ಸೂರ್ಯಕಾಂತ್, ನಿರ್ದೇಶಕರಾದ ಶಕುಂತಲಾ ಬೆಲ್ದಾಳೆ, ಬಿ.ಸಿ. ಲೋಕಪ್ಪ ಗೌಡ, ಬಾಪೂಗೌಡ ಪಾಟೀಲ್, ಆರ್. ರಾಮ ರೆಡ್ಡಿ, ಬಿ.ಡಿ. ಭೂಕಾಂತ್, ಈರಣ್ಣ ಪಟ್ಟಣಶೆಟ್ಟಿ, ಜೆ.ಎಂ. ಶಿವಪ್ರಸಾದ್, ಕಾರ್ಯದರ್ಶಿ ಲಕ್ಷ್ಮೀಪತಯ್ಯ ಉಪಸ್ಥಿತರಿದ್ದರು.

ವಿಜಯಾ ಸೇರಿ ನಾಲ್ವರಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ


ಗಜಾನನ ಶರ್ಮಾ

ಡಾ.ವಿಜಯಮ್ಮ

ಜಮೀಲ್ ಸಾವಣ್ಣ

ಶರಣು ಹುಲ್ಲೂರು

ಬೆಂಗಳೂರು: ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘವು 2021ನೇ ಸಾಲಿನ ಪ್ರಶಸ್ತಿಗಳನ್ನು ಘೋಷಿಸಿದೆ. ವಿಜಯಾ, ಗಜಾನನ ಶರ್ಮಾ ಸೇರಿ ನಾಲ್ವರು ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

'ಸಾಹಿತ್ಯ ರತ್ನ ಪ್ರಶಸ್ತಿ'ಗೆ ಗಜಾನನ ಶರ್ಮಾ ಅವರ 'ಚನ್ನಭೈರಾದೇವಿ', 'ಯುವ ಸಾಹಿತ್ಯ ರತ್ನ ಪ್ರಶಸ್ತಿ'ಗೆ ಶರಣು ಹುಲ್ಲೂರು ಅವರ 'ಅನಂತವಾಗಿರು' ಕೃತಿ ಆಯ್ಕೆಯಾಗಿದೆ.

'ಪುಸ್ತಕ ರತ್ನ ಪ್ರಶಸ್ತಿ'ಗೆ ಜಮೀಲ್ ಸಾವಣ್ಣ ಅವರ 'ಸಾವಣ್ಣ ಪ್ರಕಾಶನ', 'ಮುದ್ರಣ ರತ್ನ ಪ್ರಶಸ್ತಿ'ಗೆ ಲೇಖಕಿ ವಿಜಯಾ ಅವರ 'ಇಳಾ ಗ್ರಾಫಿಕ್ಸ್' ಆಯ್ಕೆಯಾಗಿದೆ. ಈ ಪ್ರಶಸ್ತಿಗಳು ತಲಾ ₹ 10 ಸಾವಿರ ನಗದು ಒಳಗೊಂಡಿವೆ.

'ಪುಸ್ತಕ ಸಂಸ್ಕೃತಿಗೆ ಪೂರಕವಾಗಿ ಬರಹಗಾರರು, ಪ್ರಕಾಶಕರು ಹಾಗೂ ಮುದ್ರಕರನ್ನು ಪ್ರೋತ್ಸಾಹಿಸುವ ಸದುದ್ದೇಶದಿಂದ ಪ್ರಶಸ್ತಿಗಳನ್ನು ನೀಡುತ್ತಾ ಬಂದಿದ್ದೇವೆ. 2021ನೇ ಸಾಲಿನ ಪ್ರಶಸ್ತಿಗಳನ್ನು ಜುಲೈ 30ರಂದು ಬೆಂಗಳೂರಿನ ಗಾಂಧಿ ಭವನದಲ್ಲಿ ನಡೆಯುವ ಸಮಾರಂಭದಲ್ಲಿ ಪ್ರದಾನ ಮಾಡಲಾಗುತ್ತದೆ' ಎಂದು ಸಂಘದ ಅಧ್ಯಕ್ಷ ನಿಡಸಾಲೆ ಪುಟ್ಟಸ್ವಾಮಯ್ಯ ಹಾಗೂ ಕಾರ್ಯದರ್ಶಿ ಆರ್. ದೊಡ್ಡೇಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾಹಿತಿ ಅರವಿಂದ ಮಾಲಗತ್ತಿ ಬೇಸರ

ಜಾನಪದ ಕಲೆಗೆ ಸಿಗದ ಪ್ರೋತ್ಸಾಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಾನಪದ ಕಲೆಯನ್ನು ತಂತ್ರಜ್ಞಾನದೊಂದಿಗೆ ಬೆಸೆಯುವ ಕೆಲಸ ಆಗಬೇಕು. ಇಲ್ಲವಾದರೆ ಈ ಕಲೆ ಮೂಲೆಗುಂಪಾಗುತ್ತದೆ' ಎಂದು ಸಾಹಿತಿ ಅರವಿಂದ ಮಾಲಗತ್ತಿ ತಿಳಿಸಿದರು.

ಕರ್ನಾಟಕ ಜಾನಪದ ಅಕಾಡೆಮಿ ನಗರದಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕಲಾವಿದರ ಸಾಕ್ಷ್ಯಚಿತ್ರ ಬಿಡುಗಡೆ ಮಾಡಿ, ಮಾತನಾಡಿದರು.

'ಜಾನಪದ ಕಲೆಗೆ ಸರ್ಕಾರದ ಮಟ್ಟದಲ್ಲಿ ಹೆಚ್ಚಿನ ಮಾನ್ಯತೆ ದೊರೆಯಬೇಕು. ಈ ಕಲೆಗೆ ನಿರೀಕ್ಷಿತ ಮಟ್ಟದ ಪ್ರೋತ್ಸಾಹ ದೊರೆಯುತ್ತಿಲ್ಲ. ಪ್ರಪಂಚದ ಪ್ರಥಮ ಜಾನಪದ ವಿಶ್ವವಿದ್ಯಾಲಯ ರಾಜ್ಯದಲ್ಲಿದೆ. ಆದರೆ, ಅದರ ಕಾರ್ಯನಿರ್ವಹಣೆ ತೃಪ್ತಿದಾಯಕವಾಗಿಲ್ಲ. ಈ ಕಲೆಯ ಪ್ರಸಾರಕ್ಕೆ ಸಾಮಾಜಿಕ ಜಾಲತಾಣಗಳು ಸೇರಿ ವಿವಿಧ ಆನ್‌ಲೈನ್ ವೇದಿಕೆಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು' ಎಂದು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಎನ್. ಮಂಜುಳಾ, ಅಕಾಡೆಮಿ ಅಧ್ಯಕ್ಷೆ ಬಿ. ಮಂಜಮ್ಮ ಜೋಗತಿ ಮಾತನಾಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಪ್ರಕಾಶ್ ಜಿ.ಟಿ. ನಿಟ್ಟಾಲಿ, ಅರವಿಂದ ಮಾಲಗತ್ತಿ, ಎನ್. ಮಂಜುಳಾ ಹಾಗೂ ಬಿ. ಮಂಜಮ್ಮ ಜೋಗತಿ ಅವರು 'ದುಡಿ' ಬಾರಿಸುವ ಮೂಲಕ ಸಾಕ್ಷ್ಯಚಿತ್ರ ಬಿಡುಗಡೆಗೆ ಚಾಲನೆ ನೀಡಿದರು. ಕಲಾವಿದರಾದ ಚಂದ್ರಶಾ ಮತ್ತು ಹಲಗೆ ದುರ್ಗಮ್ಮ ಇದ್ದಾರೆ ಪ್ರಜಾವಾಣಿ ಚಿತ್ರ

7 ಕಲಾವಿದರ ಸಾಕ್ಷ್ಯಚಿತ್ರ ಬಿಡುಗಡೆ

ಕರ್ನಾಟಕ ಜಾನಪದ ಅಕಾಡೆಮಿಯು ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆಯಡಿ ಸಿದ್ಧಪಡಿಸಿದ ಏಳು ಕಲಾವಿದರ ಸಾಕ್ಷ್ಯಚಿತ್ರಗಳನ್ನು ಬಿಡುಗಡೆ ಮಾಡಲಾಯಿತು.

ಬೀದರ್‌ನ ಜಾನಪದ ಹಾಡುಗಾರ ಚಂದ್ರಶಾ, ಚಾಮರಾಜನಗರದ ಬೇಟೆಮನೆ ಸೇವೆ ಕಲಾವಿದ ವೆಂಕಟರಮಣಸ್ವಾಮಿ, ಬಳ್ಳಾರಿಯ ಹಗಲುವೇಷ ಕಲಾವಿದ ಅಶ್ವರಾಮಣ್ಣ, ಚಿತ್ರದುರ್ಗದ ಮಹಿಳಾ ತಮಟೆ ಕಲಾವಿದೆ ಹಲಗೆ ದುರ್ಗಮ್ಮ, ರಾಮನಗರದ ತಮಟೆ ವಾದನ ಕಲಾವಿದ ತಿಮ್ಮಯ್ಯ, ಉಡುಪಿಯ ಕೊರಗರ ಡೋಲು ಕಲಾವಿದ ತೇಜು ಕೊರಗ ಹಾಗೂ ಉತ್ತರ ಕನ್ನಡದ ಗೊಂಡರ ಢಕ್ಕೆ ಕುಣಿತ ಕಲಾವಿದ ಸೋಮಯ್ಯ ಗೊಂಡ ಅವರನ್ನು ಪರಿಚಯಿಸುವ ಸಾಕ್ಷ್ಯಚಿತ್ರ ಬಿಡುಗಡೆಗೊಂಡಿತು.

ಕರ್ನಾಟಕ ಜನಶಕ್ತಿ ಸಮ್ಮೇಳನ ಇಂದಿನಿಂದ

ಪ್ರಜಾವಾಣಿ ವಾರ್ತೆ

ರಾಯಚೂರು: ಕರ್ನಾಟಕ ಜನಶಕ್ತಿ ಸಂಘಟನೆಯ ಮೂರನೇ ರಾಜ್ಯ ಸಮ್ಮೇಳನವು ಇಲ್ಲಿನ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಜುಲೈ 3 ಮತ್ತು 4ರಂದು ನಡೆಯಲಿದೆ.

'ಮಾನವ ಹಕ್ಕುಗಳ ಹೋರಾಟಗಾರ್ತಿ ತೀಸ್ತಾ ಸೆಟಲ್ವಾಡ್ ಸಮ್ಮೇಳನ ಉದ್ಘಾಟಿಸಬೇಕಿತ್ತು. ಆದರೆ, ಅವರನ್ನೂ ಸೇರಿಸಿ ಮೂವರು ಹೋರಾಟಗಾರರನ್ನು ಪೊಲೀಸರು ಬಂಧಿಸಿದ್ದಾರೆ. ಅವರ ಬಿಡುಗಡೆಗೆ ಒತ್ತಾಯಿಸಿ ವೇದಿಕೆಯಲ್ಲಿ ಪ್ರತಿಭಟಿಸುವ ಮೂಲಕ ಸಮ್ಮೇಳನ ಉದ್ಘಾಟಿಸಲಾಗುವುದು' ಎಂದು ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷ ಚಾಮರಸ ಮಾಲಿಪಾಟೀಲ 'ಪ್ರಜಾವಾಣಿ'ಗೆ ತಿಳಿಸಿದರು.

'ಸಾಹಿತಿ ಡಾ.ರಹಮತ್ ತರೀಕೆರೆ ಉದ್ಘಾಟನಾ ಭಾಷಣ ಮಾಡುವರು. ವಕೀಲ ಎಸ್.ಬಾಲನ್, ಸಾಹಿತಿಗಳಾದ ಗೊಲ್ಲಳ್ಳಿ ಶಿವಪ್ರಸಾದ್, ಪ್ರೊ. ಶಿವರಾಮಯ್ಯ, ಹೋರಾಟಗಾರ ಪ್ರೊ. ನಗರಿಬಾಬಯ್ಯ, ಚಿಂತಕರಾದ ಪ್ರೊ. ಕೆ.ಫಣಿರಾಜ್, ನೂರ್ ಶ್ರೀಧರ್, ಪ್ರೊ. ನಗರಗೆರೆ ರಮೇಶ್ ಸಮ್ಮೇಳನದಲ್ಲಿ ಭಾಗವಹಿಸುವರು' ಎಂದರು.

'ನವದೆಹಲಿಯ ಸಾಹಿತಿ ರಂಜನಾ, ಹೈದರಾಬಾದ್‌ನ ಶಿಕ್ಷಣ ತಜ್ಞ ಪ್ರೊ. ಹರಗೋಪಾಲ್ ಸೇರಿ ವಿವಿಧ ರಾಜ್ಯಗಳ ಚಿಂತಕರು ಉಪನ್ಯಾಸ ನೀಡುವರು. ಐಎಎಸ್ ಅಧಿಕಾರಿಯಾಗಿದ್ದ ಸಸಿಕಾಂತ್ ಸೆಂಥಿಲ್ ಜುಲೈ 4 ರಂದು ಸಮಾರೋಪ ಭಾಷಣ ಮಾಡುವರು' ಎಂದರು.

ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾ ಕಾರ್ಯಕರ್ತರ ಪ್ರತಿಭಟನೆ

ಕನ್ಹಯ್ಯ ಹಂತಕರಿಗೆ ಕಠಿಣ ಶಿಕ್ಷೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಸ್ಥಾನದ ಉದಯಪುರದಲ್ಲಿ ದರ್ಜಿ ಕನ್ಹಯ್ಯ ಲಾಲ್ ಅವರನ್ನು ಶಿರಚ್ಛೇದ ಮಾಡಿ ಹತ್ಯೆಗೈದಿರುವ ಹಂತಕರಿಗೆ ಕಠಿಣ ಶಿಕ್ಷೆ ವಿಧಿಸುವಂತೆ ಆಗ್ರಹಿಸಿ ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾ ಕಾರ್ಯಕರ್ತರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು.

ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾದ ರಾಜ್ಯ ಘಟಕದ ಅಧ್ಯಕ್ಷ ಸೈಯದ್ ಸಲಾಂ ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ಉಪಾಧ್ಯಕ್ಷ ಮೊಹ್ಸಿನ್, ಮಾಧ್ಯಮ ಸಂಚಾಲಕ ಮೊಹಿಯುದ್ದೀನ್ ಸೇರಿದಂತೆ ಹಲವು ಮುಖಂಡರು, ನೂರಾರು ಮಂದಿ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ವಿಧಾನ ಪರಿಷತ್ ಸದಸ್ಯ ಹಾಗೂ ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್, ಕಾರ್ಯದರ್ಶಿ ಜಗದೀಶ ಹಿರೇಮನಿ ಕೂಡ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ರವಿಕುಮಾರ್, 'ರಾಜಸ್ಥಾನದ ಕಾಂಗ್ರೆಸ್ ಸರ್ಕಾರ ಕನ್ಹಯ್ಯ ಲಾಲ್ ಹಂತಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಲ್ಲಿ ವಿಫಲವಾಗಿದೆ. ಬಡ ದರ್ಜಿಯನ್ನು ಹತ್ಯೆ ಮಾಡಿರುವ ಹಂತಕರು, ಪ್ರಧಾನಿ ನರೇಂದ್ರ ಮೋದಿ ಅವರಿಗೂ ಜೀವ ಬೆದರಿಕೆ ಹಾಕಿದ್ದಾರೆ. ಹಂತಕರಿಗೆ ಗಲ್ಲು ಶಿಕ್ಷೆ ವಿಧಿಸಬೇಕು' ಎಂದು ಆಗ್ರಹಿಸಿದರು.

ಕನ್ಹಯ್ಯ ಲಾಲ್ ಹತ್ಯೆಗೆ ಕಾಂಗ್ರೆಸ್ ಸರ್ಕಾರವೇ ಹೊಣೆ. ರಾಜ್ಯದಲ್ಲೂ ಕಾಂಗ್ರೆಸ್ ಸರ್ಕಾರ ಇದ್ದಾಗ ಪಿಎಫ್ಐ, ಎಸ್‌ಡಿಪಿಐ ಸದಸ್ಯರ ವಿರುದ್ಧದ 1,600 ಕ್ರಿಮಿನಲ್ ಪ್ರಕರಣಗಳನ್ನು ವಿಚಾರಣೆಯಿಂದ ಹಿಂಪಡೆಯಲಾಗಿತ್ತು. ಇಂತಹ ತೀರ್ಮಾನಗಳೇ ಹಿಂಸೆಗೆ ಪ್ರಚೋದನೆ ನೀಡುತ್ತವೆ ಎಂದು ಹೇಳಿದರು.

ರಾಜಸ್ಥಾನದ ಉದಯಪುರದಲ್ಲಿ ದರ್ಜಿ ಕನ್ಹಯ್ಯ ಲಾಲ್ ಅವರನ್ನು ಹತ್ಯೆ ಮಾಡಿರುವ ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸುವಂತೆ ಆಗ್ರಹಿಸಿ ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾ ಸದಸ್ಯರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು. ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್ ಸೇರಿದಂತೆ ಹಲವು ಮುಖಂಡರು ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

> **ಉದಯಪುರದಲ್ಲಿ ನಡೆದ ಹತ್ಯೆಯ ಘಟನೆಯನ್ನು ಖಂಡಿಸಿ ದೇಶದೆಲ್ಲೆಡೆ ಕಾಂಗ್ರೆಸ್ ಏಕೆ ಪ್ರತಿಭಟನೆ ನಡೆಸಿಲ್ಲ ಎಂಬ ಪ್ರಶ್ನೆಗೆ ಆ ಪಕ್ಷದ ಮುಖಂಡರು ಉತ್ತರಿಸಲಿ**
> **ಎನ್. ರವಿಕುಮಾರ್,** ರಾಜ್ಯ ಪ್ರಧಾನ ಕಾರ್ಯದರ್ಶಿ, ಬಿಜೆಪಿ

ಸೌಲಭ್ಯ ವಂಚಿತ ಗಂಗನಬಿಡ ಶಾಲೆ: 1ರಿಂದ 8ರ ವರೆಗೆ 225 ಮಕ್ಕಳು

ಶಿಥಿಲಗೊಂಡ ಕಟ್ಟಡ, ಬಯಲಲ್ಲೇ ಪಾಠ

● ಮನೋಜಕುಮಾರ ಹಿರೇಮಠ

ಕಮಲನಗರ (ಬೀದರ್ ಜಿಲ್ಲೆ): ತಾಲ್ಲೂಕಿನ ದಾಬಕಾ (ಸಿ) ಹೋಬಳಿ ವ್ಯಾಪ್ತಿಯ ಗಂಗನಬಿಡ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಹಳೆ ಕಟ್ಟಡ ಸಂಪೂರ್ಣವಾಗಿ ಶಿಥಿಲಗೊಂಡಿದೆ. ನೂತನ ಕಟ್ಟಡದ ನಿರ್ಮಾಣ ಕಾರ್ಯ ಆಮೆಗತಿಯಲ್ಲಿ ಸಾಗಿದೆ. ಇದರಿಂದ ಮಕ್ಕಳಿಗೆ ಮೈದಾನದಲ್ಲೇ ಪಾಠ ಮಾಡಬೇಕಾಗಿದೆ.

'ಗಂಗನಬಿಡ ಶಾಲೆಯಲ್ಲಿ 1ರಿಂದ 8ನೇ ತರಗತಿವರೆಗೆ 225 ವಿದ್ಯಾರ್ಥಿಗಳು ಇದ್ದಾರೆ. ಹಳೆ ಕಟ್ಟಡ ಶಿಥಿಲಗೊಂಡಿದ್ದು, ಕಾಂಕ್ರೀಟ್ ಛಾವಣಿಯ ಸಿಮೆಂಟ್ ಚಕ್ಕಳೆಗಳು ಬೀಳುತ್ತಿವೆ. ಮಳೆಗಾಲದಲ್ಲಂತೂ ಪರಿಸ್ಥಿತಿ ಇನ್ನೂ ಗಂಭೀರ ಇರುತ್ತದೆ. ಮಳೆ ನಿಂತರೂ ಛಾವಣಿ ಸೋರಿಕೆ ನಿಲ್ಲುವುದಿಲ್ಲ. ಕಟ್ಟಡ ಕುಸಿಯುವ ಭೀತಿ ಕಾಡುತ್ತದೆ' ಎಂದು ಶಿಕ್ಷಕರೊಬ್ಬರು ತಿಳಿಸಿದರು.

'ಪಾಠವು ಸುಗಮವಾಗಿ ಸಾಗಬೇಕು ಮತ್ತು ಮಕ್ಕಳೂ ಸುರಕ್ಷಿತವಾಗಿ ಇರಬೇಕು ಎಂಬ ಉದ್ದೇಶದಿಂದ ಆಟದ ಮೈದಾನದಲ್ಲಿ ಪಾಠ ಮಾಡುತ್ತಿದ್ದೇವೆ. ಆಯಾ ತರಗತಿಯ ಮಕ್ಕಳನ್ನು ಒಂದೊಂದು ಕಡೆ ಕೂರಿಸುತ್ತೇವೆ' ಎಂದು ಅವರು ಹೇಳಿದರು.

'ಕಲ್ಯಾಣ ಕರ್ನಾಟಕ ಅಭಿವೃದ್ಧಿ ಯೋಜನೆಯಡಿ 2018ರಲ್ಲೇ ₹ 26 ಲಕ್ಷ ಅಂದಾಜು ವೆಚ್ಚದಲ್ಲಿ 3 ಕೊಠಡಿಗಳ ನಿರ್ಮಾಣಕ್ಕೆ ಅನುಮೋದನೆ ಸಿಕ್ಕಿತು. ಆದರೆ, ಕಟ್ಟಡದ ಕಾಮಗಾರಿ ಆಮೆಗತಿಯಲ್ಲಿ ಸಾಗಿದೆ. ಕಾಮಗಾರಿ ಯಾಕೆ ವಿಳಂಬವಾಗುತ್ತಿದೆ ಎಂಬುದರ ಬಗ್ಗೆ ಯಾರೂ ಸಹ ಸರಿಯಾದ ಮಾಹಿತಿ ನೀಡುತ್ತಿಲ್ಲ' ಎಂದು ಗ್ರಾಮಸ್ಥರು ದೂರಿದ್ದಾರೆ.

ಮೂಲಸೌಲಭ್ಯ ಕೊರತೆ: 'ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳು ನಿರ್ಲಕ್ಷ್ಯಕ್ಕೆ ಒಳಗಾಗಿವೆ ಎಂಬುದಕ್ಕೆ ಇದು ನಿದರ್ಶನವಾಗಿದೆ. ಶಾಲೆ ಆವರಣದಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯಿಲ್ಲ. ಮೂಲಸೌಕರ್ಯಗಳಿಲ್ಲ. ನಾಲ್ಕು ವರ್ಷಗಳಿಂದ ಶಾಲಾಭಿವೃದ್ಧಿ ಸಮಿತಿ ರಚನೆಯಾಗಿಲ್ಲ. ಐವರು ಕಾಯಂ ಶಿಕ್ಷಕರಿದ್ದಾರೆ. ಇಬ್ಬರು ಶಿಕ್ಷಕರ ಕೊರತೆಯಿದೆ' ಎಂದು ಗ್ರಾಮಸ್ಥ ರಾಜಕುಮಾರ ಬಿರಾದಾರ ತಿಳಿಸಿದ್ದಾರೆ.

ಕಮಲನಗರ ತಾಲ್ಲೂಕಿನ ಗಂಗನಬಿಡ ಗ್ರಾಮದ ಸರ್ಕಾರಿ ಶಾಲೆಯಲ್ಲಿ ಶಿಕ್ಷಕರು ಮೈದಾನದಲ್ಲೇ ಪಾಠ ಮಾಡುತ್ತಿರುವುದು

> **ಮೈದಾನದಲ್ಲಿ ಕೂತು ಪಾಠ ಆಲಿಸಲು ಕಷ್ಟವಾಗುತ್ತದೆ. ಇದರಿಂದಾಗಿ ನಮ್ಮ ಅಭ್ಯಾಸಕ್ಕೆ ತುಂಬಾ ತೊಂದರೆ ಆಗಿದೆ. ಕಟ್ಟಡ ಕಾಮಗಾರಿ ಬೇಗನೇ ಪೂರ್ಣಗೊಳಿಸಿ, ಸಮಸ್ಯೆ ನಿವಾರಿಸಬೇಕು**
> ಹೆಸರು ಹೇಳಲು ಇಚ್ಛಿಸದ ವಿದ್ಯಾರ್ಥಿನಿ

> **ಶಾಲೆಗೆ ಭೇಟಿ ನೀಡಿದಾಗ, ಬಯಲಲ್ಲಿ ಮಕ್ಕಳಿಗೆ ಪಾಠ ಹೇಳಿಕೊಡುತ್ತಿರಲಿಲ್ಲ. ನೂತನ ಕಟ್ಟಡದ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ.**
> **ಎಚ್.ಎಸ್.ನಗನೂರು,** ಕ್ಷೇತ್ರ ಶಿಕ್ಷಣಾಧಿಕಾರಿ, ಕಮಲನಗರ–ಔರಾದ್

ಬಿಡದಿ: ಕೈ, ಜೆಡಿಎಸ್ ಮುಖಂಡರ ಮಾತಿನ ಚಕಮಕಿ

ಬಿಡದಿ: ಜೆಡಿಎಸ್ ಶಾಸಕ ಎ.ಮಂಜುನಾಥ್ ಅವರ ಬೆಂಬಲಿಗರು ಹಾಗೂ ಕಾಂಗ್ರೆಸ್ ಮುಖಂಡರ ನಡುವೆ ಮಾತಿನ ಚಕಮಕಿ ನಡೆದು ಕೈ ಕೈ ಮಿಲಾಯಿಸುವ ಹಂತಕ್ಕೆ ಹೋದ ಘಟನೆ ಶನಿವಾರ ರೇಷ್ಮೆ ಫಾರಂ ಹೌಸ್ ಬಳಿ ನಡೆಯಿತು.

ಪಟ್ಟಣದಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಕರೆದಿದ್ದ ಜನಸ್ಪಂದನ ಸಭೆಯು ಕಾಂಗ್ರೆಸ್, ಜೆಡಿಎಸ್ ಮುಖಂಡರ ನಡುವೆ ಮಾತಿನ ಚಕಮಕಿಗೆ ವೇದಿಕೆಯಾಯಿತು.

ವಿಧಾನ ಪರಿಷತ್ ಸದಸ್ಯ ಸಿ.ಎಂ. ಲಿಂಗಪ್ಪ ನೇತೃತ್ವದಲ್ಲಿ ಪುರಸಭೆಯ ಕಾಂಗ್ರೆಸ್ ಸದಸ್ಯರು ಹಾಗೂ ಕಾಂಗ್ರೆಸ್ ಮುಖಂಡರು ಜನಸ್ಪಂದನ ಸಭೆಗೆ ಆಗಮಿಸಿ ವೇದಿಕೆ ಮುಂಭಾಗ ಕುಳಿತಿದ್ದರು.

ಈ ವೇಳೆ ವೇದಿಕೆಗೆ ಆಗಮಿಸಿದ ಮಂಜುನಾಥ್ ಅವರು ಸಿ.ಎಂ. ಲಿಂಗಪ್ಪ ಅವರನ್ನು ವೇದಿಕೆ ಕರೆದರು. ಇದಕ್ಕೆ ಪ್ರತಿಕ್ರಿಯಿಸಿದ ಲಿಂಗಪ್ಪ, 'ನನ್ನನ್ನು ಕಾಟಾಚಾರಕ್ಕೆ ಆಹ್ವಾನಿಸಲಾಗಿದೆ' ಎಂದು ಆರೋಪಿಸಿದರು. ಇದಕ್ಕೆ ಧ್ವನಿಗೂಡಿಸಿದ ಗಾಣಕಲ್ ನಟರಾಜ್ ಪುರಸಭೆಗೆ ಬಂದಿರುವ ಅನುದಾನವನ್ನು ಶಾಸಕರು ಕಾಂಗ್ರೆಸ್ ಸದಸ್ಯರ ಗಮನಕ್ಕೆ ತಂದಿಲ್ಲ ಎಂದು ದೂರಿದರು. ಇದಕ್ಕೆ ಜೆಡಿಎಸ್ ಸದಸ್ಯರು ಆಕ್ಷೇಪಿಸಿದರು. ಪೊಲೀಸರು ಮಧ್ಯ ಪ್ರವೇಶಿಸಿ ಮುಖಂಡರನ್ನು ಸಮಾಧಾನಪಡಿಸಿದರು.

ನೆರೆ ನೀರಿನಲ್ಲೇ ಶವ ಹೊತ್ತೊಯ್ದ ಗ್ರಾಮಸ್ಥರು

ಪ್ರಜಾವಾಣಿ ವಾರ್ತೆ

ಶಿರ್ವ: ನೆರೆಯ ನೀರಿನಿಂದ ಗ್ರಾಮದ ಸಂಪರ್ಕ ರಸ್ತೆ ಜಲಾವೃತಗೊಂಡುಶವ ಸಾಗಿಸುವ ವಾಹನ ಗ್ರಾಮದೊಳಗೆ ಬಾರದ ಕಾರಣಕ್ಕೆ ಕಾಪು ತಾಲ್ಲೂಕಿನ ಮಟ್ಟು ದೇವರಕುದ್ರು ಗ್ರಾಮಸ್ಥರು ನೆರೆಯ ನೀರಿನಲ್ಲಿಯೇ ಅರ್ಧ ಕಿ.ಮೀ ಶವವನ್ನು ಹೊತ್ತೊಯ್ದರು.

ರಾಮಪ್ಪ ಕುಂದರ್ ಎಂಬುವರ ಪತ್ನಿ ಬೇಬಿ ಪೂಜಾರಿ ನಿಧನರಾಗಿದ್ದು, ಮಟ್ಟು ದೇವರಕುದ್ರು ಗ್ರಾಮಕ್ಕೆ ಸಂಪರ್ಕಿಸುವ ರಸ್ತೆ ಭಾರಿ ಮಳೆಗೆ ಜಲಾವೃತಗೊಂಡಿತ್ತು. ಪರಿಣಾಮ ಗ್ರಾಮದೊಳಗೆ ವಾಹನ ಬರಲು ಅಡ್ಡಿಯಾಗಿತ್ತು.

ಬಳಿಕ ಗ್ರಾಮಸ್ಥರೇ ನೆರೆಯ ನೀರಿನಲ್ಲಿ ಶವವನ್ನು ಹೊತ್ತು ವಾಹನದ ಬಳಿ ಕೊಂಡೊಯ್ದರು. ಬಳಿಕ ಕೋಟೆ ಗ್ರಾಮ ಪಂಚಾಯಿತಿ ರುದ್ರಭೂಮಿಯಲ್ಲಿ ಅಂತ್ಯಸಂಸ್ಕಾರ ನೆರವೇರಿಸಲಾಯಿತು.

ಪಿಟಿಸಿಎಲ್: ಸಿ.ಎಂ ಮನೆ ಬಳಿ ಪ್ರತಿಭಟನೆ

ಬೆಂಗಳೂರು: ಎಸ್ಸಿ, ಎಸ್ಟಿ ಭೂಮಿ ಪರಭಾರೆ ನಿಷೇಧ (ಪಿಟಿಸಿಎಲ್) ಕಾಯ್ದೆ ಸಮಗ್ರ ತಿದ್ದುಪಡಿಗೆ ಆಗ್ರಹಿಸಿ ಭೂ ವಂಚಿತರ ಹೋರಾಟ ಸಮಿತಿ ನೇತೃತ್ವದಲ್ಲಿ ಸಂತ್ರಸ್ತರು ಮುಖ್ಯ ಮಂತ್ರಿ ಬಸವರಾಜ ಬೊಮ್ಮಾಯಿ ಮನೆ ಬಳಿ ಪ್ರತಿಭಟನೆ ನಡೆಸಿದರು.

ಬಳಿಕ, ಮಾತನಾಡಿದ ಸಮಿತಿ ಕಾರ್ಯಾಧ್ಯಕ್ಷ ಹರಿರಾಮ್ 'ಭೂಮಿ ವಂಚಿತರು ಈ ಕಾಯ್ದೆಯಡಿ ಅರ್ಜಿ ಸಲ್ಲಿಸಲು ಕಾಲಮಿತಿ ಇರಬಾರದು ಎಂಬ ಅಂಶವನ್ನು ಸೇರಿಸಿ ತಿದ್ದುಪಡಿ ಮಾಡಬೇಕು' ಎಂದರು.

ಸಮಿತಿಯ ಅಧ್ಯಕ್ಷ, ಶಾಸಕ ಎಂ.ಪಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಬಸವರಾಜ ಅವರನ್ನು ಭೇಟಿಯಾಗಿ ಸಮಸ್ಯೆ ವಿವರಿಸಿದರು. 'ಕಂದಾಯ ಸಚಿವ ಆರ್.ಅಶೋಕ್ ಜತೆ ಚರ್ಚಿಸಿ ಕಾಯ್ದೆ ತಿದ್ದುಪಡಿಗೆ ಕ್ರಮ ಕೈಗೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಭರವಸೆ ನೀಡಿದರು.

ಸಮಿತಿಯ ಮಂಜುನಾಥ್ ಎಂ.ಎಚ್. ಈಶ್ವರ್, ಮುನಿನಂಜಪ್ಪ, ಶಾಂತಕುಮಾರ್, ಮುನಿರಾಜು, ರಮೇಶ್ ಆದಿಜಾಂಬವ, ಈರೇಶ್ ಭಾಗವಹಿಸಿದ್ದರು.

ನಗರದಲ್ಲಿ ಇಂದು

ಭರತನಾಟ್ಯ ರಂಗಪ್ರವೇಶ: ಅಕ್ಷಯಾ ಎಸ್., ಚೈತನ್ಯಾ ಬಿ. ರಾವ್, ಮಾನ್ಯಾ ಆರ್. ತೋಡುಸ್ಕರ್, ಯುಕ್ತಾ ಹೇಮಂತ್, ಅತಿಥಿಗಳು: ಭಾರತಿ ವೇಣುಗೋಪಾಲ್, ಆಯೋಜನೆ: ಸಂಗೀತ ನೃತ್ಯ ಭಾರತಿ ಅಕಾಡೆಮಿ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಬೆಳಿಗ್ಗೆ 9.30

ಕೆಂಪೇಗೌಡರ 513ನೇ ಜಯಂತಿ: ಸಾನ್ನಿಧ್ಯ: ಕುಮಾರ ಚಂದ್ರಶೇಖರನಾಥ ಸ್ವಾಮೀಜಿ, ನಂಜಾವಧೂತ ಸ್ವಾಮೀಜಿ, ಉದ್ಘಾಟನೆ: ಎಂ.ಕೃಷ್ಣಪ್ಪ, ಡಿ.ಕೆ. ಸುರೇಶ್, ಎಸ್.ಟಿ. ಸೋಮಶೇಖರ್, ಅತಿಥಿಗಳು: ಡಿ.ವಿ. ಸದಾನಂದಗೌಡ, ತುಳಸಿ ಮುನಿರಾಜುಗೌಡ, ಆಯೋಜನೆ: ಬೆಂಗಳೂರು ದಕ್ಷಿಣ ತಾಲ್ಲೂಕು ಒಕ್ಕಲಿಗರ ಸಂಘ, ಸ್ಥಳ: ನಾಡಪ್ರಭು ಕೆಂಪೇಗೌಡ ವೃತ್ತ, ದೊಡ್ಡಕಲ್ಲಸಂದ್ರ, ಕನಕಪುರ ಮುಖ್ಯರಸ್ತೆ, ಬೆಳಿಗ್ಗೆ 10

ಅಂತರರಾಷ್ಟ್ರೀಯ ಶುಶ್ರೂಷಕಿಯರ ದಿನ: ಅತಿಥಿಗಳು: ಡಾ.ಕೆ. ಸುಧಾಕರ್, ನ್ಯಾ.ಎನ್.ಸಂತೋಷ್ ಹೆಗ್ಡೆ, ಡಾ.ಸಿ. ಎನ್. ಮಂಜುನಾಥ್, ಡಾ.ಎಸ್. ಸಚ್ಚಿದಾನಂದ್, ಡಾ.ಸಿ. ರಾಮಚಂದ್ರ, ಭಾಸ್ಕರ್ ರಾವ್, ಆಯೋಜನೆ: ರೋಸಿ ರಾಯಲ್ಸ್ ಇನ್‌ಸ್ಟಿಟ್ಯೂಟ್ ನೆಲಮಂಗಲ, ಸ್ಥಳ: ಬೆಂಗಳೂರು ವೈದಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಳಿಗ್ಗೆ 10

ಎಸ್.ಎಸ್. ಶ್ರೀಕುಮಾರ್ ಅವರ 'ಹ್ಯಾವಿಂಗ್ ಎ ಬಾಲ್ ಇನ್ ದಿ ವಾಟರ್ಸ್' ಕೃತಿ ಲೋಕಾರ್ಪಣೆ: ಉದ್ಘಾಟನೆ: ಋತು ಎ. ಪಾಠಿಕ್, ಕೃತಿ ಬಿಡುಗಡೆ: ಗೋಪಲ್ ಬಿ. ಹೊಸೂರು, ಅಧ್ಯಕ್ಷತೆ: ಎಸ್.ಎನ್. ಪ್ರಭುಸ್ವಾಮಿ, ಅತಿಥಿಗಳು: ಎಲ್.ಎ. ರವಿಸುಬ್ರಮಣ್ಯ, ಉದಯ ಬಿ. ಗರುಡಾಚಾರ್, ಆಯೋಜನೆ: ವಸಂತ ವಿಹಾರ ವಾಟರ್ ಪೋಲೊ ಕ್ಲಬ್, ಸ್ಥಳ: ಉದಯಭಾನು ಕಲಾ ಸಂಘ, ಕೆಂಪೇಗೌಡನಗರ, ಬೆಳಿಗ್ಗೆ 10

'ಹಸ್ಬೆಂಡ್-360' ನಾಟಕ ಪ್ರದರ್ಶನ: ನಾಟಕ ರಚನೆ: ನಾಗವೇಣಿ ರಂಗನ್, ನಿರ್ದೇಶನ: ಅರ್ಚನಾ ಶ್ಯಾಮ್, ಮತ್ತು ವಿಜಯ್ ಜೋಯಿಸ್, ಆಯೋಜನೆ: ಅಂತರಂಗ, ಸ್ಥಳ: ಪ್ರಭಾತ್. ಕೆ.ಎಚ್. ಕಲಾಸೌಧ, ರಾಮಾಂಜನೇಯ ಗುಡ್ಡದ ಆವರಣ, ಹನುಮಂತನಗರ, ಸಂಜೆ 7

22ನೇ ಘಟಿಕೋತ್ಸವ: ಅತಿಥಿಗಳು: ಡಾ.ಪ್ರತಿಮಾ ಮೂರ್ತಿ, ಎಸ್.ಡಿ. ಶಿಬುಲಾಲ್, ಆಯೋಜನೆ ಹಾಗೂ ಸ್ಥಳ: ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ), ಬೆಳಿಗ್ಗೆ 10.30

117 ಬಾರಿ ರಕ್ತದಾನ ಮಾಡಿ ಗಿನ್ನಿಸ್ ದಾಖಲೆ ನಿರ್ಮಿಸಿರುವ ಮಧುರಾ ಅಶೋಕ್ ಕುಮಾರ್ ಅವರಿಗೆ ಅಭಿನಂದನಾ ಸಮಾರಂಭ: ಸಾನ್ನಿಧ್ಯ: ಸೌಮ್ಯನಾಥ ಸ್ವಾಮೀಜಿ, ಉದ್ಘಾಟನೆ: ವಿ.ಸೋಮಣ್ಣ, ಅತಿಥಿಗಳು: ಕಿರಣ್ ಕುಮಾರ್, ಶೈಲಜಾ ಸೋಮಣ್ಣ, ಗಂಗಾಂಬಿಕೆ ಮಲ್ಲಿಕಾರ್ಜುನ್, ಶಶಿಧರ್ ಕೋಟೆ, ಆಯೋಜನೆ: ಸಮಾನಮನಸ್ಕರ ವೇದಿಕೆ, ಸ್ಥಳ: ಆದಿಚುಂಚನಗಿರಿ ಸಮುದಾಯ ಭವನ, ವಿಜಯನಗರ, ಬೆಳಿಗ್ಗೆ 10.30

ಕವಿಗೋಷ್ಠಿ ಮತ್ತು ಗೀತಗಾಯನ ಕಾರ್ಯಕ್ರಮ: ಅತಿಥಿಗಳು: ಬಿ.ಎಲ್. ಶ್ರೀನಿವಾಸ್, ಡಾ.ಜಿ. ಶರತ್‌ಚಂದ್ರ ರಾನಡೆ, ರತ್ನಾ ರಾವ್, ಉಪಸ್ಥಿತಿ: ಎಚ್.ಎಸ್. ಮಂಡ್ಯ ಬಾಲಸುಬ್ರಹ್ಮಣಂ, ಕೆ.ವಿ. ಲಕ್ಷ್ಮಣಮೂರ್ತಿ, ಆಯೋಜನೆ: ರವಿಕಿರಣ ಸಾಹಿತ್ಯ ಪ್ರತಿಷ್ಠಾನ, ಸ್ಥಳ: ಕೆನ್ ಕಲಾ ಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

ಮಾಜಿ ಸಚಿವ ಎಂ. ರಘುಪತಿ ಅವರಿಗೆ ಸಂತಾಪ ಸೂಚನಾ ಸಭೆ: ಭಾಗವಹಿಸುವವರು: ಎಸ್.ಎಂ. ಕೃಷ್ಣ, ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ, ರಮೇಶ್ ಕುಮಾರ್, ಕೆ.ಜೆ. ಜಾರ್ಜ್, ದಿನೇಶ್ ಗುಂಡೂರಾವ್, ಸ್ಥಳ: ಕಿಂಗ್ಸ್ ಕೋರ್ಟ್, ಗೇಟ್ ನಂ. 5. ಅರಮನೆ ಮೈದಾನ, ಬೆಳಿಗ್ಗೆ 11

ಜಯರಾಮಾಚಾರಿ ಅವರ 'ನನ್ನವ್ವನ ಬಯೋಗ್ರಫಿ' ಪುಸ್ತಕ ಬಿಡುಗಡೆ: ಉಪಸ್ಥಿತಿ: ವಿಜಯಾ, ಎ.ಆರ್. ಮಣಿಕಾಂತ್, ಜಯರಾಮಾಚಾರಿ, ಆಯೋಜನೆ ಹಾಗೂ ಸ್ಥಳ: ಬಹುರೂಪಿ ಬುಕ್ ಹೌಸ್, ಸಂಜಯನಗರ, ಬೆಳಿಗ್ಗೆ 11

ಶಿಶುನಾಳ ಶರೀಫರು ಹಾಗೂ ಗೋವಿಂದ ಭಟ್ಟರ ತತ್ವಪದಗಳ ಆಧಾರಿತ ತತ್ವ ರಸಾಯನ ಕಾರ್ಯಕ್ರಮ: ಉದ್ಘಾಟನೆ: ಎಚ್.ಡಿ. ದೇವೇಗೌಡ, ನ್ಯಾ.ಎಂ.ಎನ್. ವೆಂಕಟಾಚಲಯ್ಯ, ವಿ. ಸುನೀಲ್ ಕುಮಾರ್, ಶಿವರಾಮ್ ಹೆಬ್ಬಾರ್, ಉಪಸ್ಥಿತಿ: ಮಹೇಶ ಜೋಶಿ, ಆಯೋಜನೆ: ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 4

'ಯಕ್ಷಸಂಸ್ಕಾರ' ಬಡಗುತಿಟ್ಟು ಯಕ್ಷಗಾನ ತರಬೇತಿ ತರಗತಿಗಳು ಉದ್ಘಾಟನೆ: ಜಿ.ಎಲ್. ಹೆಗಡೆ, ಅಧ್ಯಕ್ಷತೆ: ಡಾ.ಗಿರಿಧರ ಕಜೆ, ಉಪಸ್ಥಿತಿ: ತೋಟಿಮನೆ ಗಣಪತಿ ಹೆಗಡೆ, ಸುಬ್ರಾಯ ಹೆಬ್ಬಾರ್, ಮಂಜು ಹವ್ಯಕ, ಸ್ಥಳ: ಹವ್ಯಕ ಭವನ, ಮಲ್ಲೇಶ್ವರ, ಸಂಜೆ 4

'ಭಸ್ಮಾಸುರ-ಮೋಹಿನಿ' ಯಕ್ಷಗಾನ: ಹಿಮ್ಮೇಳ: ಭಾಗವತರು: ರಾಘವೇಂದ್ರ ಆಚಾರ್ಯ, ಮದ್ದಳೆ: ಸುನೀಲ್ ಭಂಡಾರಿ, ಚಂಡೆ: ಸುಜನ್ ಹಾಲಾಡಿ, ಮುಮ್ಮೇಳ: ಪ್ರಶಾಂತ ಹೆಗಡೆ, ಕಾರ್ತಿಕ್, ವಿದ್ಯಾಧರ ರಾವ್, ಸುಧೀರ್, ಶಿಥಲ ಶೆಟ್ಟಿ, ಚಂದ್ರಶೇಖರ ಶೆಟ್ಟಿ, ಸಂತೋಷ್ ಶೆಟ್ಟಿ, ಆಯೋಜನೆ: ತರಳಬಾಳು ಕೇಂದ್ರ ಮತ್ತು ಸುವರ್ಣ ಪ್ರಸಾಧನ ಯಕ್ಷರಂಗ, ಸ್ಥಳ: ತರಳಬಾಳು ಕೇಂದ್ರದ ಸಭಾಂಗಣ, ಬಿಡಿಎ ಕಾಂಪ್ಲೆಕ್ಸ್ ಹತ್ತಿರ, ಆರ್.ಟಿ. ನಗರ, ಸಂಜೆ 4.30

ದಿವ್ಯಾ ಶ್ರೀಧರ್ ರಾವ್ ಅವರ 'ಮಿಂಚದ ಮಿಂಚು' ಹಾಗೂ 'ನಿತ್ಯ ಜೀವನದ ಸತ್ಯ ಕಥೆಗಳು' ಪುಸ್ತಕ ಲೋಕಾರ್ಪಣೆ, ಧೀಮ್‌ಗಿಣ ಪ್ರತಿಷ್ಠಾನದ ಉದ್ಘಾಟನಾ ಸಮಾರಂಭ: ಪುಸ್ತಕ ಬಿಡುಗಡೆ: ದು.ಗು. ಲಕ್ಷ್ಮಣ, ಅರೆಹೊಳೆ ಸದಾಶಿವ ರಾವ್, ಮಣೀತ್ ಶೆಟ್ಟಿ, ಭಾರತಿ ಹೆಗಡೆ, ಸುಧಾಕರ ಜೈನ್, ಆಯೋಜನೆ: ಆರ್ಯ ಪ್ರಕಾಶನ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು , ಚಾಮರಾಜಪೇಟೆ, ಸಂಜೆ 5

ಪಾಲಕ್ಕಾಡ್ ಆರ್. ರಾಮಪ್ರಸಾದ್ ಅವರ ಕರ್ನಾಟಕ ಸಂಗೀತ ಕಛೇರಿ: ಪಿಟೀಲು: ಮತ್ತೂರ್ ಆರ್. ಶ್ರೀನಿಧಿ, ಮೃದಂಗ: ತುಮಕೂರು ರವಿಶಂಕರ್, ಘಟಂ: ಓಂಕಾರ್ ರಾವ್, ಆಯೋಜನೆ: ಶ್ರೀರಾಮ ಲಲಿತಕಲಾ ಮಂದಿರ, ಸ್ಥಳ: ಶ್ರೀರಾಮ ಲಲಿತಾಕಲಾ ಮಂದಿರದ ಸಭಾಂಗಣ, ಸಂಜೆ 5.30

ನೃತ್ಯಾಂತರಂಗ ಏಕತ್ರಿಂಶತ್ ವರ್ಷೋತ್ಸವ-ಗುರು ನಮನ-2022: ಸಾನ್ನಿಧ್ಯ: ಸರದಾರ್ ಸೇವಾಲಾಲ್ ಸ್ವಾಮೀಜಿ, ಅಧ್ಯಕ್ಷತೆ: ಅಶೋಕ್ ಹಾರನಹಳ್ಳಿ, ಎಲ್. ವಿ. ರವಿಸುಬ್ರಮಣ್ಯ, ಮೈಸೂರು ವಿ. ಸುಬ್ರಹ್ಮಣ್ಯ, ಎಂ.ಶಕುಂತಲಾ, ಡಾ.ಎಂ. ಸೂರ್ಯಪ್ರಸಾದ್, ಆಯೋಜನೆ: ಮಾತೃಕಾ ಕಲ್ಚರಲ್ ಟ್ರಸ್ಟ್, ಸ್ಥಳ: ಜೆಎಸ್‌ಎಸ್ ಸಭಾಂಗಣ, ಜಯನಗರ, ಸಂಜೆ: 5.30

ಊರ್ಮಿಕ ನೃತ್ಯೋತ್ಸವ: ಭರತನಾಟ್ಯ ಪ್ರಸ್ತುತಿ: ನಿಧಿ ಎ.ಭಕ್ತನ್, ಸಂವೃತ ಕಿಶೋರ್, ಕೂಚಿಪುಡಿ: ಶ್ರಾವಣಿ ಕುಲಕರ್ಣಿ, ಅತಿಥಿಗಳು: ಡಾ.ಸುಮನ ರಂಜಾಳ್ಕರ್, ಸೀತಾ ಗುರುಪ್ರಸಾದ್, ಅಶ್ವಿನಿ ನಂಬಿಯಾರ್, ಆಯೋಜನೆ: ಊರ್ಮಿಕ, ಸ್ಥಳ: ನಯನ ರಂಗಮಂದಿರ, ಕನ್ನಡ ಭವನ ಸಂಜೆ 6.10

ಸತ್ಯು ಸಂಭ್ರಮ-93 'ವಾರಸುದಾರ' ನಾಟಕ ಪ್ರದರ್ಶನ: ಪ್ರಸ್ತುತಿ: ಸಮುದಾಯ ಬೆಂಗಳೂರು, ರಚನೆ: ಜಯರಾಮ್ ರಾಯಪುರ, ನಿರ್ದೇಶನ: ಎಂ.ಎಸ್. ಸತ್ಯು, ಸಂಗೀತ: ಸಮೀರ್ ಕುಲಕರ್ಣಿ, ನೃತ್ಯ ಸಂಯೋಜನೆ: ನಂದಿನಿ ಕೆ. ಮೆಹತಾ, ಆಯೋಜನೆ: ವಿಭಿನ್ನ, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ ರಸ್ತೆ, ಸಂಜೆ 6.30

ಶರ್ಮಿಳಾ ಮುಖರ್ಜಿ ಅವರ ಶಿಷ್ಯರಿಂದ ಒಡಿಸ್ಸಿ ನೃತ್ಯ ಪ್ರದರ್ಶನ: ಪರಿಕಲ್ಪನೆ: ಶರ್ಮಿಳಾ ಮುಖರ್ಜಿ, ಸಂಯೋಜನೆ: ಕೇಲುಚರಣ್ ಮೊಹಾಪಾತ್ರ, ಆಯೋಜನೆ: ಸಂಜಲಿ ಸೆಂಟರ್, ಸ್ಥಳ: ಜಾಗೃತಿ ಥಿಯೇಟರ್, ವರ್ತೂರು ರಸ್ತೆ, ರಾಮಗೊಂಡನಹಳ್ಳಿ, ಸಂಜೆ 7.30

ಚಿತ್ರಾವಳಿ

ನಗರದ ವಿಶ್ವೇಶ್ವರಯ್ಯ ಕೋ ಆಪರೇಟಿವ್ ಬ್ಯಾಂಕ್‌ನ ಪ್ರಧಾನ ಕಚೇರಿಗೆ ವಿಧುಶೇಖರ ಭಾರತೀ ಸ್ವಾಮೀಜಿ ಶನಿವಾರ ಭೇಟಿ ನೀಡಿದರು

ಬೆಂಗಳೂರಿನಲ್ಲಿ ಶುಕ್ರವಾರ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಹಮ್ಮಿಕೊಂಡಿದ್ದ ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಸಂಘದ ಮಾಜಿ ಅಧ್ಯಕ್ಷ ವಿ. ವೆಂಕಟೇಶ್, ಪತ್ರಿಕಾ ವಿತರಕರಾದ ಬಿ.ಆರ್.ವಿ.ರಮೇಶ್, ನಾಗರತ್ನ ಅವರನ್ನು ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಸನ್ಮಾನಿಸಿದರು.

ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 3 ಜುಲೈ 2022

ಸುವರ್ಣ ಸಂಭ್ರಮದಲ್ಲಿ 'ಎಕ್ಕಸಕ್ಕ'! 9

ಪರ್ವತಗಳ ಹಾಡನ್ನು ಹೊತ್ತು ತಂದು... 11

ನಿತ್ಯ ಹೃದಯಪೂರ್ಣ ಅರಣ್ಯ!

ಬಿಸಿಲಿನ ನಾಡು ಎನಿಸಿದ ಹೈದರಾಬಾದ್‌ನಲ್ಲೂ ಒಂದು ನಿತ್ಯ ಹರಿದ್ವರ್ಣ ಕಾಡಿದೆ ಗೊತ್ತೆ? ಅದನ್ನು ನೋಡಲು ನೀವು ಇಲ್ಲಿನ ಕಾನ್ಹಾ ಶಾಂತಿವನದವರೆಗೆ ಪಾದ ಬೆಳೆಸಲೇಬೇಕು. ಕೇವಲ 6–8 ವರ್ಷಗಳಲ್ಲಿ ಇಲ್ಲಿ ಮಳೆ ಕಾಡೊಂದನ್ನು ಸೃಷ್ಟಿಸಿ ಬಹುದೊಡ್ಡ ಪವಾಡವನ್ನೇ ಮಾಡಲಾಗಿದ್ದು, ಮನುಷ್ಯ ಪ್ರಯತ್ನದಿಂದ ಏನನ್ನು ಬೇಕಾದರೂ ಸಾಧಿಸಬಹುದು ಎನ್ನುವುದಕ್ಕೆ ಸಾಕ್ಷಿಯಾಗಿ ಈ ಶಾಂತಿವನ ಮೈದಾಳಿದೆ. ವಿನಾಶದ ಅಂಚಿನಲ್ಲಿದ್ದ ಸಸ್ಯ ಪ್ರಭೇದಗಳು ಈ ಕಾಡಿನಲ್ಲಿ ಮರುಹುಟ್ಟನ್ನೂ ಪಡೆದಿವೆ. ಈ ಕಾಡಿನಲ್ಲಿ ನೆತ್ತಿಯ ಜತೆಗೆ ಹೃದಯವನ್ನು ತಂಪು ಮಾಡುವಂತಹ ಗುಣವಿದ್ದು, ಅದನ್ನು ನೀವು ಖುದ್ದಾಗಿಯೇ ಅನುಭವಿಸಬೇಕು...

ರವೀಂದ್ರ ಭಟ್ಟ

ನಿಮಗೆ ನಿತ್ಯ ಹರಿದ್ವರ್ಣ ಕಾಡು ಗೊತ್ತು. ನಿತ್ಯವೂ ಹಸಿರಿನಿಂದ ಕಂಗೊಳಿಸುವ ವನ ಅದು. ನಮ್ಮ ಪಶ್ಚಿಮಘಟ್ಟದಲ್ಲಿ ಅದು ಇದೆ. ಪಶ್ಚಿಮಘಟ್ಟದ ಪ್ರದೇಶ ಭಾರೀ ಮಳೆ ಬೀಳುವ ಪ್ರದೇಶ. ಅಲ್ಲಿ ನಿತ್ಯ ಹರಿದ್ವರ್ಣ ಕಾಡಿರುವುದು ವಿಶೇಷವಲ್ಲ. ಆದರೆ, ಹೈದರಾಬಾದ್‌ನಂತಹ ಬಿಸಿಲುನಾಡಿನಲ್ಲಿಯೂ ನಿತ್ಯ ಹರಿದ್ವರ್ಣ ಕಾಡಿದೆ ಎಂದರೆ ನೀವು ನಂಬಬೇಕು. ನಂಬುವಂತೆ ಮಾಡಿದ್ದಾರೆ ಕಮಲೇಶ್ ಪಟೇಲ್ ಅಥವಾ ದಾಜಿ. ಅದೂ 6–8 ವರ್ಷದಲ್ಲಿ ಮಳೆ ಕಾಡು ಸೃಷ್ಟಿ ಮಾಡಿ ಪವಾಡವನ್ನೇ ಮಾಡಿದ್ದಾರೆ.

ಹೌದು, ವರ್ಷಕ್ಕೆ 155 ಮಿ.ಮೀ.ಗಿಂತ ಕಡಿಮೆ ಮಳೆಯಾಗುವ ಪ್ರದೇಶದಲ್ಲಿ ಅವರು ಮಳೆ ಕಾಡು ರೂಪಿಸಿದ್ದಾರೆ. ಹೈದರಾಬಾದ್‌ನಿಂದ ಸುಮಾರು 50 ಕಿ.ಮೀ. ದೂರದಲ್ಲಿರುವ, ರಾಜೀವ್ ಗಾಂಧಿ ವಿಮಾನ ನಿಲ್ದಾಣದಿಂದ 30 ಕಿ.ಮೀ. ದೂರದಲ್ಲಿರುವ ಕಾನ್ಹಾ ಶಾಂತಿವನದಲ್ಲಿ ಇಂತಹ ಕಾಡು ಸೃಷ್ಟಿಯಾಗಿದೆ. ಕಾನ್ಹಾ ಶಾಂತಿವನದೊಳಗೆ ಪ್ರವೇಶ ಮಾಡಿದರೆ ಮಲೆನಾಡಿಗೆ ಬಂದ ಅನುಭವ. ಬಿರು ಬೇಸಿಗೆಯ ಕಾಲದಲ್ಲಿಯೂ ತಂಪು ತಂಪು. ಸುಮಾರು ಒಂದೂವರೆ ಸಾವಿರ ಎಕರೆಯಷ್ಟು ವಿಸ್ತಾರವಾಗಿರುವ ಈ ಆಶ್ರಮದ ಆವರಣದಲ್ಲಿ ಎಲ್ಲಿ ನೋಡಿದರೂ ಸಸ್ಯಗಳು ಹಸಿರಿನಿಂದ ಕಂಗೊಳಿಸುತ್ತವೆ. ಇಲ್ಲಿ ಯಾವ ಜಾಗವನ್ನೂ ವ್ಯರ್ಥ ಮಾಡಿಲ್ಲ. ಎಲ್ಲೆಲ್ಲಿ ಜಾಗವಿದೆಯೋ ಅಲ್ಲಿ ಸಸ್ಯವಿದೆ ಅಥವಾ ನೀರು ಸಂಗ್ರಹಿಸುವ ಇಂಗುಗುಂಡಿ ಇದೆ.

ನಿತ್ಯ ಹರಿದ್ವರ್ಣ ಕಾಡಿನಂತೆ ಕಂಗೊಳಿಸುವ ಹೈದರಾಬಾದ್‌ನ ಕಾನ್ಹಾ ಶಾಂತಿವನದ ಧ್ಯಾನಮಂದಿರ

ಇದು ಮೂಲತಃ ಹಾರ್ಟ್‌ಫುಲ್‌ನೆಸ್ ಧ್ಯಾನ ವಿಧಾನವನ್ನು ಹೇಳಿಕೊಡುವ ಆಶ್ರಮ. ಇಲ್ಲಿಗೆ ದೇಶ ವಿದೇಶಗಳಿಂದ ಸ್ವಯಂ ಸೇವಕರು ಬರುತ್ತಾರೆ, ಧ್ಯಾನ ಮಾಡುತ್ತಾರೆ. ಉಚಿತವಾಗಿ ಧ್ಯಾನ ಕಲಿಯುತ್ತಾರೆ, ಕಲಿಸುತ್ತಾರೆ. ರಾಮಚಂದ್ರ ಮಿಷನ್‌ನ ಒಂದು ಭಾಗ ಇದು. ಆದರೆ, ಇಲ್ಲಿ ಪ್ರಕೃತಿಯೇ ದೇವರು. ಈ ಆಶ್ರಮದಲ್ಲಿ ಯಾವುದೇ ದೇವಾಲಯವಿಲ್ಲ. ಎಲ್ಲ ಧರ್ಮಗಳ, ಎಲ್ಲ ಜಾತಿಗಳ ಜನರಿಗೂ ಇಲ್ಲಿ ಪ್ರವೇಶವಿದೆ. ಕಣ್ಣು ಬಿಟ್ಟರೂ ನಿಸರ್ಗ ನಗುತ್ತದೆ. ಕಣ್ಣು ಮುಚ್ಚಿ ಧ್ಯಾನಕ್ಕೆ ಕುಳಿತರೂ ಪ್ರಕೃತಿ ದೇವರು ಒಲಿಯುತ್ತಾನೆ.

ಕಾನ್ಹಾ ಶಾಂತಿವನದ ವಿಹಂಗಮ ನೋಟ

ದಾಜಿ ಅವರು ಇಲ್ಲಿ ಆಶ್ರಮ ಸ್ಥಾಪಿಸಬೇಕು ಎಂದು ಮನಸ್ಸು ಮಾಡಿದಾಗ ಇದೊಂದು ಬರಡುಭೂಮಿ. ಅಲ್ಲೊಂದು ಇಲ್ಲೊಂದು ಬೇವಿನಮರ ಇರುವುದು ಬಿಟ್ಟರೆ ಬೇರೆ ಮರಗಳೇ ಇರಲಿಲ್ಲ. 2015ರಲ್ಲಿ ಆಶ್ರಮದ ಕಾಮಗಾರಿ ಆರಂಭವಾಯಿತು. ಈಗ ನೀವು ಹೋಗಿ ನೋಡಿದರೆ ಅಲ್ಲೊಂದು ಮಲೆನಾಡು ತಲೆ ಎತ್ತಿ ನಿಂತಿದೆ. ಒಟ್ಟಾರೆ ಆರು ಲಕ್ಷಕ್ಕೂ ಹೆಚ್ಚು ಸಸ್ಯಗಳಿವೆ. ಸುಮಾರು ಎರಡು ಸಾವಿರ ಪ್ರಭೇದಗಳ ಸಸ್ಯಗಳಿವೆ. ಅದರಲ್ಲಿ ಅಪಾಯದ ಅಂಚಿನಲ್ಲಿರುವ 354 ಸಸ್ಯ ಪ್ರಭೇದಗಳು ಮರುಹುಟ್ಟು ಪಡೆದಿವೆ. ಬೇರೆ ಬೇರೆ ರಾಜ್ಯಗಳಿಂದ ಬೃಹದಾಕಾರದ ಮರಗಳನ್ನು ತಂದು ಇಲ್ಲಿ ಬೇರೂರಿಸಲಾಗಿದೆ. ಮಳೆ ಕಾಡಿನಲ್ಲಿ ಸಿಗುವ ಎಲ್ಲ ರೀತಿಯ ಸಸ್ಯಗಳನ್ನೂ ತಂದು ಇಲ್ಲಿ ಬೆಳೆಸಲಾಗಿದೆ. ಆಶ್ರಮದ ಎಲ್ಲೆಡೆ ಸಸ್ಯಗಳು ತಂಗಾಳಿ ಬೀಸುತ್ತಿದ್ದರೆ ಆಶ್ರಮದ ಒಂದು ಭಾಗದಲ್ಲಿ ಮಳೆಕಾಡನ್ನೇ ಸೃಷ್ಟಿಸಲಾಗಿದೆ. ಕಾನ್ಹಾ ಶಾಂತಿವನ ಹೀಗೆ ಮಳೆಕಾಡಾಗಿ ಬದಲಾದ ಕತೆ ರೋಚಕವಾಗಿದೆ.

ತೆಲಂಗಾಣದ ರಂಗಾರೆಡ್ಡಿ ಜಿಲ್ಲೆಯ ನಂದಿಗ್ರಾಮದಲ್ಲಿರುವ ಈ ಪ್ರದೇಶ ಬರಪ್ರದೇಶ. ಇಲ್ಲಿ ಇರುವ ಕೆರೆಗಳೂ ಬತ್ತಿ ಹೋಗಿದ್ದವು. ಆಶ್ರಮ ಕಟ್ಟಲು ಆರಂಭಿಸುವಾಗಲೇ ದಾಜಿ ಅವರ ಮನಸ್ಸಿನಲ್ಲಿ ಇದನ್ನು ಹೇಗೆ ಅಭಿವೃದ್ಧಿಪಡಿಸಬೇಕು ಎಂಬ ಬಗ್ಗೆ ಸ್ಪಷ್ಟ ಕಲ್ಪನೆ ಇತ್ತು. ಅದಕ್ಕೇ ಅವರು ಮೊದಲು ನೀರು ಸಂಗ್ರಹಕ್ಕೆ ಆದ್ಯತೆ ನೀಡಿದರು. ಈ ಪ್ರದೇಶದಲ್ಲಿ ಇರುವ ಕೆರೆಗಳನ್ನು ಮೊದಲು ಅಭಿವೃದ್ಧಿಪಡಿಸಿದರು. ಹೂಳು ತೆಗೆಸಿದರು. ಕೆರೆಗಳನ್ನು ಇನ್ನಷ್ಟು ದೊಡ್ಡದಾಗಿಸಿದರು. ಕೆರೆಗೆ ನೀರು ಹರಿದು ಬರುವಂತೆ ವ್ಯವಸ್ಥೆ ಮಾಡಿದರು ಮತ್ತು ಒಂದು ಕೆರೆಯಿಂದ ಇನ್ನೊಂದು ಕೆರೆಗೆ ಸಂಪರ್ಕವನ್ನೂ ಕಲ್ಪಿಸಿದರು. ಭಾರೀ ಮಳೆಯಾದಲ್ಲಿ ಕೆರೆ ಒಡೆದು ಹೋಗದಂತೆ ವ್ಯವಸ್ಥೆ ಮಾಡಿಸಿದರು. ಆಶ್ರಮದ ಪರಿಸರದಲ್ಲಿ ಬಿದ್ದ ಮಳೆಯ ಒಂದೊಂದು ಹನಿಯೂ ಕೂಡ ಅಲ್ಲಿಯೇ ಇಂಗಬೇಕು. ನೀರು ಯಾವುದೇ ಕಾರಣಕ್ಕೂ ಹೊರಕ್ಕೆ ಹೋಗಬಾರದು ಎಂಬ ಎಚ್ಚರಿಕೆಯನ್ನು ವಹಿಸಿದರು. ನೀರು ಇಂಗುವುದಕ್ಕಾಗಿ ನೂರಾರು ಚೆಕ್ ಡ್ಯಾಂ ನಿರ್ಮಾಣ ಮಾಡಿಸಿದರು.

ಕಮಲೇಶ್ ಪಟೇಲ್

ಆಶ್ರಮದಲ್ಲಿ ಕಟ್ಟಿದ ಎಲ್ಲ ಕಟ್ಟಡಗಳೂ ಮಳೆ ನೀರು ಸಂಗ್ರಹಿಸುವ ತಾಣಗಳಾದವು. ಕಟ್ಟಡದ ಮೇಲೆ ಬಿದ್ದ ನೀರನ್ನು ಹುಷಾರಿನಿಂದ ಸಂಗ್ರಹಿಸಿ ಭೂಮಿಯ ಒಳಕ್ಕೆ ಹೋಗುವಂತೆ ಮಾಡಲಾಯಿತು. ಜೊತೆಗೆ ಕಟ್ಟಡದ ಮೇಲ್ಛಾವಣಿ ಮೇಲೆ ಬಿದ್ದ ನೀರು ಸರಾಗವಾಗಿ ಹರಿದು ಹೋಗಿ ಕೆರೆಗೆ ಸೇರುವ ವ್ಯವಸ್ಥೆಯನ್ನೂ ಮಾಡಲಾಯಿತು. ಒಂದೇ ಬಾರಿಗೆ ಒಂದೂವರೆ ಲಕ್ಷ ಮಂದಿ ಕುಳಿತು ಧ್ಯಾನ ಮಾಡಲು ಸಾಧ್ಯವಾಗುವಂತಹ ಧ್ಯಾನ ಮಂದಿರವನ್ನೂ ಅಲ್ಲಿ ಕಟ್ಟಲಾಗಿದೆ. ಈ ಧ್ಯಾನ ಮಂದಿರದ ಮೇಲೆ ಬೀಳುವ ಮಳೆ ನೀರು ಕೂಡ ಸಂಗ್ರಹವಾಗುತ್ತದೆ. ಆಶ್ರಮದ ಎಲ್ಲ ಕಟ್ಟಡಗಳೂ ಸೇರಿ ಈಗ ಸುಮಾರು ಆರು ಕೋಟಿ ಲೀಟರ್ ನೀರು ಸಂಗ್ರಹದ ಸಾಮರ್ಥ್ಯವನ್ನು ಕಾನ್ಹಾ ವನ ಹೊಂದಿದೆ. ಇದೆಲ್ಲ ಅಲ್ಲಿಯೇ ಉಳಿಯುತ್ತದೆ ಮತ್ತು ಪುನರ್ ಬಳಕೆಯಾಗುತ್ತದೆ.

ಹೌದು, ಆಶ್ರಮದಲ್ಲಿ ಬಳಕೆಯಾಗುವ ನೀರನ್ನು ಮರುಬಳಕೆ ಮಾಡುವ ವ್ಯವಸ್ಥೆಯೂ ಇದೆ. ತ್ಯಾಜ್ಯ ನೀರನ್ನು ರಾಸಾಯನಿಕ ರಹಿತವಾಗಿ ಕಡಿಮೆ ವಿದ್ಯುತ್ ಬಳಸಿ ಶುದ್ಧ ಮಾಡುವ ತಂತ್ರಜ್ಞಾನವನ್ನು ಇಲ್ಲಿ ಅಳವಡಿಸಿಕೊಳ್ಳಲಾಗಿದೆ. ಆಶ್ರಮದ ಪರಿಸರದಲ್ಲಿ ಬರುವ ಮಳೆಯ ನೀರು ಅಲ್ಲಿಯೇ ಇಂಗುತ್ತದೆ. ಅಲ್ಲಿ ಬಳಕೆಯಾಗುವ ನೀರು ಕೂಡ ಮರುಬಳಕೆಯಾಗುತ್ತದೆ. ಇದರಿಂದಾಗಿ ಈಗ ಅಲ್ಲಿ ಅಂತರ್ಜಲ ಪ್ರಮಾಣ ಹೆಚ್ಚಾಗಿದೆ. ಮೊದಲು ಸಾವಿರ ಅಡಿ ಕೊರೆದರೂ ನೀರು ಸಿಗದೇ ಇರುವ ಪ್ರದೇಶದಲ್ಲಿ ಈಗ 200 ಅಡಿಗೆ ನೀರು ಲಭ್ಯವಾಗುವ ಹಂತಕ್ಕೆ ಬಂದಿದೆ.

ನೀರು ಉಳಿಸುವ ಕೆಲಸದ ಜೊತೆಗೇ ಸಸ್ಯಗಳನ್ನು ನೆಡುವ ಕೆಲಸವೂ ಸಾಗಿತು. ಅದಕ್ಕಾಗಿ ಸಸ್ಯಗಳೂ ನಳನಳಿಸುತ್ತಾ ಬೆಳೆದವು. 30–40 ವರ್ಷಗಳಷ್ಟು ಹಳೆಯದಾದ, ದೇಶದ ವಿವಿಧೆಡೆ ಅಭಿವೃದ್ಧಿ ಕಾಮಗಾರಿಗಾಗಿ ತೆಗೆಯಲು ಗುರುತಿಸಿದ್ದ ಆಲದ ಮರಗಳನ್ನು ಸಂರಕ್ಷಿಸಿ ತಂದು ಇಲ್ಲಿ ಹಾಕಲಾಯಿತು. ಅಂತಹ 20ಕ್ಕೂ ಹೆಚ್ಚು ಆಲದ ಮರಗಳು ಇಲ್ಲಿ ಅರಳಿ ನಿಂತಿವೆ. ಬರೀ ಬೇವಿನ ಸಸಿಗಳೇ ಬೆಳೆಯುತ್ತಿದ್ದ ಈ ಪ್ರದೇಶದಲ್ಲಿ ಈಗ ತೆಂಗು, ಅಡಿಕೆ ಕೂಡ ಬೆಳೆಯುತ್ತಿದೆ. ದೇಶದ ಬಹುತೇಕ ಭಾಗಗಳಲ್ಲಿ ಬೆಳೆಯುವ ಎಲ್ಲ ಸಸ್ಯಗಳನ್ನೂ ತಂದು ಇಲ್ಲಿ ಬೆಳೆಸಲಾಗುತ್ತಿದೆ.

9ನೇ ಪುಟಕ್ಕೆ...

ನೀನ್ಯಾರಿಗೂ ಸಲ್ಲದವಳು

ಏಕಬಳಕೆಯ ಪ್ಲಾಸ್ಟಿಕ್ ಸಾಮಗ್ರಿಗಳ ಬಳಕೆಗೆ ನಿಷೇಧ ಜಾರಿಯಾದ ಈ ಹೊತ್ತಿನಲ್ಲಿ ನೊರೆಕಾಯಿಯ ನೆನಪು ಮತ್ತೆ ಮತ್ತೆ ಆಗುತ್ತಿದೆ, ಏಕೋ?

ಪ್ಲಾಸ್ಟಿಕ್ ಚೀಲ ಮುಕ್ತ ದಿನ

ಬಿದಿರಿನಿಂದ ತಯಾರಾದ ಬ್ರಷ್ ಹಾಗೂ ಮಾತ್ರೆಗಳ ಆಕಾರದಲ್ಲಿ ಟೂತ್‌ಪೇಸ್ಟ್

ಅಭಿಲಾಷ್ ಪಿ.ಎಸ್.

ಅದು ಬಿರು ಬೇಸಿಗೆಯ ಸಮಯ. ಆಗಿನ್ನೂ ನಮ್ಮದು ಪ್ರೈಮರಿ ಸ್ಕೂಲು. ಅಜ್ಜಿ ಮನೆಗೆ ರಜೆ ಕಳೆಯಲು ಹೋದ ಮೊಮ್ಮಕ್ಕಳಿಗೆ ಮಧ್ಯಾಹ್ನದ ಮೇಲೆ ಅಜ್ಜಿ ಹೇಳಿದ ಡ್ಯೂಟಿ. ಮನೆಯ ಹಿಂಬದಿಯಿದ್ದ ಕಾಡಿನಿಂದ ನೊರೆಕಾಯಿ ತರುವ ಕೆಲಸವದು. ನೊರೆಕಾಯಿ ಎಂದರೆ ಗೊತ್ತಾಯಿತಲ್ಲವೇ... ಅಂಟುವಾಳ. ದೋಟಿ ಹಿಡಿದು ಹೊರಟರೆ ಮೈಕೈ, ಬಟ್ಟೆಯೆಲ್ಲ ಅಂಟು ಮಾಡಿಕೊಂಡು ಚೀಲ ತುಂಬಾ ನೊರೆಕಾಯಿಯನ್ನು ತಂದು ಅಜ್ಜಿಗೆ ಹಸ್ತಾಂತರಿಸಿದರೆ ಸಂಜೆ ಆಟಕ್ಕೆ ಮತ್ತೆ ನಾವು ಸಿದ್ಧ.

ಹೀಗೆ ತಂದ ನೊರೆಕಾಯಿಯನ್ನು ಬಿಸಿಲಿಗೆ ಒಣಹಾಕುತ್ತಿದ್ದ ಅಜ್ಜಿ, ಅವುಗಳು ಒಣಗಿದ ಮೇಲೆ ಅಟ್ಟದಲ್ಲಿ ಶೇಖರಿಸಿಡುತ್ತಿದ್ದರು. ಇವುಗಳೇನಕ್ಕೆ ಎನ್ನುವುದು ಆಗ ನಮಗೆ ಅಗತ್ಯವಿಲ್ಲದ ಪ್ರಶ್ನೆ. ಬೆಳೆದಂತೆ ಸೋಪು, ಶ್ಯಾಂಪು, ಡಿಶ್‌ವಾಶರ್ ಹೀಗೆ ಬಗೆಬಗೆಯ ನಾಮಧೇಯಗಳ ನೊರೆ ಕಕ್ಕುವ ಉತ್ಪನ್ನಗಳು ಕೈಗೆ ಸಿಕ್ಕಾಗ, ಮತ್ತದೇ ನೊರೆಕಾಯಿ ನೆನಪಾಯಿತು. ನನ್ನ ಹೆಸರು ಅಮ್ಮನ ಮೊಬೈಲ್ ಮೇಲೆ ಕಾಣಿಸಿತ್ತು. ಹಲೋ ಎಂದವಳಿಗೆ... 'ಆ ನೊರೆಕಾಯಿ ತರ್ತಿದ್ವಲ್ವಾ, ಅಜ್ಜಿ ಏನ್ಮಾಡ್ತಿದ್ರು?' ಎಂಬ ಪ್ರಶ್ನೆಯೆಸೆದೆ. ಅಮ್ಮನೂ ತನ್ನ ಬಾಲ್ಯಕ್ಕೆ ಹೊರಳಿದಳು. 'ಬಿಸಿಲಲ್ಲಿ ಒಣಗಿಸಿದ ಕಾಯಿಯನ್ನು ಬಟ್ಟೆಯೊಳಗಿಟ್ಟು ಅದನ್ನು ಹೊರಗಿನಿಂದಲೇ ಜಜ್ಜಿ, ಅದನ್ನು ನೀರಿನಲ್ಲಿ ನೆನೆಸಿದರೆ ಕಾಯಿಗಳು ನೊರೆ ಬಿಡುತ್ತಿದ್ದವಂತೆ. ಪಾತ್ರೆ ತೊಳೆಯಲು, ಬಟ್ಟೆ ಒಗೆಯಲು, ತಲೆಸ್ನಾನ ಮಾಡಲು ಹೀಗೆ ಈ ನೊರೆಯ ನೀರನ್ನು ಎಲ್ಲದಕ್ಕೂ ಬಳಸುತ್ತಿದ್ದೆವು' ಎಂದು, ಏಕಾಏಕಿ 'ಈಗೇಕೆ ನೆನಪಾಯಿತು' ಮರುಪ್ರಶ್ನಿಸಿದಳು ಅಮ್ಮ. 'ಸುಮ್ಮನೆ' ಎಂದಷ್ಟೇ ಉತ್ತರಿಸಿದೆ.

ನೊರೆಕಾಯಿಯ ನೆನಪು ಏಕಾಏಕಿ ಉಕ್ಕಿ ಬರಲೂ ಕಾರಣವಿದೆ. ಇತ್ತೀಚೆಗಷ್ಟೇ 'ಆರ್ಗನೈಸೇಷನ್ ಫಾರ್ ಎಕಾನಾಮಿಕ್ ಡೆವಲಪ್‌ಮೆಂಟ್ ಆ್ಯಂಡ್ ಕಾರ್ಪೊರೇಷನ್ (ಒಇಸಿಡಿ)' ತಯಾರಿಸಿದ ವರದಿಯೊಂದನ್ನು ಗಮನಿಸಿದ್ದೆ. ವರದಿಯ ಆರಂಭದಲ್ಲೇ 'ಪ್ರಪಂಚದಾದ್ಯಂತ ಉತ್ಪತ್ತಿಯಾಗುತ್ತಿರುವ ಪ್ಲಾಸ್ಟಿಕ್ ತ್ಯಾಜ್ಯದ ಪ್ರಮಾಣ 2060ರೊಳಗೆ ಮೂರು ಪಟ್ಟು ಹೆಚ್ಚಲಿದೆ. ಈ ಪೈಕಿ ಅರ್ಧದಷ್ಟು ಭೂಗರ್ಭ ಸೇರಲಿದೆ. ಕೆರೆ, ನದಿ ಹಾಗೂ ಸಮುದ್ರಕ್ಕೆ ಸೇರುವ ಪ್ಲಾಸ್ಟಿಕ್ ಪ್ರಮಾಣವೂ ಮೂರು ಪಟ್ಟು ಅಧಿಕವಾಗಿರಲಿದೆ. ಆಫ್ರಿಕಾ ಏಷ್ಯಾದಂತಹ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಈ ಪ್ರಮಾಣ ಹೆಚ್ಚಿರಲಿದ್ದು, ಪ್ಲಾಸ್ಟಿಕ್ ಬಳಕೆಯು 460 ಮಿಲಿಯನ್ ಟನ್‌ನಿಂದ 1,231 ಮಿಲಿಯನ್ ಟನ್‌ಗೆ ಏರಿಕೆಯಾಗಲಿದೆ' ಎನ್ನುವುದನ್ನು ಓದಿ ಮನೆಯೊಳಗಿದ್ದ ಪ್ಲಾಸ್ಟಿಕ್ ವಸ್ತುಗಳೆಲ್ಲ ಸ್ಮೃತಿಪಟಲದಲ್ಲಿ ಗಿರಕಿ ಹೊಡೆಯತೊಡಗಿದವು.

ಇದರ ಬೆನ್ನಲ್ಲೇ 'ಭಾರತದಲ್ಲಿ ಜುಲೈ 1ರಿಂದ ಒಮ್ಮೆ ಉಪಯೋಗಿಸಿ ಎಸೆಯುವ ಪ್ಲಾಸ್ಟಿಕ್ ವಸ್ತುಗಳಾದ ಇಯರ್‌ಬಡ್‌ಗೆ ಬಳಸುವ ಪ್ಲಾಸ್ಟಿಕ್ ಕಡ್ಡಿ, ಪ್ಲಾಸ್ಟಿಕ್ ಧ್ವಜ, ಥರ್ಮಕೋಲ್, ತಟ್ಟೆ, ಚಮಚ, ಸಿಗರೇಟ್ ಪ್ಯಾಕೆಟ್, ಸಿಹಿ ತಿಂಡಿ ಪೊಟ್ಟಣಗಳ ಸುತ್ತ ಸುತ್ತುವ ತೆಳುವಾದ ಪ್ಲಾಸ್ಟಿಕ್, ಬಳಸಿ ಬಿಸಾಡುವ ಪ್ಲಾಸ್ಟಿಕ್ ಬ್ಯಾಗ್‌ಗೆ ನಿಷೇಧ' ಸುದ್ದಿಯೂ ಕಣ್ಣಿಗೆ ಬಿತ್ತು. ಇವೆಲ್ಲವೂ ನೊರೆಕಾಯಿಯ ನೊರೆ ಹೆಚ್ಚಿಸಿದವು. ಪರಿಸರಕ್ಕೆ ಏನೂ ಹಾನಿ ಮಾಡದೆ ಬಟ್ಟೆಯೊಳಗೆ ಕುಳಿತು ನೊರೆ ಬಿಡುತ್ತಿದ್ದ ನೊರೆಕಾಯಿಗಳೆಲ್ಲಿ! ಪ್ಲಾಸ್ಟಿಕ್ ಬಾಟಲ್, ಕವರ್‌ನೊಳಗಿಂದ ಪರಿಸರಕ್ಕೆಲ್ಲ ನೊರೆಕಕ್ಕುವ ಉತ್ಪನ್ನಗಳೆಲ್ಲಿ!

ಕಾಲ ಎಷ್ಟು ಬದಲಾಗಿದೆ ಎಂದರೆ ಸೋಪೊಂದಿದ್ದರೆ ಸಾಕು ಎನ್ನುತ್ತಿದ್ದ ಸ್ನಾನಗೃಹಗಳಲ್ಲೀಗ, ಪ್ಲಾಸ್ಟಿಕ್ ಲೋಕವೇ ಸೃಷ್ಟಿಯಾಗಿದೆ. ಮೈಗೊಂದು, ತಲೆಗೊಂದು, ಮುಖಕ್ಕೊಂದು, ಕೈಗೊಂದು, ಕಾಲಿಗೊಂದು ಸೋಪು, ಶ್ಯಾಂಪು, ವಾಶ್‌ಗಳು ಪ್ಲಾಸ್ಟಿಕ್ ಒಳಗೆ ಅಡಗಿ ಕುಳಿತಿವೆ. ದಂತಪಂಕ್ತಿಗೂ ಹತ್ತಾರು ಉತ್ಪನ್ನಗಳು ಶೆಲ್ಫೇರಿವೆ! ಬೇವಿನ ಕಡ್ಡಿ ಹೋಗಿ ಮೈಮಾಟದ ಬ್ರಷ್‌ಗಳು ಬಂದಿವೆ, ಅದರಲ್ಲೂ ನೂರು ಬಗೆಗಳಿವೆ. ಪೌಡರ್ ಸಾಲದಕ್ಕೆ ಪೇಸ್ಟ್, ಪೇಸ್ಟ್ ಜೊತೆಗೆ ಮೌತ್‌ವಾಶ್, ಸಾಲದಕ್ಕೆ ಫ್ಲಾಸ್! ಎಲ್ಲವೂ ಪ್ಲಾಸ್ಟಿಕ್‌ನಲ್ಲೇ ಸುತ್ತಿಬಂದವುಗಳು. ಇನ್ನು ಸ್ನಾನಗೃಹದ ನೆಲಕ್ಕೊಂದು, ಗೋಡೆಗೊಂದು ಕ್ಲೀನರ್, ಎರಡು ಮಾದರಿಯ ಟಾಯ್ಲೆಟ್‌ಗಳಿಗೂ ಬೇರೆ ಬೇರೆ ಮಾದರಿಯ ಕ್ಲೀನಿಂಗ್ ಲಿಕ್ವಿಡ್! ಹೀಗೆ ಆ ಪುಟ್ಟ ಗೂಡಿನೊಳಗೆ ಪ್ಲಾಸ್ಟಿಕ್ ಸಾಮ್ರಾಜ್ಯದ ಒಡ್ಡೋಲಗ, ಸಾಮ್ರಾಜ್ಯ ವಿಸ್ತರಣೆಯ ಮುಂದಿನ ಪಿತೂರಿ ಬೇರೆ. ಅಂಗಡಿಗಳತ್ತ ಕಣ್ಣು ಹಾಯಿಸಿದರೆ, ಲಾಲಿಪಪ್‌ನಂತೆ ನೇತಾಡುವ ಬಳಸಿ ಬಿಸಾಕುವ ಶೇವಿಂಗ್ ಸೆಟ್‌ಗಳು, ಬಗೆಬಗೆಯ ಪ್ಲಾಸ್ಟಿಕ್ ಬಾಚಣಿಕೆಗಳು, ಶ್ಯಾಂಪೂ, ಮಸಾಲೆ ಸ್ಯಾಚೆಗಳು... ಹೀಗೆ ಯೋಚಿಸುವಾಗ ಮತ್ತೆ ಮತ್ತೆ ನೆನಪಾಗುತ್ತವೆ ನೊರೆಕಾಯಿ, ಬೂದಿ, ಸೀಗೆ ಕಾಯಿ, ಬೇವಿನ ಕಡ್ಡಿ.

10ನೇ ಪುಟಕ್ಕೆ...

ನಿಷೇಧ: ಕೀನ್ಯಾ ಮುಂದು

2030ರೊಳಗಾಗಿ ಪ್ಲಾಸ್ಟಿಕ್ ಬಳಕೆ ಪ್ರಮಾಣವನ್ನು ಗಣನೀಯವಾಗಿ ಕಡಿಮೆ ಮಾಡುವ ಪ್ರತಿಜ್ಞೆಯನ್ನು 170 ದೇಶಗಳು 2019ರಲ್ಲಿ ನಡೆದ ವಿಶ್ವಸಂಸ್ಥೆ ಪರಿಸರ ಸಮಾವೇಶದಲ್ಲಿ ತೆಗೆದುಕೊಂಡಿದ್ದವು. ಆದರೆ, ಒಇಸಿಡಿ ವರದಿ ನೋಡಿದರೆ ಪ್ರತಿಜ್ಞೆಯ ಅನುಷ್ಠಾನದ ಬಗ್ಗೆ ಪ್ರಶ್ನೆ ಮೂಡುತ್ತದೆ. ಕೆಲ ರಾಷ್ಟ್ರಗಳು ಪ್ಲಾಸ್ಟಿಕ್ ತ್ಯಾಜ್ಯ ನಿಯಂತ್ರಣಕ್ಕೆ ಗಂಭೀರವಾದ ಹೆಜ್ಜೆ ಇಟ್ಟಿವೆ. ಈ ರೀತಿ ಕಠಿಣ ಕ್ರಮ ತೆಗೆದುಕೊಂಡ ರಾಷ್ಟ್ರಗಳ ಪೈಕಿ ಕೀನ್ಯಾ ಮೊದಲಿದೆ.

ವಿಶ್ವ ಆರ್ಥಿಕ ವೇದಿಕೆಯ ವರದಿ ಪ್ರಕಾರ, ಕೀನ್ಯಾದಲ್ಲಿ 2017ರಲ್ಲೇ ಒಂದು ಬಾರಿ ಬಳಸಿ ಎಸೆಯುವ (Single use) ಪ್ಲಾಸ್ಟಿಕ್ ಚೀಲಗಳನ್ನು ನಿಷೇಧಿಸಲಾಗಿದೆ. ರಾಷ್ಟ್ರೀಯ ಉದ್ಯಾನ, ಅರಣ್ಯ, ಸಮುದ್ರ ತೀರಗಳಿಗೆ ತೆರಳುವ ಪ್ರವಾಸಿಗರು ಪ್ಲಾಸ್ಟಿಕ್ ಬಾಟಲ್, ತಟ್ಟೆಗಳನ್ನು ಒಯ್ಯುವಂತಿಲ್ಲ ಎನ್ನುವ ಕಠಿಣ ನಿಯಮವೂ ಇಲ್ಲಿದೆ. ಜಿಂಬಾಬ್ವೆಯಲ್ಲಿ ಥರ್ಮಾಕೋಲ್‌ನ ಆಹಾರದ ಪೊಟ್ಟಣಗಳನ್ನು ನಿಷೇಧಿಸಲಾಗಿದೆ. ಈ ನಿಯಮ ಉಲ್ಲಂಘಿಸಿದವರಿಗೆ ₹3 ಲಕ್ಷದವರೆಗೂ ದಂಡವಿದೆ. ಬ್ರಿಟನ್‌ನಲ್ಲಿ ಪ್ಲಾಸ್ಟಿಕ್ ಚೀಲಗಳ ಮೇಲೆ ತೆರಿಗೆ ವಿಧಿಸಲಾಗಿದ್ದು, ಅಮೆರಿಕ, ಯುರೋಪ್ ಒಕ್ಕೂಟ, ಚೀನಾಗಳಲ್ಲಿ ಒಮ್ಮೆ ಬಳಸಿ ಎಸೆಯುವ ಪ್ಲಾಸ್ಟಿಕ್ ಉತ್ಪನ್ನಗಳನ್ನು ನಿಷೇಧವಿದೆ. ಭಾರತ ಈ ಪಟ್ಟಿಗೆ ಹೊಸ ಸೇರ್ಪಡೆ. ಅಂದಹಾಗೆ, ನಮ್ಮ ಮಂಗಳೂರು ಪಾಲಿಕೆಯ ಸಭೆಯಲ್ಲಿ ಬಾಟಲಿ–ಲೋಟದಲ್ಲಿ ನೀರು ಕೊಡುವುದಿಲ್ಲ. ಸ್ಟೀಲ್ ಜಗ್ ಮತ್ತು ಲೋಟದಲ್ಲಿ ನೀರು ಕೊಡಲಾಗುತ್ತದೆ.

ಮಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ಸ್ಟೀಲ್ ಜಗ್, ಲೋಟಗಳದ್ದೇ ಕಾರುಬಾರು

ನಟಿ ಜಾಕ್ವೆಲಿನ್ ಫರ್ನಾಂಡಿಸ್ ಹೆಜ್ಜೆ ಹಾಕಿದ ಎಕ್ಕಸಕ್ಕ ಹಾಡು ಈಗ ಎಲ್ಲೆಡೆ ಸದ್ದು ಮಾಡುತ್ತಿದೆ. ಸರಿಯಾಗಿ ಐವತ್ತು ವರ್ಷಗಳ ಹಿಂದೆ ಇದೇ ಪದವನ್ನು ಬಳಸಿದ್ದ ಹಾಡಿಗೆ ನಟಿ ಕಲ್ಪನಾ ಅವರು ಹೆಜ್ಜೆ ಹಾಕಿದ್ದರು ಗೊತ್ತೇ?

ಎಸ್. ಜಾನಕಿ

ಪ್ರೊ. ಬಿ.ಎ. ವಿವೇಕ ರೈ

ಅನೂಪ್ ಭಂಡಾರಿ

ಸುವರ್ಣ ಸಂಭ್ರಮದಲ್ಲಿ ಎಕ್ಕಸಕ್ಕ!


'ವಿಕ್ರಾಂತ್ ರೋಣ'ದ ಎಕ್ಕಸಕ್ಕ ಹಾಡಿಗೆ ಸುದೀಪ್ ಹಾಗೂ ಜಾಕ್ವೆಲಿನ್ ಫರ್ನಾಂಡಿಸ್ ಹೆಜ್ಜೆ

ಹರ್ಷವರ್ಧನ ಪಿ.ಆರ್.

ಎಕ್ಕಸಕ್ಕ ಎಕ್ಕಸಕ್ಕ ಎಕ್ಕಾ ಸಕ್ಕಾ... (ರಾ ರಾ ರಕ್ಕಮ್ಮ) –ಸುದೀಪ್ ನಟನೆಯ 'ವಿಕ್ರಾಂತ್ ರೋಣ' ಸಿನಿಮಾಕ್ಕೆ ನಿರ್ದೇಶಕ ಅನೂಪ್ ಭಂಡಾರಿ ಬರೆದ ಬಿ.ಅಜನೀಶ್ ಲೋಕನಾಥ್ ಸಂಗೀತ ನಿರ್ದೇಶನದ ಹಾಡು ಎಲ್ಲೆಡೆ ಅನುರಣಿಸುತ್ತಿದ್ದರೆ, ಈ ಹಾಡಿನಲ್ಲಿ ಜನಪ್ರಿಯಗೊಂಡ 'ಎಕ್ಕಸಕ್ಕ' ಎಂಬ ದ್ರಾವಿಡ ಪದ ಸಿನಿಮಾದಲ್ಲಿ ಮೊದಲ ಬಾರಿ ಕೇಳಿಸಿದ ಕ್ಷಣಕ್ಕೆ ಈಗ ಸುವರ್ಣ ಸಂಭ್ರಮ.

1973ರಲ್ಲಿ ಬಿಡುಗಡೆ ಕಂಡ ವಿಶುಕುಮಾರ್ ನಿರ್ದೇಶನದ ತುಳು ಸಿನಿಮಾ 'ಕೋಟಿ ಚೆನ್ನಯ'ದ 'ಎಕ್ಕಸಕ್ಕ' ಹಾಡು ಬಹಳ ಜನಪ್ರಿಯತೆ ಪಡೆದಿತ್ತು. ವಿಜಯಭಾಸ್ಕರ್ ಸಂಗೀತ ನಿರ್ದೇಶನದಲ್ಲಿ ಎಸ್. ಜಾನಕಿ ಅವರು ತುಳುವಿನ 'ಎಕ್ಕಸಕ್ಕ...' ಹಾಡು ಹಾಡಿದ್ದರು. ವಿಶ್ರಾಂತ ಕುಲಪತಿ ಪ್ರೊ.ಬಿ.ಎ.ವಿವೇಕ ರೈ ಹಾಡನ್ನು ಬರೆದಿದ್ದರು. ಕಲ್ಪನಾ ಹೆಜ್ಜೆ ಹಾಕಿದ್ದರು.

'ಅವಳಿ ವೀರರಾದ ಕೋಟಿ–ಚೆನ್ನಯ ಸಹೋದರರು ತನ್ನ ಬಳಿಗೆ ಬರುವಾಗ ಅಕ್ಕ ಕಿನ್ನಿದಾರು (ಕಲ್ಪನಾ) ಅನುಭವಿಸುವ ಸಂಭ್ರಮವನ್ನು ಸಂಕೇತಿಸುವ ಹಾಡು ಬರೆಯಲು ನಿರ್ದೇಶಕರು ತಿಳಿಸಿದ್ದರು. ನಮ್ಮ ಪುತ್ತೂರಿನ ಪರಿಸರದಲ್ಲಿ 'ಎಕ್ಕಸಕ್ಕ' ಪದವನ್ನು 'ಅತೀವ', 'ತುಂಬಾ', 'ಉತ್ಸಾಹ', 'ಭಯಂಕರ', 'ಸಿಕ್ಕಾಪಟ್ಟೆ' ಎಂಬ ವಿಶೇಷಣಾರ್ಥವಾಗಿ ಬಳಸುತ್ತಾರೆ. ಈ ಪದ ಛಂದಸ್ಸಿನ ಲಯವನ್ನೂ ಹೊಂದಿದ್ದರಿಂದ, ನಮ್ಮ ಮನೆಗೆ ಕೆಲಸಕ್ಕೆ ಬರುತ್ತಿದ್ದ ಮಹಿಳೆ ಹಾಗೂ ಆಕೆಯ ಮಗ ಮಾತನಾಡುವುದನ್ನು ಕೇಳಿ, ನಾನು ಹಾಡಿಗೆ ಬಳಸಿಕೊಂಡೆ. ಇದು ನನ್ನ ನಿರೀಕ್ಷೆಗೂ ಮೀರಿ ಜನಪ್ರಿಯವಾಯಿತು' ಎಂದು ವಿವೇಕ ರೈ ಮೆಲುಕು ಹಾಕುತ್ತಾರೆ.

'ಎಕ್ಕಸಕ್ಕ' ಕೇವಲ ತುಳುವಿನ ಪದವಲ್ಲ. ಕನ್ನಡದ ಮೊದಲ ಕಾವ್ಯ, ಪಂಪನ ವಿಕ್ರಮಾರ್ಜುನ ವಿಜಯದಲ್ಲಿ (ಪಂಪ ಭಾರತ) ದ್ರೋಣ, ದುರ್ಯೋಧನನಿಗೆ ಹೇಳುವ ಮಾತಿನ ಒಂದು ಸಾಲಿನಲ್ಲೂ 'ಎಕ್ಕಸಕ್ಕ ತನಂಗಳ್ ಎತ್ತ ಹೋದವು' ಎಂಬ ಬಳಕೆ ಇದೆ. ಹೀಗಾಗಿ ಇದು ಖಂಡಿತಾ ದ್ರಾವಿಡ ಪದ ಎಂಬುದು ನನಗೆ ದೃಢವಾಗಿತ್ತು' ಎಂದು ಅವರು ಹೇಳುತ್ತಾರೆ.

'ಸಿನಿಮಾ ಬಿಡುಗಡೆಯ 35 ವರ್ಷಗಳ ಬಳಿಕ, 2009ರಲ್ಲಿ ಮೈಸೂರು ವಿಶ್ವವಿದ್ಯಾಲಯವು ಎಸ್. ಜಾನಕಿ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಿತ್ತು. ಅಂದು ನಡೆದಿದ್ದ ಔತಣಕೂಟದಲ್ಲಿ ಅವರು ಸಿಕ್ಕಿದ್ದರು. ನಾನು ಅವರಲ್ಲಿ, 'ಮೇಡಂ ಯು ಹ್ಯಾವ್ ಸಂಗ್ ಮೈ ಸಾಂಗ್ ಎಕ್ಕ ಸಕ್ಕ... ಎಕ್ಕ ಸಕ್ಕ' ಎಂದೆ. ತಕ್ಷಣವೇ ಅವರು ಆ ಪದ್ಯವನ್ನು ಹಾಡಿಯೇ ಬಿಟ್ಟರು. ನಾನೇ ಎಕ್ಕಸಕ್ಕ ಖುಷಿ ಸಂಭ್ರಮಿಸಿದೆ. ಅದು ಎಂದೂ ಮರೆಯಲಾಗದ ನೆನಪು' ಎಂದು ವಿವೇಕ ರೈ ನೆನಪಿಸಿಕೊಳ್ಳುತ್ತಾರೆ.

'ನಾನೂ ಪುತ್ತೂರಿನಲ್ಲೇ ಬಾಲ್ಯವನ್ನು ಕಳೆದವನು. ಬಾಲ್ಯದ ಪರಿಸರದಲ್ಲಿ 'ಎಕ್ಕಸಕ್ಕ' ಪದವನ್ನು ನಾನು ಆಗಾಗ್ಗೆ ಬಳಸಿದ್ದೇನೆ. ಆ ಪದದ ರೋಚಕತೆಯೇ ಹಾಗಿದೆ. ಅಷ್ಟು ಮಾತ್ರವಲ್ಲ, ನನ್ನ ತಾಯಿ ತುಳುವಿನ 'ಕೋಟಿ ಚೆನ್ನಯ' ಸಿನಿಮಾದ 'ಎಕ್ಕಸಕ್ಕ' ಹಾಡನ್ನು ಖುಷಿಯಿಂದ ಹಾಡುತ್ತಿದ್ದರು. ಆಗ ಕೇಳಿಕೊಂಡು ನಾನು ಪುಳಕಿತಗೊಂಡಿದ್ದೇನೆ. ಆ ಶಬ್ದದ ಸಂಭ್ರಮವೇ ಹಾಗಿದೆ' ಎಂದು 'ವಿಕ್ರಾಂತ್ ರೋಣ' ಸಿನಿಮಾಕ್ಕೆ ಹಾಡು ಬರೆದ ಅನೂಪ್ ಭಂಡಾರಿ ಹೇಳುತ್ತಾರೆ.

'ಎಕ್ಕಸಕ್ಕ ಎಂಬ ಪದವು ತಮಿಳಿನಲ್ಲೂ ಇದೆ. 'ಎಕ್ಕಚಕ್ಕ' ಎಂದು ಉಚ್ಚರಿಸುತ್ತಾರೆ. ನಾವೂ ಈ ಹಾಡಿನ ಹಿನ್ನೆಲೆಯನ್ನು ಕರಾವಳಿಗೆ ಸಂಬಂಧಿಸಿದಂತೆಯೇ ರೂಪಿಸಿದ್ದೇವೆ. ಕರಾವಳಿ ಭಾಗಕ್ಕೆ ನಾಯಕ ಬಂದಾಗ, ಅಲ್ಲಿನ ಗಡಂಗ್ (ಶೇಂದಿ ಅಂಗಡಿ) ಬಳಿ ನಡೆಯುವ ಸನ್ನಿವೇಶ ಅದಾಗಿದೆ. ನಮ್ಮ ಸಂಗೀತ ನಿರ್ದೇಶಕರೂ ಆ ಪದವನ್ನು ತುಂಬಾ ಇಷ್ಟಪಟ್ಟರು. ಆ ಪದವೇ ಸಂಗೀತ. ಉಳಿದ ಎಲ್ಲ ಎಕ್ಕ ಸಕ್ಕವನ್ನೂ ಸಿನಿಮಾದಲ್ಲೇ ನೋಡಬೇಕು' ಎಂದು ಅರ್ಥಗರ್ಭಿತ ನಗು ಬೀರುತ್ತಾರೆ.

'ಹಲವು ಭಾಷೆಗಳಲ್ಲಿ ಸಾವಿರಾರು ಹಾಡು ಹಾಡಿರುವ ಎಸ್. ಜಾನಕಿ ಅವರಿಗೆ 'ಎಕ್ಕಸಕ್ಕ' ಪದ ಕೇಳಿದ ತಕ್ಷಣವೇ ತುಳುವಿನ ಆ ಹಾಡು ನೆನಪಾಗಬೇಕಾದರೆ, ಆ ಪದದ ಶಕ್ತಿ ಎಷ್ಟಿರಬೇಕು. ನಿಜಕ್ಕೂ ಎಕ್ಕಸಕ್ಕ ಅಲ್ವಾ' ಎಂದು ಹರ್ಷ ವ್ಯಕ್ತಪಡಿಸುತ್ತಾರೆ.

ಶರಣರ ನಂಟು

'ಹಾಡು ಎಂದರೆ ಕೇವಲ ಶಬ್ದಾಡಂಬರ ಅಲ್ಲ. ಅದಕ್ಕೊಂದು ತಾತ್ವಿಕ ಚಿಂತನೆ ಇರುತ್ತದೆ. ಅದು ನಂಟು ಬೆಸೆಯುತ್ತದೆ. ನಾನು ವಚನ ಸಾಹಿತ್ಯವನ್ನು ಬೋಧಿಸಿದ್ದ ಕಾರಣ, ಕೋಟಿ–ಚೆನ್ನಯ ಸಿನಿಮಾದ ಎಕ್ಕಸಕ್ಕ ಹಾಡಿಗೆ ಅಲ್ಲಮನ ವಚನದ ಸಾಲುಗಳ ತಾತ್ವಿಕತೆ ಆಧರಿಸಿ, 'ಎಲ್ಲೋ ಇದ್ದ ನೆಲ್ಲಿಕಾಯಿ ಉಪ್ಪು ಸೇರಿದಂತೆ ಬದುಕು ಎಂಬ ತೂಗುಯ್ಯಾಲೆಯಲ್ಲಿ ನಾವಿದ್ದೇವೆ' ಎಂಬ ಸಾಲುಗಳನ್ನು ಬರೆದೆ. ಎಲ್ಲಿಂದಲೋ ಅಕ್ಕನ (ಕಿನ್ನಿದಾರು) ಬಳಿಗೆ ಬರುವ ಸಹೋದರರಿಗೆ (ಕೋಟಿ–ಚೆನ್ನಯ) ಕರಾವಳಿಯ ಸಂಸ್ಕೃತಿಯಂತೆ ಕುಡಿಯಲು ಎಳನೀರು, ಸ್ನಾನಕ್ಕೆ ಎಣ್ಣೆ, ಬಿಸಿನೀರು, ದೇಸಿ ದನದ ಮಂದಹಾಲು ನೀಡುವ ಚಿತ್ರಣ ಹಾಡಿನಲ್ಲಿದೆ' ಎಂದು ವಿವೇಕ ರೈ ವಿವರಿಸುತ್ತಾರೆ.

ಬೇರೆಯೂ ಉಂಟು

ಆದರೆ, ವಿಕ್ರಾಂತ್ ರೋಣದ ಎಕ್ಕಸಕ್ಕ ಹಾಡಿನಲ್ಲಿ, ಎಲ್ಲಿಂದಲೋ ಕರಾವಳಿಯ ಸಮುದ್ರ ಬಳಿಯ ಕುದ್ರು (ದ್ವೀಪ) ಮಧ್ಯದ ಗಡಂಗ್ (ಶೇಂದಿ ಅಂಗಡಿ) ರಕ್ಕಮ್ಮ ಬಳಿ ಬರುವ ನಾಯಕನಿಗೆ ಕರಾವಳಿಯಲ್ಲಿ ದೊರೆಯುವ ಮತ್ತೊಂದು ಆತಿಥ್ಯವನ್ನು ಪರಿಚಯಿಸಲಾಗಿದೆ. ಅದರ ಮತ್ತೇ ಬೇರೆ. ಈಗಾಗಲೇ 'ಎಕ್ಕಸಕ್ಕ' ಹಾಡು ಎಲ್ಲೆಡೆ ಮತ್ತು ಬರಿಸುತ್ತಿದೆ.

ಸಹೋದರರು ಬಳಿಗೆ ಬರುವ ಸಂಭ್ರಮಕ್ಕೆ 50 ವರ್ಷಗಳ ಹಿಂದಿನ ಕೋಟಿ–ಚೆನ್ನಯ ತುಳು ಸಿನಿಮಾದಲ್ಲಿ 'ಎಕ್ಕಸಕ್ಕ' ಬಳಸಿದ್ದರೆ, ವಿಕ್ರಾಂತ್ ರೋಣದಲ್ಲಿ ಎಲ್ಲಿಂದಲೋ ಕರಾವಳಿಗೆ ನಾಯಕ ಬರುವ ಸಂದರ್ಭದ ಉತ್ಸಾಹಕ್ಕೆ ಸಖತ್ ಆಗಿಯೇ ಬಳಸಲಾಗಿದೆ. ಇದೆಂತಹ ಎಕ್ಕಸಕ್ಕ!

ಭಾಷೆಯ ದೇಸೀತನ...

'ಐವತ್ತು ವರ್ಷಗಳ ಹಿಂದೆ ನಗರೀಕರಣದ ಸೋಂಕು ತಗುಲದ ಪುತ್ತೂರು ಸೀಮೆಗೆ ಮಂಗಳೂರು ಕೂಡಾ ಅಕ್ಷರಶಃ ದುಬೈಯ ಹಾಗಿತ್ತು. ಆ ಪ್ರದೇಶವೇ ಒಂದು ರೀತಿಯಲ್ಲಿ ದ್ವೀಪದಂತೆ. ದೂರದ ಊರಿಗೆ ಇಲ್ಲಿಂದ ಹೆಣ್ಣು ಕೊಡಲೂ ಲೆಕ್ಕ (ಯೋಚಿಸು) ಹಾಕುತ್ತಿದ್ದರು. ಇದರಿಂದಾಗಿ ಇಲ್ಲಿನ ಭಾಷೆಯಲ್ಲಿ ಸಾಕಷ್ಟು ದ್ರಾವಿಡ ಪದಗಳು ಇದ್ದವು. ಇಂತಹ ತನ್ನತನ ಉಳಿಸಿಕೊಂಡ ಹಲವು ಪ್ರದೇಶಗಳು ಇರಬಹುದು. ಆದರೆ, ಈಗ ಇರಬಹುದೇ ಎಂಬುದನ್ನು ದೃಢಪಡಿಸುವುದು ಕಷ್ಟ' ಎನ್ನುತ್ತಾರೆ ಪ್ರೊ. ಬಿ.ಎ ವಿವೇಕ ರೈ.

'ವಿಕ್ರಾಂತ್ ರೋಣದಲ್ಲೂ ನಾಯಕ ಕುದ್ರು (ದ್ವೀಪ) ಪ್ರದೇಶಕ್ಕೆ ಭೇಟಿ ನೀಡಿದಾಗಲೇ ಆತನಿಗೆ 'ಎಕ್ಕಸಕ್ಕ' ಎದುರಾಗುತ್ತದೆ' ಎನ್ನುತ್ತಾರೆ ಅನೂಪ್ ಭಂಡಾರಿ.

ಅಳಿವಿನಂಚಿನಲ್ಲಿರುವ ಸಸ್ಯ ಪ್ರಭೇದಗಳಿಗೆ ಅಂಗಾಂಶ ಕಸಿ ಮೂಲಕ ಪ್ರಯೋಗಾಲಯದೊಳಗೇ ಮರು ಜೀವ (ಮೊದಲ ಚಿತ್ರ). ಕಾನ್ಹಾ ಶಾಂತಿವನದೊಳಗೆ ಅಲ್ಲಲ್ಲಿ ಕಾಣಸಿಗುತ್ತವೆ ಇಂತಹ ಕೆರೆಗಳು

ನಿತ್ಯ ಹೃದಯಪೂರ್ಣ ಅರಣ್ಯ!

8ನೇ ಪುಟದಿಂದ...

ಹಿಮಾಲಯ ಪ್ರದೇಶದಲ್ಲಿ ಬೆಳೆಯುವ ಕೇಸರಿ ಬೆಳೆಗೆ ಕೂಡ ಇಲ್ಲಿ ಸೂಕ್ತ ವಾತಾವರಣವನ್ನು ಸೃಷ್ಟಿಸಿ ಬೆಳೆಯಲಾಗುತ್ತಿದೆ. ಇಲ್ಲಿನ ಮಳೆ ಕಾಡಿನಲ್ಲಿ ಪಶ್ಚಿಮಘಟ್ಟದ ಬಹುತೇಕ ಸಸ್ಯಗಳು ಇವೆ. ಪಶ್ಚಿಮಘಟ್ಟದಲ್ಲಿ ವರ್ಷದ 365 ದಿನ ಮಳೆ ಬರಲಿಕ್ಕಿಲ್ಲ. ಆದರೆ ಮಳೆಗಾಲದಲ್ಲಿ ಬಂದ ಮಳೆಯ ಲಾಭ ಅಲ್ಲಿನ ಸಸ್ಯಗಳಿಗೆ ಸಿಗುತ್ತದೆ. ಅದೇ ವಾತಾವರಣವನ್ನೂ ಇಲ್ಲಿ ಸೃಷ್ಟಿಸಲಾಗಿದೆ. ಅದಕ್ಕಾಗಿಯೇ ಇಲ್ಲಿನ ಮಣ್ಣಿನ ಗುಣಮಟ್ಟ ಕೂಡ ಚೆನ್ನಾಗಿದೆ. ಮಳೆ ಬಂದೂಕುಗಳನ್ನು ಬಳಸಿ ಮಳೆ ಕಾಡಿಗೆ ಮಳೆ ಸಿಂಪಡಿಸುವ ವ್ಯವಸ್ಥೆಯೂ ಇಲ್ಲಿದೆ. ಆ ಮೂಲಕ ಇಲ್ಲಿಯೂ ಮಲೆನಾಡಿನ ವಾತಾವರಣವನ್ನೇ ಸಹಜವಾಗಿ ಸೃಷ್ಟಿಸಲಾಗಿದೆ. 'ನಾವು ಎಲ್ಲ ದಿನ ನೀರು ಕೊಡುವುದಿಲ್ಲ. ಇಲ್ಲಿ ಅಭಿವೃದ್ಧಿಪಡಿಸಲಾದ ಮಳೆ ಕಾಡಿನ ಪ್ರದೇಶದಲ್ಲಿ ಬೇಸಿಗೆಯ ಸಮಯದಲ್ಲಿ ಮಾತ್ರ 2–3 ಮಳೆ ಬಂದೂಕುಗಳನ್ನು ಬಳಸಿ ಸಂಜೆಯ ವೇಳೆಗೆ 5ರಿಂದ 10 ನಿಮಿಷ ಮಳೆ ಸುರಿಸಲಾಗುತ್ತದೆ. ಮಳೆ ಕಾಡಿಗೆ ಇಷ್ಟು ಸಾಕು. ಅದು ತನ್ನ ವ್ಯವಸ್ಥೆಯನ್ನು ತಾನೇ ಮಾಡಿಕೊಳ್ಳುತ್ತದೆ' ಎಂದು ದಾಜಿ ಹೇಳುತ್ತಾರೆ.

ಸಸ್ಯಗಳನ್ನು ಉಳಿಸಿಕೊಳ್ಳುವುದಕ್ಕೆ ಹನಿ ನೀರಾವರಿ, ತುಂತುರು ನೀರಾವರಿಯ ವ್ಯವಸ್ಥೆ ಕೂಡ ಇಲ್ಲಿದೆ. ಯಾವ ಸಸ್ಯಕ್ಕೆ ಯಾವ ವಾತಾವರಣ ಬೇಕು ಎಂದು ಗ್ರಹಿಸಿ ಅದೇ ವಾತಾವರಣವನ್ನು ಸೃಷ್ಟಿಸಿ ಬೆಳೆಸುವುದು ಇಲ್ಲಿನ ಹೆಚ್ಚುಗಾರಿಕೆ. ಹೂವು, ಹಣ್ಣಿನ ಗಿಡಗಳು ನಿಮ್ಮ ಮೈಮನವನ್ನು ಆಹ್ಲಾದಗೊಳಿಸುತ್ತವೆ. ಆಯಾ ಕಾಲಕ್ಕೆ ತಕ್ಕಂತೆ ಹೂವುಗಳು ಬಿಡುತ್ತವೆ. ಹಣ್ಣುಗಳೂ ಬಿಡುತ್ತವೆ. ಇಲ್ಲಿ ಎಲ್ಲವೂ ಸಹಜ ಕೃಷಿ. ಆದರೆ ಎಲ್ಲವೂ ವೈಜ್ಞಾನಿಕ. ಅದು ನೀರು ಉಳಿಸುವುದಿರಲಿ, ಸಸ್ಯ ಪಾಲನೆ ಇರಲಿ, ನೀರು ಶುದ್ಧೀಕರಣ ಇರಲಿ, ಅಡುಗೆ ಮನೆ ಇರಲಿ, ಸೌರಶಕ್ತಿ ಬಳಕೆ ಇರಲಿ ಎಲ್ಲವೂ ಅಚ್ಚುಕಟ್ಟು. ಒಂದರ್ಥದಲ್ಲಿ ಇಲ್ಲಿ ವಿಜ್ಞಾನ ಪರಿಸರದೊಂದಿಗೆ ಲೀನವಾಗಿದೆ.

ನೀರು ಬಂತು. ಸಸ್ಯಗಳೂ ಬೆಳೆದವು. ಅಷ್ಟಾದ ಮೇಲೆ ಯಾರೂ ಕರೆಕೊಡದೇ ಹೋದರೂ ಹಕ್ಕಿಗಳು ಬಂದು ನೆಲೆಸಿದವು. 'ಮೊದಲು ಇಲ್ಲಿ ಕೇವಲ ಕಾಗೆಗಳಿದ್ದವು. ಬಹಳ ಅಪರೂಪಕ್ಕೆ ಒಂದೋ ಎರಡೋ ಪಾರಿವಾಳಗಳು ಕಾಣಿಸಿಕೊಳ್ಳುತ್ತಿದ್ದವು. ಆದರೆ ಈಗ ಇಲ್ಲಿ ಪಕ್ಷಿಗಳ ಹಿಂಡೇ ಇದೆ. ಅಪರೂಪದ ಪಕ್ಷಿಗಳೂ ಇಲ್ಲಿ ಕಾಣಸಿಗುತ್ತವೆ. ಒಂದು ಅಂದಾಜಿನ ಪ್ರಕಾರ 150 ಜಾತಿಯ ಪಕ್ಷಿಗಳು ಇಲ್ಲಿವೆ' ಎಂದು ದಾಜಿ ಹೇಳುತ್ತಾರೆ. ಇದರ ಜೊತೆಗೆ ಪ್ರಾಣಿಗಳೂ ಬಂದವು. ಈಗ ಇದೊಂದು ಜೀವವೈವಿಧ್ಯದ ತಾಣವೇ ಆಗಿಬಿಟ್ಟಿದೆ. ಮುಂಜಾನೆ ಅಥವಾ ಸಂಜೆ ನೀವು ಇಲ್ಲಿ ಧ್ಯಾನಕ್ಕೆ ಕುಳಿತರೆ ತರಾವರಿ ಪಕ್ಷಿಗಳ ಕೂಗನ್ನು ಕೇಳಬಹುದು. ಇತರ ಕಾಡು ಪ್ರಾಣಿಗಳನ್ನೂ ಗುರುತಿಸಬಹುದು. ಹಾರ್ಟ್‌ಫುಲ್‌ನೆಸ್ ಧ್ಯಾನಕ್ಕೆ ಒಲಿದು ದೇಶ ವಿದೇಶಗಳಿಂದ ಜನರು ಇಲ್ಲಿಗೆ ಬರುವ ಹಾಗೆಯೇ ಪಕ್ಷಿಗಳೂ ಕೂಡ ಎಲ್ಲೆಲ್ಲಿಂದಲೋ ಇಲ್ಲಿಗೆ ಬಂದು ತಮ್ಮ ಸಂತತಿ ಹೆಚ್ಚಿಸಿಕೊಳ್ಳುತ್ತಿವೆ.

ಈ ಆಶ್ರಮದಲ್ಲಿ ಧ್ಯಾನದ ಪಾಠದ ಜೊತೆಗೆ ನೀರಿನ ಪಾಠ, ಸಸ್ಯಗಳ ಪಾಠ ಉಚಿತ ಸಿಗುತ್ತದೆ. ಧ್ಯಾನದ ತಂತ್ರಗಳನ್ನು ಕಲಿಯಲೂ ಇಲ್ಲಿ ಕಾಸು ಕೊಡಬೇಕಿಲ್ಲ. ವಸತಿ, ಊಟ ಎಲ್ಲವೂ ಉಚಿತ. ಜೊತೆಗೆ ಪರಿಸರದೊಂದಿಗೆ ಹೇಗೆ ಹೊಂದಿಕೊಂಡು ಬಾಳಬೇಕು ಎಂದು ಕಲಿಸಿಕೊಡುವುದು ನಿಮಗೊಂದು ಬೋನಸ್.

ಆಶ್ರಮದ ಇನ್ನೊಂದು ಪ್ರಮುಖ ಆಕರ್ಷಣೆ ಎಂದರೆ ಅಂಗಾಂಶ ಕಸಿ (ಟಿಶ್ಯು ಕಲ್ಚರ್) ಪ್ರಯೋಗಾಲಯ. ನಮ್ಮ ದೇಶದಲ್ಲಿ ಅಪಾಯದ ಅಂಚಿನಲ್ಲಿರುವ ಎಲ್ಲ ಸಸ್ಯಗಳ ಬಗ್ಗೆ ಇಲ್ಲಿ ಅಧ್ಯಯನ ನಡೆಸಲಾಗುತ್ತದೆ. ಜೊತೆಗೆ ಅಂಗಾಂಶ ಕಸಿ ಮೂಲಕ ಎಲ್ಲ ಸಸ್ಯಗಳನ್ನು ರಕ್ಷಿಸಲಾಗುತ್ತದೆ. ಅಳಿವಿನ ಅಂಚಿನಲ್ಲಿರುವ ಸಸ್ಯ ಪ್ರಭೇದಗಳನ್ನು ನೂರು, ಸಾವಿರದ ಲೆಕ್ಕದಲ್ಲಿ ಬೆಳೆಸಲಾಗುತ್ತಿದೆ. ಅಳಿವಿನ ಅಂಚಿನಲ್ಲಿರುವ ಸಸ್ಯ ಪ್ರಭೇದದ ಯಾವುದೇ ಭಾಗವನ್ನು ತಂದುಕೊಟ್ಟರೆ ಅದನ್ನು ರಕ್ಷಿಸಿ ಸುರಕ್ಷಿತವಾಗಿ ಬೆಳೆಸಿ ಸಾವಿರಾರು ಸಂಖ್ಯೆಯಲ್ಲಿ ನಿಮಗೆ ವಾಪಸು ನೀಡಲಾಗುತ್ತದೆ. ನಮ್ಮ ದೇಶದ ಯಾವುದೇ ಸಸ್ಯ ನಾಶವಾಗಿ ಹೋಗಬಾರದು ಎನ್ನುವುದು ನಮ್ಮ ಬಯಕೆ ಎಂದು ಇಲ್ಲಿನ ಸ್ವಯಂಸೇವಕರು ಹೇಳುತ್ತಾರೆ. 'ನೀವು ಎಷ್ಟೇ ಸಸ್ಯ ಪ್ರಭೇದಗಳನ್ನು ತಂದುಕೊಡಿ. ನಾವು ಬೆಳೆಸಿ ಕೊಡುತ್ತೇವೆ' ಎಂದೂ ಅವರು ಹೇಳುತ್ತಾರೆ. ಅಂದಹಾಗೆ ನಮ್ಮ ನಂಜನಗೂಡು ರಸಬಾಳೆಯ ಸಾವಿರದ ಕುಡಿಗಳನ್ನು ಇಲ್ಲಿ ಬೆಳೆಸಲಾಗಿದೆ. 'ಅಳಿವಿನ ಅಂಚಿನಲ್ಲಿ ಇರುವ ಸಸ್ಯ ಪ್ರಭೇದಗಳು ಎಂದರೆ ಮುಂದಿನ ಹತ್ತು ವರ್ಷದಲ್ಲಿ ಸಂಪೂರ್ಣವಾಗಿ ಕಾಣೆಯಾಗಿ ಹೋಗಬಹುದಾದ ಸಸ್ಯಗಳನ್ನು ಗುರುತಿಸಿ ಅವುಗಳನ್ನು ಇಲ್ಲಿ ತರಲಾಗಿದೆ ಮತ್ತು ಬೆಳೆಸಲಾಗುತ್ತಿದೆ' ಎಂದು ದಾಜಿ ಮಾಹಿತಿ ನೀಡುತ್ತಾರೆ.

ಮನುಷ್ಯ ಪ್ರಯತ್ನದಿಂದ ಏನನ್ನು ಬೇಕಾದರೂ ಸಾಧಿಸಬಹುದು ಎನ್ನುವುದಕ್ಕೆ ಉದಾಹರಣೆಯಂತೆ ಈ ಆಶ್ರಮ ಇದೆ. ರಾಮಾಯಣದಲ್ಲಿ ಕಾಕಭುಶುಂಡಿ ಆಶ್ರಮದ ಉಲ್ಲೇಖವಿದೆ. ಯಾವುದೇ ಮನುಷ್ಯ ಆ ಆಶ್ರಮದೊಳಕ್ಕೆ ಕಾಲಿಟ್ಟೊಡನೆಯೇ ಆತ ಎಲ್ಲ ಸಮಸ್ಯೆಗಳಿಂದ ಮುಕ್ತಿ ಹೊಂದುತ್ತಾನೆ ಎಂಬ ಐತಿಹ್ಯ ಇದೆ. ಎಲ್ಲ ಸಮಸ್ಯೆಗಳು, ಎಲ್ಲ ಬಂಧನಗಳಿಂದ ಮುಕ್ತಿ ಎಂದರೆ ಸಾವು ಅಲ್ಲ. ಆತ್ಮತೃಪ್ತಿ. ಅಂತಹ ಒಂದು ಸಣ್ಣ ಅನುಭವ ಇಲ್ಲಿಯೂ ನಿಮಗೆ ಆಗಬಹುದು. ಒಮ್ಮೆ ಹೋಗಿ ಬನ್ನಿ. ನೀರಿನ ಪಾಠ, ಪರಿಸರದ ಪಾಠ ಕಲಿತು ಬನ್ನಿ. ಸಂಪರ್ಕಕ್ಕೆ ನಿತಿನ್ 9686055448.

ರಾಮಚಂದ್ರ ಮಿಷನ್ನಿನ ಸ್ಥಾಪಕ ಬಾಬುಜಿ ಅವರ ಸ್ಮಾರಕ...ನಿರ್ಮಾಣದ ಮುನ್ನ ಹಾಗೂ ನಂತರ

ಮುನ್ನೋಟ 03-07-2022 ರಿಂದ 09-07-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಕೆಲವರಿಗೆ ರಾಜಕೀಯದಲ್ಲಿ ಸೂಕ್ತ ಸ್ಥಾನಮಾನ ದೊರೆಯುವ ಸಾಧ್ಯತೆ ಇದೆ. ನಿಮ್ಮ ಸಿಡುಕುತನದ ಸ್ವಭಾವದಿಂದ ಹಿರಿಯ ನಾಯಕರುಗಳಿಂದ ದೂರವಾಗುವ ಸಾಧ್ಯತೆ ಇದೆ, ಎಚ್ಚರ. ಹಣದ ಹರಿವು ಅಗತ್ಯಕ್ಕೆ ತಕ್ಕಷ್ಟು ಇರುತ್ತದೆ. ಅವರಿವರ ಮಾತು ಕೇಳಿ ಬೇರೆಯವರನ್ನು ನಿಂದಿಸುವುದರಿಂದ ನಿಮಗೇ ಹಾನಿ. ಉನ್ನತ ವ್ಯಾಸಾಂಗಕ್ಕೆ ವಿದೇಶಕ್ಕೆ ಹೋಗಬೇಕೆಂದು ಇರುವವರಿಗೆ ಅವಕಾಶ ದೊರೆತು ಸಂತಸವಾಗುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಮಕ್ಕಳ ಶ್ರೇಯಸ್ಸಿಗಾಗಿ ಅಧಿಕಾರಿಗಳ ಮೊರೆ ಹೋಗುವ ಸಾಧ್ಯತೆ ಇದೆ. ಗುತ್ತಿಗೆ ವ್ಯವಹಾರವನ್ನು ಮಾಡುತ್ತಿರುವವರಿಗೆ ಹೊಸಗುತ್ತಿಗೆಗಳು ದೊರೆಯುವ ಸಂದರ್ಭವಿದೆ. ಉದ್ಯೋಗ ಸ್ಥಳದಲ್ಲಿ ಸಹೋದ್ಯೋಗಿಗಳೊಡನೆ ಇದ್ದ ಮನಃಸ್ತಾಪ ದೂರವಾಗುತ್ತದೆ. ಉದ್ದಿಮೆದಾರರು ಯಂತ್ರೋಪಕರಣಗಳ ಖರೀದಿಗಾಗಿ ಹಣ ಹೂಡುವ ಸಂದರ್ಭವಿದೆ. ಅಧಿಕಾರಿಗಳ ಸಹಕಾರ ದೊರೆತು ಉದ್ದಿಮೆಯಲ್ಲಿ ಯಶಸ್ಸನ್ನು ಕಾಣುವಿರಿ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಮನಸ್ಸಿನಲ್ಲಿ ಹೆಚ್ಚಿನ ಹುಮ್ಮಸ್ಸು ತುಂಬಿ ಕೆಲಸ ಕಾರ್ಯ ಮಾಡಲು ಮುಂದಡಿ ಇಡುವಿರಿ. ಹೊಸ ವಸ್ತ್ರಗಳನ್ನು ಖರೀದಿ ಮಾಡಲು ಮುಂದಾಗುವಿರಿ. ಆಸ್ತಿ ವಿಚಾರಗಳ ಬಗ್ಗೆ ಬಂಧುಗಳಲ್ಲಿ ಒಮ್ಮತ ಮೂಡಿ ಆಸ್ತಿ ವಿಭಾಗವಾಗುವುದು. ಹಣದ ಒಳಹರಿವು ಸಾಮಾನ್ಯವಾಗಿರುತ್ತದೆ. ಅಪರೂಪದ ವ್ಯಕ್ತಿಯೊಬ್ಬರನ್ನು ಭೇಟಿಯಾಗಿ ನಿಮ್ಮ ವ್ಯವಹಾರದಲ್ಲಿ ಹೊಸ ರೀತಿಯ ತಿರುವನ್ನು ಕಾಣುವಿರಿ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಕಟ್ಟಡ ನಿರ್ಮಾಣ ಕಾರ್ಯ ಮಾಡುವ ಎಂಜಿನಿಯರುಗಳಿಗೆ ಹೆಚ್ಚಿನ ಬೇಡಿಕೆ ಬರುತ್ತದೆ. ವಸ್ತ್ರ ವಿನ್ಯಾಸಕಾರರಿಗೆ ಬೇಡಿಕೆ ಇರುತ್ತದೆ. ಹಣಕಾಸಿನ ವಿಚಾರದಲ್ಲಿ ಹೆಚ್ಚಿನ ಚೇತರಿಕೆಯನ್ನು ಕಾಣಬಹುದು. ಖರ್ಚನ್ನು ಮಿತಿಯಲ್ಲಿ ಇಟ್ಟುಕೊಳ್ಳುವುದು ಬಹಳ ಉತ್ತಮ. ಕಬ್ಬಿಣದ ವ್ಯಾಪಾರಿಗಳಿಗೆ ಹೆಚ್ಚಿನ ಪ್ರಗತಿ ಇರುತ್ತದೆ. ಸರ್ಕಾರಿ ಕಚೇರಿಯ ಕೆಲಸಗಳಲ್ಲಿ ಸ್ವಲ್ಪಮಟ್ಟಿನ ಹಿನ್ನಡೆಯನ್ನು ಕಾಣಬಹುದು.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಪ್ರೀತಿಪಾತ್ರರೊಂದಿಗೆ ಸಂತೋಷ ಕೂಟಗಳಲ್ಲಿ ಭಾಗವಹಿಸುವಿರಿ. ಹೊಸ ಭಾಷೆಗಳನ್ನು ಕಲಿಯಲು ಹೊಸ ರೀತಿಯ ಆಸಕ್ತಿ ಮೂಡುತ್ತದೆ. ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವವರಿಗೆ ಅಲ್ಪಸ್ವಲ್ಪ ಕಾನೂನು ತೊಡಕುಗಳು ಎದುರಾಗಬಹುದು. ಒಟ್ಟು ಕುಟುಂಬದ ವ್ಯವಹಾರಗಳಲ್ಲಿ ಆದಾಯ ಹೆಚ್ಚಾಗಿ ಇರುತ್ತದೆ. ಯಾವುದೇ ಕೆಲಸ ಮಾಡುವ ಮೊದಲು ಅದರ ಬಗ್ಗೆ ತಿಳಿಯಿರಿ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಬಾಲ್ಯ ಸ್ನೇಹಿತರೊಂದಿಗೆ ಕೂಡಿ ಹಳೆಯ ನೆನಪುಗಳನ್ನು ಹಂಚಿಕೊಳ್ಳುವ ಸಂದರ್ಭವಿದೆ. ತಾಂತ್ರಿಕ ವಿದ್ಯಾರ್ಥಿಗಳಿಗೆ ಹೆಚ್ಚಿನ ಅವಕಾಶಗಳು ಒದಗಿಬರುವ ಸಾಧ್ಯತೆ ಇದೆ. ಸರ್ಕಾರಿ ಸಂಸ್ಥೆಗಳೊಂದಿಗೆ ವ್ಯಾಪಾರ ವ್ಯವಹಾರ ಮಾಡುತ್ತಿರುವವರ ವ್ಯವಹಾರಗಳು ಹೆಚ್ಚುತ್ತವೆ. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ. ಖರ್ಚನ್ನು ನಿಭಾಯಿಸದೇ ಹೋದಲ್ಲಿ ಸಾಲ ಮಾಡಬೇಕಾದ ಪರಿಸ್ಥಿತಿ ಎದುರಾಗಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಕಟ್ಟಡ ನಿರ್ಮಾಣ ಕೆಲಸಗಾರರಿಗೆ ಹೆಚ್ಚಿನ ಜಾಗರೂಕತೆಯ ಅಗತ್ಯತೆ ಇದೆ. ಸಾಮಾಜಿಕವಾಗಿ ಗೌರವಗಳು ಕಡಿಮೆಯಾಗಬಹುದು. ವ್ಯಾಪಾರ ಮತ್ತು ವ್ಯವಹಾರಗಳಲ್ಲಿ ಸ್ವಲ್ಪಮಟ್ಟಿನ ಪ್ರಗತಿ ಇರುತ್ತದೆ. ಕೆಲವರಿಗೆ ಉದ್ಯೋಗ ಸ್ಥಳದಲ್ಲಿ ಒತ್ತಡ ಹೆಚ್ಚಾಗುವ ಸಾಧ್ಯತೆ ಇದೆ. ಧಾರ್ಮಿಕ ಕಾರ್ಯಗಳಿಂದ ಸಂಪಾದನೆ ಆಗುತ್ತದೆ. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹೆಚ್ಚಿನ ಚರ್ಚೆ ಆಗಬಹುದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಕೈಬಿಟ್ಟು ಹೋಗಿದ್ದ ಹಿರಿಯರ ಆಸ್ತಿಯನ್ನು ಪುನಃ ಪಡೆಯಬಹುದು. ಯಾವುದೇ ವಿಷಯದಲ್ಲೂ ಅತಿಯಾದ ಉದ್ವೇಗವನ್ನು ಮಾಡಿಕೊಳ್ಳದಿರುವುದು ಬಹಳ ಉತ್ತಮ. ಹಣದ ಒಳಹರಿವು ಸಾಮಾನ್ಯಗತಿಯಲ್ಲಿ ಇರುತ್ತದೆ. ಸಿಮೆಂಟು, ಮರಳು ಇತ್ಯಾದಿ ಕಟ್ಟಡ ನಿರ್ಮಾಣ ವಸ್ತುಗಳನ್ನು ಮಾರಾಟ ಮಾಡುವವರ ಲಾಭ ಹೆಚ್ಚುತ್ತದೆ. ವಿದೇಶಿ ಕಂಪನಿಗಳ ಮೇಲೆ ಈಗ ಬಂಡವಾಳವನ್ನು ಹೂಡುವುದು ಹೆಚ್ಚಿನ ನಷ್ಟಕ್ಕೆ ಕಾರಣವಾಗಬಹುದು.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ರಾಸಾಯನಿಕ ವಸ್ತುಗಳನ್ನು ಮಾರಾಟ ಮಾಡುವವರಿಗೆ ಹೆಚ್ಚಿನ ಲಾಭವಿರುತ್ತದೆ. ಹತ್ತಿರದ ಬಂಧುಗಳೊಡನೆ ಸುದೀರ್ಘ ಸಮಾಲೋಚನೆಯಿಂದ ಕಾರ್ಯಸಿದ್ಧಿ ಆಗುತ್ತದೆ. ಕೆಲವು ಮಹಿಳೆಯರ ಆಸೆ ಆಕಾಂಕ್ಷೆಗಳು ಈಡೇರಬಹುದು. ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳ ಹಿರಿಯ ಅಧಿಕಾರಿಗಳಿಗೆ ವರ್ಗಾವಣೆಯ ಸಾಧ್ಯತೆಯಿದೆ. ಹವ್ಯಾಸಿ ಬರಹಗಾರರಿಗೆ ಸೂಕ್ತ ಗೌರವ ದೊರೆಯುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ವ್ಯಾಪಾರ-ವ್ಯವಹಾರಗಳಲ್ಲಿ ಸ್ವಲ್ಪಮಟ್ಟನ ಲಾಭವನ್ನು ಕಾಣಬಹುದು. ಬಹಳ ದಿನಗಳಿಂದ ನೀವು ನಿರೀಕ್ಷಿಸುತ್ತಿದ್ದ ಸಮಾಚಾರ ಕೇಳಿಬಂದು ಮನಸ್ಸಿನಲ್ಲಿ ಇದ್ದ ದುಗುಡಗಳು ಮರೆಯಾಗುತ್ತವೆ. ವೈದ್ಯರುಗಳಿಗೆ ಹೆಚ್ಚು ಸಂಪಾದನೆಯಾಗುವ ಕಾಲ. ಔಷಧಿಗಳನ್ನು ತಯಾರಿಸುವ ಕಂಪನಿಗಳಿಗೆ ಲಾಭ ಹೆಚ್ಚುತ್ತದೆ. ನಿಮ್ಮ ಕೆಲಸಗಳಿಗೆ ಸಹೋದರರಿಂದ ಸಹಾಯ ದೊರೆಯುವ ಸಾಧ್ಯತೆಗಳಿವೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಈ ರಾಶಿಯ ಮಕ್ಕಳು ಮತ್ತು ಯುವಕರು ವಿನಾಕಾರಣ ವಾದವಿವಾದಗಳಲ್ಲಿ ಸಿಲುಕಿಕೊಳ್ಳುವ ಸಾಧ್ಯತೆಯಿದೆ. ಆಸ್ತಿ ವಿಚಾರದಲ್ಲಿ ಮುನ್ನಡೆಯನ್ನು ಕಾಣಬಹುದು. ಪ್ರವಚನಗಳನ್ನು ನೀಡಲು ದೇವಾಲಯ ಅಥವಾ ಧಾರ್ಮಿಕ ಸಂಸ್ಥೆಗಳಿಗೆ ಹೋಗುವಿರಿ. ವಿದ್ಯಾರ್ಥಿಗಳಿಗೆ ಆಟಪಾಠಗಳಲ್ಲಿ ಹೆಚ್ಚಿನ ಆಸಕ್ತಿ ಮೂಡುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ತಾಯಿಯ ಆರೋಗ್ಯದಲ್ಲಿ ಸ್ವಲ್ಪ ವ್ಯತ್ಯಾಸವನ್ನು ಕಾಣಬಹುದು. ವಿದೇಶಿ ಬಂಧುಗಳ ಆಗಮನವನ್ನು ನಿರೀಕ್ಷೆ ಮಾಡಬಹುದು. ನಿತ್ಯ ಕೆಲಸದ ಜೊತೆಗೆ ಸಂಸಾರದ ಕಡೆಗೂ ಗಮನ ಕೊಡುವುದು ಅತಿ ಅಗತ್ಯ. ಅನಿರೀಕ್ಷಿತ ಪ್ರಯಾಣ ಸಂಭವಿಸಿ ಹೆಚ್ಚು ಖರ್ಚಿಗೆ ನಾಂದಿಯಾಗಬಹುದು. ವ್ಯಾಪಾರ ವ್ಯವಹಾರಗಳು ಸಾಮಾನ್ಯ ಸ್ಥಿತಿಯಲ್ಲಿರುತ್ತವೆ. ಸಹೋದ್ಯೋಗಿಗಳೊಡನೆ ನಿಷ್ಠುರ ಎಂದಿಗೂ ಬೇಡ.

ಪದಬಂಧ 2745



ಮೇಲಿನಿಂದ ಕೆಳಕ್ಕೆ

1. ಚಲನೆಯ ಅಂತರದಿಂದ ಉಂಟಾದ ಅನಿವಾರ್ಯ 4
2. ಕಾಲದೇವನ ಮಗ ಧರ್ಮರಾಯ 4
3. ಕೈ ಮೇಲೆ ಕೋಲಾಡಿಸಿ ಕಣಿ ಹೇಳುವವಳು 4
4. ಸದಾ ಮಾತಿನ ಪ್ರವಾಹ ಹರಿಸುವ ಪಕ್ಕದ ಗೃಹ 4
7. ಉಘೇ ನಮ್ಮ ರಾಷ್ಟ್ರ ದೇವಿಗೆ 5
8. ವಿಶ್ವ ವಿತ್ತ ಮಾರುಕಟ್ಟೆಯಲ್ಲಿ ನಮ್ಮ ನಾಣ್ಯಕ್ಕಿರುವ ಬೆಲೆ 5
9. ಎಲ್ಲೆಡೆ ಹರಡುವ ಸುಶ್ರಾವ್ಯ ಸಂಗೀತದ ಪರಿಮಳ 5
10. ನೆಲದ ಗುಣ ಮೈಗೂಡಿಸಿಕೊಂಡ ಪುತ್ರ 5
15. ಯಜ್ಞ ವಿಧಾನಗಳ ಮೊದಲ ಶಾಸ್ತ್ರ 4
16. ಥಟ್ಟನೆ ಕಾಣೆಯಾಗುವ ಥಳುಕಿನ ಅಂಗ ಪಡೆದ ಹೆಣ್ಣು 4
18. ದೈವದತ್ತ ಕಾವ್ಯ ಬ್ರಹ್ಮ 4
19. ಸೊಗಸಾದ ಸುಂದರ ಹಾಡು 4

ಎಡದಿಂದ ಬಲಕ್ಕೆ

1. ಗುಹೇಶ್ವರನನ್ನು ಹೀಗೆ ಕರೆಯಬಹುದೆ? 4
3. ರಸ್ತೆಯ ಕಟ್ಟ ಕಡೆಯಲ್ಲಿರುವ ಗೃಹ 4
5. ಚಾಮರಾಜನಗರದ ಶಿವನ ಬೆಟ್ಟ 5
6. ಭಾರತದ ಇತಿಹಾಸದಲ್ಲಿ ಪರಾಕ್ರಮಕ್ಕೆ ಹೆಸರಾದ ರಾಜಸ್ಥಾನದ ವೀರರು 5
9. ಕಲ್ಲೆಸೆದರೆ ಪುಡಿಯಾಗುವ ಪಾರದರ್ಶಕ ಗೃಹ 5
11. ಪತಿತರಿಗೆ ರಘುಪತಿ ರಾಘವನ ಪುಣ್ಯಲೇಪ 3
12. ಸಿರಿ, ಸಂಪತ್ತು, ಸಮಾಧಾನ ಕೊಡುವವಳು 4
13. ಸೂರ್ಯನಿಂದ ಭೂಮಿಯಲ್ಲಾಗುವ ಬದಲಾವಣೆಯ ಮಾಪನ 4
14. ದಿಢೀರನೆ ಮಕ್ಕಳಿಗೆ ಬರುವ 'ಅಮ್ಮ'ನ ಖಾಯಿಲೆ 5
15. ಸಂನ್ಯಾಸಿಯ ಮಗನಿಗೆ ಮತ್ತೊಂದು ಹೆಸರು 5
17. ಸಂತರು ನುಡಿದಂತೆ ಕಠಿನವೆನಿಸುವ ಸಂಸಾರ ಸಮುದ್ರ 5
20. ಗುಂಪಿನ ಒಡೆಯನೆನಿಸಿಕೊಂಡ ಹೇರಂಬ 5
21. ಉತ್ತರ ಕರ್ನಾಟಕದ ಔಷಧಿ ಮಳಿಗೆ 4
22. ಹೆಣ್ಣು ಮಕ್ಕಳಿಗೆ ಕಷ್ಟದಿಂದ ಬಿಡುಗಡೆ ಕೊಡಿಸುವ ಸಂಸ್ಥೆ 4

ಪದಬಂಧ ಉತ್ತರ -2744

ಮೇಲಿಂದ ಕೆಳಕ್ಕೆ

1. ವರ್ಧಮಾನ 2. ಯಜಮಾನ 3.ಬಾಲಮಂದಿರ 4.ಸುಭಾಷಿತ 7.ರಸದ 8.ಜಟಾಯು 10.ಪರಾಗ 11.ಭಾಷಣ 12.ತಿಲಕಾ 14.ಗದಗ 16.ರಸ್ಪೂರಿ 18.ರವಿಸಂಜಾತ 19.ಜಲಸ 20.ಶರಾವತಿ 21.ಚುನಾಯಿತ 22.ಮುರುಕಲು

ಎಡದಿಂದ ಬಲಕ್ಕೆ

1. ವಲಯ 3.ಬಾರಿಸು 5.ಜಟಿಲ 6.ಭಾಷಾಕಾರ 8.ಜನಧನ 10.ಪರಾಗ 13.ಯುಗಪುರುಷ 15.ಲಕ್ಷ್ಮೀಸಾಗರ 17.ಐರಕಾ 19.ಜಗದೀಶ 21.ಚುರುಮುರಿ 23.ಸಮಭಾವ 24.ಜಾಕಾಯಿ 25.ತಿವಿತ 26.ತಪ್ಪಲು

ಟೀಪೂ: ಚಾರಿತ್ರಿಕ–ಚಿಕಿತ್ಸಕ ನೋಟ

ಮಹತಿ

ಮೈಸೂರಿನ ಇತಿಹಾಸದ ನಿರೂಪಣೆಗೆ ಸಂಬಂಧಿಸಿದಂತೆ ಮತ್ತೆ ಮತ್ತೆ ಕೇಳಿಬರುವ ಹೆಸರು ಪ್ರೊ. ಪಿ.ವಿ. ನಂಜರಾಜ ಅರಸು ಅವರದು. 'ಮೈಸೂರು ನೂರಿನ್ನೂರು ವರ್ಷದ ಹಿಂದೆ', 'ನಾಲ್ವಡಿ ಕೃಷ್ಣರಾಜ ಒಡೆಯರ್ – ಒಂದು ದರ್ಶನ', 'ಮರೆಯಲಾರದ ಮಹಾಚೇತನ ನಾಲ್ವಡಿ ಕೃಷ್ಣರಾಜ ಒಡೆಯರ್', 'ಕನ್ನಂಬಾಡಿ ಕಟ್ಟೆಯ ಆತ್ಮಕಥೆ' – ಇವು, ನಂಜರಾಜ ಅರಸು ಅವರ ಕೆಲವು ಸಂಶೋಧನಾ ಕೃತಿಗಳು. ಈ ಸಾಲಿಗೆ ಹೊಸ ಸೇರ್ಪಡೆ, 'ಟೀಪೂ: ಮಾನ್ಯತೆ ಸಿಗದ ಸುಲ್ತಾನ್ ಅಂದು–ಇಂದು.'

ಟೀಪೂ ಕೃತಿ ರಚನೆಗೆ ಸಂಬಂಧಿಸಿದಂತೆ ಲೇಖಕರಿಗೆ ಎರಡು ಸ್ಪಷ್ಟ ಉದ್ದೇಶಗಳಿವೆ. ಒಂದು, ಟೀಪೂ ಸುಲ್ತಾನನ ವ್ಯಕ್ತಿತ್ವ ಮತ್ತು ಸಾಧನೆಗೆ ಸಂಬಂಧಿಸಿದಂತೆ ರೂಪುಗೊಂಡಿರುವ ಆರೋಪಗಳು ಪೊಳ್ಳು ಎನ್ನುವುದನ್ನು ಸಾಬೀತುಪಡಿಸುವುದು. ಎರಡನೆಯದು, ಮೈಸೂರಿನ ಸರ್ವಾಧಿಕಾರಿಯಾಗಿದ್ದರೂ ತನ್ನ ಪ್ರಭುತ್ವಕ್ಕೆ ಅಧಿಕೃತ ಮಾನ್ಯತೆ ಇಲ್ಲದೆಹೋದ ಸಂಗತಿ ಟೀಪೂವನ್ನು ಒಳಗೊಳಗೆ ಬಾಧಿಸುತ್ತಿತ್ತು ಎನ್ನುವುದರ ಬಗ್ಗೆ ಸಹೃದಯರ ಗಮನಸೆಳೆಯುವುದು. ಟೀಪೂವಿಗೆ ತನ್ನ ಜೀವಿತ ಕಾಲದಲ್ಲಿ ಸಿಗಬೇಕಾದ ಮಾನ್ಯತೆ, ಪ್ರಸ್ತುತ ಕೂಡ ದೊರೆಯದೆ ಹೋಗಿರುವ ಚಾರಿತ್ರಿಕ ವ್ಯಂಗ್ಯ ಹಾಗೂ ಸಮಕಾಲೀನ ರಾಜಕಾರಣದ ಬಗ್ಗೆ ಗಮನಸೆಳೆಯುವ ಈ ಕೃತಿ, ಟೀಪೂವಿನ ಘನತೆಯನ್ನು ಎತ್ತಿಹಿಡಿಯುವ ಹಾಗೂ ಆತನನ್ನು ದುರಂತ ನಾಯಕನನ್ನಾಗಿ ಚಿತ್ರಿಸುವ ಪ್ರಯತ್ನ ಮಾಡುತ್ತದೆ.

ಈವರೆಗಿನ ತಲೆಮಾರುಗಳು ಓದಿಕೊಂಡು ಬಂದ ಚರಿತ್ರೆಯ ಪಠ್ಯಗಳು ಕಟ್ಟಿಕೊಟ್ಟಿರುವುದು 'ಮೈಸೂರು ಹುಲಿ ಟೀಪೂ ಸುಲ್ತಾನ' ಎನ್ನುವ ಚಿತ್ರವನ್ನು. ಈಗಿನ ತಲೆಮಾರು ಓದುತ್ತಿರುವುದು 'ಟೀಪೂ ಸುಲ್ತಾನ ಎನ್ನುವ ಮುಸ್ಲಿಮನನ್ನು.' ಧರ್ಮದ ಕನ್ನಡಕವನ್ನು ತೊಟ್ಟಾಗ ಓದಿನ ರೀತಿ ಬದಲಾಗುವುದನ್ನು ಲೇಖಕರು ಸೂಚಿಸುತ್ತಾರೆ. ಮುಸ್ಲಿಮನಾದ ಕಾರಣಕ್ಕೆ ತನ್ನ ಜೀವಿತ ಕಾಲದಲ್ಲಿ ಸಾಮಾಜಿಕ–ರಾಜತಾಂತ್ರಿಕ ಸಂಘರ್ಷಗಳನ್ನು ಎದುರಿಸಬೇಕಾದ ಟೀಪೂ, ವರ್ತಮಾನದಲ್ಲೂ ತನ್ನ ಧರ್ಮದ ಕಾರಣಕ್ಕಾಗಿಯೇ ವಿರೂಪಗೊಳ್ಳುತ್ತಿರುವುದನ್ನು ಕೃತಿ ಚರ್ಚಿಸುತ್ತದೆ. 'ಟೀಪೂ ಜಯಂತಿ' ಆಚರಣೆ ಆರಂಭಗೊಳ್ಳದೆ ಹೋಗಿದ್ದಿದ್ದರೆ ಟೀಪೂ ದ್ವೇಷವೂ ಶುರುವಾಗುತ್ತಿರಲಿಲ್ಲವೇನೋ ಎನ್ನುವ ಚಿಂತನೆ, ಟೀಪೂ ರಾಜಕಾರಣದ ದಾಳವಾಗಿ ಬಳಕೆಯಾಗುತ್ತಿರುವುದರ ಬಗ್ಗೆ ಗಮನಸೆಳೆಯುತ್ತದೆ.

ದುರಂತ ನಾಯಕನನ್ನಾಗಿ ಟೀಪೂವನ್ನು ಚಿತ್ರಿಸುವಾಗ ಲೇಖಕರ ಬರವಣಿಗೆ ಕೆಲವೊಮ್ಮೆ ಭಾವುಕವಾಗುತ್ತದೆ. ಆದರೆ, ತಮ್ಮ ವಾದಸರಣಿಗೆ ಸಾಕಷ್ಟು ಪುಷ್ಟಿಯನ್ನು ಒದಗಿಸಿರುವುದು, ದೇಸಿ ಮತ್ತು ವಿದೇಶಿ ಲೇಖಕರ ಬರಹಗಳನ್ನು ದಾಖಲೆಗಳಾಗಿ ನೀಡಿರುವುದು ಪುಸ್ತಕಕ್ಕೆ ವಸ್ತುನಿಷ್ಠ ಗುಣ ತಂದುಕೊಟ್ಟಿದೆ.



ಟೀಪೂ ಮಾನ್ಯತೆ ಸಿಗದ ಸುಲ್ತಾನ್ ಅಂದು–ಇಂದು
ಲೇ: ಪ್ರೊ. ಪಿ.ವಿ. ನಂಜರಾಜ ಅರಸು
ಪ್ರ: ಅಭಿರುಚಿ ಪ್ರಕಾಶನ, ಮೈಸೂರು
ಸಂ: 9980560013
ಪು: 504 ₹600

ಹೈದರಾಲಿ ಮತ್ತು ಟೀಪೂ ರಾಜ್ಯಾಡಳಿತ ಸುಮಾರು ನಾಲ್ಕು ದಶಕಗಳ ಅವಧಿಯದು. ಈ ಪುಟ್ಟ ಅವಧಿಯಲ್ಲೇ ವಿಶ್ವದ ಗಮನಸೆಳೆದ ಅಪ್ಪ–ಮಗನ ಸಾಧನೆ ಅಸಾಧಾರಣವಾದುದು. ಹೈದರಾಲಿಯ ಬಗ್ಗೆ ಸಂಕ್ಷಿಪ್ತ ಚಿತ್ರಣ ನೀಡುವ ಕೃತಿ, ಆಡಳಿತಗಾರನಾಗಿ ಹಾಗೂ ಹೋರಾಟಗಾರನಾಗಿ ಟೀಪೂ ಸಾಧನೆಯನ್ನು ಸಾಕಷ್ಟು ವಿವರವಾಗಿ ವಿಶ್ಲೇಷಿಸಿದೆ. ಹೈದರಾಬಾದಿನ ನಿಜಾಮ ಹಾಗೂ ಮರಾಠರನ್ನು ಒಳಗೊಂಡಂತೆ ಸ್ಥಳೀಯವಾಗಿ ಶಕ್ತಿಕೂಟವೊಂದನ್ನು ರೂಪಿಸಲು ಟೀಪೂ ಪ್ರಯತ್ನಿಸಿದ್ದ. ಆ ಪ್ರಯತ್ನ ಯಶಸ್ವಿಯಾಗದೆ ಹೋದಾಗ, ಫ್ರೆಂಚರ ಸಹಾಯ ಪಡೆಯಲು ಪ್ರಯತ್ನಿಸಿದ. ಅಫ್ಘಾನಿಸ್ತಾನ ಹಾಗೂ ಟರ್ಕಿಗಳೊಂದಿಗೆ ಮೈತ್ರಿ ಸಾಧಿಸಲು ಪ್ರಯತ್ನಿಸಿದ. ಮೈತ್ರಿಯ ಪ್ರಯತ್ನಗಳು ಫಲ ಕೊಡಲಿಲ್ಲವಾದರೂ, ಆ ಪ್ರಯತ್ನಗಳ ಹಿಂದಿನ ಟೀಪೂವಿನ ರಾಜಕೀಯ ಮಹತ್ವಾಕಾಂಕ್ಷೆ ಹಾಗೂ ಮುತ್ಸದ್ದಿತನವನ್ನು ಗುರ್ತಿಸಬೇಕು. ಟೀಪೂವಿನ ರಾಕೆಟ್ ತಂತ್ರಜ್ಞಾನ ಆ ಕಾಲಕ್ಕೆ ಬ್ರಿಟಿಷರಿಗೆ ಬಗೆಹರಿಯದ ಒಗಟಾಗಿ ಪರಿಣಮಿಸಿದ್ದುದು ಹೋರಾಟಗಾರನಾಗಿ ಟೀಪೂ ಮಹತ್ವವನ್ನು ಸೂಚಿಸುವಂತಿದೆ.

ಟೀಪೂ ಅವನತಿಯ ಹಿಂದೆ ಬ್ರಿಟಿಷರ ಕುಟಿಲ ರಾಜಕಾರಣದಂತೆ, ಹೈದರಾಬಾದ್ ನಿಜಾಮ ಹಾಗೂ ಮರಾಠರ ಸಂಕುಚಿತ ಧೋರಣೆಗಳೂ ಕೆಲಸ ಮಾಡಿರುವುದರ ಬಗ್ಗೆ ಕೃತಿ ಗಮನಸೆಳೆಯುತ್ತದೆ. ಟೀಪೂ ಮುಂದಿಟ್ಟ ವಿವಾಹ ಪ್ರಸ್ತಾಪವನ್ನು ನಿಜಾಮ ಮೇಲರಿಮೆಯಿಂದ ತಿರಸ್ಕರಿಸಿದ್ದ. ಸೇನಾಮೈತ್ರಿಯ ಸಾಧ್ಯತೆಗಳಿಗೂ ಬೆನ್ನುಹಾಕಿದ್ದ ಆತನಿಗೆ ಸ್ವತಂತ್ರ ವ್ಯಕ್ತಿತ್ವ ಇಲ್ಲದಿದ್ದುದರ ಬಗ್ಗೆ ಕೃತಿ ಗಮನಸೆಳೆಯುತ್ತದೆ. ಒಳಗಿನ ಶತ್ರುಗಳು ತನ್ನ ವಿರುದ್ಧ ಷಡ್ಯಂತ್ರ ರೂಪಿಸಿ ಸಿಕ್ಕಿಬಿದ್ದಾಗ ಅವರನ್ನು ಕ್ಷಮಿಸುವ ಔದಾರ್ಯವನ್ನು ಟೀಪೂ ತೋರಿದರೂ, ಕ್ಷಮೆಗೆ ಪಾತ್ರರಾದ ಜನರೇ ತದನಂತರದಲ್ಲಿ ಟೀಪೂ ಪತನಕ್ಕೆ ಕಾರಣವಾಗುವ ಚಾರಿತ್ರಿಕ ವ್ಯಂಗ್ಯವನ್ನು ಲೇಖಕರು ಪರಿಣಾಮಕಾರಿಯಾಗಿ ಕಟ್ಟಿಕೊಟ್ಟಿದ್ದಾರೆ. ಹೈದರಾಲಿ ಮತ್ತು ಟೀಪೂವನ್ನು ಅಪಹರಣಕಾರರಾಗಿ ಚಿತ್ರಿಸಿದವರು, ಅಧಿಕಾರಕ್ಕಾಗಿ ಟೀಪೂಮಾರ್ಗವನ್ನೇ ಅನುಸರಿಸಿಯೂ ತಮ್ಮನ್ನು ಸುಧಾರಕರನ್ನಾಗಿ ಬಿಂಬಿಸಿಕೊಂಡ ಕಥನವೂ ಇಲ್ಲಿದೆ. ಈ ಸಮಯಸಾಧಕ ವ್ಯಕ್ತಿಗಳೇ ಟೀಪೂವಿನ ಮಿತಿಗಳನ್ನು ಉತ್ಪ್ರೇಕ್ಷಿಸಿರುವುದಕ್ಕೆ ಹಲವು ಉದಾಹರಣೆಗಳನ್ನು ನಂಜರಾಜ ಅರಸು ಅವರ ಕೃತಿ ನೀಡಿದೆ.

ಬಹುತ್ವದ ನೆಲೆಯಾಗಿ ಟೀಪೂ ಆಳ್ವಿಕೆಯಲ್ಲಿ ಶ್ರೀರಂಗಪಟ್ಟಣ ರೂಪುಗೊಂಡಿತ್ತು. 'ಪ್ರಜಾಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಟೀಪೂವಿನೊಂದಿಗೆ ನೆರೆಯ ಯಾವುದೇ ರಾಜ್ಯವನ್ನಾಗಲೀ ರಾಜನನ್ನಾಗಲೂ ಹೋಲಿಸುವುದು ಸಾಧ್ಯವಿರಲಿಲ್ಲ' ಎನ್ನುವ ಮೆಕೆಂಜಿ ಮಾತಿನ ಉಲ್ಲೇಖ, 'ಪಾಶ್ಚಿಮಾತ್ಯ ವಿಧಾನವನ್ನು ಆಡಳಿತದಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸಿದ ಪ್ರಥಮ ಭಾರತೀಯ ಟೀಪೂ' ಎನ್ನುವ ಡಾಡ್‌ವೆಲ್‌ನ ಮಾತು, ಆಡಳಿತಗಾರನಾಗಿ ಟೀಪೂ ಶ್ರೀರಂಗಪಟ್ಟಣಕ್ಕೆ ತಂದುಕೊಟ್ಟಿದ್ದ ವರ್ಚಸ್ಸಿಗೆ ಕನ್ನಡಿಹಿಡಿಯುವಂತಿವೆ.

ಒಳನೋಟ

ನಂಜರಾಜ ಅರಸರ ಈ ಕೃತಿಯ ಕಥಾನಾಯಕ ಟೀಪೂ ಆದರೂ, ಪ್ರಾಸಂಗಿಕವಾಗಿ ಲೇಖಕರು ಕಟ್ಟಿಕೊಡುವ ಪುಟ್ಟ ಪುಟ್ಟ ವ್ಯಕ್ತಿಚಿತ್ರಗಳು ಸೊಗಸಾಗಿವೆ ಹಾಗೂ ಇತಿಹಾಸವನ್ನು ಬೇರೆ ಬೇರೆ ಆಯಾಮಗಳಿಂದ ನೋಡಲು ಅವಕಾಶ ಕಲ್ಪಿಸುವಂತಿವೆ. ವರ್ಣರಂಜಿತ ವ್ಯಕ್ತಿತ್ವದ ಹೈದರಾಬಾದ್ ನಿಜಾಮ, ರಾಜಮಾತೆ ಲಕ್ಷ್ಮಮ್ಮಣ್ಣಿಯ ಮುತ್ಸದ್ದಿತನ, ನೆಪೋಲಿಯನ್ ಬೊನಾಪಾರ್ಟೆ, ಮುಂತಾದವರ ವಿವರಗಳು ಈ ಕೃತಿಯ ಮೌಲ್ಯವನ್ನು ಹೆಚ್ಚಿಸಿವೆ. ಸಾಕಷ್ಟು ಛಾಯಾಚಿತ್ರಗಳು ಮತ್ತು ಕಲಾಕೃತಿಗಳ ಬಳಕೆಯ ಮೂಲಕ ಪುಸ್ತಕದ ಚೆಲುವನ್ನು ಹೆಚ್ಚಿಸುವ ಪ್ರಯತ್ನ ಗಮನ ಸೆಳೆಯುವಂತಿದೆ. ❖

ಪ್ರಾಚೀನ ಕಾವ್ಯದ ಮೇಲೆ ಹೊಸ ಬೆಳಕು

ಎಚ್. ದಂಡಪ್ಪ

'ಮಹಾಭಾರತ'ವು ಜಗತ್ತಿನ ಅತಿದೊಡ್ಡ ಮತ್ತು ಸಾಂಸ್ಕೃತಿಕವಾಗಿ ತುಂಬಾ ಮಹತ್ವ ಪಡೆದಿರುವ ಮಹಾಕಾವ್ಯವಾಗಿ ಪ್ರಸಿದ್ಧಿ ಪಡೆದಿದೆ. ಭಾರತೀಯರಲ್ಲಿ ಮಹಾಕಾವ್ಯವನ್ನು ಇತಿಹಾಸ, ಪುರಾಣ, ಪ್ರಬಂಧ ಎಂದು ಗುರುತಿಸುವ ಪರಿಪಾಟವಿದ್ದರೆ ಪಾಶ್ಚಾತ್ಯರಲ್ಲಿ Epic, Heroic poetry, Classic, Great poetry ಎಂಬ ಹೆಸರುಗಳಿಂದ ಕರೆಯಲಾಗುತ್ತದೆ. ರವೀಂದ್ರನಾಥ ಟ್ಯಾಗೋರ್ ಅವರು ಕಾವ್ಯದಲ್ಲಿ 'ಒಬ್ಬ ಕವಿಯ ಮಾತುಗಳು', 'ಒಂದು ದೊಡ್ಡ ಸಮುದಾಯದ ಮಾತುಗಳು' ಎಂದು ಎರಡು ಭಾಗಮಾಡಿ ಗುರುತಿಸುತ್ತಾರೆ. ಮಹಾಭಾರತವು 'ಒಂದು ದೊಡ್ಡ ಸಂಪ್ರದಾಯದ ಮಾತುಗಳು' ಗುಂಪಿಗೆ ಸೇರುತ್ತದೆ.

ದೊಡ್ಡ ಸಂಪ್ರದಾಯದ ಮಾತಿನ ಕಾವ್ಯ ಒಂದು ಸಮಗ್ರ ರಾಷ್ಟ್ರ ತನ್ನ ಸಂವೇದನೆಯನ್ನು, ಹೃದಯವನ್ನು ಅಭಿಜ್ಞತೆಯಲ್ಲಿ ಅಭಿವ್ಯಕ್ತಿಸಿ ಅದನ್ನು ಮನುಷ್ಯನ ಬದುಕಿನ ಶಾಶ್ವತ ವಸ್ತುವನ್ನಾಗಿ ಮಾಡಿಬಿಡುತ್ತದೆ. ಇಂತಹ ಮಹಾಕಾವ್ಯವನ್ನು ಕುರಿತು ಭಾರತದ ಸಾಹಿತ್ಯ ಮತ್ತು ಸಂಸ್ಕೃತಿ ಚಿಂತಕರಲ್ಲಿ ಒಬ್ಬರಾದ ಜಿ.ಎನ್. ದೇವಿಯವರು 'Mahabharata:The Epic and the nation' ಎಂಬ ಕೃತಿಯನ್ನು ಬರೆದಿದ್ದಾರೆ. ಎಂ.ಜಿ. ಹೆಗಡೆಯವರು ಇದನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.

ಮಹಾಭಾರತದ ಕಥನ ವೀರರ ಸಾಹಸಾದ್ಭುತಗಳನ್ನು ಕುರಿತಾಗಿದ್ದರೂ ಅದು ಒಂದು ನಾಗರಿಕತೆಯನ್ನು, ಸಾಂಸ್ಕೃತಿಕ ಪರಿಸರವನ್ನು ಕುರಿತದ್ದಾಗಿದೆ. ಇದರಿಂದಾಗಿ ಇದು ತನ್ನಷ್ಟಕ್ಕೆ ತಾನೇ ರಾಷ್ಟ್ರೀಯ ಮಹತ್ವವನ್ನು ಪಡೆದುಕೊಂಡಿದೆ. ಇದರಿಂದಾಗಿ ಜನಾಂಗಿಕ ಹಾಗೂ ರಾಷ್ಟ್ರೀಯ ಪ್ರಜ್ಞೆ ಇದರಲ್ಲಿದೆ. ಜೊತೆಗೆ ಇಡೀ ಇತಿಹಾಸವನ್ನೇ ತನ್ನ ತೆಕ್ಕೆಗೆ ತೆಗೆದುಕೊಂಡಿದೆ. ಇದರಲ್ಲಿ ಇತಿಹಾಸ ಮತ್ತು ಪುರಾಣಗಳು ಬೆಸೆದುಕೊಂಡಿರುವುದರಿಂದ ಇದು ಏಕಕಾಲಕ್ಕೆ ಪುರಾಣ, ಇತಿಹಾಸ, ಮಹಾಕಾವ್ಯ ಈ ಮೂರೂ ಹೌದು. ಇದರಿಂದಾಗಿ ಮಹಾಭಾರತವು ಜಗತ್ತಿನ ಬೃಹತ್ ಗಾತ್ರದ ಅತ್ಯುತ್ತಮ ಮಹಾಕಾವ್ಯವಾಗಿ ಜನಮಾನಸದಲ್ಲಿ ಉಳಿದಿದೆ.

ದೇವಿಯರು ಎರಡು ಭಾಗಗಳಲ್ಲಿ ಅಧ್ಯಯನ ಮಾಡಿದ್ದಾರೆ 1. ಮಹಾಶೋಧ 2. ಚಕ್ರ.



ಮಹಾಭಾರತ
ಲೇ: ಜಿ.ಎನ್.ದೇವಿ
ಅನುವಾದ: ಎಂ.ಜಿ. ಹೆಗಡೆ
ಪ್ರ: ಕ್ರಿಯಾ ಮಾಧ್ಯಮ ಪ್ರೈ.ಲಿ.
ಸಂ: 9036082005
ಪು: 136 ₹130

ಮಹಾಶೋಧದಲ್ಲಿ ಮಹಾಕಾವ್ಯದ ಸ್ಥಾನ ನಿರ್ದೇಶನ, ಗತಸ್ಮರಣೆ, ಅಂತ್ಯವಿಲ್ಲದ ಸಂವಿಧಾನ, ಆರಂಭ ಮತ್ತು ಅಂತ್ಯ ಎಂಬ ಉಪಶೀರ್ಷಿಕೆಗಳಲ್ಲಿ ಮಹಾಭಾರತದ ಹುಟ್ಟು ಬೆಳವಣಿಗೆ, ಅದರ ಸಂವಿಧಾನ, ಕಥನದ ಸಾಂಸ್ಕೃತಿಕ ಮಹತ್ವವನ್ನು ಪಾಶ್ಚಾತ್ಯ ಮತ್ತು ಪೌರಾತ್ಯ ಮಹಾಕಾವ್ಯಗಳೊಂದಿಗೆ ತೌಲನಿಕವಾಗಿ ಅಧ್ಯಯನ ನಡೆಸಿದ್ದಾರೆ. ಇದು ಮಹಾಭಾರತದ ಸಾಂಸ್ಕೃತಿಕ ಪರಿಸರವನ್ನು ಗ್ರಹಿಸಿಕೊಳ್ಳಲು ಉತ್ತಮವಾದ ಒಳನೋಟಗಳನ್ನು ಒದಗಿಸುತ್ತದೆ.

ಮಹಾಭಾರತದಲ್ಲಿ ವ್ಯಕ್ತವಾಗುವ ಸಾಂಸ್ಕೃತಿಕ, ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ ವಿಚಾರಗಳನ್ನು ವಿಶ್ಲೇಷಿಸುವಾಗ ಭಾರತದ ಅರವಿಂದ, ವಿವೇಕಾನಂದರಂತಹ ದಾರ್ಶನಿಕರು ಮತ್ತು ಹಲವಾರು ಚಿಂತಕರು ಮಹಾಭಾರತದ ಬಗ್ಗೆ, ಅದರ ಪ್ರಸ್ತುತತೆಯ ಬಗ್ಗೆ ಹೇಳಿರುವ ವಿಚಾರಗಳನ್ನು ಬಳಸಿಕೊಂಡು ಅಧ್ಯಯನ ಮಾಡಿರುವುದರಿಂದ ಇದಕ್ಕೊಂದು ಸ್ವೋಪಜ್ಞತೆ ಬಂದಿದೆ. ಉದಾಹರಣೆಗಾಗಿ ಈ ಹೇಳಿಕೆಯನ್ನು ಗಮನಿಸಬಹುದು. 'ಹರಪ್ಪಾ ನಾಗರಿಕತೆಯ ನಂತರದ ಕಾಲದಿಂದ ಗೌತಮಬುದ್ಧನ ಕಾಲದವರೆಗಿನ, ನಮ್ಮ ಕಾಲಕ್ಕಿಂತ ಇಪ್ಪತ್ತಾರರಿಂದ ನಲವತ್ತಾರು ಶತಮಾನಗಳ ಪೂರ್ವದ ಅವಧಿಯ ಭಾರತೀಯರ ವಿಕಾಸದ ಕುರಿತು ಕೆಲವು ಉಪಯುಕ್ತವಾದ ಒಳನೋಟಗಳನ್ನು ನೀಡುತ್ತದೆ' (ಪುಟ 45). ಇಂತಹ ಮಾತುಗಳಲ್ಲಿ ದೇವಿಯವರ ವಿಶ್ಲೇಷಣೆಯ ಸ್ವರೂಪವನ್ನು ಅರಿಯಬಹುದು.

ಎರಡನೆಯ ಭಾಗ 'ಚಕ್ರ'ದಲ್ಲಿ 'ಪುರಾಣ ಮತ್ತು ಧರ್ಮ', 'ವರ್ಣ, ರಾಷ್ಟ್ರ ಮತ್ತು ಮಹಾಕಾವ್ಯ', 'ಕಾಲ' ಎಂಬ ಶೀರ್ಷಿಕೆಯ ಲೇಖನಗಳಿವೆ. 'ಮಹಾಭಾರತವು ಯಾವುದೇ ಒಂದು ಕ್ರಿಯೆ ಅಥವಾ ಘಟನೆಯನ್ನು ಆರಂಭ ಬಿಂದುವೆಂದು ಗುರುತಿಸಲು ನಿರಾಕರಿಸುತ್ತದೆ. ಆದಿಪರ್ವದಲ್ಲಿ ಹಲವು ಆರಂಭಗಳಿವೆ. ಕಥೆ ಎಲ್ಲಿಂದ ಪ್ರಾರಂಭವಾಗುತ್ತದೆ ಎಂದು ಹೇಳಲೇ ಸಾಧ್ಯವಿಲ್ಲದಂತಾಗಿದೆ. ಇದೇ ರೀತಿ ಯುದ್ಧದ ಪರಿಸಮಾಪ್ತಿಯ ನಂತರವೂ -ಪೌರಾಣಿಕವಾದ ಸ್ವರ್ಗಾರೋಹಣದ ನಂತರ ಕೂಡ- ಹಲವು ಪರ್ವಗಳು ಬಂದು ನಿರಂತರ ಪರಿಭ್ರಮಣದಲ್ಲಿರುವ ಬಾಳ ಚಕ್ರಕ್ಕೆ ಅಂತ್ಯವಿಲ್ಲ ಎಂದೇ ಸೂಚಿಸುತ್ತವೆ.

ಅವಲೋಕನ

ನಿಜಕ್ಕೂ ಮಹಾಭಾರತವು ನಿರಂತರವಾಗಿ ಚಲಿಸುತ್ತಿರುವ ಚಕ್ರವನ್ನು ಕೇಂದ್ರ ಪ್ರತೀಕವಾಗಿಸುತ್ತದೆ. ಮಹಾಭಾರತಕ್ಕೆ ಈ ಚಲನೆಯೇ ಧರ್ಮದ ಸಾರ. ಈ ಚಕ್ರದ ಪರಿಕಲ್ಪನೆ ಮಹಾಭಾರತಲ್ಲಿ ಒಂದು ಮಹಾನ್ ಪ್ರತಿಮೆಯಾಗಿ ಬರುತ್ತದೆ. ಮಹಾಭಾರತದ ಕವಿ ಇದನ್ನು ಬೌದ್ಧ ಸಂಕೇತಗಳಿಂದ ಪಡೆದಿರಬಹುದು. ಏಕೆಂದರೆ ಇಡೀ ಕಾವ್ಯದುದ್ದಕ್ಕೂ ಬೌದ್ಧ ಸಂಕೇತಗಳನ್ನು ಜೀರ್ಣಿಸಿಕೊಂಡು ನಿರೂಪಣೆಯಲ್ಲಿ ಸಮಾವೇಶಗೊಳಿಸಿರುವ ಸಾಧ್ಯತೆಗಳಿವೆ. ಮೂರು ಸಿಂಹಗಳು ಮತ್ತು ಕಾಲ ಚಕ್ರವನ್ನು ಹೊಂದಿರುವ ಸಾರಾನಾಥದ ಸ್ತೂಪವನ್ನು ಸ್ವತಂತ್ರ ಭಾರತದ ಲಾಂಛನವಾಗಿ ಸ್ವೀಕರಿಸಿದ್ದೇವೆ. ಚಕ್ರ ಮತ್ತು ಕುದುರೆ ಚೈತನ್ಯಶಾಲಿ ಪ್ರತಿಮೆಗಳು. ಇವು ಒಳಗೊಳ್ಳುವಿಕೆ ಮತ್ತು ಅಹಿಂಸೆಯನ್ನು ಎತ್ತಿಹಿಡಿಯುವುದರ ಸಂಕೇತ. ಇಂದು ಚಕ್ರದ ಪ್ರತಿಮೆಯೇ ಒಳಗೊಳ್ಳುವಿಕೆ ಮತ್ತು ಅಹಿಂಸೆಯನ್ನು ಭವಿಷ್ಯದ ಪೀಳಿಗೆಗೆ ರವಾನಿಸುತ್ತಾ ಬರುತ್ತಿದೆ. ಇದೇ ಮಹಾಭಾರತದ ಹೆಗ್ಗಳಿಕೆ.

ಪುರಾಣ, ಧರ್ಮ, ಚರಿತ್ರೆ, ಧರ್ಮ ಇವುಗಳು ಹದವಾಗಿ ಬೆರೆತು ಕಾಲಾತೀತವೂ ಸದಾ ಪ್ರಸ್ತುತವೂ ಆಗುವಂತೆ ಮಹಾಭಾರತವು ನಿರೂಪಣೆಗೊಂಡು ಕಲಾತ್ಮಕವಾಗಿದೆ. ಪುರಾಣಗಳನ್ನು ಸಿಗ್ಮಂಡ್ ಫ್ರಾಯ್ಡ್, ಕಾರ್ಲ್ ಯೂಂಗ್ ಇವರನ್ನು ಬಳಸಿಕೊಂಡು ಅಧ್ಯಯನ ಮಾಡಿರುವ ಕ್ರಮ ಅನನ್ಯವಾಗಿದೆ. ವರ್ಣ, ಜಾತಿ, ರಾಷ್ಟ್ರ ಮತ್ತು ಮಹಾಕಾವ್ಯ ಎಂಬ ಲೇಖನದಲ್ಲಿ 'ಇಪ್ಪತ್ತೊಂದನೇ ಶತಮಾನದ ಪ್ರೇಕ್ಷಕರು ಅಥವಾ ಓದುಗರು ಕೇಳುವ ಸಾಧ್ಯತೆಯಿರುವ ಪ್ರಶ್ನೆಯೆಂದರೆ ಇದು ಸಾಮಾಜಿಕ ತಾರತಮ್ಯವನ್ನು ಸಮರ್ಥಿಸುತ್ತದೆಯೇ? ಮತ್ತು ಅದು ಸಮರ್ಥಿಸುತ್ತದೆ ಎಂದಾದರೆ ನಾವದನ್ನು ರಾಷ್ಟ್ರೀಯ ಮಹಾಕಾವ್ಯವೆಂದು ಪರಿಗಣಿಸುವುದನ್ನು ಮುಂದುವರಿಸಬಹುದೇ?' ಎಂಬುದು.

ಮೇಲಿನ ಪ್ರಶ್ನೆಗೆ ಉತ್ತರ ಕೊಡುವ ಪ್ರಯತ್ನ ಮಾಡುವಾಗ ಅಂಬೇಡ್ಕರ್ ಅವರ 'ಜಾತಿ ವಿನಾಶ'ದ ಕೃತಿಯ ಭಾಗಗಳನ್ನು ಉದಾಹರಿಸಿ ಚರ್ಚಿಸುತ್ತಾರೆ ಲೇಖಕರು. ಇದು ಚರ್ಚಾಸ್ಪದವಾಗಿದ್ದು, ಚರ್ಚೆಯನ್ನು ಮುಂದುವರಿಸಲು ಓದುಗನಿಗೆ ಅವಕಾಶ ಮಾಡಿ ಕೊಡುತ್ತದೆ. 'ಮಹಾಭಾರತ ಎಂಬ ಈ ಭೂಮ ಕಾವ್ಯವು ನಮ್ಮನ್ನು ಯಾವುದೇ ಕಲ್ಪಿತವಾದ, ಸೀಮಾಬದ್ಧವಾದ ರಾಷ್ಟ್ರವಾಗಿ ಒಂದುಗೂಡಿಸುವುದಿಲ್ಲ. ಅದು ನಮ್ಮನ್ನು ಒಗ್ಗೂಡಿಸುವುದು ಕಾಲ ಚಕ್ರದಿಂದ ಸಂಕೇತಿಸಲ್ಪಟ್ಟ ಕಾಲದ ಕಲ್ಪನೆಯಿಂದ. ಮಹಾಭಾರತದ ಈ ಅಪ್ರತಿಮ ಸಂಕೇತವು ಪ್ರತಿಯೊಂದನ್ನೂ ಸಂಪೂರ್ಣ ನಮ್ರತೆಯಿಂದ ಒಪ್ಪಿಕೊಳ್ಳುವ ಶ್ರೇಷ್ಠವಾದ ಸ್ವೀಕಾರ ಮನೋಭಾವವನ್ನು ಕಲಿಸುತ್ತದೆ'.

ಇಂತಹ ಹತ್ತು ಹಲವು ವಿಚಾರಗಳು ಒಳನೋಟಗಳು ಈ ಕೃತಿ ಒಳಗೊಂಡಿದ್ದು ಮಹಾಭಾರತವನ್ನು ಇಂದು ಯಾವ ರೀತಿ ಓದಬಹುದು ಎಂಬುದಕ್ಕೆ ಹಲವಾರು ದಾರಿಗಳನ್ನು ತೋರಿಸುತ್ತದೆ. ಈಗಾಗಲೇ ದೇವಿಯವರ ಮುಖ್ಯ ಲೇಖನಗಳನ್ನು ಅನುವಾದಿಸಿ ಪ್ರಕಟಿಸಿರುವ ಹೆಗಡೆಯವರು ಮಹಾಭಾರತದ ಈ ಮರುಓದಿನ ಕೃತಿಯನ್ನು ಕನ್ನಡಕ್ಕೆ ಯಾವುದೇ ಗೊಂದಲಕ್ಕೆ ಆಸ್ಪದವಿಲ್ಲದಂತೆ ಅನುವಾದಿಸಿದ್ದಾರೆ. ❖

ಕಥೆ
ಉದಯ ಪ್ರಕಾಶ್ ಅವರ
ಸೋದರ ಮಾವ
(ಕನ್ನಡಕ್ಕೆ: ಡಿ.ಎನ್.ಶ್ರೀನಾಥ್)
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಕವನ
ನಾ ದಿವಾಕರ ಅವರ
ಬಲೆಯ ನೂಲಿನೊಳಗೆ
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ನೀನ್ಯಾರಿಗೂ ಸಲ್ಲದವಳು

8ನೇ ಪುಟದಿಂದ...

ಈಗ ನಾವು ಇಟ್ಟಿರುವ ಬಿಡುಬೀಸಾದ ಹೆಜ್ಜೆಯನ್ನು ಮತ್ತೆ ಹಿಂದೆ ತೆಗೆದುಕೊಳ್ಳುವುದು ಕಷ್ಟ. ಪಾನೀಯಕ್ಕೆ ಕೃತಕ ನಿಂಬೆ ಹಣ್ಣಿನ ರಸದ ಸ್ವಾದ ನೀಡಿ, ಡಿಶ್‌ವಾಶರ್‌ಗೆ ನೂರು ನೈಸರ್ಗಿಕ ನಿಂಬೆಗಳನ್ನು ಹಿಂಡುವ ಕಾಲವಿದು. ಹೀಗಾಗಿ ಮತ್ತೆ ಬೇರಿನೆಡೆಗೆ ಹೆಜ್ಜೆ ಕಷ್ಟಸಾಧ್ಯ. ಹೀಗಿದ್ದರೂ, ಪ್ಲಾಸ್ಟಿಕ್ ತ್ಯಾಜ್ಯ ನಿಯಂತ್ರಣಕ್ಕೆ ಹಲವು ಬದಲಾವಣೆಗಳು ಸದ್ದಿಲ್ಲದೇ ಸುತ್ತ ನಡೆಯುತ್ತಿವೆ. ಇವು ಪೂರ್ಣ ಪ್ರಮಾಣದಲ್ಲಾಗಲು ಭಾರತದಂಥ ದೇಶದಲ್ಲಿ ಇನ್ನೂ ದಶಕಗಳೇ ಬೇಕು.

ಸದ್ಯ ನಗರ ಪ್ರದೇಶಗಳಲ್ಲಿ ಕಣ್ಣಿಗೆ ಕಾಣಿಸುವ ಬದಲಾವಣೆ ಎಂದರೆ ಪೇಪರ್‌ನಿಂದ ಮಾಡಿದ ಸ್ಟ್ರಾ ಹಾಗೂ ಅಡಿಕೆ ಹಾಳೆ ತಟ್ಟೆಗಳ ಬಳಕೆ. ಬಿದಿರಿನಿಂದ ಮಾಡಿದ ಹಲ್ಲುಜ್ಜುವ ಬ್ರಷ್‌ಗಳು ಫ್ಯಾಷನ್ ರೂಪದಲ್ಲಿ ಬಳಕೆಯಾಗಲು ಆರಂಭಿಸಿವೆ. ಇವುಗಳ ಹೊರತಾಗಿಯೂ ಹಲವು ಪರಿಸರಸ್ನೇಹಿ ಉತ್ಪನ್ನಗಳು ಕ್ರಮೇಣವಾಗಿ ಮಾರುಕಟ್ಟೆಗೆ ಹೆಜ್ಜೆ ಇಡುತ್ತಿವೆ. ಇಂಥ ಕೆಲ ಉತ್ಪನ್ನಗಳು ನನ್ನ ಕಣ್ಣಿಗೆ ಬಿದ್ದಿದ್ದು ಇನ್‌ಸ್ಟಾಗ್ರಾಂ ರೀಲ್ಸ್‌ನಲ್ಲಿ.

ಬಂದಿವೆ ಪೆಲೆಟ್ಸ್‌ಗಳು, ಮಾತ್ರೆಗಳು!

ಬಟ್ಟೆ ಒಗೆಯುವ ಪೌಡರ್, ಪಾತ್ರೆ ತೊಳೆಯುವ ಡಿಶ್‌ವಾಶರ್ ಕಾಗದದಿಂದ ಮಾಡಿದ ಚೀಲದಲ್ಲಿ ಬರಲು ಸಾಧ್ಯವೆ? ಟ್ಯೂಬ್‌ನಲ್ಲಿ ಬರುತ್ತಿದ್ದ ಟೂತ್‌ಪೇಸ್ಟ್ ಇದೀಗ ಗಾಜಿನ ಬಾಟಲಿಯಲ್ಲಿ ಮಾತ್ರೆ ರೂಪದಲ್ಲಿ ಬಂದರೆ? ಹೌದು, ತಂತ್ರಜ್ಞಾನದಿಂದ ಇದೆಲ್ಲವೂ ಈಗ ಸಾಧ್ಯವಾಗಿದೆ. ಪೌಡರ್ ಹಾಗೂ ಡಿಶ್‌ವಾಶರ್‌ಗಳನ್ನು ಜೀರಿಗೆ ಗಾತ್ರಕ್ಕೆ ಹರಳುಗಟ್ಟಿಸಿ (ಗ್ರ್ಯಾನ್ಯೂಲ್ಸ್), ನೀರಿನಲ್ಲಿ ಇವುಗಳನ್ನು ಬೆರೆಸಿ ಬಳಸಿಕೊಳ್ಳುವಂತೆ ಅವುಗಳನ್ನು ಕಾಗದದ ಚೀಲದಲ್ಲಿ ಮಾರಾಟ ಮಾಡಲಾಗುತ್ತಿದೆ. ಚ್ಯೂಯಿಂಗ್ ಗಮ್ ಮಾದರಿಯಲ್ಲಿನ ಟೂತ್‌ಪೇಸ್ಟ್ ಮಾತ್ರೆಗಳನ್ನು ಜಗಿದು ಬ್ರಷ್ ಮಾಡಿದರೆ ಹಲ್ಲುಗಳು ಫಳಫಳ!

ಕಿವಿಗೆ ಸದಾ ಇಯರ್‌ಬಡ್ ಹಾಕುವ ಅಭ್ಯಾಸವಿದ್ದ ನನಗೆ, 'ಇಯರ್‌ಬಡ್ ಸಿಗಲ್ಲ' ಅನ್ನೋ ಸುದ್ದಿ ಕೇಳಿ ಒಮ್ಮೆ ಆಘಾತ! ಹೀಗಿದ್ದರೂ ಒಂದು ಸಮಾಧಾನವಿತ್ತು. ಏಕೆಂದರೆ ಈ ಲೇಖನ ಬರೆಯುವುದಕ್ಕಾಗಿ ಅಂತರ್ಜಾಲದಲ್ಲಿ ಈಜಾಡುತ್ತಿರುವಾಗ ಆಕೆ ಕಣ್ಣಿಗೆ ಬಿದ್ದಿದ್ದಳು. 'ಬಿದಿರು ನೀನಾರಿಗಲ್ಲದವಳೆ...' ಎಂಬ ಮಾತಿಗೆ ಪೂರಕವಾಗಿ ಆಕೆ ಅಲ್ಲಿ ಜನ್ಮತಾಳಿದ್ದಳು. ಆಗೊಮ್ಮೆ ಸಮಾಧಾನವಾಗಿತ್ತು. ಪ್ಲಾಸ್ಟಿಕ್ ಬಟ್ಟೆ ಕಳಚಿ ನನ್ನ ಇಯರ್‌ಬಡ್ ಬಿದಿರನ್ನೇರಿದ್ದಳು. ಇಂದು ಹಲವು ಪ್ಲಾಸ್ಟಿಕ್ ಉತ್ಪನ್ನಗಳಿಗೆ ಬಿದಿರು ಪರ್ಯಾಯವಾಗುತ್ತಿದೆ. ಇದಕ್ಕೆ ಸೇರ್ಪಡೆ ಇಯರ್‌ಬಡ್. ಸರ್ಕಾರದ ಹೊಸ ನಿಯಮ ಮತ್ತಷ್ಟು ಬಿದಿರಿನ ಉತ್ಪನ್ನಗಳನ್ನು ಮಾರುಕಟ್ಟೆಗೆ ಪರಿಚಯಿಸುವುದು ಖಚಿತ. ಇವುಗಳಿಂದ ಒಂದಿಷ್ಟು ಪ್ಲಾಸ್ಟಿಕ್ ಬಳಕೆ ಕಡಿಮೆಯಾದರೆ ಪರಿಸರಕ್ಕೂ ಮತ್ತೊಂದು ದಿನ ಉಸಿರಾಡುವ ಅವಕಾಶ ಸಿಗಬಹುದು. ನಮಗೂ!

ಹೀಗೆ ಯೋಚಿಸಿದಾಗ ಅದೆಷ್ಟೋ ತ್ಯಾಜ್ಯಗಳ ಸ್ಟಾರ್ಟ್‌ಅಪ್ ಸಂಸ್ಥಾಪಕರಂತೆ ನಾವು ಕಾಣಿಸತೊಡಗುತ್ತೇವೆ. ಉದಾಹರಣೆಗೆ, ಹಲವು ಉತ್ಪನ್ನಗಳ ಜೊತೆಗೆ ಬರುವ ಸಿಲಿಕಾ ಬ್ಯಾಗ್ಸ್ ಬಗ್ಗೆ ಯೋಚಿಸಿದ್ದೀರಾ? ಈ ಹಿಂದೆ ಅದು ಸಿಕ್ಕಿದಾಗ ಅದನ್ನು ನೀವು ಏನು ಮಾಡಿದ್ರಿ? ಹೀಗೊಮ್ಮೆ ನೆನಪಿಸಿಕೊಂಡಾಗ ಈ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಸದ್ಯ ಪ್ಲಾಸ್ಟಿಕ್ ತ್ಯಾಜ್ಯದ ಬಗ್ಗೆ ಜನರಲ್ಲೊಂದಿಷ್ಟು ಅರಿವು ಮೂಡಿದ್ದರೂ, ಇವುಗಳ ಪರ್ಯಾಯ ಉತ್ಪನ್ನಗಳ ಬೆಲೆ ಕೈಕಟ್ಟಿಸುತ್ತದೆ. ಕೊನೆಗೆ ಪ್ಲಾಸ್ಟಿಕ್ ಭೂತವೇ ಗತಿ ಎಂಬಂತಾಗಲಿದೆ ಸ್ಥಿತಿ. ಆದರೆ, ಹಾಗಾಗಬಾರದು. ಇದಕ್ಕೊಂದು ಪರ್ಯಾಯ ಮಾರ್ಗವನ್ನು ಹುಡುಕಲೇಬೇಕು, ಅಲ್ಲವೇ? ❖



ಬಿದಿರಿನ ಕಡ್ಡಿಗಳ ಇಯರ್‌ಬಡ್

ಮರದ ತುಂಡಿನಿಂದಲೇ ಸಿದ್ಧವಾಯಿತು ಈ ಬಾಚಣಿಕೆ

ಮೊದಲ ಓದು

ಶರೀಫರ ಹೊನಲಿನಲ್ಲಿ ಮೀಯುವ ಸುಖ

'ತೂಗುತಿದೆ ನಿಜ ಬಯಲಲಿ' ಇದು ಶಿಶುನಾಳ ಶರೀಫರ ಆಯ್ದ ತತ್ವಪದಗಳ ವಿಶ್ಲೇಷಣಾತ್ಮಕ ಕೃತಿ. ಲೇಖಕ ದಾವಲಸಾಬ ನರಗುಂದ ಅವರು ಕನ್ನಡದ ಮಹತ್ವದ ಅನುಭಾವಿ ಸಂತ ಶರೀಫರ ಆಯ್ದ ಐವತ್ತೈದು ತತ್ವಪದಗಳ ಜೀವಸಾರವನ್ನು ಇಲ್ಲಿ ಓದುಗರಿಗೆ ಉಣಬಡಿಸಿದ್ದಾರೆ. ಕನ್ನಡದಲ್ಲಿ ಶರೀಫರ ಕುರಿತಾಗಿ ಹಲವು ಕೃತಿಗಳು ಮೂಡಿನಿಂತರೂ ಈ ಕೃತಿ ಹಲವು ವಿಶೇಷಗಳನ್ನು ಮೈದುಂಬಿಕೊಂಡು ನಿಂತಿದೆ. ಅನುಭಾವಿಕ ಪದಗಳನ್ನೂ ವರ್ತಮಾನದಲ್ಲಿಟ್ಟು ವಿಶ್ಲೇಷಿಸುವ ಜಾಣ್ಮೆಯೂ ಇದೆ.

'ಪದವ ಬೇಗನೆ ಕಲೀ ಕಲಿ ಶಿವಶರಣರ
ಹೃದಯದೊಳು ನೀ ನಲೀ ನಲಿ'

ಇವರ ಪದದ ಜಾಡಿನ ಸಂಸ್ಕೃತಿಯೇ ಕನ್ನಡ ನಾಡಿನಲ್ಲಿ ದೊಡ್ಡದಿದೆ. ಒಂದೆಡೆ ಕಡಕೋಳ ಮಡಿವಾಳಪ್ಪ, ಇನ್ನೊಂದೆಡೆ ಶರೀಫರು ಸಮ ಸಮಾಜದ ಹರಿಕಾರರು. ಹರಿ ಹರ ಭೇದವಿಲ್ಲದೆ ಅವರು ಸಮನ್ವಯದ ಜೀವತಾಣಗಳನ್ನು ಶಿವಶರಣರ ಹೃದಯದಲ್ಲಿ ಮಾತ್ರವಲ್ಲದೆ, ಸಾಮಾನ್ಯ ಜನತೆಯ ಬಾಳಿನ ಸುಖ ದುಃಖದ ಆಚರಣೆಯಲ್ಲಿಯೂ ಅಪರಿಮಿತ ಬೆಳಗನ್ನು ಸೃಷ್ಟಿಸಿ ನಿಂತವರು.

'ಓದುವವಗ ಎಚ್ಚರಿರಬೇಕು' ಎಂಬುವ ತತ್ವಪದದಲ್ಲೇ ಹಿಂದಿನ ಜ್ಞಾನವನರಿತು ನಾದ ಸ್ವರ ಸಂಗೀತದ ಹಿತದಿಂದ ಶಿಶುನಾಳಧೀಶನನ್ನೂ ಅರ್ಥೈಸುವ ವಿಸ್ತಾರದ ನೆಲೆ ಇರುವುದನ್ನು ಲೇಖಕರು ಗುರುತಿಸಿದ್ದಾರೆ. 'ಆರುಶಾಸ್ತ್ರ ಹದಿನೆಂಟು ಪುರಾಣ ನನ್ನ ಬಗಲಾಗ, ಪ್ರಭುಲಿಂಗಲೀಲೆ ನನ್ನ ತಲಿಮ್ಯಾಗ' ಎಂದು ಶರೀಫರು ನಿಖರವಾಗಿ ಹೇಳುವ ಬಗೆಯಲ್ಲಿಯೇ ಅವರು ಬಸವಣ್ಣನನ್ನು ಭಕ್ತನೆಂತಲೂ, ಪ್ರಭುದೇವರನ್ನು ಪರಮಾತ್ಮನೆಂತಲೂ ಭಾವಿಸಿದ ಅವರ ಸಂತಗುಣದಲ್ಲಿಯೇ ವಚನದ ಜೀವಸಾರವಿದೆ.

ಚಿಂತೆಯಾತಕೆ ಯೋಗಿಗೆ ಎನ್ನುವಲ್ಲಿಯೇ ಯೋಗಿಗಳಿಗೆ ಚಿಂತೆಗಳಿರಬಾರದು. ಏಕೆಂದರೆ ಆತ ಸದ್ಗುರುವಿನ ಅಂತರಂಗದೊಳಗೆ ಇರುವವ, ಕಾಮ ಮತ್ತು ಕಾಲವನ್ನು ಮೀರಿದವ, ಪಂಚೇಂದ್ರಿಯ, ಮಾಯಾಪ್ರಪಂಚ, ವಿಷಯಸುಖ, ಅಂತರಂಗದ ವಿಕಾರ ಅಳಿದವ, ಅಪ್ಪಟ ನಾದಬಿಂದು, ಬೋಧದ ಮಾತಿನಿಂದ ಯೋಗಿಯಾಗಿ ತನ್ನ ಈಶನನ್ನು ಒಲಿಸಿಕೊಂಡವ ಎಂಬುದನ್ನು ಶರೀಫರಿಲ್ಲಿ ಒತ್ತಿಹೇಳಿದ್ದಾರೆ.

ವಸಾಹತುಪೂರ್ವ ಮತ್ತು ವಸಾಹತೋತ್ತರ ಚಿಂತನೆಗಳು, ಗಿರಣಿ ವಿಸ್ತಾರ...ದಲ್ಲೂ, ವರ್ತಮಾನದ ದಂದುಗದಲ್ಲೂ, ವ್ಯಕ್ತಿ ಮತ್ತು ಸಮಾಜದ ನಡವಳಿಕೆಯಲ್ಲೂ, ಸಮುದಾಯದ ಆಚರಣೆಗಳಲ್ಲೂ ಹೇಗೆ ಬಿಂಬಿತವಾಗಿವೆ ಎಂಬುದಕ್ಕೆ ಒಳ್ಳೆಯ ಟಿಪ್ಪಣಿಗಳು ಇಲ್ಲಿವೆ. ಈ ಕೃತಿಯ ಮುನ್ನುಡಿಯಲ್ಲಿ ನಿಂಗಪ್ಪ ಮುದೇನೂರು ಅವರು ಶರೀಫರ ಪ್ರತಿಸಾಂಸ್ಕೃತಿಕ ನೆಲೆಗಳನ್ನು ಗುರುತಿಸಿದ್ದಾರೆ. ಯುವ ಬರಹಗಾರ ನರಗುಂದರ ಮೊದಲ ಪ್ರಯತ್ನದ ಈ ಕೃತಿಯನ್ನು ನಾವು ಮೆಚ್ಚಬಹುದಲ್ಲದೇ, ಹೊಸ ತಲೆಮಾರೂ ಯೋಚಿಸಬೇಕಾದ ಶರೀಫರ ಹಾದಿಯ ಮೇಲೆ ಇದು ಬೆಳಕುಚೆಲ್ಲಿದೆ. ❖



ತೂಗುತಿದೆ ನಿಜ ಬಯಲಲಿ
ಲೇ: ದಾವಲಸಾಬ ನರಗುಂದ
ಪ್ರ:ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ,ಕಲಬುರಗಿ
ಸಂ:9448124431
ಪು: 176 ₹150

ಅಧಿಕಾರಿಯ ಬದುಕಿನ ಹಾಡು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದ ವೈ.ಕೆ.ಮುದ್ದುಕೃಷ್ಣ (ವೈ.ಕೆ.ಎಂ) ಅವರ ಆತ್ಮಚರಿತ್ರೆ ಈ ಕೃತಿ. ಆತ್ಮಚರಿತ್ರೆ ಎಂದರೆ ಸ್ವಂತ ಜೀವನದ ಕಥನ ತಾನೇ? ಈ ಕೃತಿಯಲ್ಲಿ ಮುದ್ದುಕೃಷ್ಣ ಅವರ ಜೀವನಕಥೆಯ ಜೊತೆಗೆ ಅವರ ಜೊತೆ ಒಡನಾಡಿದವರ ಮಾತುಗಳೂ ಕೂಡಿರುವುದು ವಿಶೇಷ. ಜೊತೆಗೆ ವೈ.ಕೆ.ಎಂ ಅವರ 75ನೇ ಜನ್ಮದಿನದ ಸಂದರ್ಭದಲ್ಲೇ ಇದು ಹೊರಬಂದಿದೆ ಎಂಬುದು ಮತ್ತೂ ವಿಶೇಷ.

ಒಟ್ಟು 96 ಪುಟ್ಟ ಅಧ್ಯಾಯಗಳಲ್ಲಿ ಮುದ್ದುಕೃಷ್ಣ ತಮ್ಮ ಬದುಕನ್ನು ತೆರೆದಿಟ್ಟಿದ್ದಾರೆ. ಅದನ್ನು ಶಮ ನಂದಿಬೆಟ್ಟ ಅವರು ಅಷ್ಟೇ ಸೊಗಸಾಗಿ ನಿರೂಪಿಸಿದ್ದಾರೆ. ಆತ್ಮಕಥೆ ಬರೆಯುವ ಸಂದರ್ಭದಲ್ಲಿ ಲೇಖಕ ತನ್ನದೇ ಬದುಕನ್ನು ಅಕ್ಷರಕ್ಕಿಳಿಸುತ್ತಾನೆ. ಈ ಸಂದರ್ಭದಲ್ಲಿ ಯಾವುದೇ ಅಳುಕು ಆತನಲ್ಲಿರುವುದಿಲ್ಲ. ಆದರೆ ತನ್ನ ಕಥೆಯನ್ನು ಬೇರೆಯವರೊಬ್ಬರು ಬರೆಯ ಹೊರಟಾಗ ಒಂದಿಷ್ಟು ಹಿಂಜರಿಕೆ ಸಾಮಾನ್ಯ. ಆದರೆ, ಈ ಕೃತಿಯಲ್ಲಿ ಅಂತಹ ಹಿಂಜರಿಕೆ ಮೇಲ್ನೋಟಕ್ಕೆ ಕಾಣುವುದಿಲ್ಲ. ಶಾಲಾ ಜೀವನದಿಂದ ಹಿಡಿದು ವೈವಾಹಿಕ ಜೀವನದಲ್ಲಿ ಉಂಟಾದ ಬಿರುಕಿನವರೆಗೂ ತಮ್ಮ ಅನುಭವಗಳನ್ನು ವೈ.ಕೆ.ಎಂ ಮುಲಾಜಿಲ್ಲದೆ ಬಿಚ್ಚಿಟ್ಟಿದ್ದಾರೆ. ಅಧಿಕಾರಿಯಾಗಿದ್ದ ಸಂದರ್ಭದಲ್ಲಿ ಎದುರಿಸಿದ ಸವಾಲು, ಆರೋಪಗಳ ಬಗ್ಗೆಯೂ ವಿಸ್ತೃತವಾಗಿ ವಿವರಿಸಿದ್ದಾರೆ. ವೈ.ಕೆ.ಎಂ ಅವರ ಆತ್ಮಚರಿತ್ರೆಯು ಸುಗಮ ಸಂಗೀತದ ಚರಿತ್ರೆಯ ಕೆಲವು ಅಧ್ಯಾಯಗಳನ್ನು ಓದಿದಂತೆ ಭಾಸವಾಗುತ್ತದೆ. 'ಅವರ ಆತ್ಮವೃತ್ತಾಂತವನ್ನು ಅವಲೋಕಿಸಿದರೆ ಅದೇ ಒಂದು ಹಾಡು' ಎಂದು ಮುನ್ನುಡಿಯಲ್ಲೇ ಸಂಪಾದಕರು ಅವರು ಉಲ್ಲೇಖಿಸುತ್ತಾರೆ. ಕೃತಿಯ ಶೀರ್ಷಿಕೆಗೂ ಇದೇ ಜಾಡು. ಮೊದಲೇ ಹೇಳಿದಂತೆ ಪ್ರತಿ ಅಧ್ಯಾಯದ ಕೊನೆಯಲ್ಲಿ ವೈ.ಕೆ.ಎಂ. ಅವರ ಒಡನಾಡಿಗಳು ಹಾಗೂ ಬಂಧುಗಳ ಮಾತುಗಳಿರುವುದು ವಿಶೇಷ. ಇಲ್ಲಿ ಕೆಲವರ ನೆನಪುಗಳು ಸುದೀರ್ಘವಾಗಿವೆ. ❖



ಹಾಡು ಹಿಡಿದ ಜಾಡು
ಸಂ: ಡಾ.ನಾ.ದಾಮೋದರ ಶೆಟ್ಟಿ
ನಿರೂಪಣೆ: ಶಮ ನಂದಿಬೆಟ್ಟ
ಪ್ರ: ಸಪ್ನ ಬುಕ್ ಹೌಸ್
ಸಂ: 080–40114455
ಪು: 332 ₹375

ನ್ಯಾಯದ ಹಾದಿಯ ಸ್ಫೂರ್ತಿಯ ಕಥನ

ಅಕ್ಷರ ವಂಚಿತ ಸಮುದಾಯದಿಂದ ಬಂದು, ಕಷ್ಟಗಳ ನಡುವೆ ತೊಳಲಾಡಿ ಕರ್ನಾಟಕ ಹಾಗೂ ಜಮ್ಮು ಮತ್ತು ಕಾಶ್ಮೀರದ ಹೈಕೋರ್ಟ್ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಜಸ್ಟೀಸ್ ಎಂ. ರಾಮಕೃಷ್ಣ ಅವರ ಬದುಕನ್ನು ತೆರೆದಿಟ್ಟಿದೆ ಈ ಅಭಿನಂದನಾ ಗ್ರಂಥ.

ರಾಮಕೃಷ್ಣ ಅವರ ಬಾಲ್ಯದಲ್ಲಿ (ಮಾಗಡಿ ರಸ್ತೆಯ ಗೋಪಾಲಪುರ) ತಳ ಸಮುದಾಯದವರ ಪೈಕಿ ನಾಲ್ಕಕ್ಷರ ಕಲಿತವರಲ್ಲಿ ಇವರೇ ಪ್ರಮುಖರು. ಹಾಗಾಗಿ ಅಂದು ರಾಮಕೃಷ್ಣ ಅವರನ್ನು ಇಸ್ಕೂಲಪ್ಪ ಎಂದು ಅವರ ಓರಗೆಯವರು ಕರೆಯುತ್ತಿದ್ದರಂತೆ. ಆ ಕಾರಣಕ್ಕೆ ಕೃತಿಗೆ 'ಇಸ್ಕೂಲಪ್ಪ' ಎಂದು ಹೆಸರಿಸಲು ಹಲವರು ಚರ್ಚಿಸಿ ನಿರ್ಧರಿಸಿದೆವು ಎಂದಿದ್ದಾರೆ ಸಂಪಾದಕರು.

ನಿಷ್ಕಳಂಕವಾಗಿ ಸೇವಾವಧಿಯನ್ನು ಪೂರೈಸಿ, ಸಾಮಾಜಿಕ ನೆಲೆಯಲ್ಲಿ ತುಳಿತಕ್ಕೆ ಒಳಗಾದವರು, ಬಡವರು ಮತ್ತು ಮಹಿಳೆಯರ ಮೇಲೆ ವಿಶೇಷ ಕಾಳಜಿ ಹೊಂದಿದ ವ್ಯಕ್ತಿತ್ವ ಈ ಕೃತಿಯಲ್ಲಿ ಅನಾವರಣಗೊಂಡಿದೆ. ವಿವಿಧ ಲೇಖಕರು, ಕವಿಗಳು ಅಭಿಮಾನಿಗಳು ರಾಮಕೃಷ್ಣ ಅವರ ಬಹುಮುಖಿ ಬದುಕಿನ ಚಿತ್ರಣವನ್ನು ಕಟ್ಟಿ ಕೊಟ್ಟಿದ್ದಾರೆ. 45 ಲೇಖನಗಳಲ್ಲಿ ಅವರ ವ್ಯಕ್ತಿತ್ವ ಚಿತ್ರಿತವಾಗಿದೆ. ಅಕ್ಷರವೊಂದನ್ನೇ ಅಕ್ಕರೆಯಿಂದ ಪ್ರೀತಿಸಿದವರು ಯಾವುದೇ ಎತ್ತರಕ್ಕೆ ಏರಬಹುದು ಎಂಬುದನ್ನು ಹೇಳಲು ಹೊರಟ ಸ್ಫೂರ್ತಿದಾಯಕ ಬರಹಗಳು ಇಲ್ಲಿವೆ. ❖



ಇಸ್ಕೂಲಪ್ಪ (ಜಸ್ಟೀಸ್ ಎಂ. ರಾಮಕೃಷ್ಣ ಅಭಿನಂದನಾ ಗ್ರಂಥ)
ಸಂ.: ಜಾಂಬವ ಎಂ. ಗಂಗಾಧರ್
ಪ್ರ: ಆದಿಜಾಂಬವ ಜಾಗೃತಿ, ಬೆಂಗಳೂರು
ಸಂ: 9901750002
ಪು: 288 ₹400

ಕರಿನೀರಲ್ಲಿ ಕರಗಿದವನ ಕಥೆ

ಬ್ರಿಟಿಷರ ವಿರುದ್ಧ ಸೆಟೆದು ನಿಂತವರನ್ನು ಅಂಡಮಾನ್‌ನಲ್ಲಿ ಕರಿನೀರಿನ ಶಿಕ್ಷೆಗೊಳಪಡಿಸುತ್ತಿದ್ದ ಅಮಾನವೀಯ ಘಟನೆಯ ಕುರಿತು ಗೊತ್ತಲ್ಲಾ? ಅಂಥ ಶಿಕ್ಷೆಗೊಳಗಾದ ಒಬ್ಬ ತ್ಯಾಗಿಯ ಕತೆಯಿದು. ಅಲ್ಲಿ ಶಿಕ್ಷೆಗೊಳಗಾದವರು ನೂರಾರು ಮಂದಿ. ಆದರೆ, ಆ ಪೈಕಿ ದಾಖಲೆಯಾಗಿ ಕಥೆಗಳಾದವರು, ಸಿನಿಮಾ, ನಾಟಕಗಳಾದವರು ಬೆರಳೆಣಿಕೆಯಷ್ಟು ಕೆಲವೇ ಮಂದಿ. ಆದರೆ, ಅದೆಷ್ಟೋ ತ್ಯಾಗಿಗಳು ಕಾಲಾಪಾನಿಯ ಶಿಕ್ಷೆಗೊಳಗಾಗಿ ಅಜ್ಞಾತವಾಗಿ ಕಾಲನ ಮರೆಗೆ ಸರಿದಿದ್ದಾರೆ. ಅಂಥ ಬೆಳಕಿಗೆ ಬಾರದ ಹೋರಾಟಗಾರ ಸರಜೂನ ಕಥೆಯೇ ಇದು. ಕಾನ್ಪುರ ಸಮೀಪದ ಮಸವಾನ್‌ಪುರದ ಹಳ್ಳಿಗ ಸರಜೂ ಜಗತ್ತಿನ ಅನುಭವ ಪಡೆಯಲು ಬ್ರಿಟಿಷ್ ಸೈನ್ಯ ಸೇರುವುದು, ಹಲವಾರು ದೇಶ ಸುತ್ತಿ ಸ್ವದೇಶಕ್ಕೆ ಹಿಂತಿರುಗುವುದು, ಬ್ರಿಟಿಷರ ವಿರುದ್ಧ ತಿರುಗಿ ಬಿದ್ದ ಆತ ಕಾಲಾಪಾನಿ ಶಿಕ್ಷೆಗೊಳಗಾಗುವುದು... ಹೀಗೆ ಚರಿತ್ರೆಯ ಪುಟಗಳು ಬಿಚ್ಚಿಕೊಳ್ಳುತ್ತಾ ಸಾಗುತ್ತವೆ. ಅಲ್ಲಿಯೇ ಕ್ಯಾನ್ಸರ್‌ಗೆ ತುತ್ತಾಗಿ ಕೊನೆಯುಸಿರೆಳೆಯುವ ಘಟನೆಯ ವಿವರವಂತೂ ಕಣ್ಣಾಲಿಗಳು ತುಂಬುವಂತೆ ಮಾಡುತ್ತದೆ. ಈ ಕಥೆಯಲ್ಲಿ ದೇಶ ಭಕ್ತಿಯಿದೆ. ಕಾನ್ಪುರದ ಸಂಸ್ಕೃತಿಯಿದೆ. ಸಂಬಂಧಗಳ ಮೌಲ್ಯ ಹಾಗೂ ನಡುವಿನ ಸಿಕ್ಕುಗಳೂ ಇವೆ. ಕೃತಿಯನ್ನು ಅನುವಾದಿಸಿದ್ದಾರೆ ಅನ್ನುವುದಕ್ಕಿಂತ ಕಣ್ಣಿಗೆ ಕಟ್ಟುವ ರೀತಿಯಲ್ಲಿ ಚಿತ್ರ ಬಿಡಿಸಿಟ್ಟಿದ್ದಾರೆ ಅನುವಾದಕ ಎಚ್.ಎಂ. ಕುಮಾರಸ್ವಾಮಿ. ಸ್ವಾತಂತ್ರ್ಯ ಹೋರಾಟದ ಅಗೋಚರ ಮುಖಗಳ ಬಗ್ಗೆ ತಿಳಿಯಲು ಆಸಕ್ತರು ಓದುವಂತಹ ಕೃತಿ ಇದಾಗಿದೆ. ❖

ಕಾನ್ಪುರ ಟು ಕಾಲಾಪಾನಿ
ಹಿಂದಿ ಮೂಲ: ರೂಪ್‌ಸಿಂಗ್ ಚಂದೇಲ
ಅನುವಾದ: ಡಾ.ಎಚ್‌ಎಂ.ಕುಮಾರಸ್ವಾಮಿ
ಪ್ರ: ಕುವೆಂಪು ಭಾಷಾ ಪ್ರಾಧಿಕಾರ
ಪು: 296 ₹200

ಪರ್ವತಗಳ ಹಾಡನ್ನು ಹೊತ್ತು ತಂದು...

ದಟ್ಟ ಸಾಂಸ್ಕೃತಿಕ ಬೇರುಗಳನ್ನೂ, ಕಟುವಾದ ನೆತ್ತರ ಕಲೆಗಳ ಚರಿತ್ರೆಯನ್ನೂ ಒಟ್ಟೊಟ್ಟಿಗೇ ಧರಿಸಿಕೊಂಡಿರುವ ನೆಲ ನಾಗಾಲ್ಯಾಂಡ್. ಈ ನೆಲದ ಸತ್ವವನ್ನುಂಡು ಬೆಳೆದ ಈ ಸೋದರಿಯರ ಸಂಗೀತ, ಅಲ್ಲಿನ ಮೇರು ಪರ್ವತಗಳ ಶತಮಾನಗಳ ಮಹಾಮೌನಕ್ಕೆ ಸ್ವರದೀಕ್ಷೆ ಕೊಟ್ಟಂತಿದೆ. ನಮ್ಮ ನೆಲದ ಸಂಸ್ಕೃತಿ, ಭಾಷೆಯ ಉಳಿವಿಗೆ ಸಂಗೀತವನ್ನು ಆರಿಸಿಕೊಂಡ ಈ ತೆತ್ಸಿಯೊ ಸೋದರಿಯರು ನಡೆಯುತ್ತಿರುವ ಹಾದಿ ಎಲ್ಲಾ ದೇಶ ಭಾಷೆಗಳಿಗೂ ಮಾದರಿಯಂತಿದೆ...

ತೆತ್ಸಿಯೊ ಸಹೋದರಿಯರು... ಭಾಷೆಯ ಉಳಿವಿಗೆ ಸಂಗೀತದ ಹಾದಿ ಕಂಡುಕೊಂಡ ಸಾಧಕಿಯರು

ಸುಮಲತಾ ಎನ್.

ಸಾಲು ಸಾಲು ಪರ್ವತಗಳಿಂದ ಆವೃತವಾಗಿರುವ ಈ ನಗರಿಗೆ ಸೌಂದರ್ಯವೇ ಕಿರೀಟ. ಸ್ವರ್ಗದ ತುಣುಕೊಂದು ಕೈತಪ್ಪಿ ಭುವಿಗೆ ಬಿದ್ದಂತಿರುವ ಇಲ್ಲಿನ ಪ್ರಕೃತಿಗೆ ಮನ ಸೋಲದವರು ಯಾರುಂಟು? ಆದರೆ ನಾಗಾಲ್ಯಾಂಡ್ ಎಂಬ ಈ ಚೆಲುವೆಗೆ ಸೌಂದರ್ಯವಷ್ಟೇ ಅಲ್ಲ, ಅಲ್ಲಿ ತಲೆತಲಾಂತರದಿಂದ ಬದುಕು ಕಟ್ಟಿಕೊಂಡ ಬುಡಕಟ್ಟು ಜನಾಂಗ, ಪರಂಪರೆ, ಆಚರಣೆ, ಸಂಗೀತವೇ ದೊಡ್ಡಶಕ್ತಿ. ಇದೇ ಈ ಮಣ್ಣಿನ ಗಟ್ಟಿತನ.

ಆದರೆ ಕಾಲ ಮುಂದೋಡಿದಂತೆ ಬುಡಕಟ್ಟು ಜನಾಂಗಗಳ ನೆಲವಾಗಿರುವ ನಾಗಾಲ್ಯಾಂಡ್‌ನಲ್ಲಿನ ಸಂಸ್ಕೃತಿ, ಭಾಷೆ, ಆಚಾರ ವಿಚಾರಗಳು ಹಿಂದೆ ಉಳಿದು ಬಿಡುತ್ತವೆಯೇ? ನಾಗಾಲೋಟದಲ್ಲಿರುವ ಈ ಜಗತ್ತಿಗೆ ನಾಗಾಲ್ಯಾಂಡ್ ಮಣ್ಣಿನ ಕಥೆಗಳು ಕೇಳದೇ ಕಳೆದುಹೋಗುತ್ತವೆಯೇ? ಇಂಥ ಒಂದು ಆತಂಕವೇ ಈ ನಾಲ್ಕು ಸೋದರಿಯರನ್ನು ಒಟ್ಟು ನಿಂತು 'ಭಾಷೆ' ಉಳಿಸುವ ಕಾರ್ಯಕ್ಕೆ ಅಡಿಯಿಡುವಂತೆ ಮಾಡಿದ್ದು.

ಯಾವುದೇ ಇತಿಹಾಸ ಭವಿಷ್ಯಕ್ಕೆ ದಕ್ಕಬೇಕಾದರೆ ಭಾಷೆಯೇ ಮಾಧ್ಯಮ. ಆದರೆ ಲಿಪಿ ಇಲ್ಲದ ಭಾಷೆಯನ್ನು ತಲೆತಲೆಮಾರುಗಳಿಗೆ ದಾಟಿಸುವುದು ಪ್ರತೀ ಪೀಳಿಗೆಗೂ ಸವಾಲಿನ ಕೆಲಸ. ಅದು ಸಾಧ್ಯವಾಗಬೇಕಿರುವುದು ಮಾತು ಅಥವಾ ಸಂಗೀತದ ಮೂಲಕ ಮಾತ್ರ. ಈ ಮೂಲ ಸೂತ್ರವನ್ನು ಅರಿತ ನಾಗಾಲ್ಯಾಂಡ್‌ನ ಈ ಅಕ್ಕ ತಂಗಿಯರು ತಮ್ಮ ಬುಡಕಟ್ಟು ಭಾಷೆಯಾದ 'ಚೋಕ್ರಿ' ಉಳಿವಿಗೆ ಟೊಂಕ ಕಟ್ಟಿ ನಿಂತರು. ಅದಕ್ಕೆ ಜನಪದ ಸಂಗೀತ ಮಾಧ್ಯಮವನ್ನು ಆರಿಸಿಕೊಂಡರು.

ನಾಗಾ ಬುಡಕಟ್ಟುಗಳಲ್ಲಿ ಬಹುಮುಖ್ಯ ಜನಾಂಗವೆಂದು ಗುರುತಿಸಿಕೊಂಡಿರುವ ಚಾಕೇಸಾಂಗ್ ಸಮುದಾಯದ್ದು ಚೋಕ್ರಿ ಭಾಷೆ. ಬಹುಪಾಲು ಬುಡಕಟ್ಟು ಭಾಷೆಗಳಂತೆ ಲಿಪಿಯಿಲ್ಲದೇ ಜನರ ಬಾಯಿಂದ ಬಾಯಿಗೆ ಹರಿದಾಡುತ್ತಲೇ ಜೀವಿಸುತ್ತಿರುವ ಮಾಧ್ಯಮ. ಪ್ರಕೃತಿ ಆರಾಧಕರಾದ ಚಾಕೇಸಾಂಗ್ ನಾಗಾಗಳ ಬಗ್ಗೆ ಲಿಖಿತ ಮಾಹಿತಿ ಇಲ್ಲ. ಹೀಗಾಗಿ ಭಾಷೆಯ ಆಯಸ್ಸು ಮುಗಿದರೆ, ಮಾತಿನಲ್ಲೇ ಚಾಲ್ತಿಯಲ್ಲಿರುವ ಚಾಕೇಸಾಂಗ್ ಇತಿಹಾಸ, ಬದುಕು, ಸಂಸ್ಕೃತಿ, ಪೂರ್ವಜರ ಚರಿತ್ರೆ, ಆಚಾರ ವಿಚಾರಗಳ ಕುರಿತ ಕಥೆಗಳು ಕೂಡ ನಶಿಸಿಹೋಗಬಹುದು. ಹೀಗಾದರೆ ಮುಂದಿನ ತಲೆಮಾರಿಗೆ ಈ ಜನಾಂಗದ ಕುರುಹೂ ಇಲ್ಲವಾಗಬಹುದು... ಇಂಥ ಆಲೋಚನೆ ಈ ಸೋದರಿಯರನ್ನು ಬಹುವಾಗಿ ಆವರಿಸಿದ್ದು.

ಹೇಗಿದೆ ನಮ್ಮ ವೇಷಭೂಷಣ?... ಈ ಸಹೋದರಿಯರು ಸಾಂಸ್ಕೃತಿಕ ರಾಯಭಾರಿಗಳೂ ಹೌದು

ತೆತ್ಸಿಯೊ ಸಿಸ್ಟರ್ಸ್ ಬ್ಯಾಂಡ್ ಜೀವ ತಳೆದಿದ್ದು...

ನಾಗಾಲ್ಯಾಂಡ್‌ನ ಫೆಕ್ ಜಿಲ್ಲೆಯ ಪುಟ್ಟ ಹಳ್ಳಿ ತುವೋಪಿಸು. ಸಾಂಪ್ರದಾಯಿಕ ನಾಗಾ ಸಂಗೀತಕ್ಕೆ ಪ್ರಸಿದ್ಧಿಯಾಗಿರುವ ಈ ಸ್ಥಳದಿಂದ ಬಂದ ನಾಲ್ವರು ಸೋದರಿಯರು ಈಗ ಅಂತರರಾಷ್ಟ್ರೀಯ ಮಟ್ಟದಲ್ಲಿ ಛಾಪು ಮೂಡಿಸುತ್ತಿದ್ದಾರೆ. ತಮ್ಮ ಜನಾಂಗದ ಸಂಗೀತ, ಆ ಮೂಲಕ ಭಾಷೆಯನ್ನು ಎತ್ತಿ ಹಿಡಿಯುವ ಕಾರ್ಯದಲ್ಲಿ ಹಲವು ವರ್ಷಗಳಿಂದಲೂ ತೊಡಗಿಕೊಂಡಿದ್ದಾರೆ.

ನಾಗಾ ಬುಡಕಟ್ಟು ಸಂಗೀತಕ್ಕೆ ಹೆಸರಾದ ಮನೆತನ 'ತೆತ್ಸಿಯೊ'ದ ಈ ಸಹೋದರಿಯರ ಬ್ಯಾಂಡ್ ಆರಂಭವಾಗಿದ್ದು 1994ರಲ್ಲಿ. ಮೊದಲು ಮರ್ಸಿ ಹಾಗೂ ಆಜಿ ಜನಪದ ಹಾಡುಗಳ ಪ್ರದರ್ಶನ ನೀಡಲು ಆರಂಭಿಸಿದರು. ನಂತರದ ವರ್ಷಗಳಲ್ಲಿ ಕುವೇಲು ಹಾಗೂ ಅಲ್ಯೂನ್ ಜೊತೆಯಾದರು. ಬರುಬರುತ್ತಾ ಈ ಅಕ್ಕ ತಂಗಿಯರು 'ತೆತ್ಸಿಯೊ ಸಿಸ್ಟರ್ಸ್' ಎಂದೇ ಹೆಸರು ಮಾಡಿದರು. ಸುಮಾರು 20 ವರ್ಷಗಳ ಇವರ ಸಂಗೀತ ಪಯಣಕ್ಕೆ ಸಹೋದರ ಮಹ್‌ಸೀವ್ ಕೂಡ ಸಾಥ್ ಆದರು. ಈಶಾನ್ಯ ರಾಜ್ಯದ ಜನಪ್ರಿಯ ಬ್ಯಾಂಡ್ ಎಂದೂ ಗುರುತಿಸಿಕೊಂಡರು.

ಚೋಕ್ರಿ ಭಾಷೆಯಲ್ಲಿ 'ಲೀ' ಎಂದು ಕರೆಯಲಾಗುವ ಜನಪದ ಸಂಗೀತ ಈ ತಂಡದ ಮುಖ್ಯ ತಂತು. ಸಾಂಸ್ಕೃತಿಕ ಪುನರುಜ್ಜೀವನ ಆಂದೋಲನದಲ್ಲಿ ಸಕ್ರಿಯವಾಗಿ ತೊಡಗಿಕೊಂಡಿದ್ದ ಇವರ ಪೋಷಕರು ಚಾಕೇಸಾಂಗ್ ಬುಡಕಟ್ಟಿನ 'ಲೀ' ಹಾಡುಗಳನ್ನು ತಮ್ಮ ಮಕ್ಕಳಿಗೆ ಬಳುವಳಿಯಾಗಿ ನೀಡಿದವರು.

ಚೋಕ್ರಿ ಭಾಷೆಯಲ್ಲಿ ತಮ್ಮ ಜನಾಂಗದ ಸೊಗಡಿನ ಸಂಗೀತ ಉಣಬಡಿಸುವ ಈ ತಂಡಕ್ಕೆ 'ಭಾಷೆ' ಎಂದಿಗೂ ಗಡಿ ಎನಿಸಿಲ್ಲ. 'ಬೇರೆ ರಾಜ್ಯಗಳ, ದೇಶಗಳ ಜನರಿಗೆ ಚೋಕ್ರಿ ಭಾಷೆ ಅರ್ಥವಾಗುವುದಿಲ್ಲ. ಆದರೆ ಈ 'ಲೀ' ಸಂಗೀತದಲ್ಲಿ ಮಾಂತ್ರಿಕತೆ ಇದೆ. ಭಾಷೆ ಅರ್ಥವಾಗದಿದ್ದರೂ ಕೇಳುಗರಿಗೆ ಮಾಧುರ್ಯ ತಟ್ಟುತ್ತದೆ. ಇದು ನಮ್ಮನ್ನು ಸೋಲದೇ ತಡೆದ ಬಹು ಮುಖ್ಯ ಸಂಗತಿ' ಎಂದು ಸಂದರ್ಶನವೊಂದರಲ್ಲಿ ಹೇಳಿಕೊಂಡಿದ್ದಾರೆ ಮರ್ಸಿ.

ಸಂಗೀತ

ಚಾಕೇಸಾನ್ ಸಮುದಾಯದ ಜನಪದವನ್ನು ಪರಿಚಯಿಸುವುದು 'ಲೀ' ಮುಖ್ಯ ಉದ್ದೇಶ. ಪೂರ್ವಜರನ್ನು ನೆನೆಯುವ, ಅವರ ಕಥೆ ಹೇಳುವ, ಅವರ ಜೀವನಾನುಭವ ಸಾರುವ, ಅವರು ಬದುಕಿದ ರೀತಿ ನೀತಿಯನ್ನು ಪದಗಳಲ್ಲಿ ದಾಟಿಸುವ ಉದ್ದೇಶವೇ ಇಲ್ಲಿ ಮುಖ್ಯವಾದ್ದರಿಂದ ಚೋಕ್ರಿ ಭಾಷೆಯಲ್ಲಿ ಹಾಡುವ ಮುನ್ನ ಹಾಡಿನ ಹಿಂದಿನ ಕಥೆ, ಸಾರವನ್ನು ಇಂಗ್ಲಿಷ್ ಭಾಷೆಯಲ್ಲಿ ಹೇಳುವ ಪರಿಪಾಠ ಬೆಳೆಸಿಕೊಂಡಿದ್ದಾರೆ.

ಗಾಯನವಷ್ಟೇ ಅಲ್ಲ, ಹಾಡಿನ ಮಧ್ಯೆ ಗದ್ಯ, ವಾದ್ಯ ಬೆರೆಸುವ 'ಎ ಕ್ಯಾಪೆಲ್ಲಾ ಶೈಲಿ'ಯನ್ನು ಈ ಸೋದರಿಯರು ಅನುಸರಿಸುತ್ತಾರೆ. ಏಕತಂತಿ ವಾದ್ಯ ತಾಟಿ ಅಥವಾ ಹೆಕಾ ಲಿಬು (ಮಿಥುನ್ ಹಾರ್ನ್) ಇವರ ಗಾಯನಕ್ಕೆ ಜೊತೆಯಾಗುವ ವಾದ್ಯಗಳು. ಕೆಲವೊಮ್ಮೆ ಖ್ರೋ ಖ್ರೋ, ಬ್ಯಾಮ್‌ಹಂ ವಾದ್ಯವನ್ನೂ ಬಳಸುತ್ತಾರೆ.

ಆದರೆ ಕಾಲಕ್ಕೆ ತಕ್ಕಂತೆ ಬದಲಾಗುವುದೂ ಮುಖ್ಯ ಎಂದು ಅರಿತಿರುವ ಈ ಸಹೋದರಿಯರು 'ಫೋಕ್ ಫ್ಯೂಷನ್'ಗೆ ಒತ್ತು ನೀಡಿದ್ದಾರೆ. ಚೋಕ್ರಿ ಜೊತೆಗೆ ತೆನ್ಯಿಡೀ ನಾಗಾ ಭಾಷೆ, ಇಂಗ್ಲಿಷ್, ಕೆಲವು ಕಡೆ ಹಿಂದಿ ಬೆರೆಸಿಯೂ ಸಂಗೀತ ಪ್ರದರ್ಶನ ನೀಡುತ್ತಿದ್ದಾರೆ. ಪಂಜಾಬಿ, ಜಪಾನ್, ಕೊರಿಯನ್ ಮೀಝೋ ಭಾಷೆಗಳನ್ನು ಬೆರೆಸಿ ಹಾಡಿರುವುದೂ ಇದೆ. ಇವೆಲ್ಲವೂ ಭಾಷೆಯೊಂದನ್ನು ಎಲ್ಲರಿಗೂ ಮುಟ್ಟಿಸುವ ಒಂದು ಪ್ರಯತ್ನ ಎಂದೇ ನಂಬಿದ್ದಾರೆ.

ಸಂಗೀತ ಈ ಸೋದರಿಯರ ಆತ್ಮ. ಹೀಗಾಗ್ಯೂ ಬೇರೆ ಬೇರೆ ಕ್ಷೇತ್ರಗಳಲ್ಲಿಯೂ ಪರಿಣತಿ ಸಾಧಿಸಿರುವುದು ಇವರ ಹೆಗ್ಗಳಿಕೆ. ಲೂಲು ವೈದ್ಯೆ, ಆಹಾರ ವಿಮರ್ಶಕಿಯಾಗಿದ್ದರೆ, ಆಜಿ ಗಿಡ ಬೆಳೆಸುವ ಹವ್ಯಾಸದಲ್ಲಿ ಉತ್ಸಾಹಿ. ಕುವೇಲು ಫ್ಯಾಷನ್/ಸ್ಟೈಲ್ ಬ್ಲಾಗರ್, ಸಾಹಸಿ. ಹಿರಿಯ ಸೋದರಿ ಮರ್ಸಿ ಉತ್ಸಾಹಿ ಪ್ರವಾಸಿ, ಲೇಖಕಿ, ಚಿತ್ರ ನಿರ್ಮಾಪಕಿ, ಕಂಟೆಂಟ್ ಕ್ರಿಯೇಟರ್.

ಭಾಷೆ ಉಳಿವಿಗೆ ಯೂಟ್ಯೂಬ್ ಸೇತು...: ತಮ್ಮ ಬುಡಕಟ್ಟು ಜನಾಂಗದ ಮೌಲ್ಯವನ್ನು ಇಡೀ ಜಗತ್ತಿಗೆ ಸಾರಲು ಇವರು ಆರಿಸಿಕೊಂಡಿದ್ದು ಯೂಟ್ಯೂಬ್ ಮಾಧ್ಯಮವನ್ನು. 'ಅಳಿವಿನಂಚಿಗೆ ಸಾಗುತ್ತಿರುವ ಚಾಕೇಸಾಂಗ್ ಭಾಷೆ, ಸಂಸ್ಕೃತಿ, ಹಾಡುಗಳನ್ನು ಯುವಪೀಳಿಗೆಗೆ, ಅದರಲ್ಲೂ ನಮ್ಮ ನಾಗಾ ಜನರಿಗೆ ಪುನರ್ ಪರಿಚಯ ಮಾಡಿಕೊಡುವ ಉತ್ತಮ ಮಾರ್ಗ ಯೂಟ್ಯೂಬ್ ಎನಿಸಿತ್ತು' ಎಂದು ಹೇಳಿಕೊಂಡಿದ್ದಾರೆ ಮರ್ಸಿ.

2011ರಲ್ಲಿ, ಅಂದರೆ ಆಗಿನ್ನೂ ಸಾಮಾಜಿಕ ಜಾಲತಾಣ ಇಷ್ಟೊಂದು ಸ್ಪರ್ಧೆ ಹೊಂದಿರದ ಆ ದಿನಗಳಲ್ಲಿಯೇ ಯೂಟ್ಯೂಬ್ ಚಾನೆಲ್ ಆರಂಭಿಸಿ ತಮ್ಮ ಸಂಗೀತ ಪ್ರದರ್ಶನದ ವಿಡಿಯೊಗಳನ್ನು ಬಿತ್ತಲು ಶುರು ಮಾಡಿದ್ದರು. ಈವರೆಗೂ ನಿರಂತರವಾಗಿ ವಿಡಿಯೊಗಳನ್ನು ಹಂಚಿಕೊಳ್ಳುತ್ತಿದ್ದು, ಈಚೆಗೆ ಇವರ 'ಓ ರೋಸಿ' ಎಂಬ ಹಾಡಿನ ಪ್ರದರ್ಶನವನ್ನು 20 ಲಕ್ಷ ಮಂದಿ ವೀಕ್ಷಿಸಿದ್ದಾರೆ.

ಡಿಜಿಟಲ್ ವೇದಿಕೆಯ ಹೊಸ ಹಾದಿಗೆ ಜನರು ಹೊರಳುತ್ತಿರುವುದು ಇವರಿಗೆ ಮತ್ತಷ್ಟು ಹುರುಪು ತಂದಿದೆ. 'ಹಿಂದಿಯೇತರ ಸಂಗೀತ ಕೇಳುವವರು ಹೆಚ್ಚಾಗುತ್ತಿದ್ದಾರೆ. ಡಿಜಿಟಲ್ ಮಾಧ್ಯಮದಲ್ಲಿ ಸ್ವತಂತ್ರ ಕಲಾವಿದರು ತಮ್ಮ ಮಾರ್ಗ ರೂಪಿಸಿಕೊಳ್ಳುತ್ತಿದ್ದಾರೆ. ಯೂಟ್ಯೂಬ್ ನಮ್ಮ ಉದ್ದೇಶ ಪೂರೈಕೆಗೆ ಉತ್ತಮ ವೇದಿಕೆಯಾಗಿದೆ' ಎಂದು ಈ ಸೋದರಿಯರು ಸಂತಸ ವ್ಯಕ್ತಪಡಿಸಿದ್ದಾರೆ.

2011ರಲ್ಲಿ 'ಲೀ ಚಾಪ್ಟರ್ ಒನ್' ಎಂಬ ಮೊದಲ ಆಲ್ಬಂ ಬಿಡುಗಡೆ ಮಾಡಿದರು. 2019ರಲ್ಲಿ ಇಪಿ, 'ಎ ಸ್ಲೈಸ್ ಆಫ್ ಲೀ', 'ಸೇ ಎಸ್ ಟು ಲೈಫ್', 'ರೋಡ್ ಟು ಸಂವೇರ್...' ಹೀಗೆ ಹಲವು ಹಾಡುಗಳನ್ನು ಚೋಕ್ರಿ, ಹಿಂದಿ, ಇಂಗ್ಲಿಷ್ ಭಾಷೆಗಳಲ್ಲಿ ಬಿಡುಗಡೆ ಮಾಡಿದರು. ಈ ಪ್ರಯತ್ನಗಳು ಇವರಿಗೆ ತಕ್ಕ ಫಲವನ್ನೂ ತಂದಿತ್ತವು.

ಟ್ರೇಲ್ ಬ್ಲೇಝರ್ ಅವಾರ್ಡ್, ಈಸ್ಟರ್ನ್ ಪನೋರಮಾ ಅಚೀವರ್ಸ್ ಅವಾರ್ಡ್, ನಾಗಾಲ್ಯಾಂಡ್ ಗವರ್ನರ್ಸ್ ಅವಾರ್ಡ್ ಫಾರ್ ಎಕ್ಸಲೆನ್ಸ್, ನಾರ್ಥ್ ಈಸ್ಟ್ ಯಂಗ್ ಹೀರೊ ಅವಾರ್ಡ್, ತುವೋಪಿಸುಮಿ ಗ್ಲೋಬಲ್ ಎಕ್ಸಲೆನ್ಸ್ ಅವಾರ್ಡ್ ಪ್ರಶಸ್ತಿಗಳು ಸಂದಿವೆ. ಈಚೆಗೆ ಲಡಾಖ್ ಇಂಟರ್‌ನ್ಯಾಷನಲ್ ಮ್ಯೂಸಿಕ್ ಫೆಸ್ಟಿವಲ್‌ನಲ್ಲಿ ತಮ್ಮ ಸಂಗೀತದ ಘಮಲನ್ನು ಹರಿಸಿದ್ದಾರೆ.

ತಮ್ಮ ತಾಯ್ನುಡಿಯನ್ನು ಉಳಿಸಿ ಬೆಳೆಸುವ ಈ ಒಡಹುಟ್ಟಿದವರ ಪ್ರಯತ್ನಕ್ಕೆ ಎಲ್ಲೆಡೆ ಶ್ಲಾಘನೆ ವ್ಯಕ್ತವಾಗಿದೆ. ಇದಾಗ್ಯೂ, 'ಪ್ರಕೃತಿಗೆ ನಾವು ಕೃತಜ್ಞತೆ ಸಲ್ಲಿಸುವುದೇ ಸಂಗೀತ. ನಮ್ಮ ಸುತ್ತಲಿನ ಪರ್ವತಗಳ ಒಳದನಿಯೇ ಸಂಗೀತ. ಈ ಪರ್ವತವಾಸಿಗಳ ಕನಸು, ಆಸೆಗಳೇ ಸಂಗೀತ. ನಾವಾಡುವ ಭಾಷೆಯೇ ಸಂಗೀತ. ಅದರ ಹೊರತು ನಮ್ಮ ಸ್ವಂತದ್ದೇನೂ ಇಲ್ಲ. ಈ ಪರ್ವತದ ದನಿ ಆಗಸಕ್ಕೂ ಮುಟ್ಟಬೇಕು. ನಮ್ಮ ಭಾಷೆ ಚಿರಕಾಲ ಉಳಿಯಬೇಕು' ಎನ್ನುತ್ತಾ ತಮ್ಮ ಉದ್ದೇಶವನ್ನು ಸರಳವಾಗಿ ದಾಟಿಸಿಬಿಡುತ್ತಾರೆ.

ತೆತ್ಸಿಯೊ ಸಿಸ್ಟರ್ಸ್ ಹಾಡುಗಳನ್ನು ಕೇಳಲು https://www.youtube.com/c/TetseoSisters/featured ಭೇಟಿ ನೀಡಿ.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಡಿಸ್ಕ್ರೀಟ್ ಚಿತ್ರಕಥೆಯ — ಬೀರಬಲ್ ಮತ್ತು ಬೆಳಕಿನ ಕುಸ್ತಿ

• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ

ಒಂದು ದಿನ ಅಕ್ಬರನ ಆಸ್ಥಾನದಲ್ಲಿ ಚಳಿಗಾಲದ ಕುಸ್ತಿ ಪಂದ್ಯ ಏರ್ಪಡಿಸುವುದಾಗಿ ಡಂಗುರ ಸಾರಲಾಯಿತು. ಅದನ್ನು ಕೇಳಿದ ಸುತ್ತಮುತ್ತಲಿನ ಊರುಗಳ ಕುಸ್ತಿಪಟುಗಳು ಕುಸ್ತಿ ಪಂದ್ಯಾಟಕ್ಕೆಂದು ಬಂದರು

ಕುಸ್ತಿ ಪಂದ್ಯ ಭರ್ಜರಿಯಾಗಿ ಶುರುವಾಯಿತು. ಇಲ್ಲಿ ಗೆದ್ದರೆ ಒಳ್ಳೆಯ ಬಹುಮಾನ ಸಿಗುವ ಆಸೆಯೂ ಕುಸ್ತಿಪಟುಗಳಿಗಿತ್ತು. ಹಾಗಾಗಿಯೇ ಪಂದ್ಯಗಳು ಬಿಗಿ ಪಟ್ಟುಗಳಿಂದಲೇ ಕೂಡಿದ್ದವು

ರಾತ್ರಿ ವೇಳೆಯೂ ಕುಸ್ತಿ ಅಂಗಣದ ಸುತ್ತ ದೊಂದಿ ಉರಿಸಿ ಬೆಳಕು ಹರಿಸಿ ಕುಸ್ತಿ ಪಂದ್ಯ ಮುಂದುವರಿಸಲಾಯಿತು. ಇಲ್ಲಿಯೂ ಹಲವು ಕುಸ್ತಿಪಟುಗಳು ಗೆಲುವು ಸಾಧಿಸಿದರು.

ಗೆದ್ದವರಿಗೆ ಅಕ್ಬರ್ ಬಹುಮಾನ ನೀಡಲಿಲ್ಲ. ಚಳಿಗಾಲದಲ್ಲಿ ಉರಿಸಿದ ದೊಂದಿ ಬೆಳಕಿನ ಶಾಖದಿಂದಾಗಿ ಪಂದ್ಯ ಗೆಲ್ಲುವುದು ಸುಲಭವಾಯಿತು. ಹಾಗಾಗಿ ಬಹುಮಾನ ಕೊಡಲಾಗದು ಎಂದ. ಆದರೆ ಇದನ್ನು ಕೇಳಿದ ಬೀರಬಲ್ಲನಿಗೆ ತುಂಬಾ ಬೇಸರವಾಯಿತು

ಮರುದಿನ ಆಸ್ಥಾನ ಸಭೆಗೆ ಬೀರಬಲ್ಲ ಬರಲಿಲ್ಲ. ಅನ್ನ ಬೆಂದ ಬಳಿಕ ಉಂಡು ಬರುತ್ತೇನೆ ಎಂದು ಹೇಳಿ ಕಳುಹಿಸಿದ. ರಾಜ ಭಟರು ನೋಡಿದಾಗ ಎತ್ತರದ ಕೋಲಿಗೆ ಅನ್ನದ ಪಾತ್ರೆ ಕಟ್ಟಿ ನೆಲದಲ್ಲಿ ಕಟ್ಟಿಗೆ ಇಟ್ಟು ಬೆಂಕಿ ಹಚ್ಚಿದ್ದ. ಭಟರು ಇದನ್ನು ಅಕ್ಬರನಿಗೆ ತಿಳಿಸಿದರು.

ಅಕ್ಬರನು ಬೀರಬಲ್ಲನ ಈ ವರ್ತನೆಯ ಅರ್ಥ ಕೇಳಿದ. ಆಗ ಬಿರಬಲ್ಲ, ಅಷ್ಟು ಎತ್ತರದಲ್ಲಿದ್ದ ಪಾತ್ರೆಗೆ ಶಾಖ ಹೇಗೆ ತಲುಪುವುದಿಲ್ಲವೋ ಹಾಗೆಯೇ ಬೆಳಕಿನ ಶಾಖದಿಂದ ಕುಸ್ತಿ ಗೆಲ್ಲುವುದು ಅಸಾಧ್ಯ ಎಂದು ಹೇಳಿದ. ಅರ್ಥವಾದ ಅಕ್ಬರ ಕುಸ್ತಿಪಟುಗಳಿಗೆ ಬಹುಮಾನ ಕೊಟ್ಟ

ಗಣಿತದಲ್ಲಿ ಗರ್ದಿ ಗಮ್ಮತ್ತು

ಸ್ವಾರಸ್ಯಕರ ಸಂಕಲನ

ಒಂದು ಸಂಖ್ಯೆಯನ್ನು ಎಡದಿಂದಲೂ ಹಾಗೂ ಬಲದಿಂದಲೂ ಓದಿದಾಗ ಒಂದೇ ಸಂಖ್ಯೆ ಆಗುವುದನ್ನು ಮಾಲಾ ಸಂಖ್ಯೆ ಎಂದು ಕರೆಯುತ್ತಾರೆ ಉದಾ: 5834385

ಇಂಥ ಮಾಲಾ ಸಂಖ್ಯೆಗಳನ್ನು ಸಂಕಲನ ಕ್ರಿಯೆಯಿಂದ ಪಡೆಯುವ ಮೋಜಿನಾಟ ಇಲ್ಲಿದೆ.

ಒಂದು ಸಂಖ್ಯೆಯನ್ನು ತೆಗೆದುಕೊಂಡು ಅದನ್ನು ತಿರುವು ಮುರುವು ಮಾಡಿ ಅವೆರಡೂ ಸಂಖ್ಯೆಗಳನ್ನು ಕೂಡಿಸಬೇಕು. ಬಂದ ಉತ್ತರವನ್ನು ಮತ್ತೆ ತಿರುವು ಮುರುವು ಮಾಡಿ ಕೂಡಿಸುತ್ತಾ ಹೀಗೆ ಮುಂದುವರಿದರೆ ಒಂದು ಮಾಲಾ ಸಂಖ್ಯೆ ಸಿಗುತ್ತದಂತೆ!

ಉದಾ:

```
   97
+  79
  176
+ 671
  847
+ 748
 1595
+5951
 7546
+6457
14003
+30041
44044
```

ಮಾಲಾ ಸಂಖ್ಯೆ

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಮೂಲ ಅಕ್ಷರಗಳಿಗೆ ಮುಂದೆ ಕೊಡಲಾದ ಸುಳಿವು ಆಧರಿಸಿ ಎರಡು ಅಕ್ಷರಗಳ ಪದ ರಚಿಸಿ

	ಕ	ಟ	ಸುಳಿವು
1			ದುರ್ಗ
2			ತೊಂದರೆ
3			ಹುಳು
4			ನೂರು ಲಕ್ಷ
5			ತೀಕ್ಷ್ಣ

ಟ್ವೆಂಟಿ – 20 ಮ್ಯಾಚ್

ಇಲ್ಲಿ ಕೊಟ್ಟಿರುವ ಜಿಲ್ಲೆಗಳ ಹೆಸರಿಗೂ ಅವುಗಳಿರುವ ತಾಲ್ಲೂಕುಗಳ ಹೆಸರಿಗೂ ಹೊಂದಿಸಿ

1	ಶಿವಮೊಗ್ಗ	A	ಮಾಲೂರು
2	ತುಮಕೂರು	B	ಶಹಾಪುರ
3	ಯಾದಗಿರಿ	C	ಕಾರ್ಕಳ
4	ದಾವಣಗೆರೆ	D	ಹೊನ್ನಾಳಿ
5	ರಾಮನಗರ	E	ಶಿಡ್ಲಘಟ್ಟ
6	ಚಿತ್ರದುರ್ಗ	F	ಹುಣಸೂರು
7	ಚಿಕ್ಕಬಳ್ಳಾಪುರ	G	ಮಾಗಡಿ
8	ಕೊಡಗು	H	ಹೊಳಲ್ಕೆರೆ
9	ಮೈಸೂರು	I	ಗಂಗಾವತಿ
10	ಕೋಲಾರ	J	ಬಾಲ್ಕಿ
11	ಬಾಗಲಕೋಟೆ	K	ವಿರಾಜಪೇಟೆ
12	ವಿಜಯಪುರ	L	ಕೊರಟಗೆರೆ
13	ಧಾರವಾಡ	M	ತೀರ್ಥಹಳ್ಳಿ
14	ಬೀದರ್	N	ಹುಕ್ಕೇರಿ
15	ಹಾವೇರಿ	O	ಬಾದಾಮಿ
16	ಮಂಡ್ಯ	P	ನಾಗಮಂಗಲ
17	ಗದಗ	Q	ಇಂಡಿ
18	ಬೆಳಗಾವಿ	R	ಕುಂದಗೋಳ
19	ಕೊಪ್ಪಳ	S	ಮುಂಡರಗಿ
20	ಉಡುಪಿ	T	ಸವಣೂರು

ಪದವಿನೋದ

ಇಲ್ಲಿ ಕೊಟ್ಟಿರುವ ಮಧ್ಯದ ಅಕ್ಷರಕ್ಕೆ ಆದಿ ಮತ್ತು ಅಂತ್ಯದಲ್ಲಿ ಒಂದೇ ಅಕ್ಷರ ತುಂಬಿ ತಿರುಚುಳಿ – ಮುರುಚುಳಿ ಪದ ಕಂಡು ಹಿಡಿಯಿರಿ.

ಉದಾ: –ಟ– ಕಿಟಕಿ

1	_ ಟ _	11	_ ಣ _
2	_ ಮೆ _	12	_ ಯ _
3	_ ಮ _	13	_ ವೀ _
4	_ ಳಂ _	14	_ ಮ _
5	_ ರ _	15	_ ದ _
6	_ ಮಾ _	16	_ ನ _
7	_ ಮೋ _	17	_ ರಿ _
8	_ ಟು _	18	_ ಜ್ಜ _
9	_ ರ್ತ _	19	_ ರ _
10	_ ಡು _	20	_ ಟ್ಟಿ _

ಅದಲು ಬದಲು ಕಂಚಿ ಕದಲು

1 CHARM
2 DYNAMO
3 THE CARE
4 DICTONARY

ಕಳೆದ ಸಂಚಿಕೆಯ ಸರಿ ಉತ್ತರಗಳು

ಮಜ ಮಜ ಮಜಕೂರದ ಕಳೆದ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಟ್ವೆಂಟಿ –20 ಮ್ಯಾಚ್: 1 -K 2-L 3-J 4-F 5-A 6-N 7-Q 8-O 9-S 10-R 11-I 12-P 13-M 14-G 15-T 16-E 17-C 18-D 19-B 20-H

ಜಾಣಪದ ಆಟ: 1- ಸತಿ 2- ಸುತ 3 – ಸೀತೆ 4 – ಸೌತೆ 5-ಸತು

ಗಣಿತದಲ್ಲಿ ಗರ್ದಿ ಗಮ್ಮತ್ತು

ಉದಾ: 725X999 =

```
 725000
-   725
 724275
```

ಪದಪ್ರಶ್ನೆ; ಗಜಾನನನನಸು

ಸರಿ ಉತ್ತರ ನೀಡಿದ ಆಯ್ದ ಮೂರು ಪುಟಾಣಿಗಳು

ಶಿವಶ್ರೇಯಸ್ ಉಳ್ಳಾಗಡ್ಡಿ ಶಿರೋಳ (ಗದಗ)

ಮೇಘನಾ, ತಾವರಗೇರಾ (ಕೊಪ್ಪಳ)

ಆನಮೋಲ್, ಬೆಂಗಳೂರು

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ದ.ಕ–ಕೊಡಗು ಗಡಿ: ಮತ್ತೆ ಲಘು ಭೂಕಂಪನ

ಪ್ರಜಾವಾಣಿ ವಾರ್ತೆ

ಮಂಗಳೂರು/ಮಡಿಕೇರಿ: ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಯ ಗಡಿ ಪ್ರದೇಶದಲ್ಲಿ ಶನಿವಾರ ಮಧ್ಯಾಹ್ನ 1.21ಕ್ಕೆ ಮತ್ತೆ ಲಘು ಭೂಕಂಪನವಾಗಿದೆ. ದಕ್ಷಿಣ ಕನ್ನಡದ ಸುಳ್ಯ ತಾಲ್ಲೂಕಿನ ದೊಡ್ಡಕುಮೇರಿಯಿಂದ 1.3 ಕಿ.ಮೀ ದೂರದಲ್ಲಿ ಕಂಪನದ ಕೇಂದ್ರ ಬಿಂದು ಇದೆ. ಕಂಪನದ ಪ್ರಮಾಣವು ರಿಕ್ಟರ್ ಮಾಪನದಲ್ಲಿ 1.8ರಷ್ಟು ದಾಖಲಾಗಿದೆ.

ಭೂಕಂಪನವು ಭೂಮಿಯ 10 ಕಿ.ಮೀ. ಆಳದಲ್ಲಿ ಸಂಭವಿಸಿದೆ. ಇದರ ಕೇಂದ್ರ ಬಿಂದು ಇರುವ ಪ್ರದೇಶವು, ಸುಳ್ಯದ ಆಗ್ನೇಯ ದಿಕ್ಕಿನಲ್ಲಿ 12.4 ಕಿ.ಮೀ ದೂರದಲ್ಲಿ, ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕಿನ ಚಾಮಕಜೆಯಿಂದ 2.5 ಕಿ.ಮೀ ದೂರದಲ್ಲಿದೆ. ಕೇಂದ್ರ ಬಿಂದುವಿನಿಂದ 30 ಕಿ.ಮೀ ವ್ಯಾಪ್ತಿಯಲ್ಲಿ ಕಂಪನವು ಅನುಭವಕ್ಕೆ ಬಂದಿದೆ ಎಂದು ರಾಜ್ಯ ನೈಸರ್ಗಿಕ ವಿಪತ್ತು ಉಸ್ತುವಾರಿ ಕೇಂದ್ರದ (ಕೆಎಸ್ಎನ್ಎಂಡಿಸಿ) ಪ್ರಕಟಣೆ ತಿಳಿಸಿದೆ.

ರಾತ್ರಿ ಭಾರಿ ಶಬ್ದ: ತಾಲ್ಲೂಕಿನ ಪೆರಾಜೆ ಗ್ರಾಮದಲ್ಲಿ ಶನಿವಾರ ರಾತ್ರಿ 8.25ರಲ್ಲಿ ಭಾರಿ ಪ್ರಮಾಣದ ಶಬ್ದ ಭೂಮಿಯಿಂದ ಕೇಳಿ ಬಂದಿದೆ. ಇದನ್ನು ಕೇಳಿದ ಗ್ರಾಮಸ್ಥರು ಭಯದಿಂದ ಮನೆಗಳಿಂದ ಹೊರಗೋಡಿ ಬಂದಿದ್ದಾರೆ.

'ಕಂಪನ ಕಾಣಿಸಿಕೊಂಡ ಪ್ರದೇಶವು ಭೂಕಂಪನ ವಲಯ -3ರಲ್ಲಿದೆ. ಕಂಪನದ ಭೌಗೋಳಿಕ ನಕಾಶೆಯಲ್ಲಿ ಭೂಮಿಯ ಸಂರಚನೆಯ ನಿರಂತರತೆಗೆ ಸಂಬಂಧಿಸಿದ ವ್ಯತ್ಯಯಗಳು ಕಾಣಿಸಿಲ್ಲ. ಕಂಪನದ ತೀವ್ರತೆಯೂ ಕಡಿಮೆ ಇದೆ. ಹಾಗಾಗಿ ಸ್ಥಳೀಯರು ಆತಂಕಕ್ಕೆ ಒಳಗಾಗುವ ಅಗತ್ಯ ಇಲ್ಲ' ಎಂದು ಕೆಎಸ್ಎನ್ಎಂಡಿಸಿ ಹೇಳಿದೆ.

'ಜೂನ್ 23ರಿಂದ ಎಂಟು ದಿನಗಳ ಅವಧಿಯಲ್ಲಿ ಕೊಡಗು ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ಏಳು ಬಾರಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನಲ್ಲಿ ಐದು ಬಾರಿ ಲಘು ಭೂಕಂಪನಗಳು ಕಾಣಿಸಿಕೊಂಡಿವೆ. ಹಾರಂಗಿ ಅಣೆಕಟ್ಟಿನ ಪ್ರದೇಶದಲ್ಲೂ ಈ ಬಗ್ಗೆ ನಿಗಾ ವಹಿಸಲಾಗಿದೆ. ಲಘು ಭೂಕಂಪನಗಳು ಮರುಕಳಿಸಿದರೆ ತಂತ್ರಜ್ಞರ ತಂಡವು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಲಿದೆ.' ಎಂದು ಕೆಎಸ್ಎನ್ಎಂಡಿಸಿಯ ವ್ಯವಸ್ಥಾಪಕ ನಿರ್ದೇಶಕ ಮನೋಜ್ ರಾಜನ್ ತಿಳಿಸಿದರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

7th YEAR
FOND REMEMBRANCE

SHRI. M. S. NAGENDRA
19-11-1953 - 03-07-2015
Former Executive Director, Bangalore Metro Rail Corporation

Your Life Was a Blessing, Your Memory is a Treasure
You are Loved Beyond Words and Missed Beyond Measure

Fondly Remembered by :
Smt. Shylaja Nagendra, Siddesh Nagendra, Sharan Nagendra,
M. S. Paramashivappa, M. S. Nataraj, Hemanth and all family Members,
M. S. D. Group, Sridevi Enterprises, Urban Space Projects Pvt. Ltd.
and Nambiar Builders Pvt. Ltd.

ವೈಕುಂಠ ಸಮಾರಾಧನೆ

ಶ್ರೀಮತಿ ಎಂ. ಮಧು
ಇವರು ದಿನಾಂಕ 24.06.2022ನೇ ಶುಕ್ರವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಇವರ ತತ್ಸಂಬಂಧ ಉತ್ತರ ಕ್ರಿಯಾಧಿಗಳನ್ನು ದಿನಾಂಕ 04.07.2022 ನೇ ಸೋಮವಾರ ಬೆಳಿಗ್ಗೆ 9.00 ಗಂಟೆಗೆ ಪುಣ್ಯಾಹ, ಮಧ್ಯಾಹ್ನ 12.00 ಗಂಟೆಗೆ ವೈಕುಂಠ ಸಮಾರಾಧನೆಯನ್ನು ಗಂಟಿಗಾನಹಳ್ಳಿಯಲ್ಲಿರುವ ಮೃತರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು
ಶ್ರೀಮತಿ ಲಕ್ಷ್ಮಮ್ಮ ಮತ್ತು ಶ್ರೀ ಮುನಿಶಾಮಪ್ಪ
ಶ್ರೀ ಜಿ.ಎಂ. ನರಸಿಂಹಸ್ವಾಮಿ ಮತ್ತು
ಕುಟುಂಬ ವರ್ಗದವರು ಹಾಗು ಬಂಧು -ಮಿತ್ರರು.

LOOKING TO BUILD, BUY OR SELL A PROPERTY
Please refer Classifieds on Sunday

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಬೆಂಗಳೂರಿನಲ್ಲಿರುವ ಪ್ರತಿಷ್ಠಿತ ಕೊರಿಯರ್ ಕಂಪನಿಗೆ ನುರಿತ ಚಾಲಕರು ಬೇಕಾಗಿದ್ದಾರೆ. ಬೊಲೆರೋ, ಟಾಟಾ ಏಸ್ ವಾಹನವನ್ನು ಓಡಿಸಬಲ್ಲವರಿಗೆ ಆದ್ಯತೆ. ಸಂಬಳ 17000 ರಿಂದ 21000 ಮತ್ತು ವಸತಿ ಸೌಲಭ್ಯವಿದೆ. ಭಾನುವಾರ ರಜಾ ದಿನ. ದಿನದ 12 ಗಂಟೆಗಳು ಕೆಲಸದ ಸಮಯ. ರವಿಕಿರಣ್: 9741500240, ಶಿಲ್ಪಾ:9741395151

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್ : ಒತ್ತಡ ಮುಕ್ತ ಚಾಲನೆ ಸಂಬಳ: 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

Factory

WANTED EXPERIENCED Pest Control Operator For Hoskote(Bangalore) Factory; Good Salary; Ph:09995139111; No Freshers.

Marketing & Sales

WANTED FOREMAN (Female Post -1), Marketing Executive (Male Post-4) Contact :9036094470, 9686029646.

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

Teachers/ Professors

ಶಿಕ್ಷಕರು ಬೇಕಾಗಿದ್ದಾರೆ ವರ್ಕ್ ಫ್ರಾಮ್ ಹೋಮ್ ಪಾರ್ಟ್ ಟೈಮ್ ಪ್ರಮೋಷನ್ ಕೆಲಸಕ್ಕೆ ಶಿಕ್ಷಕರು/ ಶಿಕ್ಷಕಿಯರು ಬೇಕಾಗಿದ್ದಾರೆ. ಸಂಪರ್ಕಿಸಿ: 7760529332/ 9980400204

Wanted

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ OT. 17,800-68,000. 9538811104, 9538811223

ಪಿಯುಸಿ/ ಡಿಎಡ್/ ಬಿ.ಎ.ಬಿಎಡ್ ತರಬೇತಿ ಹೊಂದಿರುವ ಕನ್ನಡ ಶಿಕ್ಷಕಿಯರು ಬೇಕಾಗಿದ್ದಾರೆ ಸಂದರ್ಶನ: ದಿನಾಂಕ: 4/7/2022 ರಿಂದ 6/7/2022 ರಂದು ಮದ್ಯಾಹ್ನ 2 ಗಂಟೆಗೆ. ರುಬಿಯಾ ಆಂಗ್ಲ ಶಾಲೆ. ಲಾಲ್‌ಬಾಗ್ ಕೋಟೆರಸ್ತೆ. ಸಂಪರ್ಕಿಸಿರಿ: 9008720132

ಬೆಂಗಳೂರಿನ ಮನೆಗಳಲ್ಲಿ ಚಿಕ್ಕ ಮಕ್ಕಳನ್ನು ಮತ್ತು ವಯಸ್ಕರನ್ನು ನೋಡಿಕೊಳ್ಳಲು, ಮನೆಕೆಲಸ ಮಾಡಲು ಮಹಿಳೆಯರು ಮತ್ತು ಹುಡುಗಿಯರು ಬೇಕಾಗಿದ್ದಾರೆ ಸಂಬಳ 10,000- 17,000, (ಹಲವು ಭಾಷೆಗಳನ್ನು ಮಾತನಾಡುವವರಿಗೆ ಹೆಚ್ಚಿನ ಸಂಬಳ) ಉಚಿತ ಆಹಾರ, ವಸತಿ ನೀಡಲಾಗುತ್ತದೆ. 7338556119, 7259450815

ಉದ್ಯೋಗವಕಾಶ: ಆಫೀಸ್ ಕೆಲಸಕ್ಕೆ ನಿವೃತ್ತ ಪುರುಷ ಹಾಗೂ ಮಹಿಳೆಯರು 40 ರಿಂದ 65 ವರ್ಷ, ಡಿಗ್ರಿ ಓದಿರುವ ಬೆಂಗಳೂರಿಗರಿಗೆ ಮಾತ್ರ, ಮಾಸಿಕ ರೂ. 40,000/ ಗಳಿಸಿ: 9741401834

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್

Agricultural Land

Out-Station

7 ACRE 32 Gunta Land, Near Umapur Cross Village, Halli Mattala, Taluqa , Basvakalyanan Dist., Bidar, Karnataka. Basvakalyan Bangla to Site 8KM Hyderabad City to Site 200 KM, Cont. 9393847551 / 9391603738

Mathikere

URGENT SALE of 2Bhk furnished flat 1257sqft Muthyalanagara 6500/-per sqft slightly negotiable. 9686973320

Farm House/ Land/ Resorts

Out-Station

ಕೃಷಿ ತೋಟ ಮಾರಾಟಕ್ಕಿದೆ. ಹೊನ್ನಾಳಿ ತಾಲ್ಲೂಕು, ಹೊನ್ನಾಳಿ ಹರಿಹರ ರಸ್ತೆಯ ಮಾಸಡಿ ಗ್ರಾಮದ ಹತ್ತಿರ, 5.2 ಎಕೆರೆಯುಳ್ಳ ತೆಂಗು, ಶ್ರೀಗಂಧ, ಖಾಲಿ ಜಮೀನು ಹಾಗೂ ಸುಸಜ್ಜಿತ ತೋಟದ ಮನೆ ಮಾರಾಟಕ್ಕಿವೆ. ಸಂಪರ್ಕಿಸಿ: 8792554159, 9036600199, 9972497841

ಸೌಂದರ್ಯ-ಆರೋಗ್ಯ

Skin Care

PHYSICAL MODALITIES/MEN/ women/couples clear body hairs- gow9480178776gowthamk8@gmail.com

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕ ಪ್ರಕಟಣೆ
ಈ ಕೆಳಗೆ ನಮೂದಿಸಿರುವ ಸ್ವತ್ತು ನನ್ನ ಕಕ್ಷಿದಾರರಾದ ಶ್ರೀ ಎಂ.ಎ. ರವೀಂದ್ರ, ಎಂಬುವರಿಗೆ ಸೇರಿದ್ದು. ಸದರಿಯವರು ಈ ಸ್ವತ್ತಿಗೆ ಸಂಬಂಧಪಟ್ಟಂತೆ ಮಾನ್ಯ ಉಚ್ಚನ್ಯಾಯಾಲಯದಲ್ಲಿ ಆರ್.ಎಸ್.ಎ.ನಂ.1145/2020 ಎಂಬ ಪ್ರಕರಣ ನಡೆಯುತ್ತಿರುವುದರಿಂದ ಯಾವುದೇ ವ್ಯಕ್ತಿಯು ಈ ಸ್ವತ್ತನ್ನು ಖರೀದಿ ಮಾಡಿದಲ್ಲಿ ಅದಕ್ಕೆ ನನ್ನ ಕಕ್ಷಿದಾರರು ಜವಾಬ್ದಾರರಾಗಿರುವುದಿಲ್ಲ. ಸದರಿ ಸ್ವತ್ತು ಯಾವುದೇ ತರಹದ ಮಾರಾಟಕ್ಕಿರುವುದಿಲ್ಲ. ಒಂದು ವೇಳೆ ಯಾರಾದರೂ ಈ ಕೆಳಗೆ ನಮೂದಿಸಿರುವ ಸ್ವತ್ತನ್ನು ಖರೀದಿ ಮಾಡಿದಲ್ಲಿ ಅದಕ್ಕೆ ನನ್ನ ಕಕ್ಷಿದಾರರು ಜವಾಬ್ದಾರರಾಗಿರುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸುತ್ತೇನೆ.
ಷೆಡ್ಯೂಲು ಸ್ವತ್ತಿನ ವಿವರ
ಚನ್ನಪಟ್ಟಣ ಮುನಿಸಿಪಾಲಿಟಿ ವ್ಯಾಪ್ತಿಗೆ ಸೇರಿದ ಕುವೆಂಪು ನಗರ, 5ನೇ ಅಡ್ಡರಸ್ತೆ, ಖಾತಾ ನಂ. 5358/518 ರ ವಿಸ್ತೀರ್ಣ ಪೂರ್ವ–ಪಶ್ಚಿಮ 100 ಅಡಿಗಳು ಮತ್ತು ಉತ್ತರ– ದಕ್ಷಿಣ 35 ಅಡಿಗಳುಳ್ಳ ಸ್ವತ್ತಿಗೆ ಚಕ್ಕುಬಂದಿ:- ಪೂರ್ವಕ್ಕೆ : ಖಾಸಗೀ ಸ್ವತ್ತು, ಪಶ್ಚಿಮಕ್ಕೆ : ಅಡ್ಡರಸ್ತೆ, ಉತ್ತರಕ್ಕೆ : ಕೃಷ್ಣೋಜಿ ರಾವ್‌ರವರ ಸ್ವತ್ತು, ದಕ್ಷಿಣಕ್ಕೆ : ಕನ್ಸರ್‌ವೆನ್ಸಿ.
ಎಸ್.ಆರ್. ನಾಯಕ್ ಅಸೋಸಿಯೇಟ್ಸ್, ವಕೀಲರು
ನಂ.147/1 2ನೇ ಅಡ್ಡರಸ್ತೆ, ಶ್ರೀರಾಮ ರಸ್ತೆ, ಟಿ.ಆರ್.ನಗರ ಬೆಂಗಳೂರು
ಮೊ:9844067808/9845381250
ಸ್ಥಳ: ಬೆಂಗಳೂರು – ದಿನಾಂಕ : 02.07.2022

ಭವಿಷ್ಯ

Astrology

★||ಶ್ರೀದುರ್ಗಾಪರಮೇಶ್ವರಿ ದೇವಿ ಜ್ಯೋತಿಷ್ಯರು||★ ಆರೋಗ್ಯ, ದಾಂಪತ್ಯ, ಸ್ತ್ರೀಪುರುಷ ಪ್ರೇಮವಿಚಾರ ಪ್ರೀತಿಯಲ್ಲಿಮೋಸ, ಅತ್ತೆಸೊಸೆ ಸಮಸ್ಯೆ, ವಿದ್ಯಾಭ್ಯಾಸ ಕೋರ್ಟ್ ಕಛೇರಿ ಇತ್ಯಾದಿ. 8050061378

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

ಜನ್ಮಾಂತರ ಸಮ್ಮೋಹಿನಿ ಚಿಕಿತ್ಸೆ: ಎಲ್ಲಾ ರೀತಿಯ ದೈಹಿಕ, ಮಾನಸಿಕ ಕಾಯಿಲೆಗಳು, ನಿಮ್ಮೆಲ್ಲಾ ರೀತಿಯ ಪರಿಹಾರವಾಗದ ಸಮಸ್ಯೆಗಳು, ಜನ್ಮ ಜನ್ಮಾಂತರಗಳ ದೋಷಗಳ ನಿವಾರಣೆಗಾಗಿ ಕೂಡಲೇ ಸಂಪರ್ಕಿಸಿ: 7676750280

★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2 ದಿನದಲ್ಲಿ ಪರಿಹಾರ.9886755306

ವೈವಾಹಿಕ

Brides Wanted

Second Marriage

ಎರಡನೇ ವಿವಾಹದ ವರನಿಗೆ ವಧು ಬೇಕಾಗಿದೆ. 9019976891

ಇತರೆ

Books & Periodicals

ನಿಮ್ಮಲ್ಲಿರುವ ಹಸ್ತಪ್ರತಿಗಳು (ಕನ್ನಡ) ಪುಸ್ತಕ ರೂಪದಲ್ಲಿ ಬರಬೇಕೆ? ನೀವು ಇಂಗ್ಲಿಷ್-ಕನ್ನಡ, ತೆಲುಗು-ಕನ್ನಡ ಭಾಷಾಂತರಕಾರರೇ? ನಿಮ್ಮ ಪುಸ್ತಕಗಳನ್ನು ವಿತರಿಸಬೇಕೆ? ಕೂಡಲೇ ಸಂಪರ್ಕಿಸಿ: ವಾಸನ್ ಪಬ್ಲಿಕೇಶನ್ಸ್ 9845029297 www.mastermindbooks.com

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD ಪ್ರಜಾವಾಣಿ
Classifieds EDUCATION SPECIAL
SPECIAL RATES FOR • Admission Notice, Education Success • Congratulation Ads
For More Details Contact:
Jerry Louis : 9731810277 | Ravichandra : 9901641752
Vishal GM : 9845114560 | Tanveer : 9886213331
Email : dhclassifieds@deccanherald.co.in

ಹಾರಂಗಿ ಜಲಾಶಯಕ್ಕೆ ಭಾರಿ ಪ್ರಮಾಣದಲ್ಲಿ ನೀರು

10 ಸಾವಿರ ಕ್ಯುಸೆಕ್ ನೀರು ಹೊರಕ್ಕೆ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಬಹುತೇಕ ಕಡೆ ಶುಕ್ರವಾರ ರಾತ್ರಿಯಿಂದ ಶನಿವಾರ ಸಂಜೆಯವರೆಗೂ ಎಡೆಬಿಡದೇ ಮಳೆ ಸುರಿದಿದೆ. ಇದರ ಪರಿಣಾಮ ಹಾರಂಗಿ ಜಲಾಶಯಕ್ಕೆ ಭಾರಿ ಪ್ರಮಾಣದಲ್ಲಿ ನೀರು ಹರಿದು ಬರುತ್ತಿದ್ದು, 10 ಸಾವಿರ ಕ್ಯುಸೆಕ್ ನೀರನ್ನು ಹೊರಬಿಡಲಾಗುತ್ತಿದೆ. ಹಳ್ಳ, ಕೊಳ್ಳಗಳೆಲ್ಲ ಭರ್ತಿಯಾಗಿ ಪಯಸ್ವಿನಿ ನದಿ ತುಂಬಿ ಹರಿಯುತ್ತಿದೆ.

ಇಲ್ಲಿನ ಚೆಂಬು ಹಾಗೂ ಸುತ್ತಮುತ್ತಲ ಗ್ರಾಮಗಳಲ್ಲಿ 19 ಸೆಂ.ಮೀ ಮಳೆಯಾಗಿದೆ. ಮೂರ್ನಾಡು ಬಲಮುರಿ ಚಿಕ್ಕ ಸೇತುವೆ ಮುಳುಗಡೆಯಾಗಿದೆ. ಸಂಪಾಜೆ ಗ್ರಾಮದ ಕೆಲವೆಡೆ ಮಣ್ಣು ಕುಸಿದಿದೆ. ಕೆಲವು ಮನೆಗಳಿಗೆ ನೀರು ನುಗ್ಗಿದೆ. ಹಲವು ತೋಟಗಳು ಜಲಾವೃತವಾಗಿವೆ.

ನಾಪೋಕ್ಲು, ಕಕ್ಕಬ್ಬೆ, ಭಾಗಮಂಡಲ ವ್ಯಾಪ್ತಿಯಲ್ಲಿ ಮಳೆ ಬಿರುಸಾಗಿದ್ದು, ನದಿ ತೊರೆಗಳು ಉಕ್ಕಿ ಹರಿಯುತ್ತಿವೆ. ಬೆಟ್ಟ ಶ್ರೇಣಿಗಳಲ್ಲಿ ಶುಕ್ರವಾರ ರಾತ್ರಿ ಸುರಿದ ಮಳೆಗೆ ಕಾವೇರಿ ನದಿ ತುಂಬಿ ಹರಿಯುತ್ತಿದೆ. ಭಾಗಮಂಡಲ - ಕರಿಕೆ ರಸ್ತೆಯ ಬದಿಯಲ್ಲಿ ಜಲಧಾರೆಗಳು ಭೋರ್ಗರೆಯುತ್ತಿವೆ. ಪಯಸ್ವಿನಿ ನದಿಯಿಂದ ಮಡಿಕೇರಿ–ಮಂಗಳೂರು ರಸ್ತೆಯ ಚರಂಡಿಗೆ ಮೀನುಗಳು ಬಂದಿವೆ.

ಮಡಿಕೇರಿ– ಮಂಗಳೂರು ರಸ್ತೆ, ವಿರಾಜಪೇಟೆ– ಮಾಕುಟ್ಟ ರಾಜ್ಯ ಹೆದ್ದಾರಿಯಲ್ಲಿ ಮರಗಳು ಬಿದ್ದಿವೆ. ತುರ್ತು ಸ್ಪಂದನ ತಂಡಗಳು ಮರಗಳನ್ನು ತೆರವುಗೊಳಿಸಿವೆ. ಗೋಣಿಕೊಪ್ಪಲು, ಶ್ರೀಮಂಗಲ, ಕುಟ್ಟ, ಬಿರುನಾಣಿ, ಬಿ.ಶೆಟ್ಟಿಗೇರಿ, ಕುಂದ ಭಾಗದಲ್ಲಿ ಶುಕ್ರವಾರ ಜೋರು ಮಳೆಯಾಗಿದೆ.

ಕರಾವಳಿ: ಕಡಲ್ಕೊರೆತ ಹೆಚ್ಚಳ, ಅಲ್ಲಲ್ಲಿ ಭೂ ಕುಸಿತ

ಮಂಗಳೂರು/ಉಡುಪಿ: ಕರಾವಳಿ ಜಿಲ್ಲೆಗಳಲ್ಲಿ ಕೆಲವು ದಿನಗಳಿಂದ ಕಡಲ್ಕೊರೆತ ತೀವ್ರಗೊಂಡಿದೆ. ಅರಬ್ಬೀ ಸಮುದ್ರದಲ್ಲಿ ಏಳುತ್ತಿರುವ ದೈತ್ಯ ಅಲೆಗಳಿಂದಾಗಿ ಉಳ್ಳಾಲ ತಾಲ್ಲೂಕಿನ ಬಟ್ಟಪ್ಪಾಡಿಯಲ್ಲಿ ಕಿನಾರೆಯಲ್ಲಿದ್ದ ಐದು ತೆಂಗಿನಮರಗಳು ಸಮುದ್ರ ಪಾಲಾಗಿವೆ. ಕಿನಾರೆಯಲ್ಲಿ ಹಾಕಿದ್ದ ಕಲ್ಲುಗಳನ್ನೂ ಭಾರಿ ಗಾತ್ರದ ಅಲೆಗಳು ಸೆಳೆದೊಯ್ದಿವೆ.

ಸೋಮೇಶ್ವರದ ಭೋವಿ ಪ್ರದೇಶದಲ್ಲಿ ಮೀರಾಬಾಯಿ ಹಾಗೂ ಶಶಿಕಿರಣ್ ಎಂಬುವರ ಮನೆಗಳು ಅಪಾಯಕ್ಕೆ ಸಿಲುಕಿವೆ. ಉಳ್ಳಾಲ ಸೀ–ಗ್ರೌಂಡ್ ಬಳಿ 20 ಮನೆಗಳು ಹಾನಿಗೊಳಗಾಗುವ ಭೀತಿ ಎದುರಿಸುತ್ತಿವೆ.

ಪಶ್ಚಿಮ ಘಟ್ಟದ ತಪ್ಪಲಿನಲ್ಲಿ ಎಡೆಬಿಡದೆ ಮಳೆ ಸುರಿಯುತ್ತಿದ್ದು, ಮಡಿಕೇರಿ – ಮಂಗಳೂರು ಹೆದ್ದಾರಿಗೆ ಮದೆನಾಡು – ಜೋಡುಪಾಲ ನಡುವೆ ಶನಿವಾರ ಗುಡ್ಡದ ಮಣ್ಣು ಕುಸಿದುಬಿದ್ದಿದೆ. ಸುಳ್ಯ-ಪಾಣತ್ತೂರು ಅಂತರರಾಜ್ಯ ರಸ್ತೆಯಲ್ಲಿ ಮತ್ತೆ ಅಲ್ಲಲ್ಲಿ

ಮಡಿಕೇರಿ– ಭಾಗಮಂಡಲ ರಸ್ತೆಯಲ್ಲಿ ಶನಿವಾರ ಬಿದ್ದ ಮರವನ್ನು ತೆರವುಗೊಳಿಸಲಾಯಿತು

ಭೂ ಕುಸಿತ ಉಂಟಾಗಿದೆ. ಇದರಿಂದ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗಿತ್ತು.

ಸ್ನಾನ ಘಟ್ಟ ಭಾಗಶಃ ಮುಳುಗಡೆ: ಕುಮಾರಧಾರ ನದಿತುಂಬಿ ಹರಿಯುತ್ತಿದ್ದು, ಕುಕ್ಕೆ ಸುಬ್ರಹ್ಮಣ್ಯದ ಸ್ನಾನ ಘಟ್ಟ ಹಾಗೂ ಕಿಂಡಿ ಅಣೆಕಟ್ಟು ಮುಳುಗಡೆಯಾಗಿದೆ. ಉಡುಪಿ ಜಿಲ್ಲೆಯ ಹೆಬ್ರಿ ತಾಲ್ಲೂಕಿನ ನಾಡ್ಪಾಲಿನಲ್ಲಿ ರಾಜ್ಯದಲ್ಲೇ ಗರಿಷ್ಠ 22.9 ಸೆಂ.ಮೀ ಮಳೆ ಬಿದ್ದಿದೆ. ಹೆಬ್ರಿಯಲ್ಲಿ 22 ಸೆಂ.ಮೀ ಮಳೆಯಾಗಿದೆ. ಗಾಳಿ ಮಳೆಗೆ ಕಾಪು ತಾಲ್ಲೂಕಿನ ಕುರ್ಕಾಲು, ಯೇಣಗುಡ್ಡೆ, ಹೆಬ್ರಿ ತಾಲ್ಲೂಕಿನ ಶಿವಪುರ, ಬ್ರಹ್ಮಾವರದ ಕುಮ್ರಗೋಡು ಗ್ರಾಮದಲ್ಲಿ ಮನೆಗಳಿಗೆ ಹಾನಿಯಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜ ಪುರದ ತೋಟವೊಂದರಲ್ಲಿ ಕೊಂಬೆ ಬಿದ್ದು ಕಾರ್ಮಿಕ ಫ್ರಾನ್ಸಿಸ್(55) ಮೃತಪಟ್ಟಿದ್ದಾರೆ. ತುಂಗಾ, ಭದ್ರಾ ನದಿಗಳಲ್ಲಿ ಹರಿವಿನ ಪ್ರಮಾಣ ಹೆಚ್ಚಾಗಿದೆ. ಕೆರೆಕಟ್ಟೆಯಲ್ಲಿ 15.4, ಕಿಗ್ಗಾದಲ್ಲಿ 12.2, ಶೃಂಗೇರಿಯಲ್ಲಿ 11 ಸೆಂ.ಮೀ ಮಳೆಯಾಗಿದೆ.

ಉತ್ತರ ಕನ್ನಡ: ತಗ್ಗಿದ ಮಳೆ

ಕಾರವಾರ: ಉತ್ತರ ಕನ್ನಡದ ಕರಾವಳಿಯಲ್ಲಿ ಶನಿವಾರ ಮಳೆಯ ರಭಸ ತಗ್ಗಿದೆ. ಭಟ್ಕಳ, ಹೊನ್ನಾವರ ಸುತ್ತಮುತ್ತ, ಶಿರಸಿ, ಸಿದ್ದಾಪುರ ಭಾಗದಲ್ಲಿ ಸಾಧಾರಣ ಪ್ರಮಾಣದಲ್ಲಿ ಬಂದಿದೆ. ಹಳಿಯಾಳ, ಮುಂಡಗೋಡ ತಾಲ್ಲೂಕಿನ ಕೆಲವೆಡೆ ಬೆಳಿಗ್ಗೆ ಸ್ವಲ್ಪ ಹೊತ್ತು ತುಂತುರು ಹನಿಗಳು ಬಿದ್ದಿವೆ. ಕರಾವಳಿಯಲ್ಲಿ ಇದೇ 7ರ ತನಕ ವ್ಯಾಪಕ ಮಳೆಯಾಗುವ ಸಾಧ್ಯತೆಯಿದ್ದು, 6ರವರೆಗೆ 'ಯೆಲ್ಲೋ' ಅಲರ್ಟ್ ಹಾಗೂ 7ರಂದು 'ಆರೆಂಜ್ ಅಲರ್ಟ್' ಪ್ರಕಟಿಸಿ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಜೊಯಿಡಾ ತಾಲ್ಲೂಕಿನ ಅಣಶಿ ಘಟ್ಟದಲ್ಲಿ ಗುಡ್ಡದಿಂದ ದೊಡ್ಡ ಕಲ್ಲುಗಳು, ಮಣ್ಣು ಶನಿವಾರ ಕುಸಿದು ರಾಜ್ಯ ಹೆದ್ದಾರಿಗೆ ಬಿದ್ದಿವೆ.

ಲೈಂಗಿಕ ದೌರ್ಜನ್ಯ: ಪಿ.ಸಿ.ಜಾರ್ಜ್‌ಗೆ ಜಾಮೀನು

ತಿರುವನಂತಪುರ: ಲೈಂಗಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿ ಬಂಧನಕ್ಕೆ ಒಳಗಾಗಿದ್ದ ಕೇರಳದ ಮಾಜಿ ಶಾಸಕ ಪಿ.ಸಿ. ಜಾರ್ಜ್ ಅವರಿಗೆ ಶನಿವಾರ ರಾತ್ರಿ ಜಾಮೀನು ಲಭಿಸಿದೆ.

ಪಿ.ಸಿ. ಜಾರ್ಜ್ ಅವರು ಫೆಬ್ರುವರಿ 10ರಂದು ಅತಿಥಿಗೃಹದಲ್ಲಿ ತನ್ನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ಬಹುಕೋಟಿ ಸೌರಫಲಕ ಹಗರಣದ ಮಹಿಳಾ ಆರೋಪಿಯೊಬ್ಬರು ದೂರಿನಲ್ಲಿ ಆರೋಪಿಸಿದ್ದರು. ಹೀಗಾಗಿ ಅವರನ್ನು ಬಂಧಿಸಲಾಗಿತ್ತು. ಕೇರಳದ ಮಾಜಿ ಮುಖ್ಯಮಂತ್ರಿ ಉಮ್ಮನ್ ಚಾಂಡಿ ಹಾಗೂ ಕಾಂಗ್ರೆಸ್‌ನ ಕೆಲ ನಾಯಕರ ವಿರುದ್ಧವೂ ಇದೇ ಮಹಿಳೆ ಈ ಹಿಂದೆ ಲೈಂಗಿಕ ದೌರ್ಜನ್ಯ ಆರೋಪ ಮಾಡಿದ್ದರು. ಈ ಸಂಬಂಧ ಸಿಬಿಐ ತನಿಖೆ ನಡೆಯುತ್ತಿದೆ.

'ಉಮ್ಮನ್ ಚಾಂಡಿ ವಿರುದ್ಧ ಹೇಳಿಕೆ ನೀಡಬೇಕೆಂಬ ದೂರುದಾರ ಮಹಿಳೆಯ ಒತ್ತಡಕ್ಕೆ ಮಣಿಯದ ಕಾರಣ ನನ್ನ ವಿರುದ್ಧ ಈ ಆರೋಪ ಮಾಡಲಾಗಿದೆ' ಎಂದು ಜಾರ್ಜ್ ಹೇಳಿದ್ದರು.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಅಭಿಯಂತರರವರ ಕಛೇರಿ,
ಕ.ನೀ.ನಿ.ನಿ., ನಂ.6, ಕಾಲುವೆ ವಿಭಾಗ, ಬಳ್ಳಾರಿ.

ಅಲ್ಪಾವಧಿ ಟೆಂಡರ್ ಪ್ರಕಟಣೆ

ಉಲ್ಲೇಖ: ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 1275 ದಿನಾಂಕ:01.07.2022

ಉಲ್ಲೇಖದಲ್ಲಿನ ಈ ಕಛೇರಿಯ ವ್ಯಾಪ್ತಿಯಲ್ಲಿ ಬರುವ ಮಾನವ ಸಂಪನ್ಮೂಲ ಕಾಮಗಾರಿಗಳಿಗಾಗಿ ಲೆ.ಶೀ2701 ಅಡಿಯಲ್ಲಿ ರೂ.55.00 ಲಕ್ಷಗಳಿಂದ 91.95 ಲಕ್ಷಗಳವರೆಗಿನ 4 ಕಾಮಗಾರಿಗಳಿಗೆ (Supply of manpower) Two Cover ಟೆಂಡರ್‌ನ್ನು ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಕರೆಯಲಾಗಿದ್ದು, ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕವನ್ನು 11.07.2022 ರ ಸಂಜೆ: 4.00 ಗಂಟೆಯವರೆಗೆ ಮತ್ತು ತಾಂತ್ರಿಕ ಬಿಡ್ ತೆರೆಯುವ ದಿನಾಂಕವನ್ನು12.07.2022 ರಂದು ಸಂಜೆ: 4.30 ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು 14.07.2022 ರಂದು ಅಥವಾ ಮುಂದಿನ ಅನುಕೂಲಕರ ದಿನಾಂಕದಂದು ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಇ–ಪ್ರಕ್ಯೂರ್‌ಮೆಂಟ್ https://eproc.Karnataka.gov.in ವೆಬ್‌ಸೈಟ್‌ನಲ್ಲಿ / ಸದರಿ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಮಾಹಿತಿಯನ್ನು ಪಡೆಯಬಹುದು.

ಮುಂದುವರೆದು ಇನ್ನಿತರೆ ಯಾವುದಾದರೂ ತಿದ್ದುಪಡಿ, ಮಾರ್ಪಾಡು ಅಥವಾ ಇತರೆ ಬದಲಾವಣೆಗಳಿದ್ದಲ್ಲಿ https://eproc.Karnataka.gov.in ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು

ಸಹಿ/–ಕಾರ್ಯಪಾಲಕ ಅಭಿಯಂತರರು,
ಕ.ನೀ.ನಿ.ನಿ., ನಂ:6 ಕಾಲುವೆ ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/210/ಎಂಸಿಎ/2022–23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಚಿಕ್ಕಪೇಟೆ ವಿಭಾಗ, 8ನೇ ಮುಖ್ಯರಸ್ತೆ, 2ನೇ ಬ್ಲಾಕ್, ಜಯನಗರ, ಕನಕನಪಾಳ್ಯ, ಬೆಂಗಳೂರು–560 011
ಸಂಖ್ಯೆ: ಕಾ.ಅ/ಚಿ.ಪೇ.ವಿ/ಇ–ಪ್ರೊಕ್ಯೂರ್/06/2022–23 ದಿನಾಂಕ: 02.07.2022

ತಿದ್ದುಪಡಿ ಟೆಂಡರ್–1

ವಿಷಯ: ಟೆಂಡರ್ ಪ್ರಕಟಣೆಯನ್ನು ತಿದ್ದುಪಡಿ ಮಾಡುವ ಬಗ್ಗೆ.
ಉಲ್ಲೇಖ: 1. ಈ ಸಮಸಂಖ್ಯೆಯ ಅಲ್ಪಾವಧಿ ಟೆಂಡರ್ ಪ್ರಕಟಣೆಯ ದಿನಾಂಕ: 01.07.2022

ಮೇಲ್ಕಂಡ ವಿಷಯಕ್ಕೆ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಕಾರ್ಯಪಾಲಕ ಅಭಿಯಂತರರು, ಚಿಕ್ಕಪೇಟೆ ವಿಭಾಗದ ಕಚೇರಿಯಲ್ಲಿ ದಿನಾಂಕ: 01.07.2022 ರಂದು ಟೆಂಡರ್ ನಂ./ಇಇ/ಸಿ.ಕೆ.ಪಿ/ಇ–ಪ್ರೊಕ್ಯೂರ್/06/2022–23 ರಂತೆ ಟೆಂಡರನ್ನು ಕರೆಯಲಾಗಿದ್ದು, ಸದರಿ ಟೆಂಡರ್ ಪ್ರಕಟಣೆಯು ದಿನಾಂಕ: 02.07.2022 ರಂದು ಪ್ರಜಾವಾಣಿ ಮತ್ತು ಟೈಮ್ಸ್ ಆಫ್ ಇಂಡಿಯಾ ದಿನಪತ್ರಿಕೆಗಳಲ್ಲಿ ಪ್ರಕಟಗೊಂಡಿದ್ದು, ಸದರಿ ಪ್ರಕಟಣೆಯಲ್ಲಿನ ಷೆಡ್ಯೂಲ್ ದಿನಾಂಕಗಳನ್ನು ಈ ಕೆಳಕಂಡಂತೆ ತಿದ್ದುಪಡಿ ಮಾಡಲಾಗಿದೆ.

ಟೆಂಡರ್ ವೇಳಾಪಟ್ಟಿ: (1) ಬಿಡ್–ಪೂರ್ವಭಾವಿ ಸಭೆಯನ್ನು ಮುಖ್ಯ ಅಭಿಯಂತರರ ಕಚೇರಿ, (ದಕ್ಷಿಣ) ಇಲ್ಲಿ ದಿನಾಂಕ 08.07.2022ರ ಸಂಜೆ 4:30 ಗಂಟೆಗೆ ನಡೆಸಲಾಗುವುದು. (2) ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 21.07.2022ರ ಸಂಜೆ 4:00 ಗಂಟೆಯವರೆಗೆ. (3) ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 22.07.2022ರ ಸಂಜೆ 4:30 ಗಂಟೆಗೆ. (4) ಆರ್ಥಿಕ ಬಿಡ್‌ಗಳನ್ನು ತಾಂತ್ರಿಕ ಬಿಡ್‌ಗಳಿಗೆ ಅನುಮೋದನೆ ದೊರೆತ ನಂತರ ತೆರೆಯಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಚಿಕ್ಕಪೇಟೆ ವಿಭಾಗ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8
ನಾಳೆ
ಭ್ರಷ್ಟಾಚಾರ ನಿಗ್ರಹಕ್ಕೆ ಎಸಿಬಿ ಸಮರ್ಥವೇ?
ಸಂವಾದ ಬೆಳಿಗ್ಗೆ 11 ರಿಂದ 12
ಭಾಗವಹಿಸುವವರು:
ಎನ್. ನಾಗರಾಜ್ (ಮೀಸೆ), ನಿವೃತ್ತ ಎಸ್‌ಪಿ, ಬೆಂಗಳೂರು
ದೀಪಕ್.ಸಿ.ಎನ್., ಪ್ರಧಾನ ಕಾರ್ಯದರ್ಶಿ, ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ
ಉಷಾ ಮೋಹನ್, ಮಾಧ್ಯಮ ವಕ್ತಾರೆ, ಆಮ್ ಆದ್ಮಿ ಪಕ್ಷ, ಕರ್ನಾಟಕ
ಆದರ್ಶ ಅಯ್ಯರ್, ಸಹ ಅಧ್ಯಕ್ಷ, ಜನಾಧಿಕಾರ ಸಂಘರ್ಷ ಪರಿಷತ್, ಕರ್ನಾಟಕ

ಪುಲಿಟ್ಜರ್ ಪುರಸ್ಕೃತೆಗೆ ವಿಮಾನ ನಿಲ್ದಾಣದಲ್ಲಿ ತಡೆ

ನವದೆಹಲಿ (ಪಿಟಿಐ): ಪ್ಯಾರಿಸ್‌ಗೆ ಹೊರಟಿದ್ದ ಪುಲಿಟ್ಜರ್ ಪ್ರಶಸ್ತಿ ಪುರಸ್ಕೃತ ಕಾಶ್ಮೀರದ 'ಫೋಟೊ ಜರ್ನಲಿಸ್ಟ್' ಸನಾ ಇರ್ಷಾದ್ ಮಟ್ಟೊ ಅವರನ್ನು ದೆಹಲಿ ವಿಮಾನ ನಿಲ್ದಾಣದಲ್ಲಿ ವಲಸೆ ಅಧಿಕಾರಿಗಳು ಶನಿವಾರ ತಡೆದಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಸನಾ, 'ಪುಸ್ತಕ ಬಿಡುಗಡೆ ಹಾಗೂ ಛಾಯಾಚಿತ್ರ ಪ್ರದರ್ಶನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ದೆಹಲಿಯಿಂದ ವಿಮಾನದ ಮೂಲಕ ಪ್ಯಾರಿಸ್‌ಗೆ ತೆರಳಬೇಕಿತ್ತು. ಫ್ರಾನ್ಸ್ ದೇಶದ ವೀಸಾ ಇದ್ದರೂ ಕೂಡ ವಲಸೆ ಅಧಿಕಾರಿಗಳು ಪ್ಯಾರಿಸ್‌ಗೆ ಪ್ರಯಾಣಿಸದಂತೆ ತಡೆದಿದ್ದು ಅಚ್ಚರಿ ಮೂಡಿಸಿದೆ' ಎಂದು ಹೇಳಿದ್ದಾರೆ.

ಸನಾ ಅವರು ವಿದೇಶಕ್ಕೆ ಪ್ರಯಾಣಿಸದಂತೆ ಜಮ್ಮು ಮತ್ತು ಕಾಶ್ಮೀರದ ಪೊಲೀಸರು ನಿರ್ಬಂಧ ವಿಧಿಸಿರುವುದರಿಂದಾಗಿ ಅವರನ್ನು ನಿಲ್ದಾಣದಲ್ಲಿ ತಡೆಯಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಯುರೋಪ್‌ನಲ್ಲಿ ಮಂಕಿಪಾಕ್ಸ್ ಹೆಚ್ಚಳ: ಡಬ್ಲ್ಯುಎಚ್‌ಒ ಆತಂಕ

ಲಂಡನ್ (ಎಪಿ): ಯುರೋಪ್‌ನಲ್ಲಿ ಕಳೆದ ಎರಡು ವಾರಗಳಲ್ಲಿ ಮಂಕಿಪಾಕ್ಸ್ ಪ್ರಕರಣಗಳ ಸಂಖ್ಯೆ ಮೂರು ಪಟ್ಟು ಏರಿಕೆಯಾಗಿದೆ. ಹೀಗಾಗಿ ಈ ಭಾಗದ ದೇಶಗಳು ಕೂಡಲೇ ಸೋಂಕು ನಿಗ್ರಹಕ್ಕೆ ಕ್ರಮ ಕೈಗೊಳ್ಳಬೇಕು ಎಂದು ವಿಶ್ವ ಆರೋಗ್ಯ ಸಂಸ್ಥೆಯ ಯುರೋಪ್ ಮುಖ್ಯಸ್ಥ ಡಾ.ಹನ್ಸ್ ಕ್ಲುಗ್ ಅವರು ಶುಕ್ರವಾರ ಎಚ್ಚರಿಸಿದ್ದಾರೆ.

'ಏರುಗತಿಯಲ್ಲಿರುವ ಮಂಕಿಪಾಕ್ಸ್ ನಿಯಂತ್ರಣಕ್ಕೆ ಸರ್ಕಾರ ಮತ್ತು ನಾಗರಿಕ ಸಮಾಜ ಸಂಘಟಿತವಾಗಿ ತುರ್ತಾಗಿ ಕ್ರಮ ಕೈಗೊಳ್ಳಬೇಕು' ಎಂದು ಹೇಳಿದ್ದಾರೆ.

ಜಗತ್ತಿನಾದ್ಯಂತ 51 ದೇಶಗಳಲ್ಲಿ 5000ಕ್ಕೂ ಹೆಚ್ಚು ಮಂಕಿಪಾಕ್ಸ್ ಪ್ರಕರಣಗಳು ಪತ್ತೆಯಾಗಿವೆ. ಈ ಪೈಕಿ ಶೇ 90ರಷ್ಟು ಪ್ರಕರಣಗಳು ಯುರೋಪ್‌ನ 31 ದೇಶಗಳಲ್ಲಿ ಪತ್ತೆಯಾಗಿವೆ ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ.

ಗರ್ಭಪಾತಕ್ಕೆ ಅವಕಾಶ: ಕೆಳ ನ್ಯಾಯಾಲಯದ ಆದೇಶಕ್ಕೆ 'ಸುಪ್ರೀಂ' ತಡೆ

ಆಸ್ಟಿನ್ (ಎಪಿ): ಗರ್ಭಪಾತ ನಡೆಸಲು ರಾಜ್ಯದಲ್ಲಿನ ಕ್ಲಿನಿಕ್‌ಗಳಿಗೆ ಅವಕಾಶ ನೀಡುವ ಬಗ್ಗೆ ಕೆಳ ಹಂತದ ನ್ಯಾಯಾಲಯ ಹೊರಡಿಸಿದ್ದ ಆದೇಶವನ್ನು ಅಮೆರಿಕದ ಟೆಕ್ಸಾಸ್ ಸುಪ್ರೀಂಕೋರ್ಟ್ ತಡೆಹಿಡಿದಿದೆ. ಪ್ರಕರಣದ ವಿಚಾರಣೆಯನ್ನು ಈ ತಿಂಗಳ ಅಂತ್ಯಕ್ಕೆ ಮುಂದೂಡಿದೆ.

1973ರಲ್ಲಿ, ರೋ ಮತ್ತು ವೇಡ್ ನಡುವಣ ಪ್ರಕರಣದ ವಿಚಾರಣೆ ನಡೆಸಿದ್ದ ಅಮೆರಿಕದ ಸುಪ್ರೀಂಕೋರ್ಟ್ ಗರ್ಭಪಾತಕ್ಕೆ ಸಾಂವಿಧಾನಿಕ ಮಾನ್ಯತೆ ನೀಡಿತ್ತು. ಇದೇ ಜೂನ್ 24 ರಂದು ಸುಪ್ರೀಂಕೋರ್ಟ್‌ನ ನ್ಯಾಯಪೀಠವೊಂದು ಗರ್ಭಪಾತ ನಿಷೇಧದ ಪರವಾಗಿ ತೀರ್ಪು ಪ್ರಕಟಿಸಿತ್ತು. ಇದಾದ ನಂತರವೂ ಟೆಕ್ಸಾಸ್‌ನ ಕೆಳ ಹಂತದ ನ್ಯಾಯಾಲಯವು ಗರ್ಭಪಾತ ನಡೆಸಲು ರಾಜ್ಯದಲ್ಲಿನ ಕ್ಲಿನಿಕ್‌ಗಳಿಗೆ ಅವಕಾಶ ನೀಡಿತ್ತು.

ಕ್ರಿಕೆಟ್ ಟೆಸ್ಟ್: ರವೀಂದ್ರ ಜಡೇಜ ಶತಕ; ಆತಿಥೇಯರಿಗೆ ಆಘಾತ ನೀಡಿದ ಭಾರತದ ವೇಗಿಗಳು

ಬೂಮ್ರಾ ಆಟಕ್ಕೆ ಇಂಗ್ಲೆಂಡ್ ತಬ್ಬಿಬ್ಬು

ಬರ್ಮಿಂಗ್‌ಹ್ಯಾಂ (ಪಿಟಿಐ/ಎಎಫ್‌ಪಿ): ವಿಶ್ವದಾಖಲೆಯ ಬ್ಯಾಟಿಂಗ್‌ನ ಬೆನ್ನಲ್ಲೇ ಬೌಲಿಂಗ್‌ನಲ್ಲೂ ಬೆಂಕಿಯುಗುಳಿದ ಜಸ್‌ಪ್ರೀತ್ ಬೂಮ್ರಾ (35ಕ್ಕೆ 3), ಇಂಗ್ಲೆಂಡ್ ತಂಡಕ್ಕೆ ನುಂಗಲಾರದ ತುತ್ತಾಗಿ ಪರಿಣಮಿಸಿದರು.

ಹಂಗಾಮಿ ನಾಯಕನಾಗಿ ತಂಡವನ್ನು ಮುನ್ನಡೆಸುತ್ತಿರುವ ಬೂಮ್ರಾ ಅವರ ಆಲ್‌ರೌಂಡ್ ಆಟದ ನೆರವಿನಿಂದ ಐದನೇ ಹಾಗೂ ಕೊನೆಯ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಭಾರತ ಮೇಲುಗೈ ಸಾಧಿಸಿದೆ. ಮೊದಲ ಇನಿಂಗ್ಸ್‌ನಲ್ಲಿ 416 ರನ್ ಪೇರಿಸಿದ ಭಾರತ ಬಳಗ, ಎದುರಾಳಿ ತಂಡಕ್ಕೆ ಆಘಾತ ನೀಡಿದೆ.

ಶನಿವಾರ ಎರಡನೇ ದಿನದಾಟದ ಅಂತ್ಯಕ್ಕೆ ಬೆನ್ ಸ್ಟೋಕ್ಸ್ ಬಳಗ ಮೊದಲ ಇನಿಂಗ್ಸ್‌ನಲ್ಲಿ 5 ವಿಕೆಟ್‌ಗೆ 84 ರನ್ ಗಳಿಸಿದೆ. ಸ್ಟುವರ್ಟ್ ಬ್ರಾಡ್ ಅವರ ಒಂದೇ ಓವರ್‌ನಲ್ಲಿ 29 ರನ್ ಗಳಿಸಿ ದಾಖಲೆ ಮಾಡಿದ ಬೂಮ್ರಾ (16 ಎಸೆತಗಳಲ್ಲಿ 31), ಎದುರಾಳಿ ತಂಡದ ಅಗ್ರ ಕ್ರಮಾಂಕದ ಬ್ಯಾಟ್ಸ್‌ಮನ್‌ಗಳನ್ನು ಬೇಗನೇ ಪೆವಿಲಿಯನ್‌ಗಟ್ಟಿದರು.

ಅಲೆಕ್ಸ್ ಲೀಸ್ (6) ಅವರನ್ನು ಬೌಲ್ಡ್ ಮಾಡಿ ವಿಕೆಟ್ 'ಬೇಟೆ' ಆರಂಭಿಸಿದ ಬೂಮ್ರಾ, ಇನಿಂಗ್ಸ್‌ನ ಐದನೇ ಓವರ್‌ನಲ್ಲಿ ಜ್ಯಾಕ್ ಕ್ರಾಲಿ ಅವರನ್ನು ಶುಭಮನ್ ಗಿಲ್ ನೆರವಿನಿಂದ ಔಟ್ ಮಾಡಿದರು. ಒಲಿ ಪೋಪ್ ಅವರೂ ಭಾರತದ ವೇಗಿಯ ಮುಂದೆ ನಿರುತ್ತರರಾದರು.

ಜೊ ರೂಟ್ (31) ವಿಕೆಟ್ ಮೊಹಮ್ಮದ್ ಸಿರಾಜ್ ಪಾಲಾದರೆ, ಮೊಹಮ್ಮದ್ ಶಮಿ ಅವರು ಜಾಕ್ ಲೀಚ್ (0) ಅವರನ್ನು ಪೆವಿಲಿಯನ್‌ಗೆ ಕಳುಹಿಸಿದರು. ನಾಯಕ ಸ್ಟೋಕ್ಸ್ ಮತ್ತು ಬೆಸ್ಟೊ ಕ್ರೀಸ್‌ನಲ್ಲಿದ್ದರು.

ಮಳೆಯ ಕಾರಣ ಎರಡು ಸಲ ದಿನದಾಟಕ್ಕೆ ಅಡ್ಡಿ ಉಂಟಾಯಿತು. .

ಜಡೇಜ ಶತಕ: ಇದಕ್ಕೂ ಮುನ್ನ 3 ವಿಕೆಟ್‌ಗೆ 338 ರನ್‌ಗಳಿಂದ ಎರಡನೇ ದಿನದಾಟ ಆರಂಭಿಸಿದ ಭಾರತ, ಕೇವಲ 11.5 ಓವರ್‌ಗಳಲ್ಲಿ ಮತ್ತೆ 78 ರನ್ ಸೇರಿಸಿ ಆಲೌಟಾಯಿತು. ಬೂಮ್ರಾ ಅಬ್ಬರದ ಜತೆಯಲ್ಲಿ ರವೀಂದ್ರ ಜಡೇಜ ಅವರ ಶತಕದಾಟ ಭಾರತದ ಮೊತ್ತವನ್ನು 400ರ ಗಡಿ ದಾಟಿಸಿತು.

ಟೆಸ್ಟ್ ಕ್ರಿಕೆಟ್‌ನಲ್ಲಿ ಎರಡನೇ ಶತಕ ಗಳಿಸಿದ ಜಡೇಜ, ತಾನು ಎಲ್ಲ ಮಾದರಿಗಳ ಆಟಕ್ಕೆ ಸೈ ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿದರು. 83 ರನ್‌ಗಳೊಂದಿಗೆ ಆಟ ಮುಂದುವರಿಸಿದ ಅವರು ಆಕ್ರಮಣ ಮತ್ತು ರಕ್ಷಣೆಯನ್ನು ಮೈಗೂಡಿಸಿಕೊಂಡು ಆಡಿದರು. ಕೊನೆಯ ಮೂವರು ಬ್ಯಾಟ್ಸ್‌ಮನ್‌ಗಳ ನೆರವಿನಿಂದ 93 ರನ್‌ಗಳನ್ನು ಸೇರಿಸಿದರು. ನಾಲ್ಕೂವರೆ ಗಂಟೆ ಕ್ರೀಸ್‌ನಲ್ಲಿ ಕಳೆದ ಈ ಎಡಗೈ ಬ್ಯಾಟ್ಸ್‌ಮನ್ 194 ಎಸೆತಗಳನ್ನು ಎದುರಿಸಿ, 13 ಬೌಂಡರಿ ಗಳಿಸಿದರು.

60 ರನ್ ನೀಡಿ ಐದು ವಿಕೆಟ್ ಪಡೆದ ಜೇಮ್ಸ್ ಆ್ಯಂಡರ್ಸನ್ ಇಂಗ್ಲೆಂಡ್ ಪರ ಯಶಸ್ವಿ ಬೌಲರ್ ಎನಿಸಿಕೊಂಡರು. ಮ್ಯಾಟಿ ಪಾಟ್ಸ್ ಎರಡು ವಿಕೆಟ್ ಪಡೆದುಕೊಂಡರು. ಇಂಗ್ಲೆಂಡ್ ತಂಡ 'ಎಕ್ಸ್‌ಟ್ರಾ' ರೂಪದಲ್ಲಿ 40 ರನ್‌ಗಳ 'ಕೊಡುಗೆ' ನೀಡಿತು.

ಶತಕ ಗಳಿಸಿದ ಸಂಭ್ರಮದಲ್ಲಿ ರವೀಂದ್ರ ಜಡೇಜ –ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಭಾರತ 416 (84.5 ಓವರ್)
(ಶುಕ್ರವಾರ 7ಕ್ಕೆ 338)
ಜಡೇಜ ಬಿ ಆ್ಯಂಡರ್ಸನ್ 104 (194 ಎ, 4X13), ಶಮಿ ಸಿ ಲೀಚ್ ಬಿ ಬ್ರಾಡ್ 16 (31 ಎ, 4X3), ಬೂಮ್ರಾ ಔಟಾಗದೆ 31 (16 ಎ, 4X4, 6X2), ಸಿರಾಜ್ ಸಿ ಬ್ರಾಡ್ ಬಿ ಆ್ಯಂಡರ್ಸನ್ 2 (6 ಎ)
ಇತರೆ 40 (ಬೈ 4, ಲೆಗ್‌ಬೈ 17, ನೋಬಾಲ್ 14, ವೈಡ್ 5)
ವಿಕೆಟ್ ಪತನ: 8-371 (ಮೊಹಮ್ಮದ್ ಶಮಿ; 79.4), 9-375 (ರವೀಂದ್ರ ಜಡೇಜ; 82.2), 10-416 (ಮೊಹಮ್ಮದ್ ಸಿರಾಜ್; 84.5)
ಬೌಲಿಂಗ್: ಜೇಮ್ಸ್ ಆ್ಯಂಡರ್ಸನ್ 21.5-4-60-5, ಸ್ಟುವರ್ಟ್ ಬ್ರಾಡ್ 18-3-89-1, ಮ್ಯಾಟಿ ಪಾಟ್ಸ್ 20-1-105-2, ಜ್ಯಾಕ್ ಲೀಚ್ 9-0-71-0, ಬೆನ್ ಸ್ಟೋಕ್ಸ್ 13-0-47-1, ಜೋ ರೂಟ್ 3-0-23-1

ಇಂಗ್ಲೆಂಡ್ 5ಕ್ಕೆ 84 (27 ಓವರ್)
ಲೀಸ್ ಬಿ ಬೂಮ್ರಾ 6 (9 ಎ, 4X1), ಕ್ರಾಲಿ ಸಿ ಗಿಲ್ ಬಿ ಬೂಮ್ರಾ 9 (17 ಎ, 4X1), ಪೋಪ್ ಸಿ ಅಯ್ಯರ್ ಬಿ ಬೂಮ್ರಾ 10 (18 ಎ, 4X1), ರೂಟ್ ಸಿ ಪಂತ್ ಬಿ ಸಿರಾಜ್ 31 (67 ಎ, 4X4), ಬೆಸ್ಟೊ ಬ್ಯಾಟಿಂಗ್ 12 (47 ಎ, 4X1), ಲೀಚ್ ಸಿ ಪಂತ್ ಬಿ ಶಮಿ 0 (5ಎ), ಸ್ಟೋಕ್ಸ್ ಬ್ಯಾಟಿಂಗ್ 0 (4ಎ)
ಇತರೆ 16 (ಬೈ 8, ಲೆಗ್‌ಬೈ 3, ನೋಬಾಲ್ 5)
ವಿಕೆಟ್ ಪತನ: 1-16 (ಅಲೆಕ್ಸ್ ಲೀಸ್; 2.6), 2-27 (ಜ್ಯಾಕ್ ಕ್ರಾಲಿ; 4.1), 3-44 (ಒಲಿ ಪೋಪ್; 10.6), 4-78 (ಜೊ ರೂಟ್; 22.6), 5-83 (ಜಾಕ್ ಲೀಚ್, 25.3)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 11-1-35-3, ಮೊಹಮ್ಮದ್ ಶಮಿ 13-3-33-1, ಮೊಹಮ್ಮದ್ ಸಿರಾಜ್ 3-2-5-1

ಒಂದೇ ಓವರ್‌ನಲ್ಲಿ 35 ರನ್!

ಸ್ಟುವರ್ಟ್ ಬ್ರಾಡ್ ಹೆಸರಿಗೆ 'ಅನಪೇಕ್ಷಿತ' ದಾಖಲೆ

ಬರ್ಮಿಂಗ್‌ಹ್ಯಾಂ (ಪಿಟಿಐ): ಜಸ್‌ಪ್ರೀತ್ ಬೂಮ್ರಾ ಅವರ ಅಬ್ಬರದ ಆಟ, ಇಂಗ್ಲೆಂಡ್ ತಂಡದ ವೇಗದ ಬೌಲರ್ ಸ್ಟುವರ್ಟ್ ಬ್ರಾಡ್ ಅವರ ಹೆಸರಿಗೆ 'ಅನಪೇಕ್ಷಿತ' ದಾಖಲೆ ಸೇರುವಂತೆ ಮಾಡಿತು.

ಭಾರತದ ಮೊದಲ ಇನಿಂಗ್ಸ್‌ನಲ್ಲಿ ಬ್ರಾಡ್ ಬೌಲ್ ಮಾಡಿದ 84ನೇ ಓವರ್‌ನಲ್ಲಿ ಬೂಮ್ರಾ 29 ರನ್ ಕಲೆಹಾಕಿದರು. ಬೂಮ್ರಾ ಅಬ್ಬರದಲ್ಲಿ ಲಯ ತಪ್ಪಿದ ಬ್ರಾಡ್ ಅದೇ ಓವರ್‌ನಲ್ಲಿ ಐದು ವೈಡ್ ಮತ್ತು ಒಂದು ನೋಬಾಲ್ ಕೂಡಾ ಹಾಕಿದರು. ಒಟ್ಟಾರೆ 35 ರನ್ ಬಿಟ್ಟುಕೊಟ್ಟರು. ಟೆಸ್ಟ್ ಪಂದ್ಯದ ಓವರ್‌ನಲ್ಲಿ ಅತಿಹೆಚ್ಚು ರನ್ ಬಿಟ್ಟುಕೊಟ್ಟು 'ವಿಶ್ವದಾಖಲೆ' ಮಾಡಿದರು.

ದಕ್ಷಿಣ ಆಫ್ರಿಕಾದ ರಾಬಿನ್ ಪೀಟರ್‌ಸನ್, ಇಂಗ್ಲೆಂಡ್‌ನ ಜೇಮ್ಸ್ ಆ್ಯಂಡರ್ಸನ್ ಮತ್ತು ಜೋ ರೂಟ್ ಟೆಸ್ಟ್‌ನ ಓವರ್‌ವೊಂದರಲ್ಲಿ 28 ರನ್ ಬಿಟ್ಟುಕೊಟ್ಟಿದ್ದು ಇದುವರೆಗಿನ ದಾಖಲೆಯಾಗಿತ್ತು.

ಪೀಟರ್‌ಸನ್ ಓವರ್‌ನಲ್ಲಿ ವೆಸ್ಟ್ ಇಂಡೀಸ್‌ನ ಬ್ರಯನ್ ಲಾರಾ 28 ರನ್ (4,6,6,4,4,4) ಗಳಿಸಿದ್ದರು. ಆ್ಯಂಡರ್ಸನ್ ಬೌಲಿಂಗ್‌ನಲ್ಲಿ ಆಸ್ಟ್ರೇಲಿಯಾದ ಜಾರ್ಜ್ ಬೇಯ್ಲಿ (4,6,2,4,6,6) ಅಬ್ಬರದ ಆಟವಾಡಿದ್ದರು.

ಬ್ರಾಡ್ ಹಾಕಿದ ಓವರ್‌ನ ಮೊದಲ ಎಸೆತದಲ್ಲಿ ಬೂಮ್ರಾ ಬೌಂಡರಿ ಗಳಿಸಿದರು. ಎರಡನೇ ಎಸೆತ ವೈಡ್ ಆಗಿತ್ತು. ವಿಕೆಟ್ ಕೀಪರ್ ಕೈಗೂ ಸಿಗದೆ ಚೆಂಡು ಬೌಂಡರಿ ಗೆರೆ ದಾಟಿದ್ದರಿಂದ ಐದು ರನ್‌ಗಳು ಬಂದವು. ಮುಂದಿನ ಎಸೆತ ನೋಬಾಲ್ ಆಗಿದ್ದು, ಬೂಮ್ರಾ ಚೆಂಡನ್ನು ಸಿಕ್ಸರ್‌ಗೆ ಅಟ್ಟಿದರು. ಆ ಎಸೆತದಲ್ಲಿ ಒಟ್ಟು ಏಳು ರನ್‌ಗಳು ಬಂದವು.

ಮುಂದಿನ ಮೂರು ಎಸೆತಗಳಲ್ಲಿ ಬೌಂಡರಿಗಳು ಬಂದವು. ಐದನೇ ಎಸೆತದಲ್ಲಿ ಸಿಕ್ಸರ್ ಹಾಗೂ ಕೊನೆಯ ಎಸೆತದಲ್ಲಿ ಒಂದು ರನ್ ಗಳಿಸಿದರು.

ದುಬಾರಿ ಓವರ್	
ಎಸೆತ 1	4
ಎಸೆತ 2	5 (ವೈಡ್)
ಎಸೆತ 2	7 (ನೋಬಾಲ್+6)
ಎಸೆತ 2	4
ಎಸೆತ 3	4
ಎಸೆತ 4	4
ಎಸೆತ 5	6
ಎಸೆತ 6	1

ಜಸ್‌ಪ್ರೀತ್ ಬೂಮ್ರಾ –ಎಎಫ್‌ಪಿ ಚಿತ್ರ

ಅಂದು ಯುವರಾಜ್

ಸ್ಟುವರ್ಟ್ ಬ್ರಾಡ್ ಅವರು ಭಾರತ ತಂಡದಿಂದ 'ದಂಡನೆ'ಗೆ ಗುರಿಯಾದದ್ದು ಇದೇ ಮೊದಲಲ್ಲ. 2007ರ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಯುವರಾಜ್ ಸಿಂಗ್ ಅವರು ಬ್ರಾಡ್ ಓವರ್‌ನಲ್ಲಿ ಸತತ ಆರು ಸಿಕ್ಸರ್ ಹೊಡೆದಿದ್ದರು.

ಟಿ20 ಅಭ್ಯಾಸ ಪಂದ್ಯ: ಡರ್ಬಿಷೈರ್ ಮಣಿಸಿದ ಭಾರತ

ಮತ್ತೆ ಮಿಂಚಿದ ಹೂಡಾ

ಡರ್ಬಿ, ಇಂಗ್ಲೆಂಡ್ (ಪಿಟಿಐ): ಟಿ20 ಕ್ರಿಕೆಟ್‌ನಲ್ಲಿ ಭಾರತದ ದೀಪಕ್ ಹೂಡಾ ಅವರ ಭರ್ಜರಿ ಆಟ ಮುಂದುವರಿದಿದೆ.

ಡರ್ಬಿಷೈರ್ ವಿರುದ್ಧದ ಟಿ20 ಅಭ್ಯಾಸ ಪಂದ್ಯದಲ್ಲಿ ಹೂಡಾ 37 ಎಸೆತಗಳಲ್ಲಿ 59 ರನ್ ಗಳಿಸಿದರು. ಅವರ ಬಿರುಸಿನ ಆಟದ ಬಲದಿಂದ ಭಾರತ ತಂಡ ಏಳು ವಿಕೆಟ್‌ಗಳ ಜಯ ಸಾಧಿಸಿತು.

ಮೊದಲು ಬ್ಯಾಟ್ ಮಾಡಿದ ಡರ್ಬಿಷೈರ್ 20 ಓವರ್‌ಗಳಲ್ಲಿ 8 ವಿಕೆಟ್‌ಗೆ 150 ರನ್ ಗಳಿಸಿದರೆ, ಭಾರತ 16.4 ಓವರ್‌ಗಳಲ್ಲಿ ಮೂರು ವಿಕೆಟ್ ಕಳೆದುಕೊಂಡು ಗೆಲುವು ಪಡೆಯಿತು.

ಸಾಧಾರಣ ಗುರಿ ಬೆನ್ನಟ್ಟಿದ ಭಾರತ ತಂಡ ಋತುರಾಜ್ ಗಾಯಕವಾಡ್ (3) ಅವರನ್ನು ಬೇಗನೇ ಕಳೆದುಕೊಂಡಿತು. ಸಂಜು ಸ್ಯಾಮ್ಸನ್ (38 ರನ್, 30 ಎ, 4X4, 6X1) ಮತ್ತು ಹೂಡಾ ಎರಡನೇ ವಿಕೆಟ್‌ಗೆ 51 ರನ್ ಸೇರಿಸಿದರು.

ಹೂಡಾ ಆ ಬಳಿಕ ಮೂರನೇ ವಿಕೆಟ್‌ಗೆ ಸೂರ್ಯಕುಮಾರ್ ಯಾದವ್ (ಅಜೇಯ 36, 22 ಎ, 4X4, 6X1) ಜತೆ 78 ರನ್‌ಗಳನ್ನು ಕಲೆಹಾಕಿ ತಂಡದ ಗೆಲುವಿಗೆ ಕಾರಣರಾದರು.


ದೀಪಕ್ ಹೂಡಾ

ಐರ್ಲೆಂಡ್ ವಿರುದ್ಧದ ಎರಡನೇ ಟಿ20 ಪಂದ್ಯದಲ್ಲಿ ಶತಕ ಗಳಿಸಿದ್ದ ಹೂಡಾ, ಆರಂಭದಿಂದಲೇ ಆಕ್ರಮಣಕಾರಿ ಆಟವಾಡಿದರು. 5 ಬೌಂಡರಿ ಮತ್ತು 2 ಸಿಕ್ಸರ್ ನೆರವಿನಿಂದ ರನ್‌ರೇಟ್ ಹೆಚ್ಚಿಸಿದರು.

ಇದಕ್ಕೂ ಮುನ್ನ ಅರ್ಷದೀಪ್ ಸಿಂಗ್ (29ಕ್ಕೆ 2) ಮತ್ತು ಉಮ್ರನ್ ಮಲಿಕ್ (31ಕ್ಕೆ 2) ಅವರ ಪ್ರಭಾವಿ ಬೌಲಿಂಗ್ ನೆರವಿನಿಂದ ಭಾರತ, ಎದುರಾಳಿ ತಂಡವನ್ನು ಸಾಧಾರಣ ಮೊತ್ತಕ್ಕೆ ನಿಯಂತ್ರಿಸಿತ್ತು.

ಭಾರತ ತಂಡ ಭಾನುವಾರ ನಡೆಯಲಿರುವ ಎರಡನೇ ಅಭ್ಯಾಸ ಪಂದ್ಯದಲ್ಲಿ ನಾರ್ಥಾಂಪ್ಟನ್‌ಷೈರ್ ವಿರುದ್ಧ ಪೈಪೋಟಿ ನಡೆಸಲಿದೆ. ಇಂಗ್ಲೆಂಡ್ ವಿರುದ್ಧದ ಮೂರು ಪಂದ್ಯಗಳ ಟಿ20 ಸರಣಿ ಜುಲೈ 7 ರಿಂದ ನಡೆಯಲಿದೆ.

ಸಂಕ್ಷಿಪ್ತ ಸ್ಕೋರ್: ಡರ್ಬಿಷೈರ್ 8ಕ್ಕೆ 150 (20 ಓವರ್) ವೇಯ್ನ್ ಮ್ಯಾಡ್‌ಸೆನ್ 28, ಹಿಲ್ಟನ್ ಕಾರ್ಟ್‌ರೈಟ್ 27, ಬ್ರೂಕ್ ಗೆಸ್ಟ್ 23, ಅಲೆಕ್ಸ್ ಹ್ಯೂಸ್ 24, ಅಕ್ಷರ್ ಪಟೇಲ್ 18ಕ್ಕೆ 1, ಅರ್ಷದೀಪ್ ಸಿಂಗ್ 29ಕ್ಕೆ 2, ಉಮ್ರನ್ ಮಲಿಕ್ 31ಕ್ಕೆ 2, ವೆಂಕಟೇಶ್ ಅಯ್ಯರ್ 18ಕ್ಕೆ 1

ಭಾರತ 3ಕ್ಕೆ 151 (16.4 ಓವರ್) ಸಂಜು ಸ್ಯಾಮ್ಸನ್ 38, ದೀಪಕ್ ಹೂಡಾ 59, ಸೂರ್ಯಕುಮಾರ್ ಯಾದವ್ ಔಟಾಗದೆ 36, ದಿನೇಶ್ ಕಾರ್ತಿಕ್ ಔಟಾಗದೆ 7, ಬೆನ್ ಐಟಿಸನ್ 30ಕ್ಕೆ 2
ಫಲಿತಾಂಶ: ಭಾರತಕ್ಕೆ 7 ವಿಕೆಟ್ ಗೆಲುವು

ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ಆರಂಭಗೊಂಡ 24 ತಾಸುಗಳ ಏಷ್ಯಾ–ಒಷಿಯಾನಿಯಾ ಅಲ್ಟ್ರಾ ರನ್ ಚಾಂಪಿಯನ್‌ಷಿಪ್‌ನಲ್ಲಿ ವಿವಿಧ ದೇಶದ ಕ್ರೀಡಾಪಟುಗಳು ಪಾಲ್ಗೊಂಡಿದ್ದರು. ಭಾನುವಾರ ಬೆಳಿಗ್ಗೆ 8 ಗಂಟೆಗೆ ಸ್ಪರ್ಧೆ ಮುಕ್ತಾಯಗೊಳ್ಳಲಿದೆ – ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ಸಂಕ್ಷಿಪ್ತ ಸುದ್ದಿ

ವಿನೋದ್‌ಕುಮಾರ್ ತರಬೇತುದಾರ

ವಿನೋದ್‌ಕುಮಾರ್

ದಾವಣಗೆರೆ: ಬಹರೇನ್‌ನ ಮನಾಮದಲ್ಲಿ ಆರಂಭಗೊಂಡಿರುವ 20 ಮತ್ತು 15 ವರ್ಷದೊಳಗಿನವರ ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ಗೆ ಭಾರತ ತಂಡದ ಮುಖ್ಯ ತರಬೇತುದಾರರಾಗಿ ದಾವಣಗೆರೆಯ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವಸತಿಶಾಲೆಯ ಕುಸ್ತಿ ತರಬೇತುದಾರ ಕೆ.ವಿನೋದ್‌ಕುಮಾರ್ ತೆರಳಿದ್ದಾರೆ.

20 ವರ್ಷದೊಳಗಿನವರ ಗ್ರೀಕೊ ರೋಮನ್ ವಿಭಾಗದ ಕುಸ್ತಿಯ ತರಬೇತುದಾರರಾಗಿ ಅವರು ಕಾರ್ಯ-ನಿರ್ವಹಿಸುತ್ತಿದ್ದಾರೆ. ಜುಲೈ 2ರಂದು ಚಾಂಪಿಯನ್‌ಷಿಪ್ ಆರಂಭಗೊಂಡಿದ್ದು, 10ರವರೆಗೆ ನಡೆಯಲಿದೆ.

ಫೈನಲ್‌ಗೆ ಕಲ್ಪೈವನಿ

ನವದೆಹಲಿ (ಪಿಟಿಐ): ಭಾರತದ ಕಲೈವನಿ ಶ್ರೀನಿವಾಸನ್ ಅವರು ಕಜಕಸ್ತಾನದ ನೂರ್ ಸುಲ್ತಾನ್‌ನಲ್ಲಿ ನಡೆಯುತ್ತಿರುವ ಎಲೋರ್ದಾ ಕಪ್ ಬಾಕ್ಸಿಂಗ್ ಟೂರ್ನಿಯ ಫೈನಲ್ ತಲುಪಿದ್ದಾರೆ. ಕುಲದೀಪ್ ಕುಮಾರ್ ಸೆಮಿಫೈನಲ್‌ಗೆ ಕಾಲಿಟ್ಟಿದ್ದಾರೆ.

ಮಹಿಳೆಯರ 48 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿರುವ ಕಲೈವನಿ ನಾಲ್ಕರ ಘಟ್ಟದ ಬೌಟ್‌ನಲ್ಲಿ ಉಜ್ಬೆಕಿಸ್ತಾನದ ಫರ್ಜೋನಾ ಫೊಜಿಲೊವಾ ಎದುರು ಏಕಪಕ್ಷೀಯ-ವಾಗಿ ಜಯಿಸಿದರು.

ಮಹಿಳೆಯರ ವಿಭಾಗದ ಸೆಮಿಫೈನಲ್ ಬೌಟ್‌ಗಳಲ್ಲಿ ಸೋತ ಬಬಿತಾ ಬಿಸ್ತ್ (81 ಕೆಜಿ), ಜ್ಯೋತಿ (52 ಕೆಜಿ), ನೀಮಾ (63 ಕೆಜಿ) ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಫುಟ್‌ಬಾಲ್: ದಕ್ಷಿಣ ಕನ್ನಡಕ್ಕೆ ಪ್ರಶಸ್ತಿ

ಬೆಂಗಳೂರು: ದಕ್ಷಿಣ ಕನ್ನಡ ತಂಡವು ಅಂತರಜಿಲ್ಲಾ ಫುಟ್‌ಬಾಲ್ ಟೂರ್ನಿಯಲ್ಲಿ ಚಾಂಪಿಯನ್ ಆಯಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಫೈನಲ್ ಹಣಾಹಣಿಯಲ್ಲಿ ದಕ್ಷಿಣ ಕನ್ನಡ 2–0ಯಿಂದ ಕೋಲಾರಕ್ಕೆ ಸೋಲುಣಿಸಿತು. ವಿಜೇತ ತಂಡದ ಪರ ಐದನೇ ನಿಮಿಷದಲ್ಲೇ ಕಾಲ್ಚಳಕ ತೋರಿದ ಮೊಹಮ್ಮದ್ ಹಸನ್ ಮುನ್ನಡೆ ತಂದುಕೊಟ್ಟರು. 15ನೇ ನಿಮಿಷದಲ್ಲಿ ಫರಾಜ್ ಅಹಮ್ಮದ್ ಗೋಲು ದಾಖಲಿಸಿದರು.

ವೃದ್ಧಿಮಾನ್ ಸಹಾಗೆ ನಿರಾಕ್ಷೇಪಣಾ ಪತ್ರ

ಕೋಲ್ಕತ್ತ (ಪಿಟಿಐ): ವಿಕೆಟ್‌ಕೀಪರ್ ಬ್ಯಾಟರ್ ವೃದ್ಧಿಮಾನ್ ಸಹಾ ಅವರಿಗೆ ಬಂಗಾಳ ಕ್ರಿಕೆಟ್ ಸಂಸ್ಥೆಯು (ಸಿಎಬಿ) ಬೇರೆ ರಾಜ್ಯದ ಪರ ಆಡಲು ನಿರಾಕ್ಷೇಪಣಾ ಪತ್ರ (ಎನ್‌ಒಸಿ) ಪತ್ರ ನೀಡಿದೆ. ಇದರೊಂದಿಗೆ ಸಂಸ್ಥೆಯೊಂದಿಗಿನ 15 ವರ್ಷಗಳ ಒಡನಾಟವನ್ನು ಅವರು ಕಡಿದುಕೊಂಡಿದ್ದಾರೆ.

ಇತ್ತೀಚೆಗೆ ಸಹಾ ಅವರು ಆಟಗಾರ ಮತ್ತು ಮಾರ್ಗದರ್ಶಿಯಾಗಲು ತ್ರಿಪುರ ತಂಡದೊಂದಿಗೆ ಮಾತುಕತೆ ನಡೆಸಿದ್ದರು.

ಗುತ್ತಿಗೆ ಪದ್ಧತಿ ಜಾರಿಗೆ ಎಂಸಿಎ ನಿರ್ಧಾರ

ಮುಂಬೈ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಕೇಂದ್ರೀಯ ಗುತ್ತಿಗೆ ಪದ್ಧತಿಯ ರೀತಿಯಲ್ಲಿ ಪ್ರಥಮ ದರ್ಜೆ ಕ್ರಿಕೆಟಿಗರನ್ನು ಗುತ್ತಿಗೆ ಪದ್ಧತಿಯಡಿ ತರಲು ಮುಂಬೈ ಕ್ರಿಕೆಟ್ ಸಂಸ್ಥೆ (ಎಂಸಿಎ) ನಿರ್ಧರಿಸಿದೆ.

'ಇತ್ತೀಚೆಗೆ ನಡೆದ ಸಂಸ್ಥೆಯ ಆಡಳಿತ ಮಂಡಳಿ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಬಿಸಿಸಿಐನ ಕೇಂದ್ರೀಯ ಗುತ್ತಿಗೆ ಪದ್ದತಿಯ ರೀತಿಯಲ್ಲೇ ಈ ವ್ಯವಸ್ಥೆ ಜಾರಿಗೆ ತರಲಾಗುವುದು. ಸಂಸ್ಥೆಯ ಕ್ರಿಕೆಟ್ ಸುಧಾರಣಾ ಸಮಿತಿಯು (ಸಿಐಸಿ) ಗುತ್ತಿಗೆ ಪದ್ಧತಿಯ ರೂಪುರೇಷೆ ಸಿದ್ಧಪ-ಡಿಸಲಿದೆ' ಎಂದು ಎಂಸಿಎ ಅಧಿಕಾರಿ-ಯೊಬ್ಬರು ತಿಳಿಸಿದರು.

ಮಾಜಿ ಆಟಗಾರರಾದ ನೀಲೇಶ್ ಕುಲಕರ್ಣಿ, ಜತಿನ್ ಪರಾಂಜಪೆ ಮತ್ತು ವಿನೋದ್ ಕಾಂಬ್ಳಿ ಸಿಐಸಿಯಲ್ಲಿದ್ದಾರೆ.

ಮುಂಬೈ ತಂಡಕ್ಕೆ ₹ 1 ಕೋಟಿ: ರಣಜಿ ಟ್ರೋಫಿ ಟೂರ್ನಿಯಲ್ಲಿ 'ರನ್ನರ್ ಅಪ್' ಆದ ಮುಂಬೈ ತಂಡಕ್ಕೆ ₹ 1 ಕೋಟಿ ನಗದು ಬಹುಮಾನ ನೀಡಲು ಎಂಸಿಎ ಸಭೆಯಲ್ಲಿ ನಿರ್ಧರಿಸಲಾಗಿದೆ.

ಚಿನ್ನ, ಬೆಳ್ಳಿ

(ಬೆಂಗಳೂರು)

ಸ್ಟ್ಯಾಂಡರ್ಡ್ ಚಿನ್ನ (10 ಗ್ರಾಂ)	₹53,750
ಆಭರಣ ಚಿನ್ನ (1 ಗ್ರಾಂ)	₹4,966
ಬೆಳ್ಳಿ (ಕೆ.ಜಿಗೆ)	₹66,000

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1600 (1600)
ಸೋಯಾ (ರಿಫೈನ್ಡ್)	₹1330 (1335)
ಸೂರ್ಯಕಾಂತಿ (ರಿಫೈನ್ಡ್)	₹1650 (1650)
ಪಾಮೋಲಿನ್	₹1250 (1265)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹560
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹560

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹176
ಆರ್‌ಎಸ್‌ಎಸ್-5	₹166.5
ಗುಡ್ ಲಾಟ್	₹158

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು	
1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ಎಫ್‌ಐಐ: ₹ 6,836 ಕೋಟಿ ಹಿಂತೆಗೆತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾಗತಿಕ ಮಟ್ಟದಲ್ಲಿ ಹಣದುಬ್ಬರ ಏರಿಕೆ, ಕೇಂದ್ರೀಯ ಬ್ಯಾಂಕ್‌ಗಳಿಂದ ಬಡ್ಡಿದರ ಹೆಚ್ಚಳ ಹಾಗೂ ಡಾಲರ್ ಮೌಲ್ಯ ವೃದ್ಧಿಸುತ್ತಿರುವುದ-ರಿಂದ ಭಾರತದ ಷೇರುಪೇಟೆಯಿಂದ ವಿದೇಶಿ ಸಾಂಸ್ಥಿಕ ಬಂಡವಾಳ (ಎಫ್‌ಐಐ) ಹೊರಹರಿವು ಆಗುತ್ತಿದೆ. ಜುಲೈ 1ಕ್ಕೆ ಕೊನೆಗೊಂಡ ವಾರದಲ್ಲಿ ₹ 6,836 ಕೋಟಿ ಬಂಡವಾಳ ಹಿಂದಕ್ಕೆ ಪಡೆದಿದ್ದಾರೆ.

ಜೂನ್ 24ಕ್ಕೆ ಕೊನೆಗೊಂಡ ಇದಕ್ಕೂ ಹಿಂದಿನವಾರದಲ್ಲಿ ₹ 12,112 ಕೋಟಿ ಬಂಡವಾಳ ಹಿಂದಕ್ಕೆ ಪಡೆಯಲಾಗಿತ್ತು.

ಷೇರುಪೇಟೆಗಳ ವಾರದ ವಹಿವಾಟು ಸಕಾರಾತ್ಮಕವಾಗಿ ಅಂತ್ಯವಾಗಿದೆ. ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 180 ಅಂಶ ಹೆಚ್ಚಾಗಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 53 ಅಂಶ ಏರಿಕೆ ಕಂಡಿದೆ. ಮುಂಬೈ ಷೇರುಪೇಟೆಯ ಮಾರುಕಟ್ಟೆ ಬಂಡವಾಳ ಮೌಲ್ಯವು ₹ 243.87 ಲಕ್ಷ ಕೋಟಿಗಳಿಗೆ ತಲುಪಿದೆ.

'ಮುಂಬರುವ ಅಮೆರಿಕದ ಫೆಡರಲ್ ಓಪನ್ ಮಾರ್ಕೆಟ್ ಕಮಿಟಿ ಸಭೆಯ ನಿರ್ಧಾರಗಳ ಬಗ್ಗೆ ಹೂಡಿಕೆದಾರರು ಆಸಕ್ತಿ ಹೊಂದಿದ್ದಾರೆ. ಚೀನಾದ ಹಣದುಬ್ಬರ ಮಾಹಿತಿಯು ಮುಂದಿನ ವಾರ ಹೊರಬೀಳಲಿದ್ದು, ಜಾಗತಿಕ ಮಾರುಕಟ್ಟೆಯು ಅದರ ಪ್ರಭಾವಕ್ಕೆ ಒಳಗಾಗಲಿದೆ' ಎಂದು ಸ್ಯಾಮ್ಕೊ ಸೆಕ್ಯುರಿಟೀಸ್‌ನ ಈಕ್ವಿಟಿ ರಿಸರ್ಚ್‌ನ ಮುಖ್ಯಸ್ಥ ಯಶ್ ಶಾ ಹೇಳಿದ್ದಾರೆ.

'ಕಾರ್ಪೊರೇಟ್ ವಲಯದ 2022–23ನೇ ಹಣಕಾಸು ವರ್ಷದ ಮೊದಲ ತ್ರೈಮಾಸಿಕದ ವರದಿಯು ನಿರ್ದಿಷ್ಟ ಕಂಪನಿಯ ಷೇರಿನ ಮೌಲ್ಯ ಮತ್ತು ಷೇರುಪೇಟೆಗಳ ವಹಿವಾಟಿನ ಮೇಲೆ ಪ್ರಭಾವ ಬೀರಲಿವೆ' ಎಂದೂ ತಿಳಿಸಿದ್ದಾರೆ.

ಬಂಡವಾಳ ಹೊರಹರಿವಿನ ವಿವರ (ಕೋಟಿಗಳಲ್ಲಿ)	
ಜೂನ್ 27	₹1,278
28	₹1,244
29	₹851
30	₹1,138
ಜುಲೈ 1	₹2,325

ಆಕ್ಸಿಡೆಂಟಲ್‌ನ ಷೇರು ಖರೀದಿಸಿದ ಬರ್ಕ್‌ಷೈರ್ ಹ್ಯಾಥ್‌ವೇ

ನ್ಯೂಯಾರ್ಕ್ (ರಾಯಿಟರ್ಸ್): ಆಕ್ಸಿಡೆಂಟಲ್ ಪೆಟ್ರೋಲಿಯಂ ಕಾರ್ಪೊರೇಷನ್‌ನ 99 ಲಕ್ಷ ಷೇರುಗಳನ್ನು ಖರೀದಿ ಮಾಡಿರುವುದಾಗಿ ವಾರನ್ ಬಫೆಟ್ ಒಡೆತನದ ಬರ್ಕ್‌ಷೈರ್ ಹ್ಯಾಥ್‌ವೇ ಕಂಪನಿ ತಿಳಿಸಿದೆ.

ಬುಧವಾರದಿಂದ ಶುಕ್ರವಾರದ ನಡುವಿನ ಅವಧಿಯಲ್ಲಿ ₹ 4,597 ಕೋಟಿ ಮೊತ್ತ ಪಾವತಿಸಿ ಷೇರುಗಳನ್ನು ಖರೀದಿ ಮಾಡಲಾಗಿದೆ ಎಂದು ಯುಎಸ್ ಸೆಕ್ಯುರಿಟೀಸ್ ಆ್ಯಂಡ್ ಎಕ್ಸ್‌ಚೇಂಜ್ ಕಮಿಷನ್‌ಗೆ ಮಾಹಿತಿ ನೀಡಲಾಗಿದೆ.

ಬರ್ಕ್‌ಷೈರ್ ಕಂಪನಿಯು ಆಕ್ಸಿಡೆಂಟಲ್‌ನ ಅತಿದೊಡ್ಡ ಷೇರುದಾರ ಆಗಿದ್ದು, ₹ 78,210 ಕೋಟಿ ಮೌಲ್ಯದ 16.34 ಕೋಟಿ ಷೇರುಗಳನ್ನು ಹೊಂದಿದೆ.

ಷೇರುಪೇಟೆ ವಹಿವಾಟಿನಲ್ಲಿ ಏರಿಳಿತ; ಮಾರಾಟದ ಒತ್ತಡ

3 ಕಂಪನಿಗಳ ನಷ್ಟ ₹73,630 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಷೇರುಪೇಟೆಯಲ್ಲಿ ನೋಂದಾಯಿತ ಪ್ರಮುಖ 10 ಕಂಪನಿಗಳಲ್ಲಿ, ಮೂರು ಕಂಪನಿಗಳಿಗೆ ಆಗಿರುವ ನಷ್ಟವು ಏಳು ಕಂಪನಿಗಳ ಗಳಿಕೆಗಿಂತಲೂ ಹೆಚ್ಚು.

ಜುಲೈ 1ಕ್ಕೆ ಕೊನೆಗೊಂಡ ವಾರದಲ್ಲಿ ರಿಲಯನ್ಸ್, ಐಸಿಐಸಿಐ ಬ್ಯಾಂಕ್ ಮತ್ತು ಹಿಂದುಸ್ತಾನ್ ಯುನಿಲಿವರ್ ಕಂಪನಿಗಳ ಒಟ್ಟಾರೆ ನಷ್ಟವು ₹ 73,630 ಕೋಟಿ. ಇದೇ ಅವಧಿಯಲ್ಲಿ, ಟಿಸಿಎಸ್, ಎಸ್‌ಬಿಐ, ಎಲ್‌ಐಸಿ ಸೇರಿದಂತೆ ಏಳು ಕಂಪನಿಗಳ ಒಟ್ಟಾರೆ ಗಳಿಕೆ ₹49,441 ಕೋಟಿ. ಇವುಗಳಲ್ಲಿ ಎಸ್‌ಬಿಐ ಮಾರುಕಟ್ಟೆ ಮೌಲ್ಯವು ₹ 11,200 ಕೋಟಿಯಷ್ಟು ಗರಿಷ್ಠ ಏರಿಕೆ ಕಂಡಿದೆ.

ಅತ್ಯಂತ ಮೌಲ್ಯಯುತ ಕಂಪನಿಗಳ ಸಾಲಿನಲ್ಲಿ ಮೊದಲ ಸ್ಥಾನದಲ್ಲಿ ಇರುವ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ (ಆರ್‌ಐಎಲ್) ಸತತ ಎರಡನೇ ವಾರವೂ ನಷ್ಟ ಅನುಭವಿಸಿದೆ. ಜೂನ್ 24ಕ್ಕೆ ಕೊನೆಗೊಂಡ ವಾರದಲ್ಲಿ ₹84,352 ಕೋಟಿ ನಷ್ಟ ಅನುಭವಿಸಿತ್ತು. ಜುಲೈ 1ಕ್ಕೆ ಕೊನೆಗೊಂಡ ವಾರದಲ್ಲಿ ₹62,101 ಕೋಟಿ ನಷ್ಟ ಆಗಿದೆ. ಇದರಿಂದ ಕಂಪನಿಯ ಒಟ್ಟಾರೆ ಮಾರುಕಟ್ಟೆ ಮೌಲ್ಯವು ₹16.29 ಲಕ್ಷ ಕೋಟಿಗೆ ಇಳಿಕೆ ಆಗಿದೆ.

ಪೆಟ್ರೋಲಿಯಂ ಉತ್ಪನ್ನಗಳ ರಫ್ತಿನ ಮೇಲೆ ಕೇಂದ್ರ ಸರ್ಕಾರವು ಶುಕ್ರವಾರ ತೆರಿಗೆ ವಿಧಿಸಿದೆ. ಇದರಿಂದಾಗಿ ಶುಕ್ರವಾರ ಒಂದೇ ದಿನ ಕಂಪನಿಯ ಷೇರು ಮೌಲ್ಯ ಶೇ 7.14ರಷ್ಟು ಕುಸಿಯಿತು.

ಹಿಂದುಸ್ತಾನ್ ಯುನಿಲಿವರ್ (ಎಚ್‌ಯುಎಲ್) ಮಾರುಕಟ್ಟೆ ಮೌಲ್ಯದಲ್ಲಿ ₹ 4,875 ಕೋಟಿ, ಐಸಿಐಸಿಐ ಬ್ಯಾಂಕ್ ಮಾರುಕಟ್ಟೆ ಮೌಲ್ಯದಲ್ಲಿ ₹6,654 ಕೋಟಿ ಇಳಿಕೆ ಆಗಿದೆ.

ಪ್ರಮುಖ ಕಂಪನಿಗಳ ಬಂಡವಾಳ ಮೌಲ್ಯ (₹ ಕೋಟಿಗಳಲ್ಲಿ)

ಕಂಪನಿ	ಒಟ್ಟು ಮೌಲ್ಯ	ಏರಿಕೆ/ಇಳಿಕೆ
ರಿಲಯನ್ಸ್	16,29,684	62,101 ↓
ಟಿಸಿಎಸ್	12,13,396	8,489 ↑
ಎಚ್‌ಡಿಎಫ್‌ಸಿ ಬ್ಯಾಂಕ್	7,51,892	92 ↑
ಎಚ್‌ಯುಎಲ್	5,36,365	4,875 ↓
ಐಸಿಐಸಿಐ ಬ್ಯಾಂಕ್	4,89,700	6,654 ↓
ಎಲ್‌ಐಸಿ	4,28,044	9,519 ↑
ಎಸ್‌ಬಿಐ	4,16,690	11,200 ↑
ಎಚ್‌ಡಿಎಫ್‌ಸಿ	4,01,115	3,924 ↑
ಭಾರ್ತಿ ಏರ್‌ಟೆಲ್	3,69,833	1,043 ↑

ಮಾಹಿತಿ: ಬಿಎಸ್‌ಇ

'ಐ.ಟಿ. ಪೋರ್ಟಲ್‌ನಲ್ಲಿ ಬಗೆಹರಿಯದ ಸಮಸ್ಯೆ

ನವದೆಹಲಿ (ಪಿಟಿಐ): 'ಆದಾಯ ತೆರಿಗೆಯ ಇ-ಫೈಲಿಂಗ್ ಪೋರ್ಟಲ್ ಪ್ರವೇಶಿಸಲು ತೆರಿಗೆದಾರರು ಸಮಸ್ಯೆ ಎದುರಿಸುತ್ತಿದ್ದು, ಇನ್ಫೊಸಿಸ್ ಅದನ್ನು ಸರಿಪಡಿಸುತ್ತಿದೆ' ಎಂದು ಆದಾಯ ತೆರಿಗೆ ಇಲಾಖೆಯು ಶನಿವಾರ ತಿಳಿಸಿದೆ.

'ಪೋರ್ಟಲ್ ಪ್ರವೇಶಿಸಲು ತೆರಿಗೆದಾರರು ಸಮಸ್ಯೆ ಎದುರಿಸುತ್ತಿರುವುದು ಗಮನಕ್ಕೆ ಬಂದಿದೆ. ಪೋರ್ಟಲ್ ಪ್ರವೇಶಿಸುತ್ತಿರುವವ ಸಂಖ್ಯೆಯಲ್ಲಿ ಭಾರಿ ಏರಿಕೆ ಕಂಡುಬಂದಿದ್ದು, ಅದನ್ನು ನಿಯಂತ್ರಿಸಲು ಪೂರ್ವಭಾವಿ ಕ್ರಮಗಳನ್ನು ತೆಗೆದುಕೊಳ್ಳುತ್ತಿರುವುದಾಗಿ ಇನ್ಫೊಸಿಸ್ ಮಾಹಿತಿ ನೀಡಿದೆ' ಎಂದು ಇಲಾಖೆಯು ಟ್ವೀಟ್ ಮಾಡಿದೆ.

ಇನ್ಫೊಸಿಸ್ ಅಭಿವೃದ್ಧಿಪಡಿಸಿರುವ ಪೋರ್ಟಲ್ www.incometax.gov.inಗೆ 2021ರ ಜೂನ್ 7ರಂದು ಚಾಲನೆ ನೀಡಲಾಗಿತ್ತು. ಆ ದಿನದಿಂದಲೇ ಅದು ತಾಂತ್ರಿಕ ಸಮಸ್ಯೆಗಳನ್ನು ಎದುರಿಸುತ್ತಿದೆ. ಒಂದು ವರ್ಷ ಪೂರೈಸಿದ ದಿನವು ಸಹ ಪೋರ್ಟಲ್‌ಗೆ ಲಾಗಿನ್ ಆಗಲು ಸಾಧ್ಯ-ವಾಗುತ್ತಿಲ್ಲ ಎಂದು ಬಳಕೆದಾರರು ದೂರು ನೀಡಿದ್ದರು.

ಸೆಮಿಕಂಡಕ್ಟರ್ ಚಿಪ್ ಕೊರತೆ ಬಗೆಹರಿಯುವ ಸೂಚನೆ

ಜೂನ್: ವಾಹನ ಮಾರಾಟ ಏರಿಕೆ

ನವದೆಹಲಿ (ಪಿಟಿಐ): ಸೆಮಿಕಂಡಕ್ಟರ್ ಚಿಪ್ ಕೊರತೆಯು ನಿಧಾನವಾಗಿ ಬಗೆಹರಿಯುವ ಸೂಚನೆ ದೊರೆತಿರು-ವುದರಿಂದ ಜೂನ್‌ನಲ್ಲಿ ಪ್ರಯಾಣಿಕ ವಾಹನ ಮಾರಾಟ ಹೆಚ್ಚಾಗಿದೆ.

ಮಾರುತಿ ಸುಜುಕಿ, ಹುಂಡೈ, ಟಾಟಾ ಮೋಟರ್ಸ್ ಸೇರಿದಂತೆ ಪ್ರಮುಖ ಕಂಪನಿಗಳ ಮಾರಾಟವು 2021ರ ಜೂನ್‌ಗೆ ಹೋಲಿಸಿದರೆ 2022ರ ಜೂನ್‌ನಲ್ಲಿ ಏರಿಕೆ ಆಗಿದೆ.

ಮಾರುತಿ ಸುಜುಕಿ ಇಂಡಿಯಾ ಕಂಪನಿಯ ಸಗಟು ಮಾರಾಟವು 1.47 ಲಕ್ಷದಿಂದ 1.55 ಲಕ್ಷಕ್ಕೆ ಶೇ 5.7ರಷ್ಟು ಏರಿಕೆ ಆಗಿದೆ. ದೇಶಿ ಮಾರಾಟವು ಶೇ 1.28ರಷ್ಟು ಹೆಚ್ಚಾಗಿದೆ.

ಹುಂಡೈ ಮೋಟರ್ ಇಂಡಿಯಾದ ಒಟ್ಟಾರೆ ಮಾರಾಟವು ಶೇ 14.5ರಷ್ಟು ಏರಿಕೆ ಆಗಿದ್ದು, 62,351ಕ್ಕೆ ತಲುಪಿದೆ. ದೇಶಿ ಮಾರಾಟ ಶೇ 21ರಷ್ಟು ಹೆಚ್ಚಾಗಿದೆ.

ಹೊಸದಾಗಿ ಬಿಡುಗಡೆ ಮಾಡಿರುವ 'ಹುಂಡೈ ವೆನ್ಯು'ಗೆ ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ ಎಂದು ಕಂಪನಿಯ ಮಾರಾಟ ವಿಭಾಗದ ನಿರ್ದೇಶಕ ತರುಣ್ ಗರ್ಗ್ ಹೇಳಿದ್ದಾರೆ.

ಟಾಟಾ ಮೋಟರ್ಸ್ ಕಂಪನಿಯ ಪ್ರಯಾಣಿಕ ವಾಹನಗಳ ದೇಶಿ ಮಾರಾಟ ಶೇ 87ರಷ್ಟು ಹೆಚ್ಚಾಗಿದ್ದು, 45,197ಕ್ಕೆ ಏರಿಕೆ ಆಗಿದೆ.

ಕಿಯಾ ಇಂಡಿಯಾ ಮಾರಾಟ ಶೇ 60ರಷ್ಟು ಹೆಚ್ಚಾಗಿದೆ. ಎಂಜಿ ಮೋಟರ್ ಇಂಡಿಯಾ 4,503 ವಾಹನಗಳನ್ನು ಮಾರಾಟ ಮಾಡಿದ್ದು, ಶೇ 27ರಷ್ಟು ಮಾರಾಟ ಪ್ರಗತಿ ಸಾಧಿಸಿದೆ.

ಫೋಕ್ಸ್‌ವ್ಯಾಗನ್ ಪ್ಯಾಸೆಂಜರ್ಸ್ ಕಾರ್ಸ್ ಇಂಡಿಯಾ ಕಂಪನಿಯ ಮಾರಾಟವು ಎರಡು ಪಟ್ಟು ಹೆಚ್ಚಾಗಿದೆ.

ದ್ವಿಚಕ್ರ ವಾಹನ ಮಾರಾಟ ಹೆಚ್ಚಳ

ಪ್ರಮುಖ ಕಂಪನಿಗಳ ದ್ವಿಚಕ್ರ ವಾಹನ ಮಾರಾಟ ಸಹ ಜೂನ್‌ನಲ್ಲಿ ಹೆಚ್ಚಾಗಿದೆ. ಹೀರೊ ಮೋಟೊಕಾರ್ಪ್ ಕಂಪನಿಯ ಒಟ್ಟಾರೆ ಮಾರಾಟವು ಶೇ 3ರಷ್ಟು ಹೆಚ್ಚಾಗಿದೆ.

ಹೋಂಡಾ ಮೋಟರ್‌ಸೈಕಲ್ ಆ್ಯಂಡ್ ಸ್ಕೂಟರ್ ಇಂಡಿಯಾದ ದ್ವಿಚಕ್ರ ವಾಹನ ಮಾರಾಟವು ಶೇ 65ರಷ್ಟು ಏರಿಕೆ ಆಗಿದೆ. ಟಿವಿಎಸ್ ಮೋಟರ್ ಕಂಪನಿಯ ಒಟ್ಟಾರೆ ಮಾರಾಟ ಶೇ 22ರಷ್ಟು ಹೆಚ್ಚಾಗಿದೆ.

ಸುಜುಕಿ ಮೋಟರ್‌ಸೈಕಲ್‌ನ ಮಾರಾಟವು ಜೂನ್‌ನಲ್ಲಿ ಶೇ 37ರಷ್ಟು ಏರಿಕೆ ಕಂಡಿದೆ. ಬಜಾಜ್ ಆಟೊ ಕಂಪನಿಯ ದೇಶಿ ಮಾರಾಟ ಶೇ 20ರಷ್ಟು ಇಳಿಕೆ ಆಗಿದೆ.

ಮುಂಬೈ ಧಾರಣೆ

ಶೇಂಗಾ
2-7-2022

ಜಾವಾ 70/80(ಹೊಸ)	10800-10850
ಜಾವಾ 80/90(ಹೊಸ)	10400-10450
ದಪ್ಪ ಮಧ್ಯಪ್ರದೇಶ(ಹೊಸ)	10100-10200
ದಪ್ಪ ಗುಜರಾತ್(ಹೊಸ)	10850-10950

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1610 (1610)
ಒಂದು ವಾರದ ಡೆಲಿವರಿ	1605 (1605)
ಸೋಯಾ ಕಚ್ಚಾ	1240 (1260)
ಪಾಮ್ ವಾರದ ಡೆಲಿವರಿ	1248 (1563)
ಸೂರ್ಯಕಾಂತಿ ಎಣ್ಣೆ ಕಚ್ಚಾ	1610 (1610)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
52,025 (51,700)
ಬೆಳ್ಳಿ ಕೆ.ಜಿ 58,000 (57,800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-520
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	475
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-54500
ಮಂಗಳೂರು	
ಕೋಕ	20000-24500
ಹೊಸತು	38000-45000
ಹಳತು	51000-54500
ಚಿತ್ರದುರ್ಗ	
ಆಪಿ	49319-49729
ಬೆಟ್ಟೆ	39110-39559
ಕೆಂಪುಗೋಟು	29109-29549
ರಾಶಿ	48839-49269
ಶಿರಸಿ	
ಬೆಟ್ಟೆ	37199-45911
ಬಿಳಿಗೋಟು	16399-31899
ಚಾಲಿ	35199-38599
ರಾಶಿ	46099-47701
ಪುತ್ತೂರು	
ಕೋಕ	11000-26000
ಹೊಸತು	30500-43000

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16100	16000	16000	230.10 ಸೆಂಟ್ಸ್
ಎಸಿ	9100	8800	8800	
ಆರ್‌ಪಿ	9600	9500	9925	ಲಂಡನ್
ಆರ್‌ಸಿ	4800	4500	4600	2033 ಡಾಲರ್ಸ್

ವಿಂಬಲ್ಡನ್ ಗ್ರ್ಯಾನ್‌ಸ್ಲಾಮ್ ಟೆನಿಸ್ ಟೂರ್ನಿ: ಸಿಮೊನಾ ಹಲೆಪ್ ಜಯದ ಓಟ

ಪ್ರೀಕ್ವಾರ್ಟರ್‌ಫೈನಲ್‌ಗೆ ಟಾನ್

ಲಂಡನ್ (ರಾಯಿಟರ್ಸ್): ಫ್ರಾನ್ಸ್‌ನ ಹಾರ್ಮನಿ ಟಾನ್ ವಿಂಬಲ್ಡನ್ ಟೆನಿಸ್ ಟೂರ್ನಿಯಲ್ಲಿ ಗೆಲುವಿನ ಓಟ ಮುಂದುವರಿಸಿದ್ದಾರೆ. ಇದೇ ಮೊದಲ ಬಾರಿ ಗ್ರ್ಯಾನ್‌ಸ್ಲಾಮ್ ಟೂರ್ನಿಯೊಂದರ ಪ್ರೀಕ್ವಾರ್ಟರ್‌ಫೈನಲ್ ತಲುಪಿದ ಶ್ರೇಯ ಗಳಿಸಿದ್ದಾರೆ.

ಮೊದಲ ಸುತ್ತಿನ ಹಣಾಹಣಿಯಲ್ಲಿ ಏಳು ಬಾರಿಯ ವಿಂಬಲ್ಡನ್ ಚಾಂಪಿಯನ್ ಅಮೆರಿಕದ ಸೆರೆನಾ ವಿಲಿಯಮ್ಸ್ ಅವರಿಗೆ ಸೋಲುಣಿಸಿ ಟಾನ್ ಗಮನಸೆಳೆದಿದ್ದರು.

ಮಹಿಳಾ ಸಿಂಗಲ್ಸ್ ವಿಭಾಗದ ಮೂರನೇ ಸುತ್ತಿನ ಪಂದ್ಯದಲ್ಲಿ ಟಾನ್ ಶನಿವಾರ 6–1, 6–1ರಿಂದ ಬ್ರಿಟನ್‌ನ ಕೇಟಿ ಬೌಲ್ಟರ್ ಅವರನ್ನು ಮಣಿಸಿದರು. ಇದರೊಂದಿಗೆ ಸೆರೆನಾ ಎದುರಿನ ಗೆಲುವು ಆಕಸ್ಮಿಕವಲ್ಲ ಎಂದು ಸಾಬೀತು ಮಾಡಿದರು.

ಈ ಜಯದೊಂದಿಗೆ ಟಾನ್ ವೃತ್ತಿಜೀವನದಲ್ಲಿ ಮೊದಲ ಬಾರಿಗೆ ಟೂರ್ ಹಂತದ ಸತತ ಮೂರು ಪಂದ್ಯಗಳನ್ನು ಗೆದ್ದರು. ತವರಿನ ಪ್ರೇಕ್ಷಕರ ಅಪಾರ ಬೆಂಬಲವಿದ್ದರೂ ಬೌಲ್ಟರ್‌ಗೆ ಗೆಲುವು ದಾಖಲಿಸಲು ಸಾಧ್ಯವಾಗಲಿಲ್ಲ. ಟಾನ್ ಅವರ ವೈವಿಧ್ಯಮಯ ಆಟ ಹಾಗೂ ಅಂಗಣದ ‘ಕವರೇಜ್’ ಕೌಶಲಗಳ ಮುಂದೆ ಅವರು ತಲೆಬಾಗಿದರು. 21 ಅನಗತ್ಯ ತಪ್ಪುಗಳೂ ಅವರ ಸೋಲಿಗೆ ಕಾರಣವಾದವು.

ವಿಶ್ವ ರ್‍ಯಾಂಕಿಂಗ್‌ನಲ್ಲಿ 115ನೇ ಸ್ಥಾನದಲ್ಲಿರುವ ಟಾನ್, ಮುಂದಿನ ಪಂದ್ಯದಲ್ಲಿ ಅಮೆರಿಕದ ಅಮಂಡಾ ಅನಿಸಿಮೊವಾ ಅವರನ್ನು ಎದುರಿಸಲಿದ್ದಾರೆ. ಅಮಂಡಾ ಅನಿಸಿಮೊವಾ ಮೂರನೇ ಸುತ್ತಿನ ಇನ್ನೊಂದು ಹಣಾಹಣಿಯಲ್ಲಿ ತಮ್ಮದೇ ದೇಶದ ಕೊಕೊ ಗಫ್ ಅವರನ್ನು ಮಣಿಸಿದರು. ಅನಿಸಿಮೊವಾ ಅವರಿಗೆ 6–7 (4), 6–2, 6–1ರಿಂದಗೆಲುವು ಒಲಿಯಿತು.

ಮತ್ತೊಂದು ಪಂದ್ಯದಲ್ಲಿ ವಿಂಬಲ್ಡನ್ ಮಾಜಿ ಚಾಂಪಿಯನ್, ರುಮೇನಿಯಾದ ಸಿಮೊನಾ ಹಲೆಪ್ 6–4, 6–1ರಿಂದ ಪೋಲೆಂಡ್‌ನ ಮ್ಯಾಗ್ನಾಲಿನಾ ಫ್ರೆಚ್ ಅವರನ್ನು ಸೋಲಿಸಿದರು.

ಬಾರ್ಬರಾಗೆ ಅಜ್ಲಾ ಆಘಾತ: 2021ರ ಫ್ರೆಂಚ್ ಓಪನ್ ಮಹಿಳಾ ಸಿಂಗಲ್ಸ್ ಚಾಂಪಿಯನ್ ಬಾರ್ಬರಾ ಕ್ರೆಜಿಕೊವಾ ನಿರಾಸೆ ಅನುಭವಿಸಿದರು. ಮೂರನೇ ಸುತ್ತಿನ ಹಣಾಹಣಿಯಲ್ಲಿ ಆಸ್ಟ್ರೇಲಿಯಾದ ಅಜ್ಲಾ ತೋಮ್ಲಾಜನೊವಿಚ್ 2-6, 6-4, 6-3ರಿಂದ ಜೆಕ್ ಗಣರಾಜ್ಯದ ಆಟಗಾರ್ತಿಗೆ ಸೋಲುಣಿಸಿ ಪ್ರೀಕ್ವಾರ್ಟರ್‌ಫೈನಲ್ ತಲುಪಿದರು.

ಮೊದಲ ಸೆಟ್‌ನಲ್ಲಿ ಸುಲಭವಾಗಿ ಗೆದ್ದ ಬಾರ್ಬರಾ ಅವರಿಗೆ ನಂತರದ ಎರಡು ಸೆಟ್‌ಗಳಲ್ಲಿ ಅಜ್ಲಾ ತಿರುಗೇಟು ನೀಡಿದರು. ಪುರುಷರ ಸಿಂಗಲ್ಸ್ ಮೂರನೇ ಸುತ್ತಿನ ಪಂದ್ಯದಲ್ಲಿ ಚಿಲಿಯ ಕ್ರಿಸ್ಟಿಯನ್ ಗರಿನ್ 6–2, 6–3, 1–6, 6–4ರಿಂದ ಅಮೆರಿಕದ ಜೆನ್ಸನ್ ಬ್ರೂಕ್ಸ್‌ಬಿ ಅವರನ್ನು ಸೋಲಿಸಿದರು.

ಹಾರ್ಮನಿ ಟಾನ್ ಆಟದ ವೈಖರಿ– ಎಎಫ್‌ಪಿ ಚಿತ್ರ

ಇಗಾ ಸ್ವೆಟೆಕ್ ಓಟಕ್ಕೆ ತಡೆ

ವಿಶ್ವ ಕ್ರಮಾಂಕದಲ್ಲಿ ಅಗ್ರಸ್ಥಾನದಲ್ಲಿರುವ ಪೋಲೆಂಡ್ ಆಟಗಾರ್ತಿ ಇಗಾ ಸ್ವೆಟೆಕ್ ಅವರ 37 ಪಂದ್ಯಗಳ ಗೆಲುವಿನ ಓಟಕ್ಕೆ ತಡೆಬಿದ್ದಿದೆ.

ಮಹಿಳಾ ಸಿಂಗಲ್ಸ್ ಮೂರನೇ ಸುತ್ತಿನ ಸೆಣಸಾಟದಲ್ಲಿ ಸ್ವೆಟೆಕ್ 4–6, 2–6ರಿಂದ ಫ್ರಾನ್ಸ್‌ನ ಅಲಿಜ್ ಕಾರ್ನೆಟ್ ಎದುರು ಮಣಿದರು. ಈ ಬಾರಿಯ ಫ್ರೆಂಚ್ ಓಪನ್ ಟೂರ್ನಿಯಲ್ಲಿ ಸ್ವೆಟೆಕ್ ಪ್ರಶಸ್ತಿ ಜಯಿಸಿದ್ದರು.

ಈ ವರ್ಷದ ಫೆಬ್ರುವರಿಯಿಂದ ಸ್ವೆಟೆಕ್ ಒಂದೂ ಪಂದ್ಯ ಸೋತಿರಲಿಲ್ಲ. ಈ ಅವಧಿಯಲ್ಲಿ ಆರು ಪ್ರಶಸ್ತಿಗಳು ಅವರ ಪಾಲಾಗಿದ್ದವು.

ಸ್ಕ್ವಾಷ್: ಬೀಜಿಂಗ್ ಬೈಟ್ಸ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೀಜಿಂಗ್ ಬೈಟ್ಸ್ ತಂಡವು ಬೆಂಗಳೂರು ಸ್ಕ್ವಾಷ್ ಲೀಗ್‌ನಲ್ಲಿ ಪ್ರಶಸ್ತಿ ಜಯಿಸಿದೆ.

ಶನಿವಾರ ಇಲ್ಲಿ ನಡೆದ ಟೂರ್ನಿಯ ಫೈನಲ್ ಪಂದ್ಯದಲ್ಲಿ ಬೀಜಿಂಗ್ ಬೈಟ್ಸ್ 3-0, 3-0, 3-2, 3-0ರಿಂದ ಟೀಮ್ ಟೀಲ್ ಟೆರಸ್ಟ್ರಿಯಲ್ಸ್ ತಂಡವನ್ನು ಸೋಲಿಸಿತು.

5ರಿಂದ ಅಖಿಲ ಭಾರತ ಅಂತರ ವಿ.ವಿ ಕೊಕ್ಕೊ

ಪ್ರಜಾವಾಣಿ ವಾರ್ತೆ

ಮೈಸೂರು: ‘ಮೈಸೂರು ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ವಿಭಾಗದ ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ಜುಲೈ 5ರಿಂದ 7ರವರೆಗೆ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯದ ಮಹಿಳೆಯರ ಕೊಕ್ಕೊ ಟೂರ್ನಿ ಆಯೋಜಿಸಲಾಗಿದ್ದು, ದೇಶದ ನಾಲ್ಕು ವಲಯಗಳಿಂದ ತಲಾ 4ರಂತೆ 16 ತಂಡಗಳು ಭಾಗವಹಿಸಲಿವೆ’ ಎಂದು ವಿ.ವಿಯ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಕೃಷ್ಣಯ್ಯ ತಿಳಿಸಿದರು.

‘ಮೊದಲ ದಿನ ಲೀಗ್ ಪಂದ್ಯಗಳು ನಡೆಯಲಿದ್ದು, 2ನೇ ದಿನ ನಾಕೌಟ್, ಬಳಿಕ ಅಂತಿಮ ಹಂತದ ಪಂದ್ಯಗಳು ನಡೆಯಲಿವೆ. ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ’ ಎಂದು ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾಹಿತಿ ನೀಡಿದರು.

‘ಭಾರತೀಯ ವಿಶ್ವವಿದ್ಯಾಲಯಗಳ ಮಹಾಸಂಘವು ಈ ಬಾರಿ ಕೊಕ್ಕೊ ನಡೆಸಲು ವಿ.ವಿಗೆ ಜವಾಬ್ದಾರಿ ನೀಡಿದೆ. ಕುಲಪತಿ ನೇತೃತ್ವದಲ್ಲಿ ಸಂಘಟನಾ ಸಮಿತಿ ಹಾಗೂ ಇತರ 11 ಸಮಿತಿಗಳು ಕಾರ್ಯೋನ್ಮುಖವಾಗಿವೆ’ ಎಂದರು.

ಸಕಲ ಸಿದ್ಧತೆ: ‘ಸ್ಪೋರ್ಟ್ಸ್ ಪೆವಿಲಿಯನ್ ಆವರಣದಲ್ಲಿ ಮಣ್ಣಿನ 3 ಮೈದಾನ ಸಜ್ಜುಗೊಳಿಸಲಾಗಿದ್ದು, ಒಳಾಂಗಣದಲ್ಲಿ ಒಂದು ಮ್ಯಾಟ್ ಮೈದಾನ ಕೂಡ ಅಣಿಯಾಗಿದೆ. ಹವಾಮಾನ ಆಧರಿಸಿ ಮ್ಯಾಟ್‌ನಲ್ಲೂ ಪಂದ್ಯ ನಡೆಸಲಾಗುತ್ತದೆ’ ಎಂದು ಹೇಳಿದರು.

ವಿಶ್ವವಿದ್ಯಾಲಯದ ಪ್ರೊ.ಶಶಿನಾಥ್, ಡಾ.ಕೃಷ್ಣಕುಮಾರ್, ಸಿ.ಕೆ. ಮುರಳೀಧರ್ ಇದ್ದರು.

ಮ್ಯಾರಥಾನ್: ಎನ್‌ಎಂಡಿಸಿ ಪ್ರಾಯೋಜಕತ್ವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎನ್‌ಎಂಡಿಸಿಯು ಹೈದರಾಬಾದ್ ರನ್ನರ್ಸ್ ಸೊಸೈಟಿ ಜತೆ ಒಪ್ಪಂದ ಮಾಡಿಕೊಂಡಿದ್ದು, ಆ.27 ರಂದು ನಡೆಯಲಿರುವ ಹೈದರಾಬಾದ್ ಮ್ಯಾರ ಥಾನ್‌ಗೆ ‘ಟೈಟಲ್ ಪ್ರಾಯೋಜಕತ್ವ’ ವಹಿಸಿಕೊಂಡಿದೆ.

‘ಕಂಪನಿಯು ಜನರ ಫಿಟ್‌ನೆಸ್ ಮತ್ತು ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸುತ್ತಾ ಬಂದಿದೆ. ಪ್ರಧಾನ ಮಂತ್ರಿಯವರ ಫಿಟ್ ಇಂಡಿಯಾ ಪರಿಕಲ್ಪನೆಯಡಿ ಮ್ಯಾರಥಾನ್, ವಾಕಥಾನ್ ಮತ್ತು ಕ್ರೀಡಾಕೂಟಗಳಿಗೆ ಪ್ರೋತ್ಸಾಹ ನೀಡುತ್ತಿದೆ. ಇದರ ಭಾಗವಾಗಿ ಹೈದರಾಬಾದ್ ಮ್ಯಾರಥಾನ್‌ಗೆ ಸಹ ಪ್ರಾಯೋಜಕತ್ವ ವಹಿಸಿಕೊಂಡಿದ್ದೇವೆ’ ಎಂದು ಕಂಪನಿಯ ಸಿಎಂಡಿ ಸುಮಿತ್ ದೇಬ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಶ್ವಕಪ್ ಹಾಕಿ: ಭಾರತಕ್ಕೆ ಮುಯ್ಯಿ ತೀರಿಸುವ ತವಕ

ಆಮ್‌ಸ್ಟೆಲ್ವೀನ್, ನೆದರ್ಲೆಂಡ್ಸ್ (ಪಿಟಿಐ): ಭಾರತ ತಂಡದವರು ಮಹಿಳಾ ವಿಶ್ವಕಪ್ ಹಾಕಿ ಟೂರ್ನಿಯಲ್ಲಿ ಪ್ರಶಸ್ತಿಯೆಡೆಗಿನ ಅಭಿಯಾನವನ್ನು ಭಾನುವಾರ ಆರಂಭಿಸಲಿದ್ದು, ಮೊದಲ ಪಂದ್ಯದಲ್ಲಿ ಇಂಗ್ಲೆಂಡ್ ಜತೆ ಪೈಪೋಟಿ ನಡೆಸಲಿದ್ದಾರೆ.

ಕಳೆದ ವರ್ಷ ನಡೆದ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಎದುರಾದ ಸೋಲಿಗೆ ಮುಯ್ಯಿ ತೀರಿಸುವ ತವಕದೊಂದಿಗೆ ಭಾರತ ಕಣಕ್ಕಿಳಿಯಲಿದೆ.

ಒಲಿಂಪಿಕ್ ಕೂಟದಲ್ಲಿ ಕಂಚಿನ ಪದಕಕ್ಕಾಗಿ ನಡೆದ ಪಂದ್ಯದಲ್ಲಿ ಭಾರತ 3–4 ರಲ್ಲಿ ಇಂಗ್ಲೆಂಡ್ ಎದುರು ಸೋತಿತ್ತು. ಒಲಿಂಪಿಕ್ಸ್‌ನಲ್ಲಿ ಮೊದಲ ಪದಕ ಗೆಲ್ಲುವ ಭಾರತದ ಕನಸಿಗೆ ಇಂಗ್ಲೆಂಡ್ ಅಡ್ಡಿಯಾಗಿತ್ತು. ಆ ಸೋಲಿನ ಕಹಿ ಭಾರತ ತಂಡವನ್ನು ಈಗಲೂ ಕಾಡುತ್ತಿದೆ.

ಸವಿತಾ

ಇತ್ತೀಚಿನ ದಿನಗಳಲ್ಲಿ ಉತ್ತಮ ಪ್ರದರ್ಶನ ನೀಡುತ್ತಿರುವ ಭಾರತ, ಆತ್ಮವಿಶ್ವಾಸದೊಂದಿಗೆಯೇ ಈ ಟೂರ್ನಿಯಲ್ಲಿ ಆಡುತ್ತಿದೆ. ಎಫ್‌ಐಎಚ್ ಪ್ರೊ ಹಾಕಿ ಲೀಗ್‌ನಲ್ಲಿ ತಂಡ ಮೂರನೇ ಸ್ಥಾನ ಗಳಿಸಿತ್ತು.

ಗೋಲ್‌ಕೀಪರ್ ಸವಿತಾ ಪೂನಿಯಾ ನೇತೃತ್ವದ ಭಾರತ ತಂಡ, ಯುವ ಹಾಗೂ ಅನುಭವಿ ಆಟಗಾರ್ತಿಯರನ್ನು ಒಳಗೊಂಡಿದೆ. ದೀಪ್ ಗ್ರೇಸ್ ಎಕ್ಕಾ, ಗುರ್ಜಿತ್ ಕೌರ್, ಉದಿತಾ ಮತ್ತು ನಿಕ್ಕಿ ಪ್ರಧಾನ್ ಅವರು ರಕ್ಷಣಾ ವಿಭಾಗಕ್ಕೆ ಬಲ ತುಂಬಲಿದ್ದಾರೆ.

ಪಂದ್ಯದ ಆರಂಭ: ರಾತ್ರಿ 8

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ 1

ಬ್ಯಾಡ್ಮಿಂಟನ್: ಇಬ್ಬರ ಗುರುತಿನ ಚೀಟಿ ರದ್ದು

ನವದೆಹಲಿ (ಪಿಟಿಐ): ವಯಸ್ಸಿನ ಬಗ್ಗೆ ಸುಳ್ಳು ದಾಖಲೆ ನೀಡಿದ ಇಬ್ಬರು ಬ್ಯಾಡ್ಮಿಂಟನ್ ಸ್ಪರ್ಧಿಗಳ ಗುರುತಿನ ಚೀಟಿಯನ್ನು ಭಾರತ ಬ್ಯಾಡ್ಮಿಂಟನ್ ಸಂಸ್ಥೆ (ಬಿಎಐ) ರದ್ದುಗೊಳಿಸಿದೆ.

‘ರಾಷ್ಟ್ರೀಯ ಜೂನಿಯರ್ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಂಡಿರುವ ಇಬ್ಬರು ಆಟಗಾರರು ನಕಲಿ ಜನನ ಪ್ರಮಾಣಪತ್ರ ಸಲ್ಲಿಸಿ ಗುರುತಿನ ಚೀಟಿ ಮಾಡಿಸಿಕೊಂಡಿರುವುದು ಗಮನಕ್ಕೆ ಬಂದಿದೆ. ಆದ್ದರಿಂದ ಅವರ ಮೇಲೆ ಕ್ರಮವಹಿಸಲಾಗಿದೆ’ ಎಂದು ಬಿಎಐ ಕಾರ್ಯದರ್ಶಿ ಸಂಜಯ್ ಮಿಶ್ರಾ ಹೇಳಿದರು.

ಮೊಹಾಲಿಯಲ್ಲಿ ನಡೆಯುತ್ತಿರುವ 13 ವರ್ಷದೊಳಗಿನ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಂಡಿರುವ ಕೆಲವು ಸ್ಪರ್ಧಿಗಳು ವಯಸ್ಸಿನ ಬಗ್ಗೆ ಸುಳ್ಳು ಮಾಹಿತಿ ನೀಡಿದ್ದಾರೆ ಎಂಬ ದೂರು ಕೇಳಿಬಂದಿದ್ದವು. ಅವರ ವಿರುದ್ಧ ಕ್ರಮಕೈಗೊಳ್ಳಲು ಆಗ್ರಹಿಸಿ ಕೆಲವು ಸ್ಪರ್ಧಿಗಳ ಪೋಷಕರು ಪ್ರತಿಭಟನೆ ನಡೆಸಿದ್ದರು.